ಮಂಗಳವಾರ, ಮಾರ್ಚ್ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 88 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಬೇಸಿಗೆಯ ಬಹಳಷ್ಟು ಆರೋಗ್ಯಸಮಸ್ಯೆಗಳಿಗೆ ಕಾರಣ ಆಗುವಂತಹದ್ದು ನೀರಿನ ಪ್ರಮಾಣ ದೇಹಕ್ಕೆ ಸಾಕಾಗದಿರುವುದು. ನಮ್ಮೆಲ್ಲರ ಬಿಡುವಿಲ್ಲದ ಧಾವಂತದ ಬದುಕಿನಲ್ಲಿ 'ನೀರು ಕುಡಿಯಲು ಪುರುಸೊತ್ತಿಲ್ಲ'...



ಅಸಮರ್ಪಕ ಮೌಲ್ಯಮಾಪನ: ₹400 ದಂಡ! 6

ಆಳ-ಅಗಲ: ಚುನಾವಣೆಗಳಲ್ಲಿ ಬಿಜೆಪಿಗೆ ಫೇಸ್‌ಬುಕ್ ನೆರವು

'ಬಡ್ತಿ'ಗಾಗಿ ನಕಲಿ ಪದವಿ: ನೌಕರಿಗೆ ಕುತ್ತು! 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,593 ▲	17,222 ▲	₹53,550 (ಬೆಂಗಳೂರು)	₹69,900 (ಬೆಂಗಳೂರು)	76.16 ▲

ಹಿಜಾಬ್ ಕಳಚಿಟ್ಟು ಪರೀಕ್ಷೆ ಬರೆದರು; ನಿರಾಕರಿಸಿದ ಒಬ್ಬ ವಿದ್ಯಾರ್ಥಿನಿ ಗೈರು

ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ (2021–22) ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗಳು ಸೋಮವಾರ ಆರಂಭವಾಗಿದ್ದು, ಹಿಜಾಬ್–ಸಮವಸ್ತ್ರದ ಗೊಂದಲ ಮಧ್ಯೆಯೂ ಮೊದಲ ದಿನ ಪ್ರಥಮ ಭಾಷೆಯ ಪರೀಕ್ಷೆ ಸುಸೂತ್ರವಾಗಿ ನಡೆಯಿತು.

ಶಾಲಾ ಸಮವಸ್ತ್ರ ಮಾತ್ರ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿತ್ತು. ಹೀಗಾಗಿ, ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಅದನ್ನು ಕಳಚಿಡಲು ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಮಾಡಲಾಗಿತ್ತು. ಹಿಜಾಬ್ ವಿವಾದದ ಕಾರಣ ಪರೀಕ್ಷಾ ಕೇಂದ್ರಗಳ ಬಳಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು.

ಬೆಳಗಾವಿ, ಹುಬ್ಬಳ್ಳಿ, ಶಿವಮೊಗ್ಗ, ಚಿಕ್ಕಬಳ್ಳಾಪುರ, ಚಾಮರಾಜನಗರ ಸೇರಿದಂತೆ ಕೆಲವು ಕಡೆಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದರು. ಪೊಲೀಸರು, ಶಿಕ್ಷಕರು ಹಾಗೂ ಪರೀಕ್ಷಾ ಮೇಲ್ವಿಚಾರಕರು ಮನವೊಲಿಸಿದ ಬಳಿಕ ಅದನ್ನು ಕಳಚಿಟ್ಟು ಪರೀಕ್ಷೆಗೆ ಹಾಜರಾದರು.

ಆದರೆ, ಬಾಗಲಕೋಟೆ ಜಿಲ್ಲೆಯ ಇಳಕಲ್‌ನಲ್ಲಿ ಮನವೊಲಿಕೆಗೂ ಒಪ್ಪದ ವಿದ್ಯಾರ್ಥಿನಿಯೊಬ್ಬಳು ಪರೀಕ್ಷೆ ಬರೆಯದೆ ಮನೆಗೆ ಮರಳಿದಳು. 'ಹಿಜಾಬ್ ತೆಗೆಯಲು ನನ್ನ ಮನಸ್ಸು ಒಪ್ಪುತ್ತಿಲ್ಲ. ಅದು ಇಸ್ಲಾಂನ ಅತ್ಯಗತ್ಯ ಭಾಗ. ತೆಗೆಯಲೇಬೇಕೆಂದರೆ ನಾನು ಪರೀಕ್ಷೆ ಬರೆಯುವುದಿಲ್ಲ' ಎಂದು ಮನೆಯಲ್ಲಿಯೇ ಬರೆದು ತಂದಿದ್ದ ಪತ್ರವನ್ನು ಮುಖ್ಯ ಅಧೀಕ್ಷಕರಿಗೆ ನೀಡಿ ಪರೀಕ್ಷಾ ಕೇಂದ್ರದಿಂದ ಮರಳಿದಳು. ಈ ಬಗ್ಗೆ ಪ್ರತಿಕ್ರಿಯಿಸಲು ಪೋಷಕರು ನಿರಾಕರಿಸಿದರು.

ದಾವಣಗೆರೆ ಜಿಲ್ಲೆ ಸಾಸ್ವೆಹಳ್ಳಿ ಹೋಬಳಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 25 ಮುಸ್ಲಿಂ ವಿದ್ಯಾರ್ಥಿನಿಯರು ಮತ್ತು ಟೋಪಿ ಧರಿಸಿದ್ದ ಐವರು ವಿದ್ಯಾರ್ಥಿಗಳು ಅವುಗಳನ್ನು ತೆಗೆದು ಪರೀಕ್ಷೆಗೆ ಹಾಜರಾದರು.

7ನೇ ಪುಟ ನೋಡಿ



ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಶಾಲೆಗೆ ಸೋಮವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದ ಶಿಕ್ಷಕಿ —ಪ್ರಜಾವಾಣಿ ಚಿತ್ರ

ವೃತ್ತಿಪರ ಕೋರ್ಸ್: ಜೂನ್ 16ರಿಂದ ಸಿಇಟಿ

ಬೆಂಗಳೂರು: 'ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಈ ಬಾರಿ ಜೂನ್ 16, 17 ಮತ್ತು 18ರಂದು ನಡೆಸಲು ಉದ್ದೇಶಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬೇರೆ ಬೇರೆ ರಾಜ್ಯಗಳಲ್ಲಿ ಇಂಥ ಪರೀಕ್ಷೆಗೆ ಗೊತ್ತುಪಡಿಸಿಕೊಂಡಿರುವ ಸಂಭವನೀಯ ದಿನಾಂಕಗಳ ಬಗ್ಗೆ ತಿಳಿದುಕೊಂಡು ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದರು.

'ಜೂನ್ 16ರಂದು ಬೆಳಿಗ್ಗೆ ಜೀವವಿಜ್ಞಾನ, ಮಧ್ಯಾಹ್ನ ಗಣಿತ, 17ರಂದು ಬೆಳಿಗ್ಗೆ ಭೌತವಿಜ್ಞಾನ ಮತ್ತು ಮಧ್ಯಾಹ್ನ ರಸಾಯನವಿಜ್ಞಾನ ಪರೀಕ್ಷೆಗಳು ನಡೆಯಲಿವೆ' ಎಂದು ಹೇಳಿದರು.

7ನೇ ಪುಟ ನೋಡಿ

ಬಂಗಾಳ ವಿಧಾನಸಭೆಯಲ್ಲಿ ಶಾಸಕರ ಮಾರಾಮಾರಿ

ಆಸ್ಪತ್ರೆ ಸೇರಿದ ಎಂಟು ಶಾಸಕರು; ಐವರ ಅಮಾನತು

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆಯ ಬಜೆಟ್ ಅಧಿವೇಶದನಲ್ಲಿ ಸೋಮವಾರ ಶಾಸಕರ ನಡುವೆ ಮಾರಾಮಾರಿ ನಡೆದಿದೆ. ಭಿರ್‌ಭೂಮ್ ಸಜೀವ ದಹನ ಪ್ರಕರಣಕ್ಕೆ ಸಂಬಂಧಿಸಿ ಆಡಳಿತಾರೂಢ ಟಿಎಂಸಿ ಹಾಗೂ ಬಿಜೆಪಿ ಸದಸ್ಯರು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಘರ್ಷಣೆಯಲ್ಲಿ ಬಿಜೆಪಿಯ ಏಳು ಹಾಗೂ ಟಿಎಂಸಿಯ ಒಬ್ಬರು ಸೇರಿದಂತೆ ಎಂಟು ಶಾಸಕರು ಗಾಯಗೊಂಡಿದ್ದಾರೆ.

ಘಟನೆ ಸಂಬಂಧ ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಒಳಗೊಂಡಂತೆ ಐವರು ಬಿಜೆಪಿ ಶಾಸಕರನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಿದ್ದಾರೆ.

ಕಳೆದ ವಾರ, ಟಿಎಂಸಿ ಉಪ ಪ್ರಧಾನನ ಹತ್ಯೆಗೆ ಪ್ರತೀಕಾರವಾಗಿ ರಾಮ್‌ಪುರಹಾಟ್‌ನಲ್ಲಿ ಎಂಟು ಜನರ ಸಜೀವ ದಹನ ಆಗಿತ್ತು. ಈ ಘಟನೆಯ ಬಗ್ಗೆ ಚರ್ಚೆ ನಡೆಸಲು ಬಿಜೆಪಿ ಮುಂದಾಯಿತು. ಬಿಜೆಪಿ–ಟಿಎಂಸಿ ಸದಸ್ಯರು ಪರಸ್ಪರ ಆರೋಪ–ಪ್ರತ್ಯಾರೋಪದಲ್ಲಿ ತೊಡಗಿದರು.

'ಈ ಘಟನೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲು ಮುಂದಾದಾಗ, ಸದನದಲ್ಲಿದ್ದ ಭದ್ರತಾ ಸಿಬ್ಬಂದಿ ಹಾಗೂ ಟಿಎಂಸಿ ಶಾಸಕರು ನಮ್ಮನ್ನು ತಡೆದರು' ಎಂದು ಬಿಜೆಪಿ ಶಾಸಕರು ಆರೋಪಿಸಿದ್ದಾರೆ. ಶಾಸಕರ ನಡುವಿನ ವಾಕ್ಸಮರವು ಪರಸ್ಪರ ಕೈಕೈ ಮಿಲಾಯಿಸುವ ಹಂತಕ್ಕೆ ಹೋಯಿತು. ಟಿಎಂಸಿ ಶಾಸಕರು ಹಾಗೂ ಭದ್ರತಾ ಸಿಬ್ಬಂದಿ ತಮ್ಮ ಮೇಲೆ ಹಲ್ಲೆ ನಡೆಸಿದರು ಎಂದು ಬಿಜೆಪಿ ಶಾಸಕಿಯರು ಆರೋಪಿಸಿದ್ದಾರೆ.

ಬಿಜೆಪಿಯ 8–10 ಶಾಸಕರು ಗಾಯಗೊಂಡಿದ್ದಾರೆ ಎಂದು ಸುವೇಂದು ಅಧಿಕಾರಿ ಹೇಳಿದ್ದಾರೆ. ಪಕ್ಷದ ಏಳು ಶಾಸಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರತಿಪಕ್ಷದ ಆರೋಪಕ್ಕೆ ಟಿಎಂಸಿ ಸದಸ್ಯರಾದ ಪಾರ್ಥ ಚಟರ್ಜಿ, ಫರ್ಹಾದ್ ಹಕೀಮ್, ಚಂದ್ರಿಮ ಭಟ್ಟಾಚಾರ್ಯ ಮೊದಲಾದವರು ತಿರುಗೇಟು ನೀಡಿದ್ದಾರೆ. ಬಿಜೆಪಿಯ ಕೆಲವು ಜನಪ್ರತಿನಿಧಿಗಳ ಆಕ್ರಮಣಕಾರಿ ನಡವಳಿಕೆಯನ್ನು ಖಂಡಿಸಿದ್ದಾರೆ. ಶಾಸಕಿಯರ ಜೊತೆಗೆ ಮಹಿಳಾ ಭದ್ರತಾ ಸಿಬ್ಬಂದಿ ಸಹ ದಾಳಿಗೆ ಗುರಿಯಾಗಿದ್ದಾರೆ. ಟಿಎಂಸಿ ಶಾಸಕ ಅಸಿತ್ ಮಜುಂದಾರ್ ಅವರ ಮೂಗಿಗೆ ಗಾಯವಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಹಿಳಾ ಭದ್ರತಾ ಸಿಬ್ಬಂದಿ ಮೇಲೆಯೂ ಹಲ್ಲೆ ನಡೆದಿರುವುದನ್ನು ಸ್ಪೀಕರ್ ಬಿಮನ್ ಬ್ಯಾನರ್ಜಿ ಅವರು ಖಂಡಿಸಿದ್ದಾರೆ.

ಹಲ್ಲೆಗೊಳಗಾದ ಬಿಜೆಪಿ ಸದಸ್ಯರನ್ನೇ ಸದನದಿಂದ ಅಮಾನತು ಮಾಡಲಾಗಿದೆ ಎಂದು ಪಶ್ಚಿಮ ಬಂಗಾಳ ಬಿಜೆಪಿ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ಹೇಳಿದ್ದಾರೆ. ಬಿಜೆಪಿ ಸಂಸದರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ಭೇಟಿಯಾಗಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.

ಸಾವಿನ ಸಂಖ್ಯೆ 9ಕ್ಕೆ ಏರಿಕೆ: ರಾಮ್‌ಪುರಹಾಟ್ ಸಜೀವ ದಹನ ಪ್ರಕರಣದಲ್ಲಿ ಮೃತಪಟ್ಟವರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ.



ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಶಾಸಕರ ನಡುವೆ ಮಾರಾಮಾರಿ ನಡೆಯಿತು —ಪಿಟಿಐ ಚಿತ್ರ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಹಿಂಬಾಕಿ ವೇತನ ತಪ್ಪುವ ಆತಂಕ 4

ಶೇ 40 ಲಂಚ: ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಕಾಮಗಾರಿ ಗುತ್ತಿಗೆಗಳಲ್ಲಿ ಶೇ 40 ಕಮಿಷನ್ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸದಸ್ಯರು ಹಾಗೂ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ನಡುವೆ ವಿಧಾನಸಭೆಯಲ್ಲಿ ಸೋಮವಾರ ಜಟಾಪಟಿ ನಡೆಯಿತು.

ಇಲಾಖಾ ಬೇಡಿಕೆಗೆ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಉತ್ತರ ನೀಡುತ್ತಿದ್ದರು. ಈ ವೇಳೆ ಜೆಡಿಎಸ್‌ನ ವೆಂಕಟರಾವ್ ನಾಡಗೌಡ ಸ್ಪಷ್ಟನೆ ಕೇಳಿ, 'ಪ್ರಾಮಾಣಿಕ ಸಚಿವರಿದ್ದಾರೆ' ಎಂದರು. ಆಗ ಕಾಂಗ್ರೆಸ್‌ನ ಅಮರೇಗೌಡ ಬಯ್ಯಾಪುರ, 'ಉಳಿದವರು ಪ್ರಾಮಾಣಿಕ ಸಚಿವರಲ್ಲವೇ? ಶೇ 40 ಕಮಿಷನ್ ಪಡೆಯುವವರೇ' ಎಂದು ವ್ಯಂಗ್ಯವಾಗಿ ಕೇಳಿದರು.

ಈ ಮಾತಿನಿಂದ ಕೆರಳಿದ ಗೋವಿಂದ ಕಾರಜೋಳ, 'ಹಾಗಿದ್ದರೆ ನೀವೆಲ್ಲ ಶೇ 10 ಶಾಸಕರೇ. ಇವತ್ತು ಪತ್ರಿಕೆಗಳಲ್ಲಿ ನಿಮ್ಮ ಬಗ್ಗೆಯೂ ಬಂದಿದೆ. ಅದನ್ನು ನೋಡಿದ್ದೀರಾ' ಎಂದು ಪ್ರಶ್ನಿಸಿದರು.

7ನೇ ಪುಟ ನೋಡಿ

ಮೊತ್ತ ಪರಿಷ್ಕರಣೆ 4 ಜನರ ಕೈಯಲ್ಲಿ!

ಕೇವಲ ನಾಲ್ಕೈದು ಗುತ್ತಿಗೆದಾರರು ನೀರಾವರಿ ಯೋಜನೆಗಳ ಸಾವಿರಾರು ಕೋಟಿ ಮೌಲ್ಯದ ಗುತ್ತಿಗೆಗಳನ್ನು ಪಡೆಯುತ್ತಿದ್ದಾರೆ. ಸಚಿವ ಸಂಪುಟ ಸಭೆಯಲ್ಲೂ ಒಪ್ಪಿಗೆ ಪಡೆಯದೇ ಅವರಿಗೆ ಕಾಮಗಾರಿಗಳನ್ನು ಮಂಜೂರು ಮಾಡಲಾಗುತ್ತದೆ ಮತ್ತು ಕಾಮಗಾರಿ ಮೊತ್ತ ಅವರು ಹೇಳಿದಂತೆ ಪರಿಷ್ಕರಣೆಯೂ ಆಗುತ್ತದೆ ಎಂದು ಕಾಂಗ್ರೆಸ್‌ನ ಶಿವಾನಂದ ಪಾಟೀಲ ವಿಧಾನಸಭೆಯಲ್ಲಿ ದೂರಿದರು.

'ಆ ಗುತ್ತಿಗೆದಾರರು ಯಾರು ಎಂಬುದನ್ನು ಬಹಿರಂಗ ಪಡಿಸಿ' ಎಂದು ಶಾಸಕರು ಒತ್ತಾಯಿಸಿದಾಗ, ಡಿ.ವೈ. ಉಪ್ಪಾರ್, ಶೆಟ್ಟಿ, ಶಂಕರ್, ಮಾನಪ್ಪ ವಜ್ಜಲ್ ಎಂಬುದಾಗಿ ಶಿವಾನಂದ ಪಾಟೀಲ ಹೇಳಿದರು.

7ನೇ ಪುಟ ನೋಡಿ

ಮೀಸಲಾತಿ: 31ಕ್ಕೆ ಸರ್ವಪಕ್ಷ ಸಭೆ

ಬೆಂಗಳೂರು: ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಗೆ ಸಂಬಂಧಿಸಿದಂತೆ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಲು ಇದೇ 31ರಂದು ಸರ್ವಪಕ್ಷ ನಾಯಕರ ಸಭೆ ಕರೆಯಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಇಲಾಖಾ ಬೇಡಿಕೆ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, 'ಮೂರು ಹಂತದ ಪರಿಶೀಲನೆ ಬಳಿಕವೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕು ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಈ ವಿಚಾರದಲ್ಲಿ ಹಿಂದುಳಿದ ವರ್ಗಗಳಿಗೆ ಅನ್ಯಾಯ ಆಗಲು ಸರ್ಕಾರ ಬಿಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಮೀಸಲಾತಿ ಗೊಂದಲದ ಬಗ್ಗೆ ಕಾನೂನು ಸಚಿವರು, ಅಡ್ವೊಕೇಟ್ ಜನರಲ್ ಹಾಗೂ ಕಾನೂನು ತಜ್ಞರ ಜತೆಗೆ ನಾಲ್ಕು ಸಲ ಸಭೆ ನಡೆಸಲಾಗಿದೆ' ಎಂದೂ ಅವರು ಹೇಳಿದರು.

'ನರೇಗಾ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 53 ಕೋಟಿ ಮಾನವ ದಿನದ ಕೆಲಸ ಮಾಡಲಾಗಿದೆ. ಈ ವರ್ಷ 13 ಕೋಟಿ ಮಾನವ ದಿನದ ಗುರಿ ಮೀರಿ ಮತ್ತೆ 3 ಕೋಟಿ ಮಾನವ ದಿನದ ಕೆಲಸ ಮಾಡಲಾಗಿದೆ. ನರೇಗಾ ಕಾರ್ಮಿಕರಿಗೆ ಯಾವುದೇ ಕೂಲಿ ಬಾಕಿ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಇಮ್ರಾನ್ ವಿರುದ್ಧ ಅವಿಶ್ವಾಸ: 31ಕ್ಕೆ ಕಲಾಪ ಮುಂದೂಡಿಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಪಿಎಂಎಲ್–ಎನ್ ಪಕ್ಷದ ಅಧ್ಯಕ್ಷ ಶೆಹಬಾಜ್ ಶರೀಫ್ ಅವರು ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಸೋಮವಾರ ಅವಿಶ್ವಾಸ ನಿರ್ಣಯ ಮಂಡಿಸಿದರು.

ಡೆಪ್ಯುಟಿ ಸ್ಪೀಕರ್ ಖಾಸಿಮ್ ಖಾನ್ ಸೂರಿ ಅವರು, ಅವಿಶ್ವಾಸ ನಿರ್ಣಯ ಮಂಡಿಸುವ ಪ್ರಸ್ತಾವವನ್ನು ಮತಕ್ಕೆ ಹಾಕಿದರು. 'ನಿರ್ಣಯ ಮಂಡಿಸುವುದರ ಪರ 161 ಮತಗಳು ಚಲಾವಣೆಯಾಗಿವೆ. ಹೀಗಾಗಿ ಅವಿಶ್ವಾಸ ನಿರ್ಣಯ ಮಂಡನೆಗೆ ಅನುಮತಿ ನೀಡಲಾಗಿದೆ' ಎಂದು ಘೋಷಿಸಿದರು.ನಂತರ, ಶೆಹಬಾಜ್ ಶರೀಫ್ ಅವಿಶ್ವಾಸ ನಿರ್ಣಯವನ್ನು ಮಂಡಿಸಿದರು.

ಈ ನಿರ್ಣಯದ ಮೇಲಿನ ಚರ್ಚೆ ಹಾಗೂ ಮತ ಚಲಾವಣೆ ಪ್ರಕ್ರಿಯೆಯನ್ನು 3–7 ದಿನಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕಿದೆ. ಹೀಗಾಗಿ ಡೆಪ್ಯುಟಿ ಸ್ಪೀಕರ್ ಸೂರಿ ಅವರು ಕಲಾಪವನ್ನು ಮಾರ್ಚ್ 31ರ ಸಂಜೆ 4ರ ವರೆಗೆ ಮುಂದೂಡಿದರು.

ಕೇರಳ, ಪಶ್ಚಿಮ ಬಂಗಾಳ, ಹರಿಯಾಣದಲ್ಲಿ ಕಾವು ಜೋರು

ಮುಷ್ಕರ: ವಿವಿಧೆಡೆ ಸಾರಿಗೆ ಸೇವೆ ಭಾಗಶಃ ಸ್ಥಗಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ವಿವಿಧ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಎರಡು ದಿನಗಳ ದೇಶವ್ಯಾಪಿ ಮುಷ್ಕರ ಸೋಮವಾರ ಆರಂಭವಾಗಿದ್ದು, ಮೊದಲ ದಿನ ದೇಶದ ವಿವಿಧೆಡೆ ಬ್ಯಾಂಕಿಂಗ್ ಮತ್ತು ಸಾರಿಗೆ ಸೇವೆಗಳು ಭಾಗಶಃ ಸ್ಥಗಿತಗೊಂಡಿದ್ದವು.

ಮುಷ್ಕರಕ್ಕೆ ಕರೆ ನೀಡಿರುವ ಐಎನ್‌ಟಿಯುಸಿ, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಸಂಘಟನೆಗಳು, ದೇಶದಾದ್ಯಂತ 20 ಕೋಟಿಗೂ ಹೆಚ್ಚು ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ ಎಂದು ಹೇಳಿಕೊಂಡಿವೆ.

ಕೇರಳ, ಪಶ್ಚಿಮ ಬಂಗಾಳ, ಹರಿಯಾಣದಲ್ಲಿ ಮುಷ್ಕರದ ಕಾವು ಜೋರಾಗಿದ್ದು, ಅದರ ಪರಿಣಾಮ ಬ್ಯಾಂಕಿಂಗ್ ಮತ್ತು ಸಾರ್ವಜನಿಕ ಸಾರಿಗೆ ಸೇವೆ ಬಹುತೇಕ ಸ್ತಬ್ಧಗೊಂಡಿದ್ದವು. ಇದರಿಂದ ಜನರು ಪರದಾಡುವಂತಾಯಿತು. ಪಶ್ಚಿಮ ಬಂಗಾಳದಲ್ಲಿ ಪ್ರತಿಭಟನಕಾರರು ರಸ್ತೆಗಳನ್ನು ತಡೆದು, ರೈಲುಗಳ ಸಂಚಾರ ಸ್ಥಗಿತಗೊಳಿಸಿದ್ದರಿಂದ ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಮಹಾರಾಷ್ಟ್ರ, ತಮಿಳುನಾಡು, ಪಶ್ಚಿಮ ಬಂಗಾಳ, ದೆಹಲಿ, ತೆಲಂಗಾಣ, ಕರ್ನಾಟಕ, ಗುಜರಾತ್ ಮತ್ತು ಹರಿಯಾಣ ಸೇರಿದಂತೆ ಹಲವಾರು ರಾಜ್ಯಗಳಲ್ಲಿನ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ದೇಶದಾದ್ಯಂತ ವಿದ್ಯುತ್ ವಲಯದ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿ ಪ್ರತಿಭಟಿಸಿದರು. ಮಹಾರಾಷ್ಟ್ರದಲ್ಲಿ ಸರ್ಕಾರ 'ಎಸ್ಮಾ' ಜಾರಿಗೊಳಿಸಿದ್ದರೂ ವಿದ್ಯುತ್ ವಲಯದ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು. ತಮಿಳುನಾಡಿನಲ್ಲಿ ಹೆಚ್ಚಿನ ಸಂಖ್ಯೆಯ ನೌಕರರು ಕೇಂದ್ರ ಸರ್ಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

'ಬ್ಯಾಂಕಿಂಗ್ ಸೇವೆಗಳಿಗೆ ಹೆಚ್ಚಿನ ಅಡ್ಡಿ ಇಲ್ಲ'

ಬೆಂಗಳೂರು: ರಾಜ್ಯದಲ್ಲಿ ಮುಷ್ಕರದ ಕಾರಣದಿಂದಾಗಿ ಸೋಮವಾರ ಬ್ಯಾಂಕಿಂಗ್ ಸೇವೆಗಳಲ್ಲಿ ದೊಡ್ಡ ಪ್ರಮಾಣದ ಸಮಸ್ಯೆಗಳು ಆಗಿಲ್ಲ. ಆದರೆ, ರಾಜ್ಯದ ಹಲವೆಡೆ ಕೆಲವು ಸೇವೆಗಳಿಗೆ ಒಂದಿಷ್ಟು ಅಡಚಣೆ ಆಗಿದೆ ಎಂದು ಬ್ಯಾಂಕ್ ಉದ್ಯೋಗಿಗಳ ಸಂಘದ ಮೂಲಗಳು ತಿಳಿಸಿವೆ. ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಎಸ್‌ಬಿಐನ ಉದ್ಯೋಗಿಗಳು ಮತ್ತು ಅಧಿಕಾರಿಗಳ ಸಂಘಗಳು ಮುಷ್ಕರದಲ್ಲಿ ಭಾಗವಹಿಸಿಲ್ಲ. ಹೀಗಾಗಿ ಮುಷ್ಕರದ ತೀವ್ರತೆಯು ಬ್ಯಾಂಕಿಂಗ್ ವಲಯಕ್ಕೆ ಅಷ್ಟಾಗಿ ತಟ್ಟಿಲ್ಲ ಎಂದು ಮೂಲವೊಂದು ತಿಳಿಸಿದೆ.

ಎಪಿಎಸ್‌ಇಟಿ ಅಧ್ಯಕ್ಷರಾಗಿ ನರಸಿಂಹ ಮೂರ್ತಿ ಆಯ್ಕೆ



ಪ್ರೊ.ಕೆ.ಎಸ್.ನರಸಿಂಹ ಮೂರ್ತಿ

ಬೆಂಗಳೂರು: ಆಚಾರ್ಯ ಪಾಠಶಾಲಾ ಶಿಕ್ಷಣ ದತ್ತಿಯ (ಎಪಿಎಸ್‌ಇಟಿ) ಅಧ್ಯಕ್ಷರಾಗಿ ಪ್ರೊ.ಕೆ.ಎಸ್. ನರಸಿಂಹ ಮೂರ್ತಿ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನರಸಿಂಹ ಮೂರ್ತಿ ಆಯ್ಕೆಯಾದರು. ಈ ಹಿಂದೆ ಉಪಾಧ್ಯಕ್ಷರಾಗಿದ್ದರು ಎಂದು ಪ್ರಕಟಣೆ ತಿಳಿಸಿದೆ.

ತರಗತಿ ಬಹಿಷ್ಕರಿಸಿದ ವಿದ್ಯಾರ್ಥಿಗಳು

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಿಸುವಂತೆ ಒತ್ತಾಯಿಸಿ ಜ್ಞಾನ ಭಾರತಿ ಆವರಣದ ವಿದ್ಯಾರ್ಥಿಗಳು ಸೋಮವಾರದಿಂದ ಅನಿರ್ದಿಷ್ಟಾವಧಿಗೆ ತರಗತಿಗಳನ್ನು ಬಹಿಷ್ಕರಿಸಿದ್ದಾರೆ.

ಸ್ನಾತಕೋತ್ತರ ವಿದ್ಯಾರ್ಥಿನಿಲಯದಿಂದ ಆಡಳಿತ ಕಚೇರಿ ಕಟ್ಟಡದವರೆಗೆ ವಿದ್ಯಾರ್ಥಿಗಳು ಪ್ರತಿಭಟನಾ ರ‍್ಯಾಲಿ ನಡೆಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆ ಆಯೋಜಿಸಲಾಗಿತ್ತು.

ಪ್ರತಿಭಟನೆ ಜತೆಗೆ ಕುಲಪತಿ ಅವರನ್ನು ನೇಮಿಸುವಂತೆ ಒತ್ತಾಯಿಸಿ ರಾಜ್ಯಪಾಲರಿಗೆ ಪತ್ರ ಬರೆಯುವ ಅಭಿಯಾನವನ್ನು ಆರಂಭಿಸಲಾಗಿದೆ.

ಬೇಡಿಕೆಯಷ್ಟು ತೈಲ ಪೂರೈಕೆ ಮಾಡಲು ಕಂಪನಿಗಳ ಹಿಂದೇಟು

ಇಂಧನ ಕೊರತೆ: ವಿತರಕರ ಪರದಾಟ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ದರ ಸದ್ದಿಲ್ಲದೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಮಧ್ಯೆ ಪೆಟ್ರೋಲ್ ಬಂಕ್‌ಗಳಿಗೆ ಬೇಡಿಕೆಯಷ್ಟು ಇಂಧನ ಪೂರೈಕೆ ಮಾಡಲು ಕಂಪನಿಗಳು ಹಿಂದೇಟು ಹಾಕುತ್ತಿವೆ. ಇದರಿಂದ ಕೆಲ ಬಂಕ್‌ಗಳಲ್ಲಿ ಇಂಧನವಿಲ್ಲದೆ ಗ್ರಾಹಕರು ವಾಪಸ್ ತೆರಳುವಂತಾಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆಯಲ್ಲಿ ಏರಿಳಿತವಾದರೂ ಭಾರತದಲ್ಲಿ ನಾಲ್ಕು ತಿಂಗಳಿಂದ ದರ ಏರಿಕೆ ಆಗಿರಲಿಲ್ಲ. ಐದು ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿದ್ದರಿಂದ ದರ ಏರಿಕೆ ಆಗಿರಲಿಲ್ಲ. ಈಗ ಒಂದು ವಾರದಿಂದ ದಿನವೂ ದರ ಏರಿಕೆ ಆಗುತ್ತಿದೆ. ಮಾರ್ಚ್ 21ರಂದು ಲೀಟರ್ ಪೆಟ್ರೋಲ್‌ಗೆ ₹100.58 ಇದ್ದ ಪೆಟ್ರೋಲ್ ದರ ಸೋಮವಾರದ ವೇಳೆಗೆ ₹104.46ಕ್ಕೆ ಏರಿಕೆಯಾಗಿದೆ. ದಿನವೂ 84 ಪೈಸೆಯಿಂದ 85 ಪೈಸೆ ತನಕ ಹೆಚ್ಚಳ ಆಗುತ್ತಿದೆ. ಕಳೆದ ವಾರ ಲೀಟರ್‌ಗೆ ₹85.01 ಇದ್ದ ಡೀಸೆಲ್ ದರ, ಸೋಮವಾರ ₹88.67 ಆಗಿದೆ.

‘ಈ ಸಂದರ್ಭದಲ್ಲಿ ಕೆಲ ಕಂಪನಿಗಳು ಬೇಡಿಕೆಗೆ ತಕ್ಕಷ್ಟು ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಮಾಡದೆ ನಿರ್ಬಂಧಿಸಿವೆ. ಗ್ರಾಹಕರ ಸಂಖ್ಯೆ ಹೆಚ್ಚಾದ ಸಂದರ್ಭದಲ್ಲಿ ‘ನೋ ಸ್ಟಾಕ್’ ಬೋರ್ಡ್ ಹಾಕಿಕೊಳ್ಳಬೇಕಾದ ಅನಿವಾರ್ಯ ಸೃಷ್ಟಿಯಾಗುತ್ತಿದೆ. ಕಳೆದ 15 ದಿನಗಳಲ್ಲಿ ಆಗಾಗ ಈ ಸ್ಥಿತಿ ಎದುರಿಸುತ್ತಿದ್ದೇವೆ. ಗ್ರಾಹಕರನ್ನು ವಾಪಸ್ ಕಳುಹಿಸಿ ಬಂಕ್‌ಗಳನ್ನು ನಿರ್ವಹಣೆ ಮಾಡುವುದು ಕಷ್ಟ’ ಎನ್ನುತ್ತಾರೆ ಪೆಟ್ರೋಲ್ ಬಂಕ್ ಮಾಲೀಕರು.

‘ಸಾಲದ ರೂಪದಲ್ಲಿ ಇಂಧನ ತಂದು ವ್ಯಾಪಾರವಾದ ಬಳಿಕ ಮರು ದಿನ ಹಣ ಪಾವತಿ ಮಾಡುವ ವ್ಯವಸ್ಥೆ ಇತ್ತು. ಈಗ ಮೊದಲೇ ಹಣ ಪಾವತಿಸಿ ಖರೀದಿ ಮಾಡಬೇಕಾದ ಸ್ಥಿತಿ ಇದೆ. ಬ್ಯಾಂಕ್ ವಹಿವಾಟು ನಿಧಾನವಾದರೆ ವಿತರಕರು ತೊಂದರೆ ಅನುಭವಿಸಬೇಕಾಗಿದೆ’ ಎಂದು ಅಳಲು ತೋಡಿಕೊಂಡರು.

‘ನ.4 ರಂದು ಪೆಟ್ರೋಲ್ ದರವನ್ನು ಲೀಟರ್ ₹5 ಮತ್ತು ಡೀಸೆಲ್ ದರವನ್ನು ಲೀಟರ್‌ಗೆ ₹10 ಕಡಿಮೆ ಮಾಡಲಾಯಿತು. ಈ ಸಂದರ್ಭದಲ್ಲಿ ಹೆಚ್ಚಿನ ದರ ನೀಡಿ ಖರೀದಿಸಿ ತಂದಿದ್ದ ಬಂಕ್ ಮಾಲೀಕರು, ಮರು ದಿನ ಕಡಿಮೆ ದರದಲ್ಲಿ ಮಾರಾಟ ಮಾಡಬೇಕಾಯಿತು. ಪ್ರತಿ ಬಂಕ್ ಮಾಲೀಕರು ₹5 ಲಕ್ಷದಿಂದ ₹25 ಲಕ್ಷ ತನಕ ನಷ್ಟ ಅನುಭವಿಸಿದರು. ಆ ಸಂದರ್ಭದಲ್ಲಿ ಹಲವು ಬಂಕ್ ಮಾಲೀಕರಿಗೆ ಬಂಡವಾಳವೇ ಇಲ್ಲದಂತೆ ಆಯಿತು. ಈ ನಷ್ಟಕ್ಕೆ ಪರಿಹಾರ ಕೊಡುವವರು ಯಾರು’ ಎಂಬುದು ಪೆಟ್ರೋಲ್ ಬಂಕ್ ಮಾಲೀಕ ಬಾಲರಾಜ್ ಅವರ ಪ್ರಶ್ನೆ.

‘ಈ ಸಂದರ್ಭದಲ್ಲಿ ಕೇಳಿದಷ್ಟು ಇಂಧನವನ್ನು ಕಂಪನಿಗಳು ಪೂರೈಸುತ್ತಿಲ್ಲ. ನಷ್ಟವನ್ನು ಸರಿದೂಗಿಸಿಕೊಳ್ಳುವುದು ಬೇರೆಯ ಮಾತು, ಗ್ರಾಹಕರಿಗೆ ಬೇಡಿಕೆಗೆ ತಕ್ಕಷ್ಟು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. 10 ಲೀಟರ್ ಪೆಟ್ರೋಲ್ ಕೇಳುವ ಗ್ರಾಹಕನಿಗೆ 5 ಲೀಟರ್ ಮಾತ್ರ ನೀಡಿ ವಾಪಸ್ ಕಳುಹಿಸಲು ಸಾಧ್ಯವೇ?’ ಎಂದು ಬಾಲರಾಜ್ ಅವರು ಪ್ರಶ್ನಿಸಿದರು..

‘ಪೂರೈಕೆ ಕಡಿಮೆ ಮಾಡಿಲ್ಲ’

‘ಯಾವುದೇ ಬಂಕ್‌ಗಳಿಗೂ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆಯನ್ನು ಕಡಿಮೆ ಮಾಡಿಲ್ಲ’ ಎಂದು ಎಚ್‌ಪಿಸಿಎಲ್ ಉಪ ಪ್ರಧಾನ ವ್ಯವಸ್ಥಾಪಕ (ಡಿಜಿಎಂ) ಎಂ.ಆರ್.ಕುಮಾರ್ ಸ್ಪಷ್ಟಪಡಿಸಿದರು.

‘ಯಾವ ಬಂಕ್‌ನಲ್ಲೂ ಖಾಲಿಯಾಗಿ ಗ್ರಾಹಕರನ್ನು ವಾಪಸ್ ಕಳುಹಿಸಿದ ಉದಾಹರಣೆ ಇಲ್ಲ. ಎಚ್‌ಪಿಸಿಎಲ್ ಇರುವುದೇ ಬಂಕ್‌ಗಳಿಗೆ ಇಂಧನ ಪೂರೈಕೆ ಮಾಡಲು. ಅವರಿಗೆ ಕೊರತೆ ಮಾಡುವುದರಿಂದ ಎಚ್‌ಪಿಸಿಎಲ್‌ಗೆ ಏನೂ ಲಾಭ ಇಲ್ಲ’ ಎಂದರು.

‘ಪ್ರತಿದಿನವೂ ವಿತರಕರಿಗೆ ಸಾಲದಲ್ಲಿ ಪೆಟ್ರೋಲ್, ಡೀಸೆಲ್ ಪೂರೈಕೆ ನೀಡಲಾಗುತ್ತಿದೆ. ಪ್ರತಿಯೊಬ್ಬ ವಿತರಕರಿಂದ ಕನಿಷ್ಠ ₹30 ಲಕ್ಷದ ತನಕ ಸಾಲ ಇದ್ದೇ ಇರುತ್ತದೆ. ಮಾರಾಟ ಅವಧಿಯನ್ನೂ ಬೇಡಿಕೆಗೆ ತಕ್ಕಂತೆ ವಿಸ್ತರಣೆ ಮಾಡಲಾಗುತ್ತಿದೆ. ಯಾವುದೇ ಗೊಂದಲ ಇಲ್ಲ’ ಎಂದು ಅವರು ಹೇಳಿದರು.

‘ಅವಧಿ ವಿಸ್ತರಣೆ ಮಾಡಬೇಕು’

‘ಸಗಟು ದರ ಹೆಚ್ಚಳ ಆಗಿದ್ದರಿಂದ ಸಾರಿಗೆ ಸಂಸ್ಥೆಗಳ ಮೇಲೆ ಹೊರೆ ಹೆಚ್ಚಾಗಿದೆ. ಚಿಲ್ಲರೆ ವ್ಯಾಪಾರ ಮಾಡುವ ಬಂಕ್ ಮಾಲೀಕರಿಂದ ಈ ಸಂಸ್ಥೆಗಳು ಖರೀದಿ ಮಾಡುತ್ತಿವೆ ಎಂಬ ಅನುಮಾನ ಎಚ್‌ಪಿಸಿಎಲ್ ಕಂಪನಿಗೆ ಇದೆ’ ಎನ್ನುತ್ತಾರೆ ಅಖಿಲ ಕರ್ನಾಟಕ ಫೆಡರೇಷನ್ ಆಫ್ ಪೆಟ್ರೋಲಿಯಂ ಟ್ರೇಡರ್ಸ್‌ನ ಉಪಾಧ್ಯಕ್ಷ ಎ.ತಾರಾನಾಥ್.

‘ಸಾರಿಗೆ ಸಂಸ್ಥೆಗಳಿಂದ ಎಚ್‌ಪಿಸಿಎಲ್‌ಗೆ ಕೋಟಿಗಟ್ಟಲೆ ಬಾಕಿ ಬರಬೇಕಿದೆ. ಆ ಕಾರಣಕ್ಕೆ ಬಂಕ್‌ಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ಪೂರೈಕೆ ಮಾಡುತ್ತಿಲ್ಲ. ಆದರೆ, ಡೀಸೆಲ್ ನಿರ್ವಹಣೆಗೆ ಅವರದೇ ಆದ ವ್ಯವಸ್ಥೆ ಇದೆ. ಆದ್ದರಿಂದ ಸಾರಿಗೆ ಸಂಸ್ಥೆಗಳು ನಮ್ಮಿಂದ ಡೀಸೆಲ್ ಪಡೆದುಕೊಳ್ಳುವುದಿಲ್ಲ’ ಎಂದು ಅವರು ಹೇಳಿದರು.

‘ಮಧ್ಯಾಹ್ನ 3 ಗಂಟೆಗೆ ಎಚ್‌ಪಿಸಿಎಲ್ ವಹಿವಾಟು ಸ್ಥಗಿತಗೊಳಿಸುತ್ತಿದೆ. ಅದನ್ನು ಕನಿಷ್ಠ 6 ಗಂಟೆ ತನಕ ವಿಸ್ತರಿಸಿದರೆ ಅನುಕೂಲ ಆಗಲಿದೆ’ ಎಂದರು.

ಸುದ್ದಿ 2 ನಿಮಿಷ

ಬರಗೂರುಗೆ ‘ದರೈಸ್ತ್ರೀ’ ಪ್ರಶಸ್ತಿ

ತುಮಕೂರು: ‘ದರೈಸ್ತ್ರೀ’ ಕಲ್ಚರಲ್ ಟ್ರಸ್ಟ್ ಕೊಡಮಾಡುವ ‘ದಲಿತ, ರೈತ, ಸ್ತ್ರೀ’ (ದರೈಸ್ತ್ರೀ) ಪ್ರಶಸ್ತಿಗೆ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಕವಿ ಕೆ.ಬಿ. ಸಿದ್ದಯ್ಯ ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದು, ಅವರ ನಿಧನದ ನಂತರ ಅವರ ನೆನಪಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ.

ಡಾ.ರಾಜಪ್ಪ ದಳವಾಯಿ, ಬಾ.ಹ. ರಮಾಕುಮಾರಿ, ಟಿ.ಎಸ್. ವಿವೇಕಾನಂದ ಅವರನ್ನು ಒಳಗೊಂಡ ಆಯ್ಕೆ ಸಮಿತಿಯು ಬರಗೂರು ರಾಮಚಂದ್ರಪ್ಪ ಅವರನ್ನು ಪ್ರಸಕ್ತ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಟ್ರಸ್ಟ್ ಅಧ್ಯಕ್ಷ ಎ. ರಾಮಚಂದ್ರಪ್ಪ ಹಾಗೂ ಕಾರ್ಯದರ್ಶಿ ಶಿವಣ್ಣ ತಿಮ್ಲಾಪುರ ತಿಳಿಸಿದ್ದಾರೆ.



‘ರಾಜು ಕ್ಷತ್ರಿಯ ಸಮಾಜ ಬಲವರ್ಧನೆಗೊಳ್ಳಲಿ’

ಬೆಂಗಳೂರು: ‘ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ರಂಗದಲ್ಲಿ ರಾಜು ಕ್ಷತ್ರಿಯ ಸಮಾಜದ ಬಲವರ್ಧನೆ ಹಾಗೂ ಏಕತೆಗಾಗಿ ಭಿನ್ನಾಭಿಪ್ರಾಯಗಳನ್ನು ಬಿಟ್ಟು, ಎಲ್ಲರೂ ಒಂದಾಗಬೇಕು’ ಎಂದು ಕರ್ನಾಟಕ ರಾಜು ಕ್ಷತ್ರಿಯ ಒಕ್ಕೂಟದ ಗೌರವಾಧ್ಯಕ್ಷ ಎ.ರಾಧಾಕೃಷ್ಣರಾಜು ಹೇಳಿದರು.

ನಗರದಲ್ಲಿ ನಡೆದ ಕ್ಷತ್ರಿಯ ಸಮಾಜದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಧೈರ್ಯ, ಸಾಹಸದಿಂದ ಸಮಾಜದಲ್ಲಿ ನಡೆಯುತ್ತಿರುವ ಎಲ್ಲ ಒಳ್ಳೆಯ ಕಾರ್ಯಕ್ರಮಗಳಿಗೆ ಕ್ಷತ್ರಿಯ ಸಮಾಜ ಸಹಕಾರ ನೀಡಬೇಕು’ ಎಂದರು.

ರಾಜು ಕ್ಷತ್ರಿಯ ಸಂಘದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎನ್. ಗಣೇಶ ರಾಜು,‘ಕೋವಿಡ್ ಕಾರಣದಿಂದ ಮೂರು ವರ್ಷಗಳಿಂದ ಕಾರ್ಯಕ್ರಮ ಆಯೋಜನೆ ಸಾಧ್ಯವಾಗಲಿಲ್ಲ. ಪ್ರತಿ ವರ್ಷ ಸಮಾವೇಶ ನಡೆಸಲು ರಾಜ್ಯದ ಸಂಘಗಳು ಮುಂದೆ ಬರಬೇಕು’ ಎಂದು ಹೇಳಿದರು.

ಒಕ್ಕೂಟದ ಅಧ್ಯಕ್ಷ ಕೆ.ಶಾಮರಾಜು,‘ಕ್ಷತ್ರಿಯ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ನೆರವು ನೀಡಲು ಒಕ್ಕೂಟ ಮುಂದೆ ಬಂದಿದೆ’ ಎಂದರು.

ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ರಾಜು,‘ಸಂಘದ 6 ಎಕರೆ ವಿಶಾಲ ಪ್ರದೇಶದಲ್ಲಿ ₹50 ಕೋಟಿ ವೆಚ್ಚದಲ್ಲಿ ಪ್ರಕೃತಿ ಚಿಕಿತ್ಸಾಲಯ, ಪುಣ್ಯಧಾಮ, ವೃದ್ಧಾಶ್ರಮ, ವಿದ್ಯಾರ್ಥಿನಿಲಯ ಸೇರಿದಂತೆ ವಿವಿಧ ಕಾಮಗಾರಿಗಳಿಗಾಗಿ ಯೋಜನೆ ಸಿದ್ಧವಾಗಿದೆ. ಇದಕ್ಕೆ ಸಮಾಜದ ಎಲ್ಲರೂ ಸಹಾಯ ಮತ್ತು ಸಹಕಾರ ನೀಡಬೇಕು’ ಎಂದು ಮನವಿ ಮಾಡಿದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸಚಿವರಿಂದ ಗುಲಾಬಿ ಹೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆ ಅಗ್ರಹಾರ ದಾಸರಹಳ್ಳಿಯಲ್ಲಿರುವ ಸರ್ಕಾರಿ ಪ್ರೌಢಶಾಲೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಸೋಮವಾರ ಭೇಟಿ ನೀಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿದರು.

ವಿದ್ಯಾರ್ಥಿಗಳ ಜೊತೆ ಕೆಲಹೊತ್ತು ಮಾತುಕತೆ ನಡೆಸಿದ ಸಚಿವರು, ಪರೀಕ್ಷೆಗೆ ನಿಯೋಜಿತರಾಗಿದ್ದ ಅಧಿಕಾರಿಗಳು ಮತ್ತು ಶಿಕ್ಷಕರ ಜೊತೆಗೂ ಚರ್ಚೆ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಚಿವರು, ‘ಮೊದಲ ದಿನ ರಾಜ್ಯದಾದ್ಯಂತ ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಸೂತ್ರವಾಗಿ ನಡೆದಿದೆ’ ಎಂದರು.

‘ಎರಡು ವರ್ಷಗಳ ಬಳಿಕ ಪೂರ್ಣ ಪ್ರಮಾಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುತ್ತಿದೆ. ಮಕ್ಕಳು ಖುಷಿಯಿಂದ ಪರೀಕ್ಷಾ ಕೇಂದ್ರಕ್ಕೆ ಬಂದು ಪರೀಕ್ಷೆ ಬರೆದಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ಖುಷಿಯಿಂದಲೇ ಪರೀಕ್ಷೆಗೆ ಕಳುಹಿಸಿದ್ದಾರೆ. ಶಿಕ್ಷಕರು ಕೂಡ ಅತ್ಯಂತ ಉತ್ಸಾಹದಿಂದ ಪರೀಕ್ಷೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಆರೋಗ್ಯ ಕಾರ್ಯಕರ್ತರು ಸೇರಿದಂತೆ ಅಗತ್ಯ ಸಿಬ್ಬಂದಿ ನಿಯೋಜನೆ, ಪೊಲೀಸ್ ಭದ್ರತೆ, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಪರೀಕ್ಷೆ ನಡೆಸಲಾಗಿದೆ’ ಎಂದು ಸಚಿವರು ತಿಳಿಸಿದರು.



ನಗರದ ಲಕ್ಷ್ಮೀದೇವಿ ರಾಮಣ್ಣ ಪ್ರೌಢ ಶಾಲೆಯ ಪರೀಕ್ಷಾ ಕೇಂದ್ರ ಒಳಗೆ ವಿದ್ಯಾರ್ಥಿಗಳು ತೆರಳಿದರು ಪ್ರಜಾವಾಣಿ ಚಿತ್ರ



ಹನುಮಂತನಗರ ಸುಂಕೇನಹಳ್ಳಿಯ ಬೆಂಗಳೂರು ನಗರದ ಜಿಲ್ಲಾ ಪಂಚಾಯಿತಿ ಸರ್ಕಾರಿ ಪ್ರೌಢ ಶಾಲೆಯ ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಬಂದರು ಪ್ರಜಾವಾಣಿ ಚಿತ್ರ



ಹುಂಡೈ ಮೋಟರ್ಸ್ ಬೆಂಗಳೂರು ಆಯೋಜಿಸಿದ್ದ ಹುಂಡೈ ಎಕ್ಸ್‌ಪ್ಲೋರರ್ ಚಟುವಟಿಕೆಗೆ ಬೆಂಗಳೂರಿನಲ್ಲಿ ಚಾಲನೆ ನೀಡಲಾಯಿತು. ಕೂರ್ಗ್‌ನಲ್ಲಿ ನಡೆದ ಸಾಹಸಮಯ ಹುಂಡೈ ಎಸ್‌ಯುವಿ ಲೈಫ್‌ನಲ್ಲಿ 21 ಕುಟುಂಬಗಳು ಭಾಗವಹಿಸಿದ್ದವು

‘ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪರೀಕ್ಷೆ ಬರೆಯಲು ಅವಕಾಶ ಕೊಡಿ’

ಬೆಂಗಳೂರು: ‘ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರಿಗೆ ಸಮವಸ್ತ್ರದ ಭಾಗವಾಗಿಯೇ ಶಿರವಸ್ತ್ರ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಿ’ ಎಂದು ಲೇಖಕರು, ಸಾಹಿತಿಗಳು, ಚಿಂತಕರು ಹಾಗೂ ಹೋರಾಟಗಾರರು ಮನವಿ ಮಾಡಿದ್ದಾರೆ.

ಡಾ . ಕೆ . ಮ ರು ಳ ಸಿ ದ್ದ ಪ್ಪ , ಡಾ.ವಿಜಯಾ, ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಬೊಳುವಾರು ಮಹಮ್ಮದ್ ಕುಂಞ, ಡಾ.ಪುರುಷೋತ್ತಮ ಬಿಳಿಮಲೆ, ಡಾ.ರಾಜೇಂದ್ರ ಚೆನ್ನಿ, ಡಾ.ಬಂಜಗೆರೆ ಜಯಪ್ರಕಾಶ್, ಬಿ.ಸುರೇಶ್, ಕೆ.ನೀಲಾ, ಡಾ.ರಹಮತ್ ತರಿಕೆರೆ, ಡಾ.ವಸುಂಧರಾ ಭೂಪತಿ, ಕೆ.ಎಸ್.ವಿಮಲಾ, ಡಾ.ಕೆ. ಷರೀಫಾ, ಡಾ.ಕಾಳೇಗೌಡ ನಾಗವಾರ ಹಾಗೂ ಮಾವಳ್ಳಿ ಶಂಕರ್ ಸೇರಿದಂತೆ ಒಟ್ಟು 61 ಮಂದಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

‘ಶೈಕ್ಷಣಿಕ ವರ್ಷಾಂತ್ಯದಲ್ಲಿ ಅನಗತ್ಯವಾಗಿ ಎದ್ದ ಶಿರವಸ್ತ್ರ ವಿವಾದದಿಂದ ಮುಸ್ಲಿಂ ಹೆಣ್ಣುಮಕ್ಕಳು ತೊಂದರೆಗೊಳಗಾಗಿದ್ದಾರೆ. ಅವರ ಸಾಂವಿಧಾನಿಕ ಹಕ್ಕನ್ನು ನಿರಾಕರಿಸಬೇಡಿ. ಮಕ್ಕಳ ಭವಿಷ್ಯ ಗಮನದಲ್ಲಿಟ್ಟುಕೊಂಡು ಪರೀಕ್ಷೆ ಬರೆಯಲು ಅವಕಾಶ ನೀಡಬೇಕು. ಈ ಸಂಬಂಧ ಸರ್ಕಾರವೇ ಅಗತ್ಯ ಸೂಚನೆ ನೀಡಬೇಕು’ ಎಂದು ಕೋರಿದ್ದಾರೆ.

‘ಎಸ್ಸೆಸ್ಸೆಲ್ಸಿ ಪರೀಕ್ಷೆಯ ಹಿಂದಿನ ದಿನ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ವಸ್ತ್ರ ಸಂಹಿತೆ ವಿಧಿಸಿ ಏಕಾಏಕಿ ಸುತ್ತೋಲೆ ಹೊರಡಿಸಿದೆ. ಇದು ಅವೈಜ್ಞಾನಿಕವಾಗಿದೆ. ಇದನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ನಗರದಲ್ಲಿ ಇಂದು

ಚಿಂತನಾ ಸಭೆ: ಭಾಗವಹಿಸುವವರು–ಎಲ್.ಹನುಮಂತಯ್ಯ, ಎನ್.ಎ.ಹ್ಯಾರಿಸ್, ಕೆ.ಅಬ್ದುಲ್ ಜಬ್ಬಾರ್, ನಸೀರ್ ಅಹಮ್ಮದ್, ಎಂ.ಟಿ.ಸುಭಾಷ್ ಚಂದ್ರ, ಆಯೋಜನೆ–ಸಮನ್ವಯ ಬೆಂಗಳೂರು, ಸ್ಥಳ–ಶಾಸಕರ ಭವನದ ಸಭಾಂಗಣ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಮಹಿಳಾ ದಿನ: ಕಿತ್ತೂರು ರಾಣಿ ಚನ್ನಮ್ಮ ಅತ್ಯುತ್ತಮ ಮಹಿಳಾ ಸೇವಾ ಪ್ರಶಸ್ತಿ ಪ್ರದಾನ, ಉದ್ಘಾಟನೆ–ಅರುಂಧತಿ ಚಂದ್ರಶೇಖರ್, ಆಶಯ ನುಡಿ–ಸಿ.ಎಸ್.ಷಡಾಕ್ಷರಿ, ಅಧ್ಯಕ್ಷತೆ–ಆರ್.ಶ್ರೀನಿವಾಸ್, ಅತಿಥಿಗಳು–ಡಿ.ರಂದೀಪ್, ಎಂ.ಇಂದುಮತಿ, ಪರಿಮಳ ಎಸ್.ಮರೂರ್, ಸಿ.ಎನ್. ಮಂಜುನಾಥ್ ಸ್ವಾಮಿ, ಆಯೋಜನೆ–ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘ, ಸ್ಥಳ–ಸಭಾಂಗಣ, ಆರೋಗ್ಯ ಸೌಧ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 11.30

ನಾಡಗೀತೆ ಬಿಡುಗಡೆ ಕಾರ್ಯಕ್ರಮ: ಆಯೋಜನೆ–ಆನಂದ್ ಸಿನಿಮಾಸ್, ಸ್ಥಳ–ಎಸ್.ಆರ್. ವಿ.ಥಿಯೇಟರ್, ಮಲ್ಲೇಶ್ವರ, ಮಧ್ಯಾಹ್ನ 1.30

‘ಯಜಮಾನ್ರ ಹೆಸರು’ ನಾಟಕ ಪ್ರದರ್ಶನ: ಉದ್ಘಾಟನೆ–ಪ್ರೇಮ ಗೌಡ, ಅಧ್ಯಕ್ಷತೆ–ರಾಘವೇಂದ್ರ ನಾಡಿಗ್, ರಂಗಗೌರವ–ಶಾಂತಕುಮಾರ್, ಗೀತಾ ಶ್ರೀನಾಥ್, ನಿರ್ದೇಶನ–ರಾಜೇಶ್ ಕಶ್ಯಪ್, ಆಯೋಜನೆ–ಯುವಕಲಾ ರಂಗ, ಸ್ಥಳ–ಲಾಸ್ಯ ರಂಜನಿ ಕಲಾಕೇಂದ್ರ, ಕಮ್ಮನಹಳ್ಳಿ, ಸಂಜೆ 4

ಬೆಂಗಳೂರು ನಗರ ಜಿಲ್ಲಾ ಅಮೃತ ರಂಗಮಹೋತ್ಸವದ ಸಮಾರೋಪ: ‘ಮಧ್ಯಮ ವ್ಯಾಯೋಗ’ ನಾಟಕ ಪ್ರದರ್ಶನ–ದರ್ಪಣ ಕಲಾವಿದರು, ನಿರ್ದೇಶನ–ಜಿ.ಪಿ.ರಾಮಣ್ಣ, ಆಯೋಜನೆ–ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ–ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30

ಯುಗಾದಿ ರಂಗೋತ್ಸವದ ಸಮಾರೋಪ: ಅತಿಥಿಗಳು–ಬಿ.ವಿಜಯ್, ದಿವಾಕರ್, ಬಾಲಕೃಷ್ಣೇಗೌಡ, ‘ಸಾಯೋ ಆಟ’ ನಾಟಕ ಪ್ರದರ್ಶನ, ನಿರ್ದೇಶನ–ಶಾಂತಕುಮಾರ್, ಆಯೋಜನೆ–ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ–ನಯನ ರಂಗಮಂದಿರ, ಸಂಜೆ 6.30



ರಾಜ್ಯಪಾಲ ಥಾವರಚಂದ್ ಗೆಹಲೋತ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಸಿಎಂಆರ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ, ವಿಶ್ವವಿದ್ಯಾಲಯದ ಕುಲಪತಿ ಡಾ.ಸಬಿತಾ ರಾಮಮೂರ್ತಿ, ಸಮಕುಲಾಧಿಪತಿ ಕೆ.ಆರ್. ಜಯದೀಪ್, ಪ್ರಾಂಶುಪಾಲರಾದ ಡಾ.ತ್ರಿಷ್ಠ ರಾಮಮೂರ್ತಿ, ಪ್ರೊ.ಡಾ.ಸಂಜಯ್ ಜೈನ್, ಕುಲಸಚಿವ ಡಾ. ಆರ್. ಪ್ರವೀಣ್ ಇದ್ದರು.

ಸಿಎಂಆರ್ ವಿ.ವಿ: 1,400 ವಿದ್ಯಾರ್ಥಿಗಳಿಗೆ ಪದವಿ

ಕೆ.ಆರ್.ಪುರ: ‘ಭಾರತ ಯಾವಾಗಲೂ ಜಾಗತಿಕ ಜ್ಞಾನದ ಮನೆಯಾಗಿದೆ. ಈಗ ನಾವು ವಿಶ್ವಗುರುವಾಗುವ ದಿಕ್ಕಿನಲ್ಲಿ ಸಾಗುತ್ತಿದ್ದೇವೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಕೆ.ಆರ್.ಪುರ ಸಮೀಪದ ಐಟಿಪಿಎಲ್ ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಆರನೇ ವಾರ್ಷಿಕ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

‘ಭಾರತೀಯ ವಿಶ್ವವಿದ್ಯಾಲಯಗಳು ಮಹತ್ವದ ಪಾತ್ರ ವಹಿಸುತ್ತಿವೆ. ಜಾಗತಿಕವಾಗಿ ಜವಾಬ್ದಾರಿಯುತ ನಾಗರಿಕರನ್ನು ಸೃಷ್ಟಿಸಲು ಮತ್ತು ಒಟ್ಟಾರೆಯಾಗಿ ರಾಷ್ಟ್ರ ನಿರ್ಮಾಣಕ್ಕೆ ವಿಶ್ವವಿದ್ಯಾನಿಲಯಗಳ ಅನನ್ಯ’ ಎಂದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್, ‘ಕೋವಿಡ್ ಸಾಂಕ್ರಾಮಿಕ ರೋಗವು ಜಗತ್ತನ್ನು ಸ್ತಬ್ಧಗೊಳಿಸಿದಾಗ, ಸಂಶೋಧನೆಯ ಮಾರ್ಗಗಳನ್ನು ತೆರೆಯಿತು. ಇದು ಸಹಭಾಗಿತ್ವ ಮತ್ತು ದೃಢವಾದ ಸಂಶೋಧನಾ ವಿಭಾಗಗಳ ಅಪಾರ ಅಗತ್ಯವನ್ನು ಬಹಿರಂಗಪಡಿಸಿದೆ’ ಎಂದು ಹೇಳಿದರು.

ಸಿಎಂಆರ್ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಸಂಸ್ಥೆಯ ಏಳು ಶಾಲೆಗಳ 1,400 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 26 ವಿದ್ಯಾರ್ಥಿಗಳು ಪಿಎಚ್.ಡಿ. ಪದವಿ ಪಡೆದರು.

2021-22 ಸಾಲಿನಲ್ಲಿ ಇಪ್ಪತ್ತೆಂಟು ವಿದ್ಯಾರ್ಥಿಗಳು ರ‍್ಯಾಂಕ್ ಪಡೆದಿದ್ದಾರೆ.

ಹಿಜಾಬ್: ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಮನವಿ

ಬೆಂಗಳೂರು: ಹಿಜಾಬ್ ನಿರ್ಬಂಧ ವಿಚಾರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿದ ತೀರ್ಪು ಟೀಕಿಸಿ ಮತ್ತು ವಿರೋಧಿಸಿ ಕರ್ನಾಟಕ ಬಂದ್‌ಗೆ ಕರೆ ನೀಡಿದ್ದವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ಕೋರಿ ರಾಜ್ಯ ಅಡ್ವೊಕೇಟ್ ಜನರಲ್‌ಗೆ ಮನವಿ ಸಲ್ಲಿಸಲಾಗಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲ ಎನ್.ಪಿ. ಅಮೃತೇಶ್ ಸೋಮವಾರ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ಅವರಿಗೆ ಅರ್ಜಿ ಸಲ್ಲಿಸಿ, ‘ಈ ಅರ್ಜಿಯಲ್ಲಿ ಕಾಣಿಸಲಾಗಿರುವ ಆರೋಪಿಗಳು, ನ್ಯಾಯಾಂಗ ಮತ್ತು ತೀರ್ಪನ್ನು ಟೀಕಿಸುತ್ತ ವೈಯಕ್ತಿಕ ಹೇಳಿಕೆ ನೀಡುತ್ತಿದ್ದಾರೆ. ನ್ಯಾಯಮೂರ್ತಿಗಳ ವಿಶ್ವಾಸಾರ್ಹತೆಯನ್ನೂ ಪ್ರಶ್ನಿಸುತ್ತಿದ್ದಾರೆ. ಈ ಮೂಲಕ ನ್ಯಾಯಾಂಗದ ಘನತೆಯನ್ನು ಕುಗ್ಗಿಸುವ ಯತ್ನ ಮಾಡುತ್ತಿದ್ದಾರೆ’ ಎಂದು ವಿವರಿಸಿದರು.



ನಗರದ ಕಮ್ಮನಹಳ್ಳಿಯಲ್ಲಿ ಲಲಿತಾ ಜುವೆಲ್ಲರಿ ಕಂಪನಿಯ ಹೊಸ ಮಳಿಗೆಯನ್ನು ಕಂಪನಿಯ ಸಿಎಂಡಿ ಡಾ.ಎಂ.ಕಿರಣ್ ಕುಮಾರ್ (ಎಡದಿಂದ ಮೂರನೆಯವರು) ಭಾನುವಾರ ಉದ್ಘಾಟಿಸಿದರು.

ಕೆಲಸಕ್ಕೆ ಗೈರಾಗಿ ಪ್ರತಿಭಟನೆಯಲ್ಲಿ ಪಾಲ್ಗೊಂಡ ಬ್ಯಾಂಕ್ ನೌಕರರು

ನೌಕರರ ದೇಶವ್ಯಾಪಿ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶವ್ಯಾಪಿ ಕರೆ ನೀಡಿರುವ ಮುಷ್ಕರ ಬೆಂಬಲಿಸಿ ನಗರದಲ್ಲಿ ಸೋಮವಾರ ಪ್ರತಿಭಟನೆಗಳು ನಡೆದವು.

ಕೇಂದ್ರ ಸರ್ಕಾರದ ಕಾರ್ಮಿಕ–ರೈತ ವಿರೋಧಿ ಧೋರಣೆ ಖಂಡಿಸಿ ಕಾರ್ಮಿಕ ಸಂಘಟನೆಗಳ ಒಕ್ಕೂಟ ಸೋಮವಾರ ಹಾಗೂ ಮಂಗಳವಾರ ಮುಷ್ಕರಕ್ಕೆ ಕರೆ ನೀಡಿದೆ.

ನಗರದ ಮೈಸೂರು ಬ್ಯಾಂಕ್ ವೃತ್ತ, ಕೆನರಾ ಬ್ಯಾಂಕ್ ಮುಖ್ಯ ಕಚೇರಿ, ಜೆ.ಸಿ.ರಸ್ತೆಯಲ್ಲಿರುವ ಎಲ್‌ಐಸಿ ಕಚೇರಿ ಎದುರು ನೌಕರರು ಪ್ರತಿಭಟನೆ ನಡೆಸಿದರು. ಘೋಷಣಾ ಫಲಕಗಳನ್ನು ಪ್ರದರ್ಶಿಸಿ, ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಜೆ.ಸಿ. ರಸ್ತೆಯಲ್ಲಿರುವ ಎಲ್‌ಐಸಿ ಮುಖ್ಯ ಕಚೇರಿ ಎದುರು ನೌಕರರು ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಅಖಿಲ ಭಾರತ ಬ್ಯಾಂಕ್ ನೌಕರರ ಒಕ್ಕೂಟವು ಮುಷ್ಕರಕ್ಕೆ ಬೆಂಬಲ ನೀಡಿದೆ. ನಗರದ ಬ್ಯಾಂಕ್‌ಗಳ ನೌಕರರು ಕೆಲಸಕ್ಕೆ ಗೈರಾಗಿ, ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಅಧಿಕಾರಿಗಳು ಮಾತ್ರ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸಿದರು. ಇದರಿಂದಾಗಿ ಬ್ಯಾಂಕ್ ಕೆಲಸದಲ್ಲಿ ವ್ಯತ್ಯಯ ಉಂಟಾಯಿತು.

'ಕೆನರಾ ಬ್ಯಾಂಕ್ ನೌಕರರ ಒಕ್ಕೂಟ' ಸದಸ್ಯರು ಪುರಭವನ ಬಳಿಯ ಕೆನರಾ ಬ್ಯಾಂಕ್ ಮುಖ್ಯ ಕಚೇರಿ ಎದುರು ಪ್ರತಿಭಟಿಸಿದರು.

ವಿಮೆ ನೌಕರರ ಪ್ರತಿಭಟನೆ: ವಿಮಾ ನಿಗಮಗಳ ನೌಕರರ ಸಂಘದ ನೇತೃತ್ವದಲ್ಲಿ ಎಲ್‌ಐಸಿ (ಲೈಫ್ ಇನ್ಶೂರೆನ್ಸ್ ಕಂಪನಿ) ಹಾಗೂ ಇತರೆ ನಿಗಮಗಳ ನೌಕರರು ಪ್ರತಿಭಟನೆ ನಡೆಸಿದರು. ಕೆಲಸಕ್ಕೆ ಗೈರಾದ ನೌಕರರು, ಎಲ್‌ಐಸಿ ಮುಖ್ಯ ಕಚೇರಿ ಎದುರು ಸೇರಿ ಇಡೀ ದಿನ ಪ್ರತಿಭಟನೆ ನಡೆಸಿದರು. ಘೋಷಣಾ ಫಲಕಗಳನ್ನು ಪ್ರದರ್ಶಿಸಿ, ಬೇಡಿಕೆ ಈಡೇರಿಕೆಗೆ ಒತ್ತಾಯಿಸಿದರು.

'ವಿಮೆ ಕ್ಷೇತ್ರದಲ್ಲಿ ಜನರ ವಿಶ್ವಾಸ ಗಳಿಸಿರುವ ಎಲ್‌ಐಸಿ ಖಾಸಗೀಕರಣ ಮಾಡಬಾರದು. ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಪಡಿಸಬೇಕು. ಕಾರ್ಮಿಕ ಹಾಗೂ ರೈತ ವಿರೋಧಿ ಕಾಯ್ದೆಗಳನ್ನು ಕೂಡಲೇ ಹಿಂಪಡೆಯಬೇಕು' ಎಂದೂ ಪ್ರತಿಭಟನಕಾರರು ಆಗ್ರಹಿಸಿದರು.

ಯುಗಾದಿ: 600 ವಿಶೇಷ ಬಸ್

ಬೆಂಗಳೂರು: ಯುಗಾದಿ ಹಬ್ಬದ ಪ್ರಯುಕ್ತ ಪ್ರಯಾಣಿಕರ ಅನುಕೂಲಕ್ಕಾಗಿ ಕೆಎಸ್ ಆರ್‌ಟಿಸಿ ಹೆಚ್ಚುವರಿಯಾಗಿ 600 ವಿಶೇಷ ಬಸ್‌ಗಳನ್ನು ವ್ಯವಸ್ಥೆ ಮಾಡಿದೆ. ಏಪ್ರಿಲ್ 1 ಮತ್ತು 2ರಂದು ಬೆಂಗಳೂರಿನಿಂದ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರ ರಾಜ್ಯಗಳಿಗೆ ವಿಶೇಷ ಬಸ್‌ಗಳು ಸಂಚರಿಸಲಿವೆ. ಏಪ್ರಿಲ್ 3ರಂದು ಬೆಂಗಳೂರಿಗೆ ವಾಪಸ್ ಬರಲಿವೆ.


ಹೆಬ್ಬಾಳ ಕ್ಷೇತ್ರದ ಸಿಪಿವಿ ಬ್ಲಾಕ್ ಹಾಗೂ ಎಂ.ಎಸ್‌.ಎಚ್ ಬಡಾವಣೆಗಳಲ್ಲಿ ಶಾಸಕ ಬೈರತಿ ಸುರೇಶ್ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಆನಂದ್ ಕುಮಾರ್, ಬಾಲಾಜಿ, ಮುಜಾಮಿಲ್ ಅಹ್ಮದ್ ಹಾಗೂ ಸ್ಥಳೀಯ ನಿವಾಸಿಗಳು ಇದ್ದಾರೆ.

ಚನ್ನಣ್ಣವರ್ ವಿರುದ್ಧ ಸಿಬಿಐ ತನಿಖೆಗೆ ಕೋರಿ ರಿಟ್ ಅರ್ಜಿ

ಬೆಂಗಳೂರು: 'ಸಿಐಡಿ ಎಸ್‌ಪಿ ರವಿ ಡಿ. ಚನ್ನಣ್ಣನವರ್ ಅವರು ತಮ್ಮ ಪೋಷಕರು ಮತ್ತು ಸಂಬಂಧಿಕರ ಹೆಸರಿನಲ್ಲಿ ಅಕ್ರಮವಾಗಿ ಕೋಟ್ಯಂತರ ಮೌಲ್ಯದ ಆಸ್ತಿ ಸಂಪಾದಿಸಿರುವ ಬಗ್ಗೆ ದೂರು ದಾಖಲಿಸಿಕೊಂಡು ತನಿಖೆ ನಡೆಸಲು ಸಿಬಿಐ ಅಥವಾ ಇ.ಡಿಗೆ (ಜಾರಿ ನಿರ್ದೇಶನಾಲಯ) ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತಂತೆ ನಗರದ ವಕೀಲ ಕೆ.ಎನ್. ಜಗದೀಶ್ ಕುಮಾರ್ ಸಲ್ಲಿಸಿರುವ ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ಪ್ರಕರಣದಲ್ಲಿ ರಾಜ್ಯ ಗೃಹ ಇಲಾಖೆಯ ಮುಖ್ಯ ಕಾರ್ಯದರ್ಶಿ, ಕೇಂದ್ರ ಗೃಹ ಸಚಿವಾಲಯದ ಪ್ರಧಾನ ಕಾರ್ಯದರ್ಶಿ, ಸಿಬಿಐ–ಇಡಿ ನಿರ್ದೇಶಕರು ಮತ್ತು ರವಿ ಡಿ. ಚನ್ನಣ್ಣನವರ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಕಥಾ ಸ್ಪರ್ಧೆ: ಗೌರಿಗೆ ಮೊದಲ ಬಹುಮಾನ

ಬೆಂಗಳೂರು: ಕನ್ನಡ ಬಳಗ ಸೋಷಿಯೊ ಕಲ್ಚರಲ್ ಅಸೋಸಿಯೇಷನ್, 'ಚೆನ್ನೈ ಲಹರಿ' ಕನ್ನಡ ಪತ್ರಿಕೆಯ ಯುಗಾದಿ ವಿಶೇಷಾಂಕಕ್ಕಾಗಿ ಆಯೋಜಿಸಿದ್ದ ಕಥಾ ಸ್ಪರ್ಧೆಯಲ್ಲಿ ಶಿವಮೊಗ್ಗದ ಗೌರಿ ಚಂದ್ರಕೇಸರಿ ಮೊದಲ ಬಹುಮಾನ ಪಡೆದಿದ್ದಾರೆ.

'ಗೌರಿ ಅವರ 'ಚೌಕಾಬಾರ' ಕಥೆಯು ಪ್ರಶಸ್ತಿಗೆ ಆಯ್ಕೆಯಾಗಿದೆ. ಇವರಿಗೆ ₹5 ಸಾವಿರ ನಗದು ದೊರೆಯಲಿದೆ. ಶಿವಮೊಗ್ಗದವರೇ ಆದ ವಿನಾಯಕ ಅರಳಸುರಳಿ ಅವರ 'ಮರ ಹತ್ತದ ಮೀನು' ಹಾಗೂ ಧಾರವಾಡದ ನಳಿನಿ ಭೀಮಪ್ಪ ಬರೆದ 'ಆಹುತಿ' ಕಥೆಗಳು ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಬಹುಮಾನಕ್ಕೆ ಆಯ್ಕೆಯಾಗಿವೆ.

ತಲೆಮೇಲೆ ಮರ ಬಿದ್ದು ಬೈಕ್ ಸವಾರ ಸಾವು

ತಿ. ನರಸೀಪುರ: ತಾಲ್ಲೂಕಿನ ಕೆಂಪಯ್ಯನಹುಂಡಿ ಬಳಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ತಲೆ ಮರ ಬಿದ್ದು ಸವಾರ ಮನು (28) ಸೋಮವಾರ ಸ್ಥಳದಲ್ಲೇ ಮೃತಪಟ್ಟರು.

ಮನೆಗಳಲ್ಲಿ ಕಳವು: ಗುಜರಿ ವ್ಯಾಪಾರಿ ಬಂಧನ, 147 ಗ್ರಾಂ ಚಿನ್ನಾಭರಣ ಜಪ್ತಿ

ಕದ್ದ ಹಣದಲ್ಲಿ ಪತ್ನಿ ಜೊತೆ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಇಮ್ರಾನ್ ಪಾಷಾ (26) ಎಂಬುವವರನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೆ.ಆರ್. ಪುರ ನಿವಾಸಿ ಇಮ್ರಾನ್ ಪಾಷಾ, ಗುಜರಿ ವ್ಯಾಪಾರಿ. ಗುಜರಿ ವಸ್ತುಗಳನ್ನು ಖರೀದಿಸಲು ನಗರದ ಹಲವೆಡೆ ಹಗಲಿನಲ್ಲಿ ಸುತ್ತಾಡುತ್ತಿದ್ದರು. ಅದೇ ವೇಳೆ ಮನೆಗಳಲ್ಲಿ ಗುರುತಿಸಿ, ನಸುಕಿನಲ್ಲಿ ಹಾಗೂ ರಾತ್ರಿ ವೇಳೆ ಕಳ್ಳತನ ಮಾಡುತ್ತಿದ್ದರು. ಆರೋಪಿಯಿಂದ ₹ 8.50 ಲಕ್ಷ ಮೌಲ್ಯದ 147 ಗ್ರಾಂ ಚಿನ್ನಾಭರಣ, 1 ಕೆ.ಜಿ 517 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಗೋವಿಂದರಾಜನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಜ. 10ರಂದು ಕಳ್ಳತನವಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದರು' ಎಂದರು.

ಐಷಾರಾಮಿ ಜೀವನ: 'ಆರೋಪಿ ಇಮ್ರಾನ್ ಪಾಷಾ, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ವಾಸವಿದ್ದರು. ಕುಟುಂಬದ ಐಷಾರಾಮಿ ಜೀವನಕ್ಕೆ ಗುಜರಿ ವ್ಯಾಪಾರದಿಂದ ಬರುತ್ತಿದ್ದ ಹಣ ಸಾಲುತ್ತಿರಲಿಲ್ಲ. ಹೀಗಾಗಿ, ಇಮ್ರಾನ್ ಪಾಷಾ ಕಳ್ಳತನಕ್ಕೆ ಇಳಿದಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿ, ಪತ್ನಿಯನ್ನು ತಿಂಗಳಿಗೊಮ್ಮೆ ಹೊರ ರಾಜ್ಯಗಳಿಗೆ ಪ್ರವಾಸಕ್ಕೆ ಕರೆದೊಯ್ಯುತ್ತಿದ್ದರು. ಐಷಾರಾಮಿ ಹಾಗೂ ಬೆಲೆಬಾಳುವ ವಸ್ತುಗಳನ್ನು ಹೆಚ್ಚಾಗಿ ಖರೀದಿಸುತ್ತಿದ್ದರು. ಅದಕ್ಕೆ ಬೇಕಾದ ಹಣವನ್ನು ಕಳ್ಳತನದಿಂದ ಹೊಂದಿಸುತ್ತಿದ್ದರು. ಇತ್ತೀಚೆಗೆ ಪತ್ನಿಯನ್ನು ಕಾಶ್ಮೀರಕ್ಕೆ ಪ್ರವಾಸಕ್ಕೆ ಕರೆದೊಯ್ದಿದ್ದರು. ಹಣ ಖಾಲಿಯಾಗುತ್ತಿದ್ದಂತೆ ಬೆಂಗಳೂರಿಗೆ ವಾಪಸು ಕರೆತಂದಿದ್ದರು' ಎಂದೂ ತಿಳಿಸಿದರು.

'ಮಹದೇವಪುರ, ಅಶೋಕನಗರ, ಕೆ.ಆರ್. ಪುರ ಹಾಗೂ ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಕಳ್ಳತನ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿದರು.

ಹಣ ದ್ವಿಗುಣ ಆಮಿಷ: ₹ 30 ಲಕ್ಷ ವಂಚನೆ

ಬೆಂಗಳೂರು: ಹಣ ದ್ವಿಗುಣಗೊಳಿಸುವ ಆಮಿಷವೊಡ್ಡಿ ಉದ್ಯಮಿಯೊಬ್ಬರಿಂದ ₹ 30 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಂಗಳೂರು ಉದ್ಯಮಿ ರಶೀದ್ ಲತೀಫ್ ಎಂಬುವವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ರಾಜೀವ್, ಸಾಜಿದ್, ಸತ್ಯನ್ ಹಾಗೂ ಅಭಿಲಾಷ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ಹೇಳಿದರು.

'ಸ್ನೇಹಿತರೊಬ್ಬರ ಮೂಲಕ ರಶೀದ್ ಅವರಿಗೆ ಆರೋಪಿಗಳ ಪರಿಚಯವಾಗಿತ್ತು. ಹೂಡಿಕೆ ವ್ಯವಹಾರ ಮಾಡುತ್ತಿರುವುದಾಗಿ ಆರೋಪಿಗಳು ಹೇಳಿದ್ದರು. ಹೂಡಿಕೆ ಮಾಡಿದರೆ ಕಡಿಮೆ ಸಮಯದಲ್ಲಿ ಹಣ ದ್ವಿಗುಣಗೊಳಿಸುವುದಾಗಿಯೂ ಭರವಸೆ ನೀಡಿದ್ದರು. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 30 ಲಕ್ಷ ಕೊಟ್ಟಿದ್ದರು.'

'ಹಣ ಪಡೆದ ನಂತರ ಆರೋಪಿಗಳು ಪರಾರಿಯಾಗಿದ್ದು, ಮೊಬೈಲ್ ಸಹ ಸ್ವಿಚ್ ಆಫ್ ಆಗಿದೆ. ವಂಚನೆಗೀಡಾಗಿದ್ದು ಗೊತ್ತಾಗುತ್ತಿದ್ದಂತೆ ಉದ್ಯಮಿ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದೂ ತಿಳಿಸಿದರು.



ಆರೋಪಿಯಿಂದ ಜಪ್ತಿ ಮಾಡಲಾದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ದ್ವಿಚಕ್ರ ವಾಹನ

'ಗೋಡೆ ಹಾಗೂ ಬಾಗಿಲುಗಳಿಗೆ ಕಿಂಡಿ'

'ತಮ್ಮ ಮನೆಯ ಗೋಡೆ ಹಾಗೂ ಬಾಗಿಲುಗಳಲ್ಲಿ ಆರೋಪಿ ಸಣ್ಣ ಕಿಂಡಿ ಕೊರೆದಿದ್ದರು. ತಮ್ಮನ್ನು ಬಂಧಿಸಲು ಪೊಲೀಸರು ಮನೆಗೆ ಬಂದರೆ, ಕಿಂಡಿ ಮೂಲಕವೇ ಗಮನಿಸಿ ಪರಾರಿಯಾಗುವುದು ಆರೋಪಿ ಉದ್ದೇಶವಾಗಿತ್ತು. ಆರೋಪಿ ಬಂಧಿಸಿದ ನಂತರ, ಮನೆಯಲ್ಲಿ ಪರಿಶೀಲನೆ ನಡೆಸಿದಾಗ ಕಿಂಡಿಗಳು ಇರುವುದು ಪತ್ತೆಯಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಮಸಾಜ್ ನೆಪದಲ್ಲಿ ಚಿನ್ನದ ಸರ ಕಳವು

ಬೆಂಗಳೂರು: ಕಾಲು ನೋವಿಗೆ ಮಸಾಜ್ ಮಾಡುವ ನೆಪದಲ್ಲಿ ಚಿನ್ನದ ಸರ ಕಳವು ಮಾಡಲಾಗಿದ್ದು, ಈ ಬಗ್ಗೆ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ವೃದ್ಧೆಯೊಬ್ಬರು ದೂರು ನೀಡಿದ್ದಾರೆ. ಅಪರಿಚಿತ ಮಹಿಳೆ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮನೆಗೆ ಸಾಮಗ್ರಿ ತರಲೆಂದು ವೃದ್ಧೆ, ಅಂಗಡಿಗೆ ಹೋಗಿ ವಾಪಸು ಬರುತ್ತಿದ್ದರು. ಕಾಲು ನೋವು ಇದ್ದಿದ್ದರಿಂದ ನಿಧಾನವಾಗಿ ನಡೆಯುತ್ತಿದ್ದರು. ಅವರನ್ನು ತಡೆದಿದ್ದ ಮಹಿಳೆ, 'ಕಾಲು ನೋವಿಗೆ ಔಷಧಿ ಇದ್ದು, ಕಾಲಿಗೆ ಹಚ್ಚಿ ಮಸಾಜ್ ಮಾಡಿದರೆ ನೋವು ನಿವಾರಣೆಯಾಗುತ್ತದೆ' ಎಂದಿದ್ದರು.' 'ಆರೋಪಿ ಮಾತು ನಂಬಿದ್ದ ವೃದ್ಧೆ, ಅವರನ್ನು ಮನೆಗೆ ಕರೆದೊಯ್ದಿದ್ದರು. ಮಸಾಜ್ ಮಾಡುತ್ತಿದ್ದಾಗಲೇ ಆರೋಪಿ, ವೃದ್ಧೆ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.


ಲಂಚ: ಬೆಸ್ಕಾಂ ಇಇ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುವರಿ ವಿದ್ಯುತ್ ಮೀಟರ್ ಮತ್ತು ಎಲ್.ಟಿ. ವಿದ್ಯುತ್ ಪೂರೈಕೆ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿದ್ದ ವ್ಯಕ್ತಿಯಿಂದ ₹ 10,000 ಲಂಚ ಪಡೆಯುತ್ತಿದ್ದ ಬೆಸ್ಕಾಂನ ಬೆಂಗಳೂರು ಉತ್ತರ ವೃತ್ತದ ಕಾರ್ಯನಿರ್ವಾಹಕ ಎಂಜಿನಿಯರ್ ಎಲ್.ಎಸ್. ಲಕ್ಷ್ಮೀಶ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸೋಮವಾರ ಬಂಧಿಸಿದೆ.

ಬಸವೇಶ್ವರ ನಗರದ ನಿವಾಸಿಯೊಬ್ಬರು ತಮ್ಮ ಕಟ್ಟಡದಲ್ಲಿರುವ 18 ಮನೆಗಳ ಪೈಕಿ ಒಂದಕ್ಕೆ ಹೆಚ್ಚುವರಿ ವಿದ್ಯುತ್ ಮೀಟರ್ ಹಾಗೂ ಎಲ್.ಟಿ. ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದ್ದರು. ಮಂಜೂರಾತಿ ನೀಡಲು ₹ 10,000 ಲಂಚ ನೀಡುವಂತೆ ಕಾರ್ಯನಿರ್ವಾಹಕ ಎಂಜಿನಿಯರ್ ಬೇಡಿಕೆ ಇಟ್ಟಿದ್ದರು.

ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು. ಶಿವಾನಂದ ವೃತ್ತದಲ್ಲಿರುವ ಬೆಸ್ಕಾಂ ಬೆಂಗಳೂರು ಉತ್ತರ ವೃತ್ತದ ಕಚೇರಿಯಲ್ಲಿ ಸೋಮವಾರ ಸಂಜೆ ಲಂಚ ಪಡೆಯುತ್ತಿದ್ದಾಗ ದಾಳಿಮಾಡಿದ ಎಸಿಬಿ ಅಧಿಕಾರಿಗಳು, ಲಕ್ಷ್ಮೀಶ್ ಅವರನ್ನು ಬಂಧಿಸಿದರು.



'ಕೋವಿಡ್–19' ಹರಡುವಿಕೆ ಸಮಯದಲ್ಲಿ 'ಸುವರ್ಣ ಸುರಕ್ಷಾ ಆರೋಗ್ಯ ಟ್ರಸ್ಟ್' ಮೂಲಕ ನೇಮಿಸಿಕೊಂಡಿರುವ ಆರೋಗ್ಯ ಮಿತ್ರರ ಸೇವೆಯನ್ನು 'ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ' ಯೋಜನೆಯಡಿ ಮುಂದುವರಿಸಬೇಕು' ಎಂದು ಒತ್ತಾಯಿಸಿ ಆರೋಗ್ಯ ಮಿತ್ರರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಸ್ಫೋಟ: ಬೆಸ್ಕಾಂ ಎಂಜಿನಿಯರ್‌ಗಳ ಬಂಧನ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮೇಲ್ಸೇತುವೆ ಬಳಿ ಸಂಭವಿಸಿದ್ದ ಟ್ರಾನ್ಸ್‌ಫಾರ್ಮರ್ ಸ್ಫೋಟ ಪ್ರಕರಣ ಸಂಬಂಧ ಬೆಸ್ಕಾಂನ ಇಬ್ಬರು ಎಂಜಿನಿಯರ್‌ಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸಹಾಯಕ ಎಂಜಿನಿಯರ್ ದಿನೇಶ್, ಕಿರಿಯ ಎಂಜಿನಿಯರ್ ಮಹಾಂತೇಶ್ ಬಂಧಿತರು. ಇವರಿಬ್ಬರು, ಬೆಸ್ಕಾಂನ ಅಂಜನಾ ನಗರ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ ಜವಾಬ್ದಾರಿ ಹೊತ್ತುಕೊಂಡಿದ್ದರು' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಮಾರ್ಚ್ 23ರಂದು ಟ್ರಾನ್ಸ್‌ಫಾರ್ಮರ್ ಸ್ಫೋಟ ಸಂಭವಿಸಿತ್ತು. ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಮಂಗನಹಳ್ಳಿ ನಿವಾಸಿ ಶಿವರಾಜ್ (55) ಹಾಗೂ ಅವರ ಮಗಳು ಚೈತನ್ಯಾ (19) ಅವರು ಬೆಂಕಿ ತಗುಲಿ ಮೃತಪಟ್ಟಿದ್ದರು. ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಬೆಸ್ಕಾಂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ತನಿಖೆ ಕೈಗೊಂಡು ದಿನೇಶ್ ಹಾಗೂ ಮಹಾಂತೇಶ್ ಅವರನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.


'ಟ್ರಾನ್ಸ್‌ಫಾರ್ಮರ್‌ನಲ್ಲಿ ಸಣ್ಣ ಪ್ರಮಾಣದಲ್ಲಿ ಬೆಂಕಿ ಹಾಗೂ ಹೊಗೆ ಕಾಣಿಸಿಕೊಂಡಿತ್ತು. ಅದನ್ನು ನೋಡಿದ್ದ ಸ್ಥಳೀಯರು, ಬೆಸ್ಕಾಂ ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿದ್ದರು. ಅದನ್ನು ದಾಖಲಿಸಿಕೊಂಡಿದ್ದ ಸಿಬ್ಬಂದಿ, ದೂರು ಸ್ವೀಕೃತಿ ನಂಬರ್ ಸಹ ನೀಡಿದ್ದರು. ಆದರೆ, ಎಂಜಿನಿಯರ್‌ಗಳು ಸ್ಥಳಕ್ಕೆ ಭೇಟಿ ನೀಡಿರಲಿಲ್ಲ. ಅವರ ನಿರ್ಲಕ್ಷ್ಯದಿಂದ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡಿತ್ತು' ಎಂದೂ ಹೇಳಿದರು.

ಕಾರು ಬೆನ್ನಟ್ಟಿ 250 ಕೆ.ಜಿ ರಕ್ತಚಂದನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ರಕ್ತಚಂದನ ತುಂಡುಗಳನ್ನು ಕೆ.ಆರ್.ಪುರ ಠಾಣೆ ಪೊಲೀಸರು ಜಪ್ತಿ ಮಾಡಿದ್ದು, ಆರೋಪಿ ಅಬ್ದುಲ್ ರೆಹಮಾನ್ ಎಂಬುವವರನ್ನು ಬಂಧಿಸಿದ್ದಾರೆ.

'ಕಾರಿನಲ್ಲಿ ರಕ್ತಚಂದನ ಸಾಗಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಮೇಡಹಳ್ಳಿ-ಭಟ್ಟರಹಳ್ಳಿ ಮುಖ್ಯರಸ್ತೆಯಲ್ಲಿ ಸಿಬ್ಬಂದಿ ಕಾವಲು ಕಾಯುತ್ತಿದ್ದರು. ರಕ್ತಚಂದನ ತುಂಡುಗಳಿದ್ದ ಕಾರು ಚಲಾಯಿಸಿಕೊಂಡು ಸ್ಥಳಕ್ಕೆ ಬಂದಿದ್ದ ಚಾಲಕ, ಪೊಲೀಸರನ್ನು ನೋಡಿ ಪರಾರಿಯಾಗಲು ಯತ್ನಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಕೆ.ಆರ್.ಪುರ ಪೊಲೀಸರು ಜಪ್ತಿ ಮಾಡಿರುವ ರಕ್ತಚಂದನ ತುಂಡುಗಳು

'ಪ್ರಮುಖ ರಸ್ತೆಯಲ್ಲೇ ಕಾರು ಬೆನ್ನಟ್ಟಿ, ಮಾರ್ಗಮಧ್ಯೆಯೇ ನಿಲ್ಲಿಸಲಾಯಿತು. ಕಾರಿನಿಂದ ಇಳಿದ ಇಬ್ಬರು ಆರೋಪಿಗಳು, ತಪ್ಪಿಸಿಕೊಂಡು ಓಡಿಹೋದರು. ಕೆಜಿಎಫ್ ತಾಲ್ಲೂಕಿನ ಬೇತಮಂಗಲದ ನಿವಾಸಿ ಅಬ್ದುಲ್ ರೆಹಮಾನ್ ಮಾತ್ರ ಸಿಕ್ಕಿಬಿದ್ದರು. ಕಾರಿನಲ್ಲಿ ₹ 20 ಲಕ್ಷ ಮೌಲ್ಯದ 250 ಕೆ.ಜಿ ತೂಕದ 6 ರಕ್ತ ಚಂದನ ತುಂಡುಗಳು ಪತ್ತೆಯಾದವು' ಎಂದೂ ತಿಳಿಸಿವೆ.

'ಹೊರರಾಜ್ಯದಿಂದ ರಕ್ತಚಂದನವನ್ನು ಬೆಂಗಳೂರಿಗೆ ತಂದು ಮಾರುವುದು ಹಾಗೂ ಅದರಿಂದ ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುವುದು ಆರೋಪಿಗಳ ಉದ್ದೇಶವಾಗಿತ್ತು. ಜಪ್ತಿ ಮಾಡಿರುವ ರಕ್ತಚಂದನದ ತುಂಡುಗಳನ್ನು ಆರೋಪಿಗಳು ಕದ್ದುಕೊಂಡು ತಂದಿದ್ದ ಮಾಹಿತಿ ಇದ್ದು, ಪರಿಶೀಲನೆ ನಡೆದಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಕುಟುಂಬ ಯೋಜನೆಯನ್ನು ಇಸ್ಲಾಂ ವಿರೋಧಿಸುವುದಿಲ್ಲ'

ನವದೆಹಲಿ (ಪಿಟಿಐ): 'ಕುಟುಂಬ ಯೋಜನೆಯ ಪರಿಕಲ್ಪನೆಯನ್ನು ಇಸ್ಲಾಂ ಧರ್ಮ ವಿರೋಧಿಸುವುದಿಲ್ಲ' ಎಂದಿರುವ ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ. ಖುರೇಷಿ, 'ಜನಸಂಖ್ಯೆಯಲ್ಲಿ ಮುಸ್ಲಿಮರು ಹಿಂದೂಗಳನ್ನು ಹಿಂದಿಕ್ಕಬಹುದು ಎಂಬುದು ಕೇವಲ ಪ್ರಚಾರವಷ್ಟೇ' ಎಂದು ಸೋಮವಾರ ಹೇಳಿದರು.

ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ತಮ್ಮ ಪುಸ್ತಕ 'ದಿ ಪಾಪ್ಯುಲೇಷನ್ ಮಿಥ್: ಇಸ್ಲಾಂ, ಫ್ಯಾಮಿಲಿ ಪ್ಲಾನಿಂಗ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯಾ' ಕುರಿತ ಚರ್ಚೆಯಲ್ಲಿ ಅವರು ಮಾತನಾಡಿದರು.

ಬೋರ್‌ವೆಲ್ ಟೆಂಡರ್: ಅಕ್ರಮ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 'ಗಂಗಾ ಕಲ್ಯಾಣ ಯೋಜನೆ'ಯಡಿ ಕೊಳವೆ ಬಾವಿಗಳನ್ನು ಕೊರೆಸುವ ಟೆಂಡರ್‌ನ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮ ನಡೆದಿದೆ' ಎಂದು ರಾಜ್ಯ ಸಮಾಜ ಕಲ್ಯಾಣ ಇಲಾಖೆ ಬೋರ್‌ವೆಲ್ ಗುತ್ತಿಗೆದಾರರು ಮತ್ತು ಪಂಪ್‌ಸೆಟ್ ತಯಾರಕರ ಗುತ್ತಿಗೆದಾರರ ಸಂಘದ ಅಧ್ಯಕ್ಷ ಶಿವಾರೆಡ್ಡಿ ಆರೋಪಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,'ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಬಿ.ಆರ್. ಅಂಬೇಡ್ಕರ್ ನಿಗಮ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಆದಿಜಾಂಬವ ಅಭಿವೃದ್ಧಿ ನಿಗಮ ಹಾಗೂ ತಾಂಡಾ ಅಭಿವೃದ್ಧಿ ನಿಗಮಗಳಲ್ಲಿ 2019ರಿಂದ 21ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ₹431 ಕೋಟಿ ವೆಚ್ಚದಲ್ಲಿ 14,577 ಕೊಳವೆ ಬಾವಿಗಳನ್ನು ಕೊರೆಸಲು ಟೆಂಡರ್ ಕರೆಯಲಾಗಿತ್ತು' ಎಂದರು.

'ನಿಗಮಗಳ ಅಧಿಕಾರಿಗಳು ನಕಲಿ ದಾಖಲೆಗಳನ್ನು ಒಪ್ಪಿ, ಅರ್ಹತೆಯಿಲ್ಲದ ಗುತ್ತಿಗೆದಾರರಿಗೆ ಕೊಳವೆ ಬಾವಿ ಕೊರೆಸಲು, ಪಂಪ್‌ಸೆಟ್ ಸರಬರಾಜು ಹಾಗೂ ವಿದ್ಯುದ್ದೀಕರಣ ಮಾಡುವ ಕಾರ್ಯಾದೇಶ ನೀಡಿದ್ದಾರೆ. ಆದರೆ, ಬಹುತೇಕ ಗುತ್ತಿಗೆದಾರರು ಟೆಂಡರ್‌ಗೆ ನಕಲಿ ದಾಖಲೆಗಳನ್ನು ಸಲ್ಲಿಸಿದ್ದಾರೆ. ಅಧಿಕಾರಿಗಳೂ ಗುತ್ತಿಗೆದಾರರ ಜತೆ ಶಾಮೀಲಾಗಿ ಸುಮಾರು ₹130 ಕೋಟಿಯಷ್ಟು ಭ್ರಷ್ಟಾಚಾರ ನಡೆಸಿದ್ದಾರೆ' ಎಂದು ಆರೋಪಿಸಿದರು.

'ಗುತ್ತಿಗೆದಾರರು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿರುವ ದಾಖಲೆಗಳು ಮತ್ತು ಟೆಂಡರ್‌ನಲ್ಲಿ ಸೂಚಿಸಿರುವ ದಾಖಲೆಗಳನ್ನು ಗಮನಿಸಿದರೆ, ಕೋಟ್ಯಂತರ ರೂಪಾಯಿ ವ್ಯತ್ಯಾಸ ಕಂಡು ಬರುತ್ತದೆ. ಟೆಂಡರ್ ನಿಯಮಗಳಿಗೆ ವಿರುದ್ಧವಾಗಿರುವ ಹಾಗೂ ಕೆಪಿಟಿಟಿ ಕಾಯ್ದೆಯನ್ನು ಉಲ್ಲಂಘಿಸಿರುವ ಈ ಟೆಂಡರ್ ಅನ್ನು ಕೂಡಲೇ ರದ್ದು ಮಾಡಬೇಕು. ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಹಾಗೂ ಸಂಸ್ಥೆಗಳ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಬೊಮ್ಮಸಂದ್ರದಲ್ಲಿ ಕಾರ್ಮಿಕರ ಪ್ರತಿಭಟನೆ

ಬೊಮ್ಮನಹಳ್ಳಿ: ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಮುಷ್ಕರದ ಅಂಗವಾಗಿ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರು ಸೋಮವಾರ ಪ್ರತಿಭಟನೆ ನಡೆಸಿದರು.

ಕೇಂದ್ರದ ಮೋದಿ ಸರ್ಕಾರ ಅಂಬಾನಿ-ಅದಾನಿಗಳ ಕೈಗೊಂಬೆ ಸರ್ಕಾರವಾಗಿದ್ದು, ಇವರಿಗಾಗಿ ಕಾರ್ಮಿಕರ ಬದುಕನ್ನು ಬೀದಿಗೆ ತಳ್ಳಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೊಮ್ಮಸಂದ್ರದ ಕೈಗಾರಿಕಾ ಪ್ರದೇಶದಲ್ಲಿ ಮೆರವಣಿಗೆ ನಡೆಸಿದ ಕಾರ್ಮಿಕರು ಕೇಂದ್ರ, ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗಿದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷ ಡಾ.ಪ್ರಕಾಶ್ 'ದೇಶ ಇಂದು ನಾಲ್ಕು ಜನ ಗುಜರಾತಿಗಳ ಕೈಯಲ್ಲಿದೆ, ಮೋದಿ-ಷಾ ದೇಶವನ್ನು ಮಾರಾಟ ಮಾಡುತ್ತಿದ್ದರೆ, ಇನ್ನಿಬ್ಬರು ಗುಜರಾತಿಗಳಾದ ಅಂಬಾನಿ ಮತ್ತು ಅದಾನಿ ದೇಶವನ್ನು ಖರೀದಿ ಮಾಡುತ್ತಿದ್ದಾರೆ, ಈ ಇಬ್ಬರಿಗಾಗಿ 'ನಗದೀಕರಣ ಪೈಪ್ ಲೈನ್ ಯೋಜನೆ' ರೂಪಿಸಲಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಕೈಗಾರಿಕಾ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ಆಟೋ ಚಾಲಕರು ಹಾಗು ಬೀದಿಬದಿ ವ್ಯಾಪಾರಿಗಳು ನೂರಾರು ಸಂಖ್ಯೆಯಲ್ಲಿ ನೆರೆದಿದ್ದರು.



ಹೊಸೂರು ಮುಖ್ಯರಸ್ತೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾರ್ಮಿಕರು

'ಬಿಟ್ ಕಾಯಿನ್' ವಂಚನೆ: ಬೆಳಗಾವಿಯಲ್ಲಿ ಇಬ್ಬರ ಬಂಧನ

ಬೆಂಗಳೂರು: 'ಕ್ರಿಪ್ಟೊ' ಹಾಗೂ 'ಬಿಟ್ ಕಾಯಿನ್' ಮೇಲೆ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ನೀಡುವುದಾಗಿ ಹೇಳಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

'ಬೆಳಗಾವಿ ಜಿಲ್ಲೆಯ ರಾಯಬಾಗ್ ತಾಲ್ಲೂಕಿನ ಹಾರೋಗೇರಿಯ ಕಿರಣ್ ಭರತೇಶ್ (20), ಅರ್ಷದ್ ಮೊಹಿನುದ್ದೀನ್ (21) ಬಂಧಿತರು. ಎರಡು ಮೊಬೈಲ್, 3 ಸಿಮ್ ಕಾರ್ಡ್ ಹಾಗೂ ಬ್ಯಾಂಕ್ ಖಾತೆಯಲ್ಲಿದ್ದ ₹ 40 ಸಾವಿರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೂಡಿಕೆ ಹೆಸರಿನಲ್ಲಿ ಹಣ ಕಳೆದುಕೊಂಡಿದ್ದ ನಗರದ ನಿವಾಸಿಯೊಬ್ಬರು ಮಾರ್ಚ್ 18ರಂದು ದೂರು ನೀಡಿದ್ದರು.' ಎಂದರು.

ಇನ್‌ಸ್ಟಾಗ್ರಾಮ್‌ದಲ್ಲಿ ಜಾಹೀರಾತು: 'ಇನ್‌ಸ್ಟಾಗ್ರಾಮ್ ಆ್ಯಪ್‌ನಲ್ಲಿ 'ಅಭಿಷೆ ಅಕ್ವಾನೆ – ತರುಣ ಕ್ರಿಪ್ಟೊ ಟ್ರೇಡರ್' ಹೆಸರಿನಲ್ಲಿ ಖಾತೆ ತೆರೆದಿದ್ದ ಆರೋಪಿಗಳು, ಅದರ ಮೂಲಕ ಜನರನ್ನು ಸಂಪರ್ಕಿಸಿ ವಂಚಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಹಣ ಹೂಡಿಕೆ ಮಾಡಿದರೆ, ಶೇ 60ರಷ್ಟು ಲಾಭ ಖಚಿತ' ಎಂದು ಜಾಹೀರಾಜು ನೀಡುತ್ತಿದ್ದರು. ಹಣ ಪಡೆದ ನಂತರ ಲಾಭ ನೀಡುತ್ತಿರಲಿಲ್ಲ. ಅಸಲನ್ನೂ ಮರಳಿಸುತ್ತಿರಲಿಲ್ಲ' ಎಂದೂ ತಿಳಿಸಿದರು.

'ನಗರದ ಹಲವರನ್ನು ಆರೋಪಿಗಳು ವಂಚಿಸಿದ್ದಾರೆ. ಇವರ ವಿರುದ್ಧ ದಕ್ಷಿಣ ಸೈಬರ್ ಕ್ರೈಂ ಠಾಣೆಯಲ್ಲೂ ಪ್ರಕರಣ ದಾಖಲಾಗಿದೆ' ಎಂದರು.

ಹಳ್ಳ ಹಿಡಿಯದಿರಲಿ ವಾರ್ಡ್ ಸಮಿತಿ ಸಭೆ


• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಯಲ್ಲೀಗ ಚುನಾಯಿತ ಪ್ರತಿನಿಧಿಗಳ ಆಡಳಿತವಿಲ್ಲ. ಏನಿದ್ದರೂ ಅಧಿಕಾರಿಗಳದ್ದೇ ಕಾರುಬಾರು. ವಾರ್ಡ್‌ನ ನಿವಾಸಿಗಳ ಅಹವಾಲು ಆಲಿಸಲು ಪಾಲಿಕೆ ಸದಸ್ಯರಿಲ್ಲ ಎಂಬ ಕೊರತೆಯನ್ನು ವಾರ್ಡ್ ಸಮಿತಿ ಸಭೆಗಳು ತಕ್ಕಮಟ್ಟಿಗೆ ನೀಗಿಸುತ್ತಿದ್ದವು. ಆದರೆ, ಇತ್ತೀಚೆಗೆ ಪಾಲಿಕೆಯ ಬಹುತೇಕ ವಾರ್ಡ್‌ಗಳಲ್ಲಿ ವಾರ್ಡ್ ಸಭೆಗಳೂ ಮರೀಚಿಕೆ ಆಗಿಬಿಟ್ಟಿವೆ.



ದೇಶದಲ್ಲೇ ಅತಿ ಹೆಚ್ಚಿನ ಪ್ರಮಾಣದಲ್ಲಿ ವಾರ್ಡ್ ಸಭೆಗಳನ್ನು ನಡೆಸುತ್ತಿರುವ ಮಹಾನಗರ ಎಂಬ ಹೆಗ್ಗಳಿಕೆ ಬಿಬಿಎಂಪಿಯದು. 30ಕ್ಕೂ ಅಧಿಕ ವಾರ್ಡ್‌ಗಳಲ್ಲಿ ಪ್ರತಿ ತಿಂಗಳು ವಾರ್ಡ್ ಸಭೆಗಳು ಕಾಲಬದ್ಧವಾಗಿ ಅಚ್ಚುಕಟ್ಟಾಗಿ ನಡೆಯುತ್ತಿವೆ. ಆದರೆ, ಇನ್ನುಳಿದ ವಾರ್ಡ್‌ಗಳಲ್ಲಿ ಸಭೆ ನಡೆಸುವ ಉತ್ಸಾಹ ಸೊರಗುತ್ತಿದೆ ಎಂಬ ದೂರು ಸಾರ್ವಜನಿಕರಿಂದ ವ್ಯಕ್ತವಾಗಿದೆ.

2020ರ ಸೆ.10ಕ್ಕೆ ಮುನ್ನ ಬಿಬಿಎಂಪಿ ಚುನಾವಣೆ ನಡೆದು ಹೊಸ ಕೌನ್ಸಿಲ್ ಅಸ್ತಿತ್ವಕ್ಕೆ ಬರಬೇಕಿತ್ತು. ಆದರೆ, ಚುನಾವಣೆಯೇ ನಡೆದಿಲ್ಲ. ಪಾಲಿಕೆ ಸದಸ್ಯರಿಲ್ಲದಿದ್ದರೂ ಜನರ ಅಹವಾಲು ಆಲಿಸುವುದಕ್ಕೆ ಯಾವುದೇ ಕೊರತೆ ಎದುರಾಗಬಾರದು ಎಂಬ ಕಾರಣಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತರು ಪ್ರತಿ ವಾರ್ಡ್‌ಗೆ ಒಬ್ಬರು ನೋಡಲ್ ಅಧಿಕಾರಿಯನ್ನು ನೇಮಿಸಿದ್ದರು. ಅವರ ನೇತೃತ್ವದಲ್ಲೇ ವಾರ್ಡ್ ಸಮಿತಿಗಳನ್ನು ಪುನರ್‌ರಚಿಸಿ ಆದೇಶ ಹೊರಡಿಸಿದ್ದರು. ತಿಂಗಳಲ್ಲಿ ಎರಡು ಬಾರಿ (ಮೊದಲ ಮತ್ತು ಮೂರನೇ ಶನಿವಾರ) ತಪ್ಪದೇ ವಾರ್ಡ್ ಸಮಿತಿ ಸಭೆಗಳನ್ನು ನಡೆಸಬೇಕು ಎಂದು ಸೂಚಿಸಿದ್ದರು. ಪ್ರತಿ ವಾರ್ಡ್ ಸಭೆಯ ನಿರ್ಣಯಗಳ ಪ್ರತಿ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://site.bbmp.gov.in/ward_committee.html) ಪ್ರಕಟಿಸಲು ಕ್ರಮ ಕೈಗೊಂಡಿದ್ದರು.



ಆರಂಭದಲ್ಲಿ ಕೆಲವು ವಾರ್ಡ್‌ಗಳಲ್ಲಿ ವಾರ್ಡ್ ಸಭೆಗಳು ಸಾಂಗವಾಗಿ ನಡೆದವು. ಕಳೆದ ವರ್ಷ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಾಗ ಹಾಗೂ ಲಾಕ್‌ಡೌನ್ ಜಾರಿಯಲ್ಲಿದ್ದ ಸಂದರ್ಭದಲ್ಲಿ ಹೆಚ್ಚಿನ ಕಡೆ ವಾರ್ಡ್ ಸಭೆಗಳು ನಡೆಯಲೇ ಇಲ್ಲ. ಕೋವಿಡ್ ಅಬ್ಬರ ಕಡಿಮೆಯಾದ ಬಳಿಕ ಕೆಲವು ವಾರ್ಡ್‌ಗಳಲ್ಲಿ ವಾರ್ಡ್ ಸಭೆಗಳು ಮತ್ತೆ ಹಳಿಗೆ ಮರಳಿದ್ದವು. ಅಷ್ಟರಲ್ಲಿ ಕೋವಿಡ್ ಮೂರನೇ ಅಲೆ (ಕಳೆದ ಡಿಸೆಂಬರ್‌ನಲ್ಲಿ) ಕಾಣಿಸಿಕೊಂಡಿತು. ಆಗ ಮತ್ತೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಬಿಗುಗೊಳಿಸಿದ್ದರಿಂದ ವಾರ್ಡ್ ಸಭೆಗಳು ಮತ್ತೆ ಹಳ್ಳ ಹಿಡಿದವು.

ಈಗಂತೂ ನಗರದಲ್ಲಿ ಕೋವಿಡ್ ಸಂಪೂರ್ಣ ನಿಯಂತ್ರಣಕ್ಕೆ ಬಂದಿದೆ. ಸಭೆ ಸಮಾರಂಭ ನಡೆಸಲು ಇದ್ದ ನಿರ್ಬಂಧಗಳೂ ಬಹುತೇಕ ತೆರವುಗೊಂಡಿವೆ. ಆದರೂ ಹೆಚ್ಚಿನ ವಾರ್ಡ್‌ಗಳಲ್ಲಿ ವಾರ್ಡ್ ಸಭೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ.

ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ವಾರ್ಡ್ ಸಭೆಗಳಿಗೆ ಸಂಬಂಧಿಸಿದ ಮಾಹಿತಿ ನೀಡುವುದಕ್ಕೆಂದೇ ಪ್ರತ್ಯೇಕ ಕೊಂಡಿಯ ಸೌಲಭ್ಯವನ್ನೂ ಒದಗಿಸಲಾಗಿದೆ. ಅದರಲ್ಲಿ ಆಯಾ ವಾರ್ಡ್‌ನ ನೋಡಲ್ ಅಧಿಕಾರಿ ಯಾರು, ಸಮಿತಿಯ ಸಭೆ ಯಾವಾಗ ನಡೆಯುತ್ತದೆ, ಹಿಂದಿನ ಸಭೆಗಳಲ್ಲಿ ಯಾವೆಲ್ಲ ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂಬ ವಿವರಗಳನ್ನು ಇದರಲ್ಲಿ ಹಂಚಿಕೊಳ್ಳಲಾಗುತ್ತದೆ. ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ರಾಜಮಹಲ್ ಗುಟ್ಟಹಳ್ಳಿ ಹಾಗೂ ಯಲಚೇನಹಳ್ಳಿ ವಾರ್ಡ್‌ಗಳನ್ನು ಹೊರತುಪಡಿಸಿ ಉಳಿದೆಲ್ಲ ವಾರ್ಡ್‌ಗಳ ಸಭೆಯ ನಿರ್ಣಯಗಳು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಲಭ್ಯ ಇವೆ.

ಸುಮಾರು 30 ವಾರ್ಡ್‌ಗಳ ಅಧಿಕಾರಿಗಳು ವಾರ್ಡ್ ಸಭೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರತಿ ತಿಂಗಳೂ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದಾರೆ. ಆದರೆ, 15 ವಾರ್ಡ್‌ಗಳ ಸಭೆಗಳಿಗೆ ಸಂಬಂಧಿಸಿದ ಮಾಹಿತಿ ಏಳೆಂಟು ತಿಂಗಳುಗಳಿಂದ ವೆಬ್‌ಸೈಟ್‌ನಲ್ಲೇ ಅಪ್‌ಲೋಡ್ ಆಗಿಯೇ ಇಲ್ಲ. 2022ರ ಮಾರ್ಚ್ ತಿಂಗಳಲ್ಲಿ ಕೇವಲ 31 ವಾರ್ಡ್‌ಗಳ ವಾರ್ಡ್ ಸಭೆಯ ನಿರ್ಣಯಗಳಿಗೆ ಸಂಬಂಧಿಸಿದ ಮಾಹಿತಿಗಳು ಬಿಬಿಎಂಪಿಯ ವೆಬ್‌ಸೈಟ್‌ನಲ್ಲಿವೆ.

ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶನಿವಾರ ವಾರ್ಡ್ ಸಭೆ ನಡೆಸುವುದನ್ನು ಕಡ್ಡಾಯಗೊಳಿಸಿದ್ದರೂ, ಕೆಲವೊಮ್ಮೆ ಕಾರಣಾಂತರಗಳಿಂದಾಗಿ ಸಭೆಯ ದಿನಾಂಕವನ್ನು ಬದಲಾಯಿಸಬೇಕಾಗುತ್ತದೆ. ವಾರ್ಡ್ ಸಭೆಯ ದಿನಾಂಕ ಮತ್ತು ಸಮಯದ ಮಾಹಿತಿಯೂ ಪಾಲಿಕೆ ವೆಬ್‌ಸೈಟ್‌ನಲ್ಲಿ ಸರಿಯಾಗಿ ಅಪ್‌ಲೋಡ್ ಆಗುತ್ತಿಲ್ಲ.

‘77 ವಾರ್ಡ್‌ಗಳಲ್ಲಿ ಮಾತ್ರ ನಿರಂತರ ಸಭೆ’



ವಾರ್ಡ್ ಸಭೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗ್ಗೆ ಜನ ಜಾಗೃತಿ ಮೂಡಿಸಲು ಜನಾಗ್ರಹ ಸಂಸ್ಥೆ ಪ್ರಯತ್ನಿಸುತ್ತಿದೆ. ವಾರ್ಡ್‌ಗಳು ಹೇಗೆ ನಡೆಯುತ್ತಿವೆ ಎಂಬ ಬಗ್ಗೆ 2021ರಲ್ಲಿ ಅಧ್ಯಯನ ನಡೆಸಿದ್ದೆವು. 198 ವಾರ್ಡ್‌ಗಳಲ್ಲಿ 77ರಲ್ಲಿ ಪ್ರತಿ ತಿಂಗಳೂ ಸಭೆಗಳು ನಡೆದಿದ್ದವು. ಇನ್ನುಳಿದ ವಾರ್ಡ್‌ಗಳಲ್ಲಿ ಕಾಲ ಕಾಲಕ್ಕೆ ಸಭೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ.

ವಾರ್ಡ್ ಸಭೆಗಳು ಸರಿಯಾಗಿ ನಡೆಯದೇ ಇರುವುದಕ್ಕೆ ನೋಡಲ್ ಅಧಿಕಾರಿಗಳು ಪದೇ ಪದೇ ಬದಲಾಗುವುದೂ ಕಾರಣ. ವಾರ್ಡ್ ಸಭೆ ನಡೆಸುವುದು ಹೆಚ್ಚಿನ ಹೊರೆ ಎಂದು ಕೆಲವು ಅಧಿಕಾರಿಗಳು ಭಾವಿಸುತ್ತಾರೆ. ‘ಈ ವಾರ್ಡ್ ನಮ್ಮದು’ ಎಂಬ ಕಳಕಳಿ ಅವರಲ್ಲಿ ಮೂಡಬೇಕು. ಆಗ ವಾರ್ಡ್ ಸಭೆಗಳ ಮೂಲಕವೂ ಅದ್ಭುತ ಕೆಲಸಗಳನ್ನು ಮಾಡಲು ಸಾಧ್ಯ.

ಶ್ರೀನಿವಾಸ ಅಲವಿಲ್ಲಿ, ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ, ಜನಾಗ್ರಹ ಸಂಸ್ಥೆ



ಕಣಕಾಲಮಠ

‘ಅಧಿಕಾರಿಗಳೇ ಬರುತ್ತಿಲ್ಲ’

ನಮ್ಮ ವಾರ್ಡ್‌ನಲ್ಲಿ ನೋಡಲ್ ಅಧಿಕಾರಿಯೇ ಇಲ್ಲ. ಸ್ಥಳೀಯರ ಒತ್ತಡಕ್ಕೆ ಮಣಿದು ಕಷ್ಟಕ್ಕೆ ತಿಂಗಳಿಗೊಮ್ಮೆ ಸಭೆ ನಡೆಸುತ್ತಾರೆ. ಜನರ ಸಮಸ್ಯೆ ಬಗೆಹರಿಸಲು ಬೇಕಾದ ಇಲಾಖೆಗಳ ಅಧಿಕಾರಿಗಳೇ ಭಾಗವಹಿಸುತ್ತಿಲ್ಲ. ಬಹುತೇಕ ಸಭೆಗಳು ಕಾಟಾಚಾರಕ್ಕೆ ನಡೆಯುತ್ತಿವೆ. ಯಾವುದಾದರೂ ಸಮಸ್ಯೆ ಬಗ್ಗೆ ಪ್ರಸ್ತಾಪಿಸಿದರೂ, ಅದನ್ನು ನಿವಾರಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ.

ಸವಿತಾ, ಆರ್‌ಆರ್‌ನಗರ ನಿವಾಸಿ

‘ಸುಧಾರಣೆಗೆ ಅಗತ್ಯ ಕ್ರಮ’



ಕೆಲವು ವಾರ್ಡ್‌ಗಳಲ್ಲಿ ವಾರ್ಡ್ ಸಭೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ, ಕೆಲವು ವಾರ್ಡ್ ಸಭೆಗಳಿಗೆ ಸಂಬಂಧಿಸಿದ ಮಾಹಿತಿಗಳು ಪಾಲಿಕೆ ವೆಬ್‌ಸೈಟ್‌ನಲ್ಲಿ ಲಭ್ಯವಾಗುತ್ತಿಲ್ಲ ಎಂಬ ಬಗ್ಗೆ ನನಗೂ ದೂರುಗಳು ಬಂದಿವೆ. ಈ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡುತ್ತೇವೆ. ಎಲ್ಲ ವಾರ್ಡ್‌ಗಳಲ್ಲೂ ಸಭೆಯನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ವಾರ್ಡ್ ಸಭೆಗಳ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸುವ ಚಿಂತನೆಯೂ ಇದೆ.

ಎಸ್.ರಂಗಪ್ಪ, ವಿಶೇಷ ಆಯುಕ್ತ, ಆಡಳಿತ ವಿಭಾಗ, ಬಿಬಿಎಂಪಿ

‘ಪ್ರತಿ ತಿಂಗಳೂ ಎರಡು ಸಭೆ ಕಡ್ಡಾಯ’



ವಾರ್ಡ್ ಸಭೆಗಳನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಬೇಕಾದ ಅಗತ್ಯ ಸೌಕರ್ಯವನ್ನು ಬಿಬಿಎಂಪಿ ಒದಗಿಸಿದೆ. 198 ವಾರ್ಡ್‌ಗಳಿರುವ ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗಾಗಲೇ 4 ಸಾವಿರಕ್ಕೂ ಅಧಿಕ ವಾರ್ಡ್ ಸಭೆಗಳು ನಡೆದಿವೆ. ದೇಶದ ಮಹಾನಗರಗಳಲ್ಲೇ ಇದು ಅತ್ಯಧಿಕ. ಪ್ರತಿ ವಾರ್ಡ್‌ನಲ್ಲೂ ತಿಂಗಳಲ್ಲಿ ಕನಿಷ್ಠ ಎರಡು ಸಲ ಸಭೆ ನಡೆಸುವುದು ಆಯಾ ವಾರ್ಡ್‌ನ ನೋಡಲ್ ಅಧಿಕಾರಿಯ ಜವಾಬ್ದಾರಿ.

ವಾರ್ಡ್ ಸಭೆಗಳೂ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುವುದು ಸವಾಲಿನ ಕೆಲಸ. ವಾರ್ಡ್‌ನ ಸಮಗ್ರ ಅಭಿವೃದ್ಧಿ ಕುರಿತ ಚರ್ಚೆಗೆ ಈ ಸಭೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಬಗ್ಗೆ ಜನರಲ್ಲೂ ಜಾಗೃತಿ ಮೂಡಬೇಕು. ಈ ವ್ಯವಸ್ಥೆಯ ಬಗ್ಗೆ ಆಗಾಗ ಪರಿಶೀಲನೆಯನ್ನೂ ನಡೆಸುತ್ತಿದ್ದೇವೆ. ಕೆಲವು ವಾರ್ಡ್‌ಗಳಲ್ಲಿ ಕಾಲ ಕಾಲಕ್ಕೆ ಸರಿಯಾಗಿ ಸಭೆ ನಡೆಯದಿದ್ದರೆ, ಹಿರಿಯ ಅಧಿಕಾರಿಗಳ ಗಮನಕ್ಕೆ ತರಬಹುದು. ಎಲ್ಲ ವಾರ್ಡ್‌ಗಳಲ್ಲೂ ಪ್ರತಿ ತಿಂಗಳು ಸಭೆ ನಡೆಸುವುದಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ವಲಯದ ಜಂಟಿ ಆಯುಕ್ತರಿಗೆ ಸೂಚನೆ ನೀಡುತ್ತೇನೆ.

ಗೌರವ್ ಗುಪ್ತ, ಮುಖ್ಯ ಆಯುಕ್ತ, ಬಿಬಿಎಂಪಿ

‘ವಾರ್ಡ್‌ಗೆ ಅನುದಾನ ಹೆಚ್ಚಿಸಿ’

ವಾರ್ಡ್ ಮಟ್ಟದ ಅಭಿವೃದ್ಧಿ ಕಾಮಗಾರಿಗಳ ಸಲುವಾಗಿ ಬಿಬಿಎಂಪಿ ಪ್ರತಿ ವಾರ್ಡ್ ತಲಾ ₹ 60 ಲಕ್ಷ ಅನುದಾನ ಮೀಸಲಿಟ್ಟಿದೆ. ಇದು ಸಾಲುತ್ತಿಲ್ಲ. ಈ ಅನುದಾನ ಹೆಚ್ಚಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯ.

‘ಈ ಬಗ್ಗೆ ನಮಗೂ ಅನೇಕ ವಾರ್ಡ್‌ಗಳಿಂದ ಬೇಡಿಕೆ ಬಂದಿದೆ. ಬಿಬಿಎಂಪಿ ಬಜೆಟ್‌ನಲ್ಲಿ ವಾರ್ಡ್‌ಗಳಿಗೆ ಹಂಚಿಕೆ ಮಾಡುವ ಅನುದಾನ ಹೆಚ್ಚಿಸುವ ಚಿಂತನೆ ಇದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿದರು.

ಯುದ್ಧದಿಂದ ಬೆಲೆ ಏರಿಕೆಯಾಗಿಲ್ಲ ಎಂದ ಸಚಿವರು

ತಾಳೆ ಎಣ್ಣೆ ಆಮದಿಗೆ ಚಿಂತನೆ: ಕತ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಷ್ಯಾ– ಉಕ್ರೇನ್ ಯುದ್ಧವು ಬೆಲೆ ಏರಿಕೆಗೆ ಕಾರಣವಲ್ಲ. ಬೇಸಿಗೆ ಕಾಲದಲ್ಲಿ ಬೆಲೆ ಏರಿಕೆ ಸಹಜ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ವ್ಯತ್ಯಾಸಗಳಿಂದ ಪರಿಣಾಮ ಬೀರಿದೆ. ಹೀಗಾಗಿ, ನಾವು ನಿಯಂತ್ರಿಸಲು ಸಾಧ್ಯವಿಲ್ಲ’ ಎಂದು ಆಹಾರ ಸಚಿವ ಉಮೇಶ ವಿ. ಕತ್ತಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಕಾಂಗ್ರೆಸ್‌ನ ಎಸ್. ರವಿ ಅವರು ದಿನಬಳಕೆ ವಸ್ತುಗಳ ಬೆಲೆ ಏರಿಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ‘ಸದ್ಯ 4 ಲಕ್ಷ ಟನ್ ಖಾದ್ಯ ತೈಲ ಸಂಗ್ರಹ ಇದೆ. ತಾಳೆ ಎಣ್ಣೆ ಆಮದು ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ’ ಎಂದರು.

‘ಪೆಟ್ರೋಲ್, ಡೀಸೆಲ್ ಮೇಲಿನ ಸೆಸ್ ಕಡಿತಗೊಳಿಸುವ ಬಗ್ಗೆ ಮುಖ್ಯಮಂತ್ರಿ ಅವರನ್ನು ಕೇಳಬೇಕು. ಕಾಳಸಂತೆಯಲ್ಲಿ ಅಗತ್ಯ ವಸ್ತುಗಳನ್ನು ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು. ಹೆಚ್ಚಿನ ಬೆಲೆಗೆ ವಿವಿಧ ಅಗತ್ಯ ವಸ್ತುಗಳನ್ನು ಮಾರಾಟ ಮಾಡಿದವರ ವಿರುದ್ಧ 75 ಮೊಕದ್ದಮೆಗಳನ್ನು ದಾಖಲಿಸಲಾಗಿದೆ. 29 ಮೊಕದ್ದಮೆಗಳಲ್ಲಿ ₹2.96 ಲಕ್ಷ ದಂಡ ವಸೂಲಿ ಮಾಡಲಾಗಿದೆ’ ಎಂದರು.

8 ಲಕ್ಷ ಬಿಪಿಎಲ್ ಕಾರ್ಡ್: ‘ರಾಜ್ಯದಲ್ಲಿ 8 ಲಕ್ಷ ಬಿಪಿಎಲ್ ಕಾರ್ಡ್‌ಗಳ ವಿತರಣೆ ಬಾಕಿ ಇದೆ. ಜೂನ್ ಅಂತ್ಯದ ಒಳಗೆ ಸಮೀಕ್ಷೆ ಪೂರ್ಣಗೊಳಿಸಿ ಪಡಿತರ ಚೀಟಿ ವಿತರಣೆಗೆ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಸಚಿವ ಕತ್ತಿ ಹೇಳಿದರು.

ಕಾಂಗ್ರೆಸ್ ಸದಸ್ಯ ಯು.ಬಿ ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕಳೆದ ಮೂರು ವರ್ಷಗಳಲ್ಲಿ ಬಿಪಿಎಲ್ ಕಾರ್ಡ್ ಕೋರಿ 15.53 ಲಕ್ಷ ಅರ್ಜಿಗಳನ್ನು ಸಲ್ಲಿಸಲಾಗಿದೆ. ಇದರಲ್ಲಿ 8.03 ಲಕ್ಷ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಕೋವಿಡ್ ಕಾರಣಕ್ಕೆ ಕಾರ್ಡ್‌ಗಳ ವಿತರಣೆ ವಿಳಂಬವಾಗಿದೆ. 8 ಲಕ್ಷ ಅರ್ಜಿಯಲ್ಲಿ 4 ಲಕ್ಷ ಅರ್ಜಿಗಳು ಸಮೀಕ್ಷೆಯಾಗಿ ವಿತರಣೆ ಬಾಕಿ ಇದೆ’ ಎಂದು ವಿವರಿಸಿದರು.

ಬಿಬಿಎಂಪಿ ಬಜೆಟ್ ನಾಳೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು 2022–22ನೇ ಸಾಲಿನ ಬಜೆಟ್ ಅನ್ನು ಇದೇ 30ರಂದು (ಬುಧವಾರ) ಮಂಡಿಸಲು ಸಿದ್ಧತೆ ನಡೆಸಿದೆ ಎಂದು ಗೊತ್ತಾಗಿದೆ. ಆದರೆ, ಪಾಲಿಕೆಯು ದಿನಾಂಕವನ್ನು ಇನ್ನೂ ಅಧಿಕೃತವಾಗಿ ಪ್ರಕಟಿಸಿಲ್ಲ.

‘ಈ ಆರ್ಥಿಕ ವರ್ಷದಲ್ಲೇ ಬಜೆಟ್ ಮಂಡಿಸದಿದ್ದರೆ ಕೆಲವು ಆಡಳಿತಾತ್ಮಕ ಸಮಸ್ಯೆಗಳು ಎದುರಾಗುತ್ತವೆ. ಹಾಗಾಗಿ ಇದೇ 30ರಂದು ಮಧ್ಯಾಹ್ನ 3 ಗಂಟೆಗೆ ಬಜೆಟ್ ಮಂಡಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ’ ಎಂದು ಬಿಬಿಎಂಪಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಬಿಎಂಪಿಗೂ ‘ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ವಿತ್ತೀಯ ಹೊಣೆಗಾರಿಕೆ ಕಾಯ್ದೆ–2003’ ಅನ್ವಯಗೊಳಿಸಿ ಸರ್ಕಾರ ಇತ್ತೀಚೆಗೆ ಅಧಿಸೂಚನೆ ಹೊರಡಿಸಿದೆ. ಹಾಗಾಗಿ ಈ ಸಲ ‘ಬಿಬಿಎಂಪಿ (ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ) ನಿಯಮಗಳು 2021’ರ ಅನ್ವಯವೇ ಬಜೆಟ್ ರೂಪಿಸಬೇಕಾಗಿದೆ. ನಾಲ್ಕು ವರ್ಷಗಳ ಸಂಯುಕ್ತ ವಾರ್ಷಿಕ ಅಭಿವೃದ್ಧಿ ದರದ (ಸಿಎಜಿಆರ್) ಆಧಾರದಲ್ಲೇ ಪಾಲಿಕೆಯು ಬಜೆಟ್ ಗಾತ್ರವನ್ನು ನಿರ್ಧರಿಸಬೇಕಾಗುತ್ತದೆ.

ಹಿಂದಿನ ವರ್ಷದ ಕಂದಾಯ ಸ್ವೀಕೃತಿ ₹ 4ಸಾವಿರ ಕೋಟಿ ಆಗಿದ್ದರೆ, ಸಿಎಜಿಆರ್ ದರ ಶೇ 10 ಇದ್ದರೆ, ಕಂದಾಯ ಸ್ವೀಕೃತಿಯನ್ನು ₹4,400 ಕೋಟಿ ಎಂದು ಅಂದಾಜು ಮಾಡಿ ಅದಕ್ಕೆ ಬಂಡವಾಳ ಸ್ವೀಕೃತಿಯನ್ನು ಸೇರಿಸಿ ಬಜೆಟ್ ಗಾತ್ರವನ್ನು ನಿಗದಿಪಡಿಸಬೇಕಾಗುತ್ತದೆ. ಪಾಲಿಕೆಯ ಕಂದಾಯ ಸ್ವೀಕೃತಿ ಇದುವರೆಗೂ ₹ 4 ಸಾವಿರ ಕೋಟಿ ದಾಟಿಲ್ಲ. ಸರ್ಕಾರದ ಅನುದಾನವೂ ಸೇರಿದರೂ ಬಜೆಟ್ ಗಾತ್ರ ₹ 7 ಸಾವಿರ ಕೋಟಿ ಮೀರುವಂತಿಲ್ಲ ಎನ್ನುತ್ತವೆ ಪಾಲಿಕೆ ಮೂಲಗಳು.

ಬಿಬಿಎಂಪಿ ಕಾಯ್ದೆಯ ಸೆಕ್ಷನ್ 196ರ ಪ್ರಕಾರ ಬಿಬಿಎಂಪಿ ಬಜೆಟ್ ಅನ್ನು ಮುಂದಿನ ಆರ್ಥಿಕ ವರ್ಷಾರಂಭಕ್ಕಿಂತ ಕನಿಷ್ಠ ಮೂರು ವಾರಗಳಿಗೆ ಮುಂಚೆ ಅಂಗೀಕರಿಸಬೇಕಿದೆ. ಆ ಪ್ರಕಾರ ಮಾ.10ರ ಒಳಗೆ ಬಜೆಟ್ ಮಂಡನೆ ಆಗಬೇಕಿತ್ತು.

2021–22ನೇ ಸಾಲಿನಲ್ಲಿ ಪಾಲಿಕೆ ₹ 9,286.80 ಕೋಟಿ ಬಜೆಟ್ ಅನ್ನು ಅಂಗೀಕರಿಸಿತ್ತು. ಸರ್ಕಾರವು ಬಜೆಟ್ ಗಾತ್ರವನ್ನು ಮತ್ತಷ್ಟು ಹೆಚ್ಚು ಮಾಡಿ ₹ 9,951.8 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಿತ್ತು.

ಚುನಾವಣಾ ವ್ಯವಸ್ಥೆ ಸುಧಾರಣೆ: ಕಾಗೇರಿ 22 ಸಲಹೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ’ ಕುರಿತು ವಿಧಾನಸಭೆಯಲ್ಲಿ ಎರಡು ದಿನಗಳ ವಿಶೇಷ ಚರ್ಚೆಗೆ ಚಾಲನೆ ನೀಡಿರುವ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 22 ಅಂಶಗಳನ್ನು ಒಳಗೊಂಡ ಸಲಹೆಗಳನ್ನು ಮುಂದಿಟ್ಟಿದ್ದಾರೆ.

ಎರಡು ದಿನಗಳ ಚರ್ಚೆಗೆ ಪ್ರಾಸ್ತಾವಿಕ ನುಡಿಯ ಮೂಲಕ ಕಾಗೇರಿ ತಮ್ಮ ಅಭಿಪ್ರಾಯ ಮಂಡಿಸಿದರು. ‘ವಿವಿಧ ಕಾರಣಗಳಿಂದ ಚುನಾವಣೆಯ ನೈತಿಕ ಮಟ್ಟ ಕುಸಿದಿರುವುದನ್ನು ರಾಜಕಾರಣಿಗಳು, ನ್ಯಾಯಾಧೀಶರು, ಚಿಂತಕರು, ಪತ್ರಕರ್ತರು ಮತ್ತು ಶ್ರೀಸಾಮಾನ್ಯರು ಒಪ್ಪಿಕೊಂಡಿದ್ದಾರೆ. ಚುನಾವಣೆಗಳನ್ನು ಪರಿಶುದ್ಧ, ನ್ಯಾಯಸಮ್ಮತ, ಸರ್ವ ಸಮ್ಮತವಾಗಿ ನಡೆಸಲು ಮತ್ತು ಭ್ರಷ್ಟಾಚಾರ ಮುಕ್ತಗೊಳಿಸಲು ಕಾನೂನು ತಿದ್ದುಪಡಿ ಮತ್ತು ಸಾಂಸ್ಥಿಕ ಸುಧಾರಣೆ ಅಗತ್ಯ’ ಎಂದು ಪ್ರತಿಪಾದಿಸಿದರು.

ಪ್ರಮುಖ ಸಲಹೆಗಳು:

- ಒಂದು ರಾಷ್ಟ್ರ ಒಂದು ಚುನಾವಣೆ ಮೂಲಕ ಚುನಾವಣಾ ವೆಚ್ಚ ಕಡಿತಗೊಳಿಸಬೇಕು.
- ಪ್ರತಿ ಮತದಾರನೂ ಚುನಾವಣೆಯಲ್ಲಿ ಕಡ್ಡಾಯ ಮತ ಚಲಾಯಿಸಬೇಕು. ಮತದಾನದಲ್ಲಿ ಭಾಗಿಯಾಗದ ಮತದಾರನಿಗೆ ಸೌಲಭ್ಯಗಳನ್ನು ಕಡಿತಗೊಳಿಸಬೇಕು.
- ಚುನಾವಣೆಗಳಲ್ಲಿ ದುಂದು ವೆಚ್ಚಕ್ಕೆ ಕಡಿವಾಣ ಹಾಕಬೇಕು. ಪ್ರಚಾರ ಪ್ರಕ್ರಿಯೆಯನ್ನು ರಾಷ್ಟ್ರೀಕರಣಗೊಳಿಸಿ, ಅದರ ವೆಚ್ಚ ಇಳಿಸಿ, ಆ ವೆಚ್ಚವನ್ನು ಸರ್ಕಾರ ಅಥವಾ ಚುನಾವಣಾ ಆಯೋಗವೇ ಭರಿಸಬೇಕು.
- ಶುದ್ಧ ಚಾರಿತ್ರ್ಯ ಇರುವ ಮತ್ತು ಕ್ರಿಮಿನಲ್ ಹಿನ್ನೆಲೆ ಇಲ್ಲದ ಸಾಮಾಜಿಕ ಕಾಳಜಿ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ರಾಜಕೀಯ ಪಕ್ಷಗಳು ಕಟ್ಟುನಿಟ್ಟಾದ ಸ್ವಯಂ ಶಿಸ್ತಿನ ಮಾನದಂಡಗಳನ್ನು ಅಳವಡಿಸಿಕೊಳ್ಳಬೇಕು.
- ಎಲ್ಲ ಪಕ್ಷಗಳ ಅಭ್ಯರ್ಥಿಗಳಿಗೆ ಪ್ರಚಾರ ಮಾಡಲು ಸಾರ್ವಜನಿಕ ಸಭೆಗಳನ್ನು ವಿವಿಧ ಸ್ಥಳಗಳಲ್ಲಿ ಏರ್ಪಡಿಸಬೇಕು. ಮಾಧ್ಯಮಗಳಲ್ಲಿ ಸಮಾನ ಅವಕಾಶ ನೀಡಬೇಕು. ವಿವಿಧ ಮಾಧ್ಯಮಗಳಲ್ಲಿ ಪ್ರತಿ ಅಭ್ಯರ್ಥಿಗೂ ಪ್ರಚಾರಕ್ಕಾಗಿ ಸಮಾನ ಸ್ಥಳ ಮತ್ತು ಕಾಲಾವಕಾಶಗಳನ್ನು ಮಾಡಿಕೊಡಬೇಕು.
- ಕ್ರಿಮಿನಲ್ ಆಪಾದನೆ ಹೊತ್ತು ಚುನಾವಣೆಗಳಲ್ಲಿ ಗೆದ್ದ ಶಾಸಕರ ಪ್ರಕರಣಗಳ ವಿಚಾರಣೆಗೆ ವಿಶೇಷ ಚುನಾವಣಾ ನ್ಯಾಯಾಲಯ ರಚನೆ ಮಾಡಬೇಕು. ಈ ನ್ಯಾಯಾಲಯ ಆರು ತಿಂಗಳಲ್ಲಿ ಪ್ರಕರಣ ಇತ್ಯರ್ಥಗೊಳಿಸಬೇಕು. ಆರೋಪ ಸಾಬೀತಾದರೆ ಶಿಕ್ಷೆಗೊಳಗಾದವರನ್ನು ಅನರ್ಹಗೊಳಿಸಿ ಅವರ ಸ್ಥಾನಕ್ಕೆ ಚುನಾವಣೆಯಲ್ಲಿ ಎರಡನೇ ಸ್ಥಾನದಲ್ಲಿದ್ದ ಅಭ್ಯರ್ಥಿಯನ್ನು ಅರ್ಹನೆಂದು ಘೋಷಿಸಬೇಕು.
- ಒಂದು ಮತ ಕ್ಷೇತ್ರದಲ್ಲಿ ಕನಿಷ್ಠ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಲು ಶಾಸನ ರೂಪಿಸಬೇಕು.
- ಆಧಾರ್ ಸೇವಾ ಕೇಂದ್ರದ ಮಾದರಿಯಲ್ಲಿ ಮತದಾರರ ಗುರುತಿನ ಚೀಟಿ ವರ್ಷಪೂರ್ತಿ ನಿರಂತರವಾಗಿ ನೋಂದಣಿ ಮತ್ತು ವಿತರಣೆಗೆ ಪ್ರತ್ಯೇಕ ವೋಟರ್ ಐಡಿ ಸೇವಾ ಕೇಂದ್ರ ಸ್ಥಾಪನೆ ಮಾಡಬೇಕು.
- ನಿರಂತರವಾಗಿ ಎರಡು ಅಥವಾ ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸದೇ ಇರುವ ಮತ್ತು ನಿಗದಿತ ಸ್ಥಾನ ಗಳಿಸದ ರಾಜಕೀಯ ಪಕ್ಷಗಳನ್ನು ಅಮಾನ್ಯಗೊಳಿಸಬೇಕು.

‘ಗೋಶಾಲೆ ಬರೀ ಕಾಗದದ ಮೇಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೋಶಾಲೆ ನಿರ್ಮಾಣಕ್ಕೆ ಪ್ರತಿ ಜಿಲ್ಲೆಯಲ್ಲೂ ಸ್ಥಳ ಗುರುತಿಸಲಾಗಿದೆ. ಬಜೆಟ್‌ನಲ್ಲಿ ಹಣ ಬಿಡುಗಡೆ ಮಾಡಲಾಗಿದೆ... ಎಂದೆಲ್ಲಾ ಹೇಳುತ್ತೀರಿ. ಆದರೆ, ಅವು ಎಲ್ಲೆಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂದು ಕೇಳಿದರೆ ಬರೀ ಕಾಗದ ತೋರಿಸುತ್ತೀರಲ್ಲಾ...’ ಎಂದು ರಾಜ್ಯ ಸರ್ಕಾರದ ಕಾರ್ಯ ವೈಖರಿಗೆ ಹೈಕೋರ್ಟ್ ಮತ್ತೊಮ್ಮೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

‘ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಗೋ ಶಾಲೆ ಆರಂಭಿಸಬೇಕು ಮತ್ತು ಈಗಿರುವ ಗೋ ಶಾಲೆಗಳಿಗೆ ಸೂಕ್ತ ಪ್ರಮಾಣದಲ್ಲಿ ಮೇವು, ನೀರು ಮತ್ತು ಜಾಗ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೆಚ್ಚುವರಿ ಸರ್ಕಾರಿ ವಕೀಲ ಎಚ್.ಆರ್. ಶೌರಿ, ‘ಸರ್ಕಾರ ಈಗಾಗಲೇ ಜಮೀನುಗಳನ್ನು ಗುರುತಿಸಿದೆ. ಗುರುತಿಸಲಾದ ಜಮೀನುಗಳಲ್ಲಿ ಗೋಶಾಲೆ ನಿರ್ಮಾಣಕ್ಕಾಗಿ ಹಣವನ್ನೂ ಬಿಡುಗಡೆ ಮಾಡಲಾಗಿದೆ’ ಎಂದು ತಿಳಿಸಿದರು.

ಇದಕ್ಕೆ ನ್ಯಾಯಮೂರ್ತಿ ಕೃಷ್ಣಕುಮಾರ್, ‘ಎಲ್ಲೆಲ್ಲಿ, ಎಷ್ಟು ಗೋಶಾಲೆ ಕಾರ್ಯ ನಿರ್ವಹಿಸುತ್ತಿವೆ’ ಎಂದು ಕೇಳಿದರು. ಈ ಪ್ರಶ್ನೆಗೆ ಶೌರಿ ನಿರುತ್ತರರಾದರು.

ಆಗ ಮುಖ್ಯ ನ್ಯಾಯಮೂರ್ತಿಗಳು, ‘ನೀವು ಗೋಶಾಲೆ ಎಲ್ಲಿದೆ ಎಂದರೆ ಬರಿ ಜಮೀನು ಗುರುತಿಸಿದ್ದೇವೆ, ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತೀರಿ, ಎಲ್ಲೆಲ್ಲೆ ಕಾರ್ಯ ನಿರ್ವಹಿಸುತ್ತಿವೆ, ಎಲ್ಲೆಲ್ಲಿ ನಿರ್ಮಾಣ ಮಾಡುತ್ತಿದ್ದೀರಿ, ಎಲ್ಲಿ ಅಭಿವೃದ್ಧಿಪಡಿಸಿದ್ದೀರಿ ಎಂದರೆ ನಿಮ್ಮ ಬಳಿ ಉತ್ತರವೇ ಇಲ್ಲ. ನಿಮ್ಮ ಗೋಶಾಲೆಯೆಲ್ಲಾ ಬರೀ ಕಾಗದದ ಮೇಲೆ ಇದ್ದಂತಿದೆ’ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು.

ಕಡತಕ್ಕೆ ತಡಬಡಾಯಿಸಿದ ಶೌರಿ...!

ಸರ್ಕಾರದ ಹೆಚ್ಚುವರಿ ವಕೀಲ ಶೌರಿ ಅವರಿಗೆ ನ್ಯಾಯಮೂರ್ತಿ ಕೃಷ್ಣಕುಮಾರ್, ‘ಹೋಗಲಿ, ಎಲ್ಲೆಲ್ಲಿ ಜಮೀನು ಗುರುತಿಸಿದ್ದೀರಿ, ಹಣ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂಬ ವಿವರವನ್ನಾದರೂ ನೀಡಿ’ ಎಂದಾಗ, ಶೌರಿ ಕಡತಕ್ಕಾಗಿ ತಡಬಡಾಯಿಸಿದರು.

ಇದಕ್ಕೆ ಮತ್ತಷ್ಟು ಅಸಹನೆ ಹೊರಹಾಕಿದ ನ್ಯಾಯಪೀಠ, ‘ನಿಮ್ಮ ಉತ್ತರ ನಮಗೆ ತೃಪ್ತಿ ನೀಡುತ್ತಿಲ್ಲ. ಮುಂದಿನ ವಿಚಾರಣೆ ವೇಳೆಗೆ ವಸ್ತುಸ್ಥಿತಿ ವರದಿಯನ್ನು ಕೋರ್ಟ್‌ಗೆ ಹಾಜರುಪಡಿಸಿ’ ಎಂದು ಖಡಕ್ ನಿರ್ದೇಶನ ನೀಡಿ ವಿಚಾರಣೆ ಮುಂದೂಡಿತು.

ಹಿಂದಿನ ವಿಚಾರಣೆ ವೇಳೆ ಸರ್ಕಾರಿ ವಕೀಲರು, ‘ರಾಜ್ಯದಾದ್ಯಂತ ಒಟ್ಟು 97 ಗೋಶಾಲೆಗಳನ್ನು ತೆರೆಯಲಾಗಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದ್ದರು.

ಯುವಿಸಿಇ: ಎನ್‌ಬಿಎ ಮಾನ್ಯತೆಗೆ ಕ್ರಮ

ಬೆಂಗಳೂರು: ‘ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವ ವಿದ್ಯಾಲಯಕ್ಕೆ (ಯುವಿಸಿಇ) ರಾಷ್ಟ್ರೀಯ ಮಾನ್ಯತಾ ಮಂಡಳಿಯ (ಎನ್‌ಬಿಎ) ಮಾನ್ಯತೆ ಪಡೆಯಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಕಾಂಗ್ರೆಸ್‌ನ ಸಲೀಂ ಅಹಮದ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದಲ್ಲಿ ಯಾವುದೇ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ನ್ಯಾಕ್ ಮತ್ತು ಎನ್‌ಬಿಎ ಮಾನ್ಯತೆ ದೊರೆತಿಲ್ಲ.104 ವರ್ಷಗಳ ಇತಿಹಾಸ ಇರುವ ಯುವಿಸಿಇಗೂ ಈ ದುಃಸ್ಥಿತಿ ಬರಬಾರದಿತ್ತು. ವಿದ್ಯಾರ್ಥಿಗಳು ಖಾಸಗಿ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡ ನಂತರ ಈ ಕಾಲೇಜು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ಹೇಳಿದರು.

‘ಹೆಚ್ಚಿನ ಸ್ವಾಯತ್ತತೆ ನೀಡುವ ನಿಟ್ಟಿನಲ್ಲಿ ಯುವಿಸಿಇಯನ್ನು 2021–22ನೇ ಸಾಲಿನಿಂದ ವಿಶ್ವವಿದ್ಯಾಲಯ ಎಂದು ಘೋಷಿಸಲಾಗಿದೆ. ಇದಕ್ಕೆ ಮೊದಲು 139 ಬೋಧಕ ಹುದ್ದೆಗಳು ಮಂಜೂರಾಗಿದ್ದವು. ಪ್ರಸ್ತುತ 83 ಹುದ್ದೆಗಳು ಭರ್ತಿಯಾಗಿವೆ. ಕಾಯಂ ಬೋಧಕ ಸಿಬ್ಬಂದಿಯ ಶೇ 68ರಷ್ಟು ನೇಮಕಾತಿ ಬಳಿಕ ಎನ್‌ಬಿಎಗೆ ಅರ್ಜಿ ಸಲ್ಲಿಸಲಾಗುವುದು’ ಎಂದರು.

‘ಮಹದೇವಪುರ ಜನಹಿತ’ ಆ್ಯಪ್ ಅನಾವರಣ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಬಗ್ಗೆ ಸಮಗ್ರ ಮಾಹಿತಿ ಒದಗಿಸಲು ಹಾಗೂ ಜನತೆಯ ಅಹವಾಲು ಆಲಿಸಲು ‘ಮಹದೇವಪುರ ಜನಹಿತ’ ಆ್ಯಪ್ ರೂಪಿಸಲಾಗಿದೆ. ಇದರ ಮೂಲಕ ನಾಗರಿಕರು ತಮ್ಮ ದೂರು ಅಹವಾಲುಗಳನ್ನು ದಾಖಲು ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು’ ಎಂದು ಲಿಡ್ ಇಂಡಿಯಾ ಮುಖ್ಯಸ್ಥ ಆರ್.ಕೆ.ಮಿಶ್ರಾ ತಿಳಿಸಿದರು.

ಕೆ.ಆರ್.ಪುರದ ಕಾಟಂನಲ್ಲೂರಿನಲ್ಲಿ ಹಮ್ಮಿಕೊಂಡಿದ್ದ ಭಾರತ ಮಾತಾ ಪೂಜೆ ಮತ್ತು ಕುಟುಂಬ ಮಿಲನ ಕಾರ್ಯಕ್ರಮದಲ್ಲಿ ಆ್ಯಪ್ ಅನಾವರಣ ಮಾಡಿ ಅವರು ಮಾತನಾಡಿದರು.

‘ಈ ಆ್ಯಪ್ ಭಾರತದಲ್ಲೇ ವಿನೂತನವಾದುದು. ಇದು ಎಲ್ಲಾ ಆ್ಯಂಡ್ರಾಯ್ಡ್ ಮೊಬೈಲ್‌ಗಳ ಗೂಗಲ್ ಪ್ಲೇ ಸ್ಟೋರ್‌ಗಳಲ್ಲಿಯೂ ಲಭ್ಯ. ನಾಗರಿಕರ ಸಮಸ್ಯೆಗೆ ಶಾಸಕರ ಕಚೇರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸ್ಪಂದಿಸಲು ಇದು ನೆರವಾಗಲಿದೆ. ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಗಳಲ್ಲಿಯೂ ಲಭ್ಯ’ ಎಂದರು.



ವಿವಿಧ ಕ್ಷೇತ್ರಗಳ ಸಾಧಕರನ್ನು ಶಾಸಕ ಅರವಿಂದ ಲಿಂಬಾವಳಿ ಸನ್ಮಾನಿಸಿದರು. ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಮಂಜುನಾಥ್, ನಗರ ಮಂಡಲ ಅಧ್ಯಕ್ಷ ಮನೋಹರ ರೆಡ್ಡಿ, ಗ್ರಾಮಾಂತರ ಮಂಡಲದ ಅಧ್ಯಕ್ಷ ಬಿ.ಎನ್.ನಟರಾಜ್, ಪ್ರಧಾನ ಕಾರ್ಯದರ್ಶಿ ರಾಜೇಶ್, ಹೂಡಿ ಪಿಳ್ಳಪ್ಪ, ಅನಂತರಾಮಯ್ಯ ಇದ್ದಾರೆ

ಶಾಸಕ ಅರವಿಂದ ಲಿಂಬಾವಳಿ, ‘ಮಹದೇವಪುರ ವಿಧಾನಸಭಾ ಕ್ಷೇತ್ರದ ಎಲ್ಲಾ ಅಭಿವೃದ್ಧಿ ಕಾರ್ಯಗಳ ಅಂಕಿ ಅಂಶಗಳ ಸಚಿತ್ರ ಮಾಹಿತಿ ಹಾಗೂ ಸ್ಥಳಗಳ ಮಾಹಿತಿ ಈ ಆ್ಯಪ್‌ನಲ್ಲಿ ಲಭ್ಯವಿರಲಿದೆ’ ಎಂದರು.

ಕಾರ್ಯಕ್ರಮದಲ್ಲಿ ಹಲವು ಸಾಧಕರಿಗೆ ‘ಮಹದೇವಪುರಶ್ರೀ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಬಳಿಕ ಹಾಸ್ಯ ಕಾರ್ಯಕ್ರಮ ನಡೆಯಿತು.

ಎರಡು ಮಕ್ಕಳಿದ್ದರೆ ಮಾತ್ರ ಸೌಲಭ್ಯ: ಭಾರತಿ ಶೆಟ್ಟಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎರಡು ಮಕ್ಕಳಿದ್ದವರಿಗೆ ಮಾತ್ರ ಸರ್ಕಾರದ ಸೌಲಭ್ಯಗಳನ್ನು ನೀಡುವ ಬಗ್ಗೆ ರಾಜ್ಯ ಸರ್ಕಾರ ಅಗತ್ಯ ನಿಯಮಗಳನ್ನು ರೂಪಿಸಬೇಕು ಎಂದು ಬಿಜೆಪಿ ಸದಸ್ಯ ಭಾರತಿ ಶೆಟ್ಟಿ ಆಗ್ರಹಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಸರ್ಕಾರಿ ಸವಲತ್ತುಗಳು ಮತ್ತು ಸಬ್ಸಿಡಿಗಳನ್ನು ಪಡೆದುಕೊಳ್ಳಲು ಜನಸಂಖ್ಯೆ ಮಿತಿ ಹೇರುವುದು ಅಗತ್ಯವಿದೆ. ಉತ್ತರ ಪ್ರದೇಶ ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ’ ಎಂದರು.

ಇದಕ್ಕೆ ಸರ್ಕಾರದ ಪರ ಪ್ರತಿಕ್ರಿಯಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ಈ ಬಗ್ಗೆ ಮುಖ್ಯಮಂತ್ರಿ ಅವರಿಂದ ಉತ್ತರ ಕೊಡಿಸುವುದಾಗಿ ಭರವಸೆ ನೀಡಿದರು.

ಸಿಡಿಲು ಬಡಿದು ಕುರಿಗಾಹಿ ಸಾವು

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ, ಶಿರಸಿ, ಯಲ್ಲಾಪುರ, ಗದಗ ಜಿಲ್ಲೆಯ ಕೆಲವೆಡೆ ಸೋಮವಾರ ಸಮಯ ಉತ್ತಮ ಮಳೆಯಾಗಿದೆ. ಕುಂದಗೋಳ ತಾಲ್ಲೂಕಿನ ಹಿರೇಹರಕುಣಿ ಗ್ರಾಮದ ಹೊರವಲಯದಲ್ಲಿ ಸಿಡಿಲು ಬಡಿದು ಕುರಿಗಾಹಿ ಮೃತಪಟ್ಟಿದ್ದಾರೆ.

ದೇವೆಂದ್ರ ಮುದುಕಪ್ಪ ಮಚಿನಹಳ್ಳಿ (19) ಮೃತರು. ಗದಗ ಜಿಲ್ಲೆಯ ಲಕ್ಷ್ಮೇಶ್ವರ, ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿಯೂ ಕೆಲಹೊತ್ತು ಮಳೆಯಾಗಿದೆ. ಯಲ್ಲಾಪುರ ತಾಲ್ಲೂಕಿನಲ್ಲಿ ವಿವಿಧೆಡೆ ಮನೆಯ ಹೆಂಚು, ತಗಡು ಹಾರಿವೆ. ನೂರಾರು ಅಡಿಕೆ, ತೆಂಗಿನಮರಗಳು ನೆಲಕ್ಕುರುಳಿವೆ.

ಕಾಲೇಜು ಶಿಕ್ಷಣ ಇಲಾಖೆಯಿಂದ ತಡೆ ಆದೇಶ • ಪ್ರಾಧ್ಯಾಪಕರ ಅಸಮಾಧಾನ

ಹಿಂಬಾಕಿ ವೇತನ ಕೈತಪ್ಪುವ ಆತಂಕ

• ಮಾರುತಿ ಹರಿಕಂತ್ರ

ಅಂಕೋಲಾ: ಅನುದಾನಿತ ಪದವಿ ಕಾಲೇಜುಗಳಲ್ಲಿ ಮುಂಬಡ್ತಿ ಹೊಂದಿದ ಪ್ರಾಧ್ಯಾಪಕರ ಸ್ಥಾನೀಕರಣ (ಪದೋನ್ನತಿ ಹಿಂಬಾಕಿ ವೇತನ)ಕ್ಕೆ ಹಣಕಾಸು ಇಲಾಖೆಯು ಬಿಡುಗಡೆ ಮಾಡಿದ್ದ ₹59 ಕೋಟಿಯನ್ನು ಕಾಲೇಜು ಶಿಕ್ಷಣ ಇಲಾಖೆಯು ಬಿಡುಗಡೆಗೆ ಮೂರೇ ದಿನಗಳಲ್ಲಿ ತಡೆಹಿಡಿದಿದೆ. ಹಲವು ವರ್ಷ ಹೋರಾಟ ಮಾಡಿದ್ದ ಸಾವಿರಾರು ಪ್ರಾಧ್ಯಾಪಕರಿಗೆ ಇದರಿಂದ ನಿರಾಶೆ ಮೂಡಿದೆ.

ಸಹಾಯಕ ಪ್ರಾಧ್ಯಾಪಕ ಶ್ರೇಣಿಯಿಂದ ಸಹ ಪ್ರಾಧ್ಯಾಪಕ ಶ್ರೇಣಿಗೆ ಹಲವು ವರ್ಷಗಳ ನಂತರ ಬಡ್ತಿ ನೀಡಲಾಗಿತ್ತು. ವಿಳಂಬ ಮಾಡಿದ್ದ ಅವಧಿಗೆ ಪದೋನ್ನತಿ ಹಿಂಬಾಕಿ ವೇತನ ನೀಡಬೇಕು ಎಂದು ಪ್ರಾಧ್ಯಾಪಕರು ಒತ್ತಾಯಿಸಿದ್ದರು. ಹಣಕಾಸು ಇಲಾಖೆಯು ಮಾರ್ಚ್ 23ರಂದು ಕಾಲೇಜು ಶಿಕ್ಷಣ ಇಲಾಖೆಗೆ ₹13 ಕೋಟಿ ಮಂಜೂರು ಮಾಡಿತ್ತು. ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು, 'ಆರನೇ ಮತ್ತು ಏಳನೇ ಪರಿಷ್ಕೃತ ಯುಜಿಸಿ ವೇತನಕ್ಕೆ ಸಂಬಂಧಿಸಿ ಯಾವುದೇ ಹಿಂಬಾಕಿ ಸೆಳೆಯಬಾರದು' ಎಂದು ಆರು ವಲಯಗಳ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಆದೇಶಿಸಿದ್ದಾರೆ.

> ಪದೋನ್ನತಿ ಹಿಂಬಾಕಿ ವೇತನ ನಿರ್ದಿಷ್ಟ ಉದ್ದೇಶಕ್ಕೆ ಬಿಡುಗಡೆಯಾಗಿದೆ. ಈ ಹಣವನ್ನು ವಿಲೇವಾರಿ ಮಾಡುವಂತೆ ಒತ್ತಡ ತರುತ್ತೇನೆ
> ಎಸ್.ವಿ.ಸಂಕನೂರ, ವಿಧಾನಪರಿಷತ್ ಸದಸ್ಯ

> ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರೊಂದಿಗೆ ಚರ್ಚಿಸಿ, ಪದೋನ್ನತಿ ಹಿಂಬಾಕಿ ವೇತನವನ್ನು ತಕ್ಷಣ ಪ್ರಾಧ್ಯಾಪಕರಿಗೆ ನೀಡಲು ಸೂಚಿಸುತ್ತೇನೆ
> ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸಭಾಪತಿ

ಪ್ರಜಾವಾಣಿ ವಿಶೇಷ

'ಕೇಂದ್ರದ ಆರನೇ ವೇತನ ಆಯೋಗದಲ್ಲಿ ಐದು ತಿಂಗಳು 16 ದಿವಸ ಹಾಗೂ ಏಳನೇ ವೇತನ ಆಯೋಗದಲ್ಲಿ ಏಳರಿಂದ ಒಂಬತ್ತು ತಿಂಗಳ ತುಟ್ಟಿಭತ್ಯೆ ಇನ್ನೂ ಪ್ರಾಧ್ಯಾಪಕರಿಗೆ ಬಿಡುಗಡೆಯಾಗಿಲ್ಲ. ಹೆಚ್ಚುವರಿ ತುಟ್ಟಿಭತ್ಯೆಯನ್ನು ವೇತನ ಆಯೋಗದಿಂದ ನೀಡಬೇಕಿರುವ ಉಳಿದ ತುಟ್ಟಿಭತ್ಯೆಯಿಂದ ಕಡಿತಗೊಳಿಸಿದೆ. ಯು.ಜಿ.ಸಿ.ಯಿಂದ ಪಡೆದಿರುವ ತುಟ್ಟಿಭತ್ಯೆಗೂ ಪದೋನ್ನತಿ ಹಿಂಬಾಕಿ ವೇತನಕ್ಕೂ ಸಂಬಂಧವಿಲ್ಲ. ಹಿಂಬಾಕಿ ವೇತನವನ್ನು ಪಾವತಿಸಿ' ಎಂದು ಪ್ರಾಧ್ಯಾಪಕರು ಆಗ್ರಹಿಸಿದ್ದಾರೆ.

'ಸರ್ಕಾರ ಅನುದಾನಿತ ಮತ್ತು ಸರ್ಕಾರಿ ಕಾಲೇಜುಗಳ ಪ್ರಾಧ್ಯಾಪಕರ ನಡುವೆ ತಾರತಮ್ಯ ನೀತಿ ಅನುಸರಿಸುತ್ತಿದೆ. ಎಲ್ಲದಕ್ಕೂ ಕೋರ್ಟ್ ಮೂಲಕ ಪರಿಹಾರ ಕಂಡುಕೊಳ್ಳಬೇಕಾಗಿದೆ. ನ್ಯಾಯಯುತವಾಗಿ ಸ್ಥಾನೀಕರಣ ಹಿಂಬಾಕಿ ವೇತನ ಪ್ರಾಧ್ಯಾಪಕರಿಗೆ ನೀಡಬೇಕು' ಎಂದು ಕರ್ನಾಟಕ ವಿಶ್ವವಿದ್ಯಾಲಯ ಕಾಲೇಜು ಶಿಕ್ಷಕರ ಸಂಘದ ಅಧ್ಯಕ್ಷ ಡಾ. ಬಿ.ಜಿ.ಬೇವಿನಮರದ ಆಗ್ರಹಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ ಮಾತನಾಡಲು ನಿರಾಕರಿಸಿದರು.

ರೇವಣಸಿದ್ದೇಶ್ವರ ಜಯಂತಿ ಆಚರಿಸಿ: ಕಾಗಿನೆಲೆ ಶ್ರೀ

ನಿರಂಜನಾನಂದಪುರಿ ಸ್ವಾಮೀಜಿ

ಹರಿಹರ: 'ಶ್ರೀ ರೇಣುಕಾಚಾರ್ಯರ ಜಯಂತಿ ಬದಲು ಶ್ರೀ ರೇವಣ ಸಿದ್ದೇಶ್ವರ ಜಯಂತಿ ಆಚರಿಸಬೇಕು' ಎಂದು ಕಾಗಿನೆಲೆ ಕನಕ ಗುರುಪೀಠದ ಪೀಠಾಧಿಪತಿ ನಿರಂಜನಾನಂದಪುರಿ ಸ್ವಾಮೀಜಿ ಸರ್ಕಾರವನ್ನು ಭಾನುವಾರ ಆಗ್ರಹಿಸಿದ್ದಾರೆ.

ತಾಲ್ಲೂಕಿನ ಬೆಳ್ಳೂಡಿಯ ಕನಕ ಗುರುಪೀಠದ ಶಾಖಾ ಮಠದಲ್ಲಿ ಶಾಖಾ ಮಠದ ಏಳನೇ ವಾರ್ಷಿಕೋತ್ಸವ ಹಾಗೂ ಕನಕ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಶ್ರೀ ರೇವಣಸಿದ್ದೇಶ್ವರ ಜಯಂತಿ ಆಚರಿಸಲು ಅಗ್ರಹಿಸಿ ಮುಖ್ಯಮಂತ್ರಿ ಅವರಿಗೆ ಸಚಿವರ ಮೂಲಕ ಮನವಿ ಸಲ್ಲಿಸಿದ್ದೇವೆ. ಏಕೆ ಈ ಆಗ್ರಹ ಎಂದು ಸಮಯ ಬಂದಾಗ ತಿಳಿಸುತ್ತೇವೆ. ಈಗ ವಿವಾದ ಮಾಡುವುದು ಬೇಡ' ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸರ್ಕಾರದ ವಿರುದ್ಧ ಬಸವಜಯ ಮೃತ್ಯುಂಜಯ ಸ್ವಾಮೀಜಿ ಬೇಸರ

'2ಎ ಮೀಸಲಾತಿ: ಅಸ್ಪಷ್ಟ ನಿಲುವು'

ಪ್ರಜಾವಾಣಿ ವಾರ್ತೆ

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ನೀಡುವ ಬಗ್ಗೆ ಸ್ಪಷ್ಟ ನಿಲುವು ತೋರುತ್ತಿಲ್ಲ. ಸಮಾಜದ ವಿಷಯವಾಗಿ ಅವರು ಮೌನವಹಿಸಿದ್ದಾರೆ' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಸೋಮವಾರ ಪಟ್ಟಣದಲ್ಲಿ ಪಂಚಮಸಾಲಿ ಸಮಾಜದ 2ಎ ಮೀಸಲಾತಿ ಹೋರಾಟಕ್ಕೆ ಬೆಂಬಲಿಸುವಂತೆ ಆಗ್ರಹಿಸಿ ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಮಾತನಾಡಿದರು.

'ಮೀಸಲಾತಿ ಕುರಿತ ಸಭೆಯಲ್ಲಿ ಸಮಾಜದ ಮೀಸಲಾತಿ ಹೋರಾಟಕ್ಕೆ ಮಾಹಿತಿ ನೀಡುವುದಾಗಿ ಸಂಧಿಸಿ, ಬಜೆಟ್ ಒಳಗೆ ಸಮಾಜಕ್ಕೆ ಮೀಸಲಾತಿಯನ್ನು ನೀಡುವುದಾಗಿ ಬೊಮ್ಮಾಯಿ ಹೇಳಿದ್ದರು. ಬಜೆಟ್ ಅಧಿವೇಶನ ಮುಕ್ತಾಯವಾಗುತ್ತಿದ್ದರೂ ಈ ಕುರಿತು ಹಿಂದುಳಿದ ವರ್ಗಗಳ ಆಯೋಗದಿಂದ ಮಾಹಿತಿ ಪಡೆದುಕೊಂಡು 2ಎ ಮೀಸಲಾತಿ ಘೋಷಣೆ ಮಾಡಬೇಕು' ಎಂದು ಆಗ್ರಹಿಸಿದರು.

'ಎರಡು ವರ್ಷಗಳಿಂದ ನಿರಂತರವಾಗಿ ಮೀಸಲಾತಿ ಹೋರಾಟ ನಡೆಸುತ್ತಿದ್ದರೂ, ಸರ್ಕಾರ ನಮ್ಮ ಸಮಾಜಕ್ಕೆ 2ಎ ಮೀಸಲಾತಿ ಘೋಷಣೆಯಲ್ಲಿ ವಿಳಂಬ ನೀತಿ ಅನುಸರಿಸುತ್ತಿದೆ' ಎಂದು ದೂರಿದರು.



ರಟ್ಟೀಹಳ್ಳಿ ಪಟ್ಟಣದಲ್ಲಿ ಸೋಮವಾರ ಪಂಚಮಸಾಲಿ ಸಮಾಜದ 2ಎ ಮೀಸಲಾತಿ ಕುರಿತ ಘೋಷಣೆಗೆ ಆಗ್ರಹಿಸಿ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು

ದೇವೇಗೌಡರ ಪತ್ನಿಗೆ ಐ.ಟಿ ನೋಟಿಸ್

ಹಾಸನ: 'ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡರ ಪತ್ನಿ ಚೆನ್ನಮ್ಮ ಅವರಿಗೆ ಆದಾಯ ತೆರಿಗೆ ಇಲಾಖೆಯು ನೋಟಿಸ್ ಜಾರಿ ಮಾಡಿದೆ' ಎಂದು ಶಾಸಕ ಎಚ್.ಡಿ.ರೇವಣ್ಣ ಇಲ್ಲಿ ಹೇಳಿದರು.

'ದೊಡ್ಡಪುರ, ಪಡುವಲಹಿಪ್ಪೆಯ ನಮ್ಮ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದೇವೆ. ಅದನ್ನು ನೋಡದೆ ತಾಯಿಗೆ ನೋಟಿಸ್ ಕೊಟ್ಟಿದ್ದಾರೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

'ಹೊಸದಾಗಿ ಆಸ್ತಿ ಮಾಡಿಲ್ಲ. ಆರ್‌ಟಿಒದಲ್ಲಿ ನೂರಾರು ಕೋಟಿ ರೂಪಾಯಿ ಆಸ್ತಿ ಸಂಪಾದನೆ ಮಾಡಿದ ಕೆಲವರು ನಿವೃತ್ತರಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಅವರಿಗೇಕೆ ನೋಟಿಸ್ ನೀಡಲ್ಲ. ನಮ್ಮ ಅಪ್ಪ, ಅಮ್ಮ ಏನಾದರೂ ಕೋಟ್ಯಂತರ ರೂಪಾಯಿ ಆಸ್ತಿ ಮಾಡಿದ್ದಾರೆಯೇ' ಎಂದು ಪ್ರಶ್ನಿಸಿದರು.

'ತಾಯಿಗೆ ನೋಟಿಸ್ ಕೊಡಬೇಡಿ ಅಂತ ಹೇಳಿಲ್ಲ. ನನಗೂ ಕೊಡಿ. ಕಾನೂನು ಪ್ರಕಾರ ಉತ್ತರ ನೀಡುತ್ತೇವೆ. ಆದರೆ, ಒಂದು ಪಕ್ಷವನ್ನು ಗುರಿಯಾಗಿಸಿಕೊಂಡು ನೋಟಿಸ್ ನೀಡಿರುವುದು ಸರಿಯಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಉತ್ತರ ಕೊಟ್ಟರೆ ಮುಗಿಯಿತು'

ಬೆಂಗಳೂರು: 'ನಮ್ಮ ತಾಯಿಯವರಿಗೆ ಆದಾಯ ತೆರಿಗೆ ಇಲಾಖೆಯವರು ನೋಟಿಸ್ ನೀಡಿರುವುದಕ್ಕೆ ತಲೆ ಕೆಡಿಸಿಕೊಳ್ಳುವ, ಆತಂಕಪಡುವ ಅಗತ್ಯವಿಲ್ಲ. ಉತ್ತರ ಕೊಟ್ಟರೆ ಮುಗಿಯಿತು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಈ ಕುರಿತು ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ನೋಟಿಸ್ ಬಂದಿರುವ ಕುರಿತು ನನಗೆ ಮಾಹಿತಿ ಇಲ್ಲ. ಎಚ್.ಡಿ. ದೇವೇಗೌಡರು ತಮ್ಮ ರಾಜಕೀಯ ಜೀವನದಲ್ಲಿ ಯಾವತ್ತೂ ಹಣಕ್ಕೆ ಮಹತ್ವ ನೀಡಿಲ್ಲ. ನಾವು ಕೂಡ ಯಾವತ್ತೂ ಹಣಕ್ಕೆ ಪ್ರಾಮುಖ್ಯತೆ ನೀಡಿಲ್ಲ' ಎಂದರು.

'ಅವರು ನೋಟಿಸ್ ಕೊಟ್ಟಿದ್ದಾರೆ. ಅದಕ್ಕೆ ಸರಿಯಾದ ಉತ್ತರ ಕೊಟ್ಟರೆ ಮುಗಿಯಿತು. ಸಹೋದರ ಎಚ್.ಡಿ. ರೇವಣ್ಣ ಅವರಿಗೂ ಇದೇ ಮಾತನ್ನು ಹೇಳಿದ್ದೇನೆ. ಈ ವಿಚಾರವನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಅಗತ್ಯವಿಲ್ಲ' ಎಂದು ಹೇಳಿದರು.

'ಭಾರತ ರತ್ನ ಕೇಳಿ ಪಡೆದರೆ ವಿಷ'

ತುಮಕೂರು: 'ಲಿಂಗೈಕ್ಯ ಶಿವಕುಮಾರ ಸ್ವಾಮೀಜಿಯವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡುವಂತೆ ಯಾರನ್ನೂ ಕೇಳಬಾರದು. ಅದಾಗಿ ಬಂದರೆ ಅಮೃತಕ್ಕೆ ಸಮಾನ. ಕೇಳಿ ಬಂದದ್ದು ವಿಷಕ್ಕೆ ಸಮಾನ' ಎಂದು ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

'ಭಾರತ ರತ್ನ ಕೊಡುವಂತೆ ಯಾರೂ ಕೇಳಬಾರದು. ನಾವೂ ಕೇಳುವುದಿಲ್ಲ. ಈ ಬಗ್ಗೆ ಚರ್ಚೆ ಅನಗತ್ಯ. ಇದನ್ನು ಯಾರೂ ಮೀರಬಾರದು. ಪ್ರಶಸ್ತಿ ಬಂದ ತಕ್ಷಣ ಯಾರ ಗೌರವವೂ ಹೆಚ್ಚಾಗುವುದಿಲ್ಲ' ಎಂದು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

ಏಪ್ರಿಲ್ 1ರಂದು ಮಠದಲ್ಲಿ ನಡೆಯುವ ಶಿವಕುಮಾರ ಸ್ವಾಮೀಜಿ ಜಯಂತಿ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸುವರು. ಈ ಸಂಬಂಧ ಸಿದ್ಧತೆ ಕುರಿತು ಮಠಕ್ಕೆ ಭೇಟಿ ನೀಡಿದ್ದ ಶಾಸಕ ಬಿ.ಎಸ್.ಯಡಿಯೂರಪ್ಪ ಅವರು ಸಿದ್ಧಲಿಂಗ ಸ್ವಾಮೀಜಿ ಜತೆ ಚರ್ಚಿಸಿದರು. 'ಭಾರತ ರತ್ನ' ಪ್ರಶಸ್ತಿ ನೀಡುವ ವಿಚಾರವನ್ನು ಅಮಿತ್ ಶಾ ಬಳಿ ಪ್ರಸ್ತಾಪಿಸುವುದಾಗಿ ಹೇಳಿದರು.

ಯೋಜನೆ ಮತ್ತು ಸಾಂಖ್ಯಿಕ ಇಲಾಖೆ: 46 ಮಂದಿಯ ಮೇಲೆ ತೂಗುಗತ್ತಿ

‘ಬಡ್ತಿ’ಗೆ ನಕಲಿ ಪದವಿ: ನೌಕರಿಗೆ ಕುತ್ತು!

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಮತ್ತು ಹೊರರಾಜ್ಯಗಳಲ್ಲಿರುವ ವಿಶ್ವವಿದ್ಯಾಲಯಗಳ ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿ ಮುಂಬಡ್ತಿ ಪಡೆದಿರುವ ಅಧಿಕಾರಿಗಳ, ನೌಕರರ ಮುಂಬಡ್ತಿಯನ್ನು ತಕ್ಷಣ ಹಿಂಪಡೆದು, ಸೇವೆಯಿಂದ ವಜಾಗೊಳಿಸಲು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯು ನಿರ್ಧರಿಸಿದೆ. ಇದರಿಂದಾಗಿ 46 ಮಂದಿಯ ಉದ್ಯೋಗಕ್ಕೆ ಕುತ್ತು ಬರುವ ಸಾಧ್ಯತೆ ಇದೆ.

ಇಲಾಖೆ ಹಂತದಲ್ಲಿ (ಉಪ ನಿರ್ದೇಶಕ, ಜಂಟಿ ನಿರ್ದೇಶಕ, ಹೆಚ್ಚುವರಿ ನಿರ್ದೇಶಕ) 45 ಅಧಿಕಾರಿಗಳು ಸಲ್ಲಿಸಿರುವ ಪದವಿ ಪ್ರಮಾಣಪತ್ರದ ನೈಜತೆಯನ್ನು ಇಲಾಖೆ ಪರಿಶೀಲನೆಗೆ ಒಳಪಡಿಸಿದೆ. ಈ ಪೈಕಿ, 10 ಅಧಿಕಾರಿಗಳ ಪದವಿಯ ನೈಜತೆ ದೃಢಪಟ್ಟಿದೆ. ಮೂವರಿಗೆ ಪದವಿ ಪ್ರಮಾಣಪತ್ರ ನೀಡಿರುವ ವಿಶ್ವವಿದ್ಯಾಲಯಗಳು ಈಗಾಗಲೇ ಮುಚ್ಚಿವೆ. ಒಬ್ಬ ಅಧಿಕಾರಿಯ ಪದವಿ ಪ್ರಮಾಣಪತ್ರ ನಕಲು ಎಂದು ದೃಢಪಟ್ಟಿದೆ.

ಯೋಜನೆ ಮತ್ತು ಸಾಂಖ್ಯಿಕ ನಿರ್ದೇಶನಾಲಯದದಲ್ಲಿ ಸಾಂಖ್ಯಿಕ ನಿರೀಕ್ಷಕರು, ಸಹಾಯಕ ಸಾಂಖ್ಯಿಕ ಅಧಿಕಾರಿ, ಸಹಾಯಕ ನಿರ್ದೇಶಕರು (ಎಡಿ–ಸಾಂಖ್ಯಿಕ)) ಹುದ್ದೆಗಳಿವೆ. ಈ ಹಂತದಲ್ಲಿ ಒಟ್ಟು 47 ಅಧಿಕಾರಿ, ನೌಕರರ ಪದವಿ ಪ್ರಮಾಣಪತ್ರದ ನೈಜತೆ ಪರಿಶೀಲಿಸಲಾಗುತ್ತಿದೆ. ಈ ಪೈಕಿ, 36 ಮಂದಿಯ ಪದವಿ ನೈಜವಾಗಿದ್ದು, ಏಳು ಮಂದಿಯ ಪದವಿಯ ನೈಜತೆಯ ಮಾಹಿತಿ ವಿಶ್ವವಿದ್ಯಾಲಯಗಳಿಂದ ಬಂದಿಲ್ಲ. ಇತರ ನಾಲ್ವರ ಪದವಿ ಪ್ರಮಾಣಪತ್ರ ನಕಲಿ ಎನ್ನುವುದು ದೃಢಪಟ್ಟಿದೆ. ನಕಲಿ ಪ್ರಮಾಣಪತ್ರ ಸಲ್ಲಿಸಿದ್ದು ದೃಢಪಟ್ಟವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ಇಲಾಖಾ ಪದೋನ್ನತ ಸಮಿತಿ (ಡಿಪಿಸಿ) ಬಡ್ತಿ ನೀಡುವ ನಿರ್ಧಾರ ತೆಗೆದುಕೊಳ್ಳುತ್ತದೆ. ಬಡ್ತಿಗಾಗಿ ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿದ್ದು ಗಮನಕ್ಕೆ ಬಂದಿತ್ತು. ನೈಜತೆ ಪರಿಶೀಲಿಸಲು ಸಭೆ ನಡೆದಿತ್ತು.

‘ಸಾಂಖ್ಯಿಕ ನಿರೀಕ್ಷಕ ವೃಂದದಿಂದ ಸಹಾಯಕ ಸಾಂಖ್ಯಿಕ ಅಧಿಕಾರಿ, ಅಲ್ಲಿಂದ ಸಹಾಯಕ ನಿರ್ದೇಶಕ ವೃಂದಕ್ಕೆ ಬಡ್ತಿ ಪಡೆಯಲು ನಕಲಿ ಪದವಿಪ್ರಮಾಣಪತ್ರ ಸಲ್ಲಿಸಿದ್ದಾರೆ. ಈ ಪ್ರಮಾಣಪತ್ರಗಳ ನೈಜತೆ ದೃಢೀಕರಿಸುವಂತೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಗೆ ಹಲವು ಬಾರಿ ಪತ್ರ ಬರೆದರೂ ಕೆಲವು ವಿಶ್ವವಿದ್ಯಾಲಯಗಳಿಂದ ಯಾವುದೇ ಮಾಹಿತಿ ಬಂದಿಲ್ಲ. ನಕಲಿ ಪ್ರಮಾಣಪತ್ರ ಸಲ್ಲಿಸಿ ಬಡ್ತಿ ಪಡೆದಿರುವ ನೌಕರರ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಸಭೆ ಚರ್ಚಿಸಿತು’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಪಡೆದಿರುವ ಪದವಿ ಪ್ರಮಾಣಪತ್ರದ ಕುರಿತು ಸಾಂಖ್ಯಿಕ ನಿರ್ದೇಶನಾಲಯ ಹಾಗೂ ಯೋಜನಾ ಇಲಾಖೆಯ ಅಧಿಕಾರಿಗಳು ಮತ್ತು ವಿಶ್ವವಿದ್ಯಾಲಯದ ಕುಲಪತಿ ಜೊತೆ ಸಭೆ ನಡೆಸಿ, ಪ್ರಮಾಣಪತ್ರದ ನೈಜತೆ ಕುರಿತು ತೀರ್ಮಾನ ಕೈಗೊಳ್ಳಲಾಗುವುದು. ಹೊರರಾಜ್ಯದ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಅಧಿಕಾರಿಗಳ ಜೊತೆ ಸಭೆ ನಡೆಸಿ ನಿರ್ಣಯಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಇಲಾಖೆಯ ಜಂಟಿ ಕಾರ್ಯದರ್ಶಿ ಕೆ.ಎಲ್. ಸುಬ್ರಹ್ಮಣ್ಯ ಅವರು ಸಭೆಗೆ ತಿಳಿಸಿದ್ದಾರೆ.

> **ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿರುವವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಜೊತೆ ಸಭೆ ನಡೆದಿದೆ. ಮುಂದಿನ ಕ್ರಮದ ಕುರಿತು ಪರಿಶೀಲಿಸುತ್ತಿದ್ದೇವೆ**
>
> **ಎನ್. ಮಾಧುರಾಂ,** ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ಭಯದಿಂದ ಬಡ್ತಿ ಬೇಡವೆಂದ 12 ಸಿಬ್ಬಂದಿ!

‘ಅಧಿಕಾರಿ, ಸಿಬ್ಬಂದಿ ಪ್ರತಿವರ್ಷ ತಮ್ಮ ಕಾರ್ಯನಿರ್ವಹಣಾ ವರದಿ (ಸಿಆರ್) ಸಲ್ಲಿಸಬೇಕು. ಅದರಲ್ಲಿ ಹೆಚ್ಚಿನ ಶಿಕ್ಷಣ ಪಡೆದ ಬಗ್ಗೆಯೂ ನಮೂದಿಸಬೇಕು. ಇದನ್ನು ಬಡ್ತಿ ವೇಳೆ ಪರಿಶೀಲಿಸಲಾಗುತ್ತದೆ. ಆದರೆ, ನಕಲಿ ಪದವಿ ಪ್ರಮಾಣಪತ್ರ ಪಡೆದವರು ಪದವಿ ಬಗ್ಗೆ ವರದಿಯಲ್ಲಿ ನಮೂದಿಸದೆ ಬಡ್ತಿ ವೇಳೆ ಸಲ್ಲಿಸುತ್ತಾರೆ. ಪ್ರಮಾಣದ ನೈಜತೆ ಪರಿಶೀಲಿಸುತ್ತಿರುವುದರಿಂದ ಸಹಾಯಕ ಸಾಂಖ್ಯಿಕ ಅಧಿಕಾರಿ ವೃಂದದಿಂದ ಸಹಾಯಕ ನಿರ್ದೇಶಕ ಹುದ್ದೆಗೆ ಬಡ್ತಿಯೇ ಬೇಡವೆಂದು 12 ಅಧಿಕಾರಿಗಳು ಬರೆದುಕೊಟ್ಟಿದ್ದಾರೆ’ ಎಂದೂ ಅಧಿಕಾರಿಯೊಬ್ಬರು ತಿಳಿಸಿದರು.

‘ಶೇ 40 ಸರ್ಕಾರ: ಕಾಂಗ್ರೆಸ್ ಗರ್ಜನೆ

ಪ್ರಜಾವಾಣಿ ವಾರ್ತೆ



ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಅವರಿಗೆ ಕಾಂಗ್ರೆಸ್ ನಾಯಕರು ಪಕ್ಷದ ಧ್ವಜ ನೀಡಿದರು. ಸಲೀಂ ಅಹ್ಮದ್, ಎಚ್.ಕೆ. ಪಾಟೀಲ, ಎಂ.ಬಿ. ಪಾಟೀಲ, ರಣದೀಪ್ ಸಿಂಗ್ ಸುರ್ಜೇವಾಲ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್, ಬಿ.ಕೆ. ಹರಿಪ್ರಸಾದ್, ಜಿ. ಪರಮೇಶ್ವರ, ವೀರಪ್ಪ ಮೊಯಿಲಿ, ಕೆ.ಎಚ್. ಮುನಿಯಪ್ಪ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಆಡಳಿತರೂಢ ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಆರೋಪದ ಅಸ್ತ್ರ ಪ್ರಯೋಗಿಸಿ, ರಾಜ್ಯದಾದ್ಯಂತ ಜನಾಭಿಪ್ರಾಯ ಮೂಡಿಸಿ, 2023ರ ವಿಧಾನಸಭೆ ಚುನಾವಣೆ ಗೆದ್ದು ಅಧಿಕಾರಕ್ಕೆ ಏರಲು ರಾಜ್ಯ ಕಾಂಗ್ರೆಸ್ ರಣಕಹಳೆ ಊದಿದೆ.

ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಸೋಮವಾರ ನಡೆದ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಪ್ರಚಾರ ಸಮಿತಿ ನೂತನ ಅಧ್ಯಕ್ಷ ಎಂ.ಬಿ. ಪಾಟೀಲ ಅವರ ಪದಗ್ರಹಣ ಕಾರ್ಯಕ್ರಮದುದ್ದಕ್ಕೂ ‘ಕೈ’ ನಾಯಕರು ಬಿಜೆಪಿ ವಿರುದ್ಧ ಒಗ್ಗೂಡಿ ವಾಗ್ದಾಳಿ ನಡೆಸಿದರು. ಗುತ್ತಿಗೆದಾರರ ಸಂಘ ಪ್ರಧಾನಿಗೆ ನೀಡಿದ ದೂರನ್ನು ಪದೇ ಪದೇ ಉಲ್ಲೇಖಿಸುತ್ತಲೇ, ‘ಶೇ 40 ಕಮಿಷನ್ ಸರ್ಕಾರ’ ಎಂದು ಹಂಗಿಸಿದರು.

ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ‘ರಾಜ್ಯದಲ್ಲಿ ಅತ್ಯಂತ ಭ್ರಷ್ಟ ಸರ್ಕಾರವಿದೆ. ಬೊಮ್ಮಾಯಿ ನೇತೃತ್ವದ ಸರ್ಕಾರ ಶೇ 40ರಷ್ಟು ಲಂಚದ ಸರ್ಕಾರ’ ಎಂದರು. ‘ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಇಲ್ಲಿಗೆ (ರಾಜ್ಯಕ್ಕೆ) ಬರುವ ಮಾಹಿತಿ ಇದೆ. ರಾಜ್ಯದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿರುವ ಸಚಿವರ ವಿರುದ್ಧ ಅವರು ಕ್ರಮ ಕೈಗೊಳ್ಳಬೇಕು' ಎಂದರು.

ಪ್ರಧಾನಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ. ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕರೆ ನೀಡಿದರು.

‘ರಾಜ್ಯದಲ್ಲಿ ಪಕ್ಷದ ವಿವಿಧ ಹಂತದ ಜವಾಬ್ದಾರಿಯನ್ನು ಯುವಕರಿಗೆ ನೀಡಬೇಕು. ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಬಲ ತುಂಬಬೇಕು‘ ಎಂದು ರಾಜ್ಯದ ನಾಯಕರಿಗೆ ಮಲ್ಲಿಕಾರ್ಜುನ ಖರ್ಗೆ ಕಿವಿಮಾತು ಹೇಳಿದರು.

> **ಕಾಂಗ್ರೆಸ್ ಅವಧಿಯಲ್ಲಿ ಸಂಪಾದಿಸಿದ್ದ ಆಸ್ತಿಯನ್ನು ಮೋದಿ ಮತ್ತು ಶಾ ಸರ್ಕಾರ ಮಾರುತ್ತಿದೆ. ಏನಾದರೂ ಮಾಡಲಿ, ಬಿಜೆಪಿ ಸರ್ಕಾರವನ್ನು ಜನರ ಮೂಲಕವೇ ಓಡಿಸಬೇಕು**
>
> **ಮಲ್ಲಿಕಾರ್ಜುನ ಖರ್ಗೆ**, ರಾಜ್ಯಸಭೆ ವಿರೋಧ ಪಕ್ಷದ ನಾಯಕ

> **ರಾಜ್ಯವನ್ನು ಜಾತಿ, ಧರ್ಮದ ಹೆಸರಲ್ಲಿ ಒಡೆಯುವ ಯತ್ನ ನಡೆಯುತ್ತಿದೆ. ಸರ್ಕಾರ ವಿರುದ್ಧ ಶೇ 40 ಲಂಚದ ಆರೋಪ ಮಾಡಿರುವ ಗುತ್ತಿಗೆದಾರರ ಸಂಘದ ಹೋರಾಟಕ್ಕೆ ಕಾಂಗ್ರೆಸ್ ಬೆಂಬಲ ನೀಡಲಿದೆ**
>
> **ಡಿ.ಕೆ. ಶಿವಕುಮಾರ್**, ಕೆಪಿಸಿಸಿ ಅಧ್ಯಕ್ಷ

ಜಾರಕಿಹೊಳಿ ಪ್ರಕರಣ: ಜನಪ್ರತಿನಿಧಿಗಳ ಪೀಠಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ, ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆ ಸಲ್ಲಿಸಿರುವ ಅರ್ಜಿಗಳನ್ನು, ಹೈಕೋರ್ಟ್‌ನ ಜನಪ್ರತಿನಿಧಿಗಳ ವಿಶೇಷ ನ್ಯಾಯಪೀಠಕ್ಕೆ ವರ್ಗಾಯಿಸಲು ಸೂಚಿಸಲಾಗಿದೆ.

ಸಿ.ಡಿ ಪ್ರಕರಣದ ತನಿಖೆಗೆ ಎಸ್ಐಟಿ ರಚಿಸಿದ ಆದೇಶವನ್ನು ಪ್ರಶ್ನಿಸಿದ ಮತ್ತು ರಮೇಶ ಜಾರಕಿಹೊಳಿ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ನೀಡಿದ್ದ ಬ್ಲ್ಯಾಕ್‌ಮೇಲ್ ದೂರು ಆಧರಿಸಿ ಪೊಲೀಸರು ದಾಖಲಿಸಿರುವ ಎಫ್ಐಆರ್ ರದ್ದು ಕೋರಿ ಸಂತ್ರಸ್ತೆ ಸಲ್ಲಿಸಿರುವ ಎರಡು ಪ್ರತ್ಯೇಕ ಅರ್ಜಿಗಳು, ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಸೋಮವಾರ ವಿಚಾರಣೆಗೆ ನಿಗದಿಯಾಗಿದ್ದವು.

ವಿಚಾರಣೆ ವೇಳೆ ನ್ಯಾಯಮೂರ್ತಿಗಳು, ‘ರಮೇಶ ಜಾರಕಿಹೊಳಿ ಶಾಸಕರಾಗಿದ್ದು, ಜನಪ್ರತಿನಿಧಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ವಿಚಾರಣೆ ನಡೆಸಲು ಇಲ್ಲೇ ವಿಶೇಷ ನ್ಯಾಯಪೀಠವಿದೆ. ಹೀಗಾಗಿ, ಆ ನ್ಯಾಯಪೀಠದ ಮುಂದೆಯೇ ಈ ಅರ್ಜಿಗಳನ್ನು ವಿಚಾರಣೆಗೆ ನಿಗದಿಪಡಿಸುವುದು ಸೂಕ್ತ. ಆದ್ದರಿಂದ ಈ ಕಡತವನ್ನು ಮುಖ್ಯ ನ್ಯಾಯಮೂರ್ತಿ ಅವರ ಮುಂದೆ ಮಂಡಿಸಿ ಒಪ್ಪಿಗೆ ಪಡೆಯಲು ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಚಿಸಲಾಗುವುದು’ ಎಂದರು.

ನಿಧನ ವಾರ್ತೆ

ಡಾ.ಎಸ್.ವಿ. ಜಠಾರ



ಗೋಕರ್ಣ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಕಾರ್ಯಕರ್ತ, ಜನಸಂಘದ ಕಾಲದಿಂದ ಬಿಜೆಪಿ ಕಟ್ಟಿ ಬೆಳೆಸಿದ, ಸಮಾಜಸೇವಕ, ವೈದ್ಯ ಶೇಷ ವೆಂಕಟ್ರಮಣ ಜಠಾರ (93) ಭಾನುವಾರ ರಾತ್ರಿ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ. ಸೋಮವಾರ ಅಂತ್ಯಕ್ರಿಯೆ ನಡೆಯಿತು.

ಶನಿವಾರವಷ್ಟೇ ಅವರಿಗೆ ಮನೆಯಲ್ಲಿಯೇ ಜಿಲ್ಲಾ ಉಸ್ತುವಾರಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅಧ್ಯಕ್ಷತೆಯಲ್ಲಿ ಅಭಿನಂದನಾ ಸಮಾರಂಭ ನಡೆದಿತ್ತು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವ್ಯವಸ್ಥಾಪ್ರಮುಖ ಮಂಗೇಶ ಭೇಂಡೆ ಸನ್ಮಾನಿಸಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸುಳ್ಳು ಆರೋಪ: ಶಾಸಕತ್ವ ರದ್ದತಿಗೆ ಆಗ್ರಹ

ಜಾತಿ ಪ್ರಮಾಣಪತ್ರ ಹೈಕೋರ್ಟ್ ಸಿಂಧುಗೊಳಿಸಿದೆ: ಎಂ.ಪಿ.ದಾರಕೇಶ್ವರಯ್ಯ

ಪ್ರಜಾವಾಣಿ ವಾರ್ತೆ



ಎಂ.ಪಿ. ದಾರಕೇಶ್ವರಯ್ಯ

ದಾವಣಗೆರೆ: ‘ನಮ್ಮ ಕುಟುಂಬ ಪಡೆದ ಬೇಡ ಜಂಗಮ ಜಾತಿ ಪ್ರಮಾಣಪತ್ರವನ್ನು ಹೈಕೋರ್ಟ್ ಸಿಂಧುಗೊಳಿಸಿದ್ದರೂ ವಿಧಾನಸಭೆಯಲ್ಲಿ ತಪ್ಪು ಮಾಹಿತಿ ನೀಡಿ ಶಾಸಕರು ಆರೋಪ ಮಾಡಿದ್ದಾರೆ’ ಎಂದು ಅಖಿಲ ಕರ್ನಾಟಕ ಡಾ.ಅಂಬೇಡ್ಕರ್ ಬೇಡ ಜಂಗಮ ಪರಿಶಿಷ್ಟ ಜಾತಿ ರಕ್ಷಣಾ ವೇದಿಕೆಯ ಅಧ್ಯಕ್ಷ ಎಂ.ಪಿ.ದಾರಕೇಶ್ವರಯ್ಯ ಆರೋಪಿಸಿದ್ದಾರೆ.

‘ನನ್ನ ವಿರುದ್ಧ ಸುಳ್ಳು ಆರೋಪ ಮಾಡಿರುವ ಶಾಸಕರಾದ ಪಿ.ರಾಜೀವ್, ಗೂಳಿಹಟ್ಟಿ ಶೇಖರ್, ಪ್ರಿಯಾಂಕ್ ಖರ್ಗೆ, ಎನ್.ಮಹೇಶ್ ಅವರ ಶಾಸಕತ್ವವನ್ನು ರದ್ದುಗೊಳಿಸಬೇಕು’ ಎಂದು ಶಾಸಕ ರೇಣುಕಾಚಾರ್ಯ ಅವರ ಅಣ್ಣನೂ ಆಗಿರುವ ದಾರಕೇಶ್ವರಯ್ಯ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಕಲಬುರಗಿ ಲೋಕಸಭಾ ಹಾಗೂ ಕನಕಗಿರಿ ವಿಧಾನಸಭಾ ಮೀಸಲು ಕ್ಷೇತ್ರದಿಂದ ನಾನು ಚುನಾವಣೆಗೆ ಸ್ಪರ್ಧಿಸಿದ್ದಾಗ ನಾಮಪತ್ರವನ್ನು ತಿರಸ್ಕರಿಸಿರಲಿಲ್ಲ. ಬೇಡ ಜಂಗಮ ಪ್ರಮಾಣಪತ್ರವನ್ನು ನಮಗೆ ನೀಡುವಂತೆ ಹೈಕೋರ್ಟ್ ಕೂಡ ಆದೇಶ ನೀಡಿದೆ. ಹೀಗಿದ್ದರೂ ಕೆಲವರು ದಿಕ್ಕು ತಪ್ಪಿಸುತ್ತಿದ್ದಾರೆ’ ಎಂದು ದೂರಿದರು.

‘ಬೇಡ ಜಂಗಮ ಪ್ರಮಾಣಪತ್ರ ಪಡೆದಿರುವ ಧಾರವಾಡದ ವಕೀಲ ವೀರಣ್ಣ ಹಿರೇಮಠ ಅವರ ಪುತ್ರಿ ಚೇತನಾ ಹಿರೇಮಠ ಅವರಿಗೆ ₹ 45 ಲಕ್ಷ ಸಾಲ ಸೌಲಭ್ಯ ಪ್ರಮಾಣಪತ್ರವನ್ನು ಸಿದ್ದರಾಮಯ್ಯ ಅವರೇ ನೀಡಿರುವ ಬಗ್ಗೆ ದಾಖಲೆ ಇದೆ’ ಎಂದು ಹೇಳಿದ್ದಾರೆ.

‘ನನ್ನ ಸಹೋದರನ ಪುತ್ರಿ ಚೇತನಾಗೆ ಬೇಡ ಜಂಗಮ ಪ್ರಮಾಣಪತ್ರವನ್ನು ನಾನು ಕೊಡಿಸಿದ್ದರೂ ಯಾವುದೇ ಸರ್ಕಾರಿ ಸೌಲಭ್ಯ ಪಡೆದುಕೊಂಡಿಲ್ಲ. ಚುನಾವಣೆಗೆ ಸ್ಪರ್ಧಿಸಲು ಮಾತ್ರ ಈ ಪ್ರಮಾಣಪತ್ರವನ್ನು ಬಳಸಿಕೊಂಡಿದ್ದೇನೆ’ ಎಂದು ಸಮರ್ಥಿಸಿಕೊಂಡರು.

ದಾರಕೇಶ್ವರಯ್ಯಗೆ ಮುತ್ತಿಗೆ, ಪ್ರತಿಭಟನೆ

ದಾವಣಗೆರೆ: ಎಂ.ಪಿ.ದಾರಕೇಶ್ವರಯ್ಯ ಅವರು ‘ಬೇಡ ಜಂಗಮ’ ಹೆಸರಿನಲ್ಲಿ ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆದಿರುವುದನ್ನು ಖಂಡಿಸಿ ಸಮುದಾಯದ ಮುಖಂಡರು ಸೋಮವಾರ ಮುತ್ತಿಗೆ, ಹಾಕಿ ಪ್ರತಿಭಟಿಸಿದರು.

ವಾಗ್ವಾದ ವಿಕೋಪಕ್ಕೆ ತಿರುಗಿದಾಗ ಪೊಲೀಸರು ಪ್ರತಿಭಟನಕಾರರಿಂದ ದಾರಕೇಶ್ವರಯ್ಯ ಅವರನ್ನು ರಕ್ಷಿಸಿ ವಾಹನದಲ್ಲಿ ಕರೆದುಕೊಂಡು ಹೋದರು. ‘ಬೇಡ ಜಂಗಮ’ ಪ್ರಮಾಣಪತ್ರ ಕುರಿತು ಪತ್ರಿಕಾಗೋಷ್ಠಿ ನಡೆಸಿ ಹೊರಕ್ಕೆ ಬರುತ್ತಿದ್ದಂತೆ ಪರಿಶಿಷ್ಟ ಕಾರ್ಯಕರ್ತರು ಸುತ್ತುವರಿದು ಘೋಷಣೆಗಳನ್ನು ಕೂಗಿದರು.

ಆಗ ಮಾತಿಗೆ ಮಾತು ಬೆಳೆದು ಕೈಕೈ ಮಿಲಾಯಿಸುವ ಹಂತ ತಲುಪಿತು. ವಾಹನ ತಡೆದ ಪ್ರತಿಭಟನಕಾರರು, ತಮ್ಮ ವಶಕ್ಕೆ ಒಪ್ಪಿಸುವಂತೆ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ‘ದಲಿತರ ಹಕ್ಕನ್ನು ಕಿತ್ತುಕೊಂಡಿರುವ ರೇಣುಕಾಚಾರ್ಯ ಹಾಗೂ ದಾರಕೇಶ್ವರಯ್ಯ ಅವರನ್ನು ಬಂಧಿಸಬೇಕು’ ಎಂದು ಘೋಷಣೆ ಕೂಗಿದರು.

ಬಳಿಕ ಪೊಲೀಸರು ದಾರಕೇಶ್ವರಯ್ಯ ಅವರನ್ನು ಇನ್ನೊಂದು ವಾಹನದಲ್ಲಿ ಕರೆದುಕೊಂಡು ಹೋದರು. ಅರ್ಧ ಗಂಟೆಗೂ ಹೆಚ್ಚು ಹೊತ್ತು ದಾರಕೇಶ್ವರಯ್ಯ ಅವರು ಪೊಲೀಸ್ ವಾಹನದಲ್ಲೇ ದಿಗ್ಬಂಧನಕ್ಕೆ ಒಳಗಾಗಿದ್ದರು.

ಪರಿಶಿಷ್ಟ ಮುಖಂಡರಾದ ಹೂವಿನಮಡು ಅಂಜಿನಪ್ಪ, ಕಬ್ಬಳ್ಳಿ ಮೈಲಪ್ಪ, ಹೆಗ್ಗೆರೆ ರಂಗಪ್ಪ, ಡಿ. ಹನುಮಂತಪ್ಪ, ಆಟೊ ತಿಮ್ಮಣ್ಣ, ನೇರ್ಲಗಿ ರಾಜೇಶ್, ಬಾಡಾ ಶ್ರೀನಿವಾಸ್ ಪ್ರತಿಭಟನೆಯಲ್ಲಿದ್ದರು.

‘ಹಿಂದೂ ಲಿಂಗಾಯತ’ದಿಂದ ಬೇಡ ಜಂಗಮ’ ಹೇಗಾಯಿತು?

ಹೊನ್ನಾಳಿ: ‘1966-67ರಲ್ಲಿ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರ ಶಾಲಾ ದಾಖಲಾತಿಗಳಲ್ಲಿ ಜಾತಿ ‘ಹಿಂದೂ ಲಿಂಗಾಯತ’ ಎಂದಿದೆ. 2013-14ರಲ್ಲಿ ‘ಬೇಡ ಜಂಗಮ’ (ಎಸ್ಸಿ) ಆಗಿ ಬದಲಾಗಿದೆ. ಯಾರು, ಏಕೆ ಈ ಬದಲಾವಣೆ ಮಾಡಿದರು’ ಎಂದು ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕು ಎಸ್ಸಿ, ಎಸ್ಟಿ ಪಂಗಡಗಳ ಮೀಸಲಾತಿ ಸಂರಕ್ಷಣಾ ಮಹಾ ಒಕ್ಕೂಟ ಪ್ರಶ್ನಿಸಿದೆ.

ಒಕ್ಕೂಟದ ಮುಖಂಡ ಕೊಡತಾಳ್ ರುದ್ರೇಶ್ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ, ಇದಕ್ಕೆ ಪೂರಕವಾಗಿ ರೇಣುಕಾಚಾರ್ಯ ಅವರ ಶಾಲಾ ದಾಖಲಾತಿಗಳ ಪ್ರತಿಗಳನ್ನು ಮಾಧ್ಯಮದವರಿಗೆ ಅವರು ತೋರಿಸಿದರು.

‘ಶಾಲಾ ದಾಖಲಾತಿಯಲ್ಲಿ ಬೇಡ ಜಂಗಮ (ಎಸ್ಸಿ) ಎಂದು ಬರೆಸಿದ್ದರೂ ನನಗೇನೂ ಗೊತ್ತಿಲ್ಲ ಎಂದು ಹೇಳುವ ರೇಣುಕಾಚಾರ್ಯ ಅವರು ರಾಜೀನಾಮೆ ಕೊಟ್ಟು ಚುನಾವಣೆ ಎದುರಿಸಲಿ’ ಎಂದು ಒತ್ತಾಯಿಸಿದರು.

ಹುಲಿ ದಾಳಿ, ಸಾವು

ವಿರಾಜಪೇಟೆ (ಕೊಡಗು): ತಾಲ್ಲೂಕಿನ ಬಿಟ್ಟಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರುದ್ರಗುಪ್ಪೆ ಗ್ರಾಮದ ಅಯ್ಯಪ್ಪ ಅವರ ಕಾಫಿ ತೋಟದಲ್ಲಿ ಸೋಮವಾರ ಹುಲಿ ದಾಳಿಗೆ ಸಿಲುಕಿ ಕಾರ್ಮಿಕ ಗಣೇಶ್ (40) ಸ್ಥಳದಲ್ಲೇ ಮೃತಪಟ್ಟರು. ‘ಗಣೇಶ್ ಸೇರಿದಂತೆ ಇಬ್ಬರು ಕಾರ್ಮಿಕರು ಕಾಳು ಮೆಣಸು ಕೊಯ್ಲು ಮಾಡುತ್ತಿದ್ದಾಗ ಹುಲಿ ದಾಳಿ ನಡೆಸಿತ್ತು.

ಪಿಯು ಪರೀಕ್ಷೆ: ಕಳೆದ ಮೂರು ವರ್ಷಗಳಲ್ಲಿ 2,777 ವಿದ್ಯಾರ್ಥಿಗಳಿಗೆ ತೊಂದರೆ

ಅಸಮರ್ಪಕ ಮೌಲ್ಯಮಾಪನ: ₹400 ದಂಡ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 2019–20ನೇ ಸಾಲಿನಲ್ಲಿ ಪಿಯುಸಿ ಪರೀಕ್ಷೆಯ ಉತ್ತರಪತ್ರಿಕೆಗಳ ಅಸಮರ್ಪಕ ಮೌಲ್ಯಮಾಪನ ಮಾಡಿದ ನಾಲ್ವರು ಮೌಲ್ಯಮಾಪಕರಿಂದ ಕೇವಲ ₹400 ದಂಡ ವಸೂಲಿ ಮಾಡಲಾಗಿದೆ.

ವಿಧಾನ ಪರಿಷತ್‌ನಲ್ಲಿ ಸೋಮವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಎನ್. ರವಿಕುಮಾರ್ ಪರವಾಗಿ ಎಸ್.ವಿ. ಸಂಕನೂರು ಅವರು ಕೇಳಿದ ಪ್ರಶ್ನೆಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಈ ಉತ್ತರ ನೀಡಿದ್ದಾರೆ.

'2018–19ನೇ ಸಾಲಿನಲ್ಲಿ ಅಸಮರ್ಪಕ ಮೌಲ್ಯಮಾಪನ ಮಾಡಿದ ಮೌಲ್ಯಮಾಪಕರಿಂದ ಯಾವುದೇ ದಂಡ ವಸೂಲಿ ಮಾಡಿಲ್ಲ. 2020–21ನೇ ಸಾಲಿನಲ್ಲಿ ಕೋವಿಡ್–19 ಕಾರಣಕ್ಕೆ ವಾರ್ಷಿಕ ಪರೀಕ್ಷೆ ನಡೆದಿಲ್ಲ. ಆದರೆ, ಸರ್ಕಾರಿ ಆದೇಶದ ಅನ್ವಯ ಫಲಿತಾಂಶ ಒಪ್ಪದಿರುವ ಅಭ್ಯರ್ಥಿಗಳಿಗೆ ಮಾತ್ರ ಪರೀಕ್ಷೆ ನಡೆಸಲಾಗಿದೆ. ಈ ಸಾಲಿನಲ್ಲಿಯೂ ಅಸಮರ್ಪಕ ಮೌಲ್ಯಮಾಪನ ಮಾಡಿದ ಮೌಲ್ಯಮಾಪಕರಿಂದ ಯಾವುದೇ ದಂಡ ವಸೂಲಿ ಮಾಡಿಲ್ಲ' ಎಂದು ವಿವರಿಸಿದ್ದಾರೆ.

'ಕಳೆದ ಮೂರು ವರ್ಷಗಳಲ್ಲಿ ಪಿಯುಸಿ ಪರೀಕ್ಷೆಯ ಅಸಮರ್ಪಕ ಮೌಲ್ಯಮಾಪನದಿಂದ ಒಟ್ಟು 2,777 ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಈ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿರುವ ಪ್ರತಿ ನೀಡಿ ಮರು ಎಣಿಕೆ ಮತ್ತು ಮರುಮೌಲ್ಯಮಾಪನದ ಮೂಲಕ ಶೇ 6 ಅಥವಾ 6ಕ್ಕಿಂತ ಹೆಚ್ಚು ಅಂಕಗಳು ವ್ಯತ್ಯಾಸವಾಗಿದ್ದರೆ ಪಾವತಿಸಿದ ಹಣವನ್ನು ವಾಪಸ್ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

'ಅಸಮರ್ಪಕ ಮೌಲ್ಯಮಾಪನ ನಡೆಸುವವರ ವಿರುದ್ಧ ಯಾವ ರೀತಿ ಕ್ರಮಕೈಗೊಳ್ಳಬೇಕು ಎನ್ನುವ ಬಗ್ಗೆ ಪರಿಷತ್ ಸದಸ್ಯರ ಜತೆ ಚರ್ಚಿಸಲಾಗುವುದು. 2019ರಲ್ಲಿ 1008 ವಿದ್ಯಾರ್ಥಿಗಳ ಉತ್ತರಪತ್ರಿಕೆಗಳಲ್ಲಿ ಶೇ6ಕ್ಕಿಂತ ಹೆಚ್ಚು ಅಂಕಗಳು ವ್ಯತ್ಯಾಸವಾಗಿವೆ' ಎಂದು ತಿಳಿಸಿದ್ದಾರೆ.

ಎಸ್.ವಿ. ಸಂಕನೂರು ಮಾತನಾಡಿ, 'ಮೂರು ವರ್ಷಗಳಿಗಿಂತಲೂ ಕಡಿಮೆ ಅವಧಿ ಕಾರ್ಯನಿರ್ವಹಿಸಿದ ಉಪನ್ಯಾಸಕರಿಂದಲೂ ಮೌಲ್ಯಮಾಪನ ಮಾಡಿಸಲಾಗುತ್ತಿದೆ' ಎಂದು ಅವರು ದೂರಿದರು.

ಸಮವಸ್ತ್ರ ಕಡ್ಡಾಯ ಬೇಡ: ಕಾಂಗ್ರೆಸ್

ಬೆಂಗಳೂರು: 'ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯ ಬೇಡ' ಎಂದು ಕಾಂಗ್ರೆಸ್‌ನ ಪ್ರಕಾಶ್ ಕೆ. ರಾಠೋಡ್ ವಿಧಾನ ಪರಿಷತ್‌ನಲ್ಲಿ ಸೋಮವಾರ ಒತ್ತಾಯಿಸಿದರು.

'ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಿ ಎರಡು ವರ್ಷಗಳಾಗಿವೆ. ಆದ್ದರಿಂದ, ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು ಎನ್ನುವ ಸುತ್ತೋಲೆಯನ್ನು ವಾಪಸ್ ಪಡೆಯಬೇಕು' ಎಂದು ಶೂನ್ಯವೇಳೆಯಲ್ಲಿ ಆಗ್ರಹಿಸಿದರು.

'ಕೋವಿಡ್‌ನಿಂದಾಗಿ ಆನ್‌ಲೈನ್ ತರಗತಿ ನಡೆಸಿದ್ದರಿಂದ ವಿದ್ಯಾರ್ಥಿಗಳು ಸಮವಸ್ತ್ರ ಧರಿಸುತ್ತಿರಲಿಲ್ಲ. ಜತೆಗೆ, ಈ ಹಿಂದೆ ನೀಡಿದ್ದ ಸಮವಸ್ತ್ರಗಳು ಸಹ ಹಳೆಯದಾಗಿವೆ. ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಯಿಂದಾಗಿಯೂ ಸಮವಸ್ತ್ರ ಧರಿಸಲು ಸಾಧ್ಯವಾಗುತ್ತಿಲ್ಲ' ಎಂದು ವಿವರಿಸಿದರು.

'ವಿದ್ಯಾರ್ಥಿಗಳಿಗೂ ಸಮವಸ್ತ್ರ ವಿಚಾರ ತಲೆನೋವಾಗಿ ಪರಿಣಮಿಸಿದೆ. ಕಳೆದ ಎರಡು ವರ್ಷಗಳಿಂದ ಕೋವಿಡ್ ಆತಂಕದ ನಡುವೆ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಈ ಬಾರಿ ಹಿಜಾಬ್ ಸಂಘರ್ಷದ ಜತೆ ಎದುರಿಸಬೇಕಾಗಿದೆ. ಹಲವು ಅಲ್ಪಸಂಖ್ಯಾತರ ಶಾಲೆಗಳಲ್ಲಿ ಹಿಜಾಬ್ ಸಮವಸ್ತ್ರವಾಗಿದೆ. ಆ ಶಾಲೆಯ ಮಕ್ಕಳು ಹಿಜಾಬ್ ಧರಿಸಿ ಪರೀಕ್ಷೆ ಬರೆಯಬಹುದಾಗಿದೆ. ಆದರೆ, ಪ್ರಸ್ತುತ ವಾರ್ಷಿಕ ಪರೀಕ್ಷೆಗೆ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ಇಲ್ಲ ಎಂದು ಸರ್ಕಾರ ಸ್ಪಷ್ಟನೆ ನೀಡಿದೆ' ಎಂದು ವಿವರಿಸಿದರು.

'ಸಮವಸ್ತ್ರ ಇಲ್ಲದವರಿಗೆ ಕಡ್ಡಾಯಗೊಳಿಸಿಲ್ಲ': 'ಸಮವಸ್ತ್ರಗಳು ವಿತರಣೆಯಾಗಿರದಿದ್ದರೆ ಅಂತ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡಿಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಸ್ಪಷ್ಟಪಡಿಸಿದರು.

'ಸಮವಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನುಗಳು ಮತ್ತು ನ್ಯಾಯಾಲಯದ ಆದೇಶಗಳನ್ನು ಪಾಲಿಸಲಾಗುತ್ತಿದೆ' ಎಂದರು.



ವಿಧಾನಪರಿಷತ್‌ನಲ್ಲಿ ಸೋಮವಾರ ಬಿಜೆಪಿಯ ಲಕ್ಷ್ಮಣ್ ಸವದಿ ಮಾತನಾಡಿದರು. ಸಚಿವರಾದ ಉಮೇಶ ವಿ. ಕತ್ತಿ, ಬಿ.ಸಿ. ನಾಗೇಶ್, ಸುನೀಲ್ ಕುಮಾರ್, ಸದಸ್ಯರಾದ ಭಾರತಿ ಶೆಟ್ಟಿ, ಎಸ್.ವಿ. ಸಂಕನೂರು ಇದ್ದರು –ಪ್ರಜಾವಾಣಿ ಚಿತ್ರ

ಪರಿಷತ್ ಸದಸ್ಯರಿಗೆ ಸವದಿ ಪಾಠ!

ಸದಾ ಶಿಕ್ಷಕರ ಬಗ್ಗೆ ಮೃದು ಧೋರಣೆ ತೋರುವ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರಿಗೆ ಬಿಜೆಪಿಯ ಲಕ್ಷ್ಮಣ್ ಸವದಿ ತಮ್ಮದೇ ಆದ ಶೈಲಿಯಲ್ಲಿ ಪಾಠ ಮಾಡಿದರು.

ಮೌಲ್ಯಮಾಪನ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಬೇರೆ ಸರ್ಕಾರಿ ನೌಕರರು ಇದೇ ರೀತಿಯ ತಪ್ಪು ಮಾಡಿದ್ದರೆ ತಕ್ಷಣವೇ ಅಮಾನತುಗೊಳಿಸಿ ಎಂದು ಈ ಸದಸ್ಯರು ಒತ್ತಾಯಿಸುತ್ತಿದ್ದರು. ಆದರೆ, ಶಿಕ್ಷಕರು ಇವರ ಮತದಾರರಾಗಿರುವುದರಿಂದ ಅವರ ವಿರುದ್ಧ ಕ್ರಮಕೈಗೊಳ್ಳುವುದನ್ನು ಒತ್ತಾಯಿಸುತ್ತಿಲ್ಲ, ಮಾಸ್ತರ್‌ಗಳನ್ನು ರಕ್ಷಣೆ ಮಾಡಲು ಇವರೇ ನಿಂತಿದ್ದಾರೆ' ಎಂದು ಛೇಡಿಸಿದರು.

ಸುದ್ದಿ 2 ನಿಮಿಷ

ಕಾಳಸಂತೆಯಲ್ಲಿ ಡೀಸೆಲ್ ಮಾರಾಟ: ಮರಿತಿಬ್ಬೇಗೌಡ

ಬೆಂಗಳೂರು: 'ಹಡಗುಗಳಿಗೆ ಬಳಸುವ ಡೀಸೆಲ್ ಅನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ' ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಅವರು ಚಿತ್ರಗಳ ಸಹಿತ ಆರೋಪಿಸಿದರು.

ವಿಧಾನಪರಿಷತ್‌ನಲ್ಲಿ ಸೋಮವಾರ ಪ್ರಶ್ನೋತ್ತರ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ಮನೆಗಳು ಮತ್ತು ಶಾಲೆಗಳ ಬಳಿಯೇ ವಾಹನಗಳಿಗೆ ಲಾರಿಗಳಿಂದ ನೇರವಾಗಿ ಡೀಸೆಲ್ ಭರ್ತಿ ಮಾಡಲಾಗುತ್ತಿದೆ. ಇದು ಅಸುರಕ್ಷಿತವೂ ಹೌದು. ಆಹಾರ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳ ಭ್ರಷ್ಟ ಅಧಿಕಾರಿಗಳಿದ್ದಾರೆ. ಇವರಿಂದಾಗಿ ಅಕ್ರಮಗಳು ನಡೆಯುತ್ತಿವೆ' ಎಂದು ಆರೋಪಿಸಿದರು.

'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಗೊಂದಿ ಗ್ರಾಮದಲ್ಲಿರುವ ತೈಲ ಕಂಪನಿಗಳ ದಾಸ್ತಾನುಗಾರರಿಂದ ಬಂಕ್‌ಗಳಿಗೆ ಸರಬರಾಜು ಮಾಡುವ ಟ್ಯಾಂಕರ್‌ಗಳಲ್ಲಿ ಬೇರೆ ಟ್ಯಾಂಕ್ ಅಳವಡಿಸಿ ಅಕ್ರಮಗಳನ್ನು ನಡೆಸಲಾಗಿದೆ. ಆದರೆ, ಇಲಾಖೆಯ ಅಧಿಕಾರಿ ಕುಮಾರ್ ಎನ್ನುವವರು ದೂರು ದಾಖಲಿಸಲು ವಿಳಂಬ ಮಾಡಿದರು. 'ಇಂತಹ ಅಕ್ರಮಗಳಿಂದ ಪೆಟ್ರೋಲ್ ಡೀಲರ್‌ಗಳಿಗೂ ಮತ್ತು ಸರ್ಕಾರದ ಬೊಕ್ಕಸಕ್ಕೂ ಅಪಾರ ನಷ್ಟವಾಗುತ್ತಿದೆ' ಎಂದರು.

'ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಲಾಗುವುದು' ಎಂದು ಸಚಿವ ಉಮೇಶ ಕತ್ತಿ ಭರವಸೆ ನೀಡಿದರು.



'ಆಯುಷ್ ವೈದ್ಯರ ಸಮಸ್ಯೆ ನಿವಾರಣೆಗೆ ತಜ್ಞರ ಸಮಿತಿ'

ಬೆಂಗಳೂರು: ಒಂದೇ ಸೂರಿನಡಿ ಆಯುಷ್ ವೈದ್ಯ ಪದ್ಧತಿಯ ಎಲ್ಲ ವಿಭಾಗಗಳ ಸೇವೆಯನ್ನೂ ಒದಗಿಸಲು ಅವಕಾಶ ಕಲ್ಪಿಸುವುದಕ್ಕೆ ಇರುವ ತೊಡಕುಗಳನ್ನು ನಿವಾರಿಸಲು ತಜ್ಞರ ಸಮಿತಿ ನೇಮಿಸಲಾಗುವುದು ಎಂದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ದೇಸೀಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿಕೊಡಲು ನೀತಿಯೊಂದನ್ನು ರೂಪಿಸುವಂತೆ ಒತ್ತಾಯಿಸಿ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಮಂಡಿಸಿದ್ದ ಖಾಸಗಿ ನಿರ್ಣಯದ ಮೇಲಿನ ಚರ್ಚೆಗೆ ಸೋಮವಾರ ಸದನದಲ್ಲಿ ಉತ್ತರಿಸಿದ ಸಚಿವರು ಈ ಭರವಸೆ ನೀಡಿದರು.

'ಒಂದೇ ಸೂರಿನಡಿ ಆಯುಷ್ ವಿಭಾಗದ ಹಲವು ಸೇವೆಗಳನ್ನು ಒದಗಿಸಲು ಹಿಂದೆ ಅವಕಾಶವಿತ್ತು. ಆದರೆ, ಒಂದೇ ಸೇವೆ ಒದಗಿಸಬೇಕೆಂಬ ನಿರ್ಬಂಧ ವಿಧಿಸಿ 2018ರಲ್ಲಿ ಕಾಯ್ದೆ ಜಾರಿಗೊಳಿಸಲಾಗಿತ್ತು. ಅದನ್ನು 2020ರಲ್ಲಿ ಹಿಂಪಡೆಯಲಾಗಿದೆ. ಕಾಯ್ದೆ ಹಿಂಪಡೆದು ಎರಡು ವರ್ಷಗಳಾದರೂ ಒಂದೇ ಸೂರಿನಡಿ ಆಯುಷ್ ವಿಭಾಗದ ವಿವಿಧ ಸೇವೆಗಳನ್ನು ಒದಗಿಸಲು ನೋಂದಣಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದ ಆಯುಷ್ ವೈದ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ವೆಂಕಟೇಶ್ ದೂರಿದರು.

ನೋಂದಣಿ ಸೇರಿದಂತೆ ಆಯುಷ್ ವೈದ್ಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅಧ್ಯಯನ ನಡೆಸಲು ತಜ್ಞರ ಸಮಿತಿ ನೇಮಕ ಮಾಡಲಾಗುವುದು. ಒಂದು ತಿಂಗಳೊಳಗೆ ವರದಿ ಪಡೆದು, ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಸಚಿವರು ಉತ್ತರಿಸಿದರು.

'ದೇಸೀಯ ಪಾರಂಪರಿಕ ವೈದ್ಯರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಕಾನೂನಿನ ವ್ಯಾಪ್ತಿಯಲ್ಲಿ ಮನ್ನಣೆ ನೀಡಬೇಕು. ಆಯುಷ್ ವೈದ್ಯರಿಗೂ ಹಲವು ಸಮಸ್ಯೆಗಳಿವೆ. ಅವುಗಳನ್ನೂ ಪರಿಹರಿಸಬೇಕು' ಎಂದು ವೆಂಕಟೇಶ್ ಒತ್ತಾಯಿಸಿದರು.

ಬಿಜೆಪಿಯ ಭಾರತಿ ಶೆಟ್ಟಿ, ರುದ್ರೇಗೌಡ, ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಸೇರಿದಂತೆ ಹಲವರು ವೆಂಕಟೇಶ್ ಅವರ ಆಗ್ರಹವನ್ನು ಬೆಂಬಲಿಸಿ ಮಾತನಾಡಿದರು.

'ತಾ.ಪಂ. ವ್ಯವಸ್ಥೆ ತೆಗೆಯಬೇಕು; ಆದರೆ ನಮಗೆ ಅಧಿಕಾರ ಇಲ್ಲ'

ಬೆಂಗಳೂರು: 'ತಾಲ್ಲೂಕು ಪಂಚಾಯಿತಿ ವ್ಯವಸ್ಥೆಯನ್ನು ಖಂಡಿತ ತೆಗೆಯಬೇಕು. ಆದರೆ, ನಮಗೆ ಅಧಿಕಾರ ಇಲ್ಲ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ ಕುರಿತ ಚರ್ಚೆಗೆ ಪ್ರತಿಕ್ರಿಯಿಸಿದ ಅವರು, 'ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಹೀಗಾಗಿ, ನಮಗೆ ಅವಕಾಶ ಇಲ್ಲ. ಅಧಿಕಾರ ಇದ್ದಿದ್ದರೆ ತೆಗೆದು ಬಿಸಾಕುತ್ತಿದ್ದೆವು' ಎಂದರು.

'ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಂದೂಡುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಈಗ ಚುನಾವಣೆಗಳನ್ನು ನಡೆಸಿದರೆ ಮೀಸಲಾತಿ ಪಟ್ಟಿಯಿಂದ ಹಿಂದುಳಿದ ವರ್ಗಗಳನ್ನು ಕೈಬಿಡಬೇಕಾಗುತ್ತದೆ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿಯೇ ಚುನಾವಣೆ ನಡೆಸಲಾಗುವುದು' ಎಂದು ತಿಳಿಸಿದರು.

ಮಸೂದೆ ಕುರಿತು ಮಾತನಾಡಿದ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ, ರಮೇಶ್ ಗೌಡ, ಕೆ.ಟಿ. ಶ್ರೀಕಂಠೇಗೌಡ, ಎಸ್.ಎಲ್. ಭೋಜೇಗೌಡ, ಮರಿತಿಬ್ಬೇಗೌಡ ಮತ್ತು ಕಾಂಗ್ರೆಸ್‌ನ ಎಸ್. ರವಿ, ಯು.ಬಿ. ವೆಂಕಟೇಶ್, ಪಿ.ಆರ್. ರಮೇಶ್ ಅವರು, 'ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡುವ ದುರುದ್ದೇಶದಿಂದಲೇ ಈ ಮಸೂದೆಗೆ ತಿದ್ದುಪಡಿ ಮಾಡಲಾಗುತ್ತಿದೆ. ತಾಲ್ಲೂಕು ಪಂಚಾಯಿತಿಗಳು ಸಂಪೂರ್ಣ ನಿಷ್ಕ್ರಿಯವಾಗಿವೆ. ಕೇವಲ ಹೆಸರಿಗೆ ಉಳಿದಿವೆ. ಲೆಕ್ಕಕ್ಕಿಲ್ಲದಂತಿರುವ ತಾಲ್ಲೂಕು ಪಂಚಾಯಿತಿಗಳನ್ನು ಮುಚ್ಚಿ ಇಲ್ಲವೇ ಬಲ ತುಂಬಿ' ಎಂದು ಪ್ರತಿಪಾದಿಸಿದರು.

'ಸಹಕಾರ ಸಂಸ್ಥೆಗಳ ಅಧ್ಯಕ್ಷ ಅಥವಾ ಸದಸ್ಯ ಸ್ಥಾನದಿಂದ ವಜಾಗೊಂಡವರು ಕೂಡ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡದಿರುವುದು ಸಹಸರಿ ಇಲ್ಲ. ಈ ಅಂಶವನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಇದೇ ರೀತಿಯ ಕಾಯ್ದೆಯನ್ನು ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗೆ ರೂಪಿಸಿ' ಎಂದು ಕಾಂಗ್ರೆಸ್‌ನ ರವಿ ಮತ್ತು ಜೆಡಿಎಸ್‌ನ ಮರಿತಿಬ್ಬೇಗೌಡ ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಅಂಗೀಕಾರವಾದ ಈ ಮಸೂದೆಗೆ ಚರ್ಚೆ ಬಳಿಕ ಅನುಮೋದನೆ ನೀಡಲಾಯಿತು.

ಗಂಗಾ ಕಲ್ಯಾಣ ಯೋಜನೆ ಸಮಗ್ರ ತನಿಖೆ: ಸಚಿವ ಕೋಟ ಶ್ರೀನಿವಾಸ ಪೂಜಾರಿ

ಭೋವಿ ನಿಗಮದಲ್ಲಿ ಅವ್ಯವಹಾರ: ಎಸಿಬಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಭ್ರಷ್ಟಾಚಾರ ತನಿಖಾ ದಳದಿಂದ (ಎಸಿಬಿ) ತನಿಖೆ ನಡೆಸಲಾಗುವುದು' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ವಿಧಾನಸಭೆಯಲ್ಲಿ ಇಲಾಖಾ ಬೇಡಿಕೆ ಮೇಲಿನ ಚರ್ಚೆಗೆ ಸೋಮವಾರ ಉತ್ತರ ನೀಡಿದ ಅವರು, 'ಅವ್ಯವಹಾರಕ್ಕೆ ಸಂಬಂಧಿಸಿದಂತೆ ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿತ್ತು. ಅವರು ಹೈಕೋರ್ಟ್ ಮೊರೆ ಹೋಗಿ ತಡೆಯಾಜ್ಞೆ ತಂದರು. ಕ್ರಮ ಕೈಗೊಂಡರೂ ತಡೆಯಾಜ್ಞೆ ತರುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿಯ ಗೂಳಿಹಟ್ಟಿ ಶೇಖರ್, 'ಭೋವಿ ಅಭಿವೃದ್ಧಿ ನಿಗಮದಲ್ಲಿ ₹400 ಕೋಟಿ ಅವ್ಯವಹಾರ ನಡೆದಿದೆ. ಇದರಲ್ಲಿ ವ್ಯವಸ್ಥಾಪಕ ನಿರ್ದೇಶಕರು ಭಾಗಿಯಾಗಿದ್ದಾರೆ. ಅವರನ್ನು ಸರ್ಕಾರ ವರ್ಗಾವಣೆ ಮಾಡಿತ್ತು. ಆದರೆ, ಅಧಿಕಾರ ಸ್ವೀಕರಿಸಲು ಬಂದ ಅಧಿಕಾರಿಯ ಮೇಲೆಯೇ ಮಹಿಳಾ ಅಧಿಕಾರಿ ಅತ್ಯಾಚಾರದ ಆರೋಪ ಮಾಡಿದರು' ಎಂದು ದೂರಿದರು.

ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, 'ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಬೋರ್‌ವೆಲ್ ಕೊರೆಸಲು ₹93 ಸಾವಿರ ವೆಚ್ಚ ಮಾಡಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ₹1.80 ಲಕ್ಷ ಖರ್ಚು ಮಾಡಲಾಗುತ್ತಿದೆ. ಒಂದೊಂದು ಇಲಾಖೆಯಲ್ಲಿ ಒಂದೊಂದು ರೀತಿ ವೆಚ್ಚ ಏಕೆ' ಎಂದು ಪ್ರಶ್ನಿಸಿದರು. ಗಂಗಾ ಕಲ್ಯಾಣ ಯೋಜನೆಯ ಅಕ್ರಮದ ಬಗ್ಗೆ ಹಲವು ಸದಸ್ಯರು ಪ್ರಸ್ತಾಪಿಸಿದರು.

ಇದಕ್ಕೆ ಉತ್ತರ ನೀಡಿದ ಸಚಿವರು, 'ಗಂಗಾ ಕಲ್ಯಾಣ ಯೋಜನೆಯ ಅವ್ಯವಹಾರದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು' ಎಂದು ಪ್ರಕಟಿಸಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಹಂಚಿಕೆಯಾಗುತ್ತಿರುವ ಅನುದಾನ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ' ಎಂದು ಗಮನ ಸೆಳೆದರು.

'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಯೋಜನೆಗೆ ₹89 ಸಾವಿರ ಕೋಟಿ ಅನುದಾನ ನೀಡಲಾಗಿತ್ತು. 2018–19ರಲ್ಲಿ ₹29,600 ಕೋಟಿ ಒದಗಿಸಲಾಗಿತ್ತು. ರಾಜ್ಯದ ಬಜೆಟ್ ಗಾತ್ರ ₹72 ಸಾವಿರ ಕೋಟಿ ಜಾಸ್ತಿ ಆಗಿದೆ. ಆದರೆ, ಎಸ್‌ಸಿಎಸ್‌ಪಿ–ಟಿಎಸ್‌ಪಿ ಯೋಜನೆಗೆ ನೀಡುತ್ತಿರುವ ಅನುದಾನ ಕಡಿಮೆ ಆಗುತ್ತಿದೆ. ಈ ವರ್ಷ ₹28 ಸಾವಿರ ಕೋಟಿಯಷ್ಟೇ ಒದಗಿಸಲಾಗಿದೆ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಸೋಪ್ ಕಿಟ್‌ಗಳನ್ನು ಸಹ ನಿಲ್ಲಿಸಲಾಗಿದೆ. ಇದು ಅನ್ಯಾಯ ಅಲ್ಲವೇ' ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನ ಬಿ.ಎಸ್.ಸುರೇಶ್, 'ಶಿವಮೊಗ್ಗದ ಹರ್ಷ ಕುಟುಂಬಕ್ಕೆ ₹25 ಲಕ್ಷ ಪರಿಹಾರ ನೀಡಲಾಗಿದೆ. ಆದರೆ, ಬೆಳ್ತಂಗಡಿಯ ಕುಟುಂಬಕ್ಕೆ ನಯಾಪೈಸೆ ನೆರವು ನೀಡಿಲ್ಲ. ಈ ಕುಟುಂಬಕ್ಕೂ ಸರ್ಕಾರದಿಂದ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

'ಅಸ್ಪೃಶ್ಯತೆ ನಿವಾರಣೆಗೆ ವಿನಯ ಸಾಮರಸ್ಯ ಆಂದೋಲನ'

ರಾಜ್ಯದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ವಿನಯ ಸಾಮರಸ್ಯ ಆಂದೋಲನ ಹಮ್ಮಿಕೊಳ್ಳಲಾಗುತ್ತಿದ್ದು, ಶೀಘ್ರ ಮುಖ್ಯಮಂತ್ರಿಯವರು ಚಾಲನೆ ನೀಡಲಿದ್ದಾರೆ ಎಂದು ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

'ಕೊಪ್ಪಳದ ದಲಿತ ಸಮುದಾಯದ ಎರಡು ವರ್ಷದ ಬಾಲಕ ವಿನಯ್ ದೇವಸ್ಥಾನಕ್ಕೆ ಪ್ರವೇಶಿಸಿದ. ಇದಕ್ಕಾಗಿ ಆತನ ಪೋಷಕರಿಗೆ ₹25 ಸಾವಿರ ದಂಡ ವಿಧಿಸಲಾಯಿತು. ಈ ಬಾಲಕನ ಹೆಸರಿನಲ್ಲಿ ವಿನಯ ಸಾಮರಸ್ಯ ಯೋಜನೆ ಆರಂಭಿಸಲಾಗಿದೆ. ಆ ಬಾಲಕನ ವಿದ್ಯಾಭ್ಯಾಸದ ವೆಚ್ಚವನ್ನು ಸರ್ಕಾರವೇ ಭರಿಸಲಿದೆ' ಎಂದರು.

'ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಆಗಿಲ್ಲ'

ಕೆ ಶಿಪ್–4 ಯೋಜನೆಗೆ ಸರ್ವೆ: ಸಿ.ಸಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ ಶಿಪ್–4 ಹಂತದ ಯೋಜನೆಗೆ ಶೀಘ್ರ ಸರ್ವೆ ನಡೆಸಲಾಗುವುದು. ಬಾಹ್ಯ ಅನುದಾನದ ನೆರವಿನಿಂದ ಈ ಯೋಜನೆ ಅನುಷ್ಠಾನ ಮಾಡಲಾಗುವುದು ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಇಲಾಖಾ ಬೇಡಿಕೆ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, 'ಟೋಲ್‌ಗಳಲ್ಲಿ ಗುತ್ತಿಗೆ ಪಡೆದಿರುವ ಏಜೆನ್ಸಿಯ ಸಿಬ್ಬಂದಿಯ ವರ್ತನೆ ಬಗ್ಗೆ ಅನೇಕ ದೂರುಗಳಿವೆ. ಈ ಬಗ್ಗೆ ಈ ಹಿಂದೆ ಸಭೆ ನಡೆಸಿ ಸೂಚನೆ ನೀಡಲಾಗಿತ್ತು. ಸಿಬ್ಬಂದಿಯ ವರ್ತನೆಯಲ್ಲಿ ಸ್ವಲ್ಪ ಬದಲಾವಣೆ ಆಗಿತ್ತು. ಇನ್ನೂ ಕೆಲವೆಡೆ ಸಮಸ್ಯೆ ಇದೆ. ವರ್ತನೆ ಸರಿಪಡಿಸಿಕೊಳ್ಳದಿದ್ದರೆ ಗುತ್ತಿಗೆ ಕಂಪನಿಯ ಪರವಾನಗಿ ರದ್ದುಪಡಿಸಲು ಪತ್ರ ಬರೆಯಲಾಗುವುದು' ಎಂದು ಹೇಳಿದರು.

'ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ಯಾವುದೇ ತಾರತಮ್ಯ ಆಗಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಸರಾಸರಿ ₹150 ಕೋಟಿ, ಜೆಡಿಎಸ್ ಕ್ಷೇತ್ರಗಳಿಗೆ ಸರಾಸರಿ ₹148 ಕೋಟಿ, ಬಿಜೆಪಿ ಕ್ಷೇತ್ರಗಳಿಗೆ ಸರಾಸರಿ ₹122 ಕೋಟಿ ಅನುದಾನ ನೀಡಲಾಗಿತ್ತು. ಮೈತ್ರಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಕ್ಷೇತ್ರಗಳಿಗೆ ಸರಾಸರಿ ₹84 ಕೋಟಿ, ಜೆಡಿಎಸ್ ಕ್ಷೇತ್ರಗಳಿಗೆ ಸರಾಸರಿ ₹134 ಕೋಟಿ, ಬಿಜೆಪಿ ಕ್ಷೇತ್ರಗಳಿಗೆ ₹63 ಕೋಟಿ ಹಂಚಿಕೆ ಮಾಡಲಾಗಿತ್ತು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ₹19 ಕೋಟಿ, ಜೆಡಿಎಸ್ ಕ್ಷೇತ್ರಗಳಿಗೆ ₹21 ಕೋಟಿ, ಬಿಜೆಪಿ ಕ್ಷೇತ್ರಗಳಿಗೆ ಸರಾಸರಿ ₹42 ಕೋಟಿ ಹಂಚಿಕೆ ಮಾಡಲಾಗಿದೆ' ಎಂದು ಹೇಳಿದರು.

ಅಪೆಂಡಿಕ್ಸ್ ಸಿ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಕಾಂಗ್ರೆಸ್‌ನ ಶಿವಾನಂದ ಪಾಟೀಲ, ಯು.ಟಿ. ಖಾದರ್, ಟಿ.ಡಿ.ರಾಜೇಗೌಡ ಮತ್ತಿತರರು ದೂರಿದರು.

ಸಿ.ಸಿ.ಪಾಟೀಲ, 'ಹಿಂದಿನ ಸರ್ಕಾರದ ಅವಧಿಯಲ್ಲಿ ಯೋಜನೆಗೆ ಲಭ್ಯವಿದ್ದ ಅನುದಾನ ₹500 ಕೋಟಿಯಾದರೆ, ₹5 ಸಾವಿರ ಕೋಟಿಯ ಯೋಜನೆ ರೂಪಿಸಲಾಗಿತ್ತು. ಹೀಗಾಗಿ, ಹೆಚ್ಚುವರಿ ಹೊರೆ ಆಗಿತ್ತು. ಅಪೆಂಡಿಕ್ಸ್– ಸಿಯಲ್ಲೂ ಹೀಗೆ ಆಗಿತ್ತು. ಇಂತಹ ಲೋಪಗಳನ್ನು ಸರಿಪಡಿಸಲು ನಮ್ಮ ಸರ್ಕಾರ ಕ್ರಮ ಕೈಗೊಂಡಿದೆ' ಎಂದರು.

'ಕೆಲವು ಗುತ್ತಿಗೆದಾರರು ಯೋಜನಾ ಮೊತ್ತಕ್ಕಿಂತ ಶೇ 30 ಕಡಿಮೆ ಮೊತ್ತಕ್ಕೆ ಗುತ್ತಿಗೆ ಪಡೆಯುತ್ತಿದ್ದಾರೆ. ಕಡಿಮೆ ಮೊತ್ತದಲ್ಲಿ ಗುಣಮಟ್ಟದ ಕೆಲಸ ಮಾಡಲು ಸಾಧ್ಯವೇ ಎಂಬುದು ಪ್ರಶ್ನೆ. ಆದರೆ, ಕಡಿಮೆ ಮೊತ್ತ ನಮೂದಿಸುವುದನ್ನು ತಡೆಯಲು ಆಗುವುದಿಲ್ಲ. ಅವರು ನಡೆಸುವ ಕಾಮಗಾರಿ ಮೇಲೆ ನಿಗಾ ಇಡಲಾಗುವುದು' ಎಂದು ಅವರು ಹೇಳಿದರು.



ವಿಧಾನಸಭೆಯಲ್ಲಿ ಸೋಮವಾರ ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿದರು. ಸಚಿವರಾದ ಗೋವಿಂದ ಕಾರಜೋಳ, ಶಾಸಕ ವೆಂಕಟರಮಣಪ್ಪ, ಸಚಿವ ಸಿ.ಸಿ. ಪಾಟೀಲ ಹಾಗೂ ಶಾಸಕ ಶಿವಣ್ಣ ಇದ್ದಾರೆ

ಕೆಪಿಎಸ್‌ಸಿ: ಏ.4ಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: 2011ನೇ ಸಾಲಿನ ಕೆಪಿಎಸ್‌ಸಿ ನೇಮಕದಲ್ಲಿ 362 ಅಭ್ಯರ್ಥಿಗಳ ಆಯ್ಕೆ ಸಿಂಧುಗೊಳಿಸುವ ಸರ್ಕಾರದ ತೀರ್ಮಾನ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಏಪ್ರಿಲ್ 4ಕ್ಕೆ ಮುಂದೂಡಿದೆ.

'ಈ ಪ್ರಕರಣದಲ್ಲಿ ನಮ್ಮನ್ನೂ ಪ್ರತಿವಾದಿಗಳೆಂದು ಪರಿಗಣಿಸಬೇಕು' ಎಂದು ಅಯ್ಕೆಯಾಗಿದ್ದ ಅಭ್ಯರ್ಥಿಗಳು ಸಲ್ಲಿಸಿದ್ದ ಮಧ್ಯಂತರ ಮನವಿಗಳನ್ನು ಸದಸ್ಯರಾದ ನಾರಾಯಣ್ ಮತ್ತು ಶಿವಶೈಲಂ ಅವರಿದ್ದ ನ್ಯಾಯಪೀಠ ಮಾನ್ಯ ಮಾಡಿ, 'ಆಕ್ಷೇಪಣೆ ಅಥವಾ ಹೇಳಿಕೆಗಳನ್ನು ಸಲ್ಲಿಸುವುದಿದ್ದರೆ ಸಲ್ಲಿಸಿ' ಎಂದು ನಿರ್ದೇಶಿಸಿತು.

'ಅರ್ಜಿದಾರರ ಮನವಿಯಲ್ಲಿನ ಮಧ್ಯಂತರ ಆದೇಶದ ಬಗ್ಗೆ ನಿರ್ಧರಿಸುವತನಕ ಸರ್ಕಾರವು ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಿಸಬಾರದು, ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಮೌಖಿಕವಾಗಿ ಸೂಚಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿಕೆ

'ಕೆಪಿಎಸ್‌ಸಿ: ಆಕ್ಷೇಪಣೆ ಆಲಿಸಿ ನಿಯಮ ಬದಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಪರೀಕ್ಷೆಯಲ್ಲಿ ಸಂದರ್ಶನದ ಅಂಕ ಕಡಿತ ಮತ್ತು 'ಬಿ' ಶ್ರೇಣಿಯ ಹುದ್ದೆಗಳ ಭರ್ತಿ ಪ್ರಕ್ರಿಯೆಯಲ್ಲಿನ ಬದಲಾವಣೆ ಕುರಿತು ನಿಯಮ ತಿದ್ದುಪಡಿ ಕರಡು ಪ್ರಕಟಿಸಿದ್ದು, ಸಾರ್ವಜನಿಕರ ಆಕ್ಷೇಪಣೆ ಆಲಿಸಿದ ಬಳಿಕ ಜಾರಿಗೊಳಿಸಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ನಿಯಮ 330ರಡಿ ವಿಷಯ ಪ್ರಸ್ತಾಪಿಸಿ ಮಾತನಾಡಿದ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ, ಕೆ.ಟಿ. ಶ್ರೀಕಂಠೇಗೌಡ, ಕಾಂಗ್ರೆಸ್‌ನ ಪಿ.ಆರ್. ರಮೇಶ್, ಬಿಜೆಪಿಯ ರುದ್ರೇಗೌಡ, ಭಾರತಿ ಶೆಟ್ಟಿ, ಸಂದರ್ಶನದ ಅಂಕ ಕಡಿತ ಮಾಡುವ ತೀರ್ಮಾನ ಕೈಬಿಡುವಂತೆ ಆಗ್ರಹಿಸಿದರು.

'ಸಂದರ್ಶನದ ಅಂಕ ಕಡಿತದಿಂದ ಗ್ರಾಮೀಣ ಅಭ್ಯರ್ಥಿಗಳು ಮತ್ತು ದುರ್ಬಲ ವರ್ಗಗಳ ಅಭ್ಯರ್ಥಿಗಳಿಗೆ ತೊಂದರೆ ಆಗಲಿದೆ. 'ಬಿ' ಶ್ರೇಣಿಯ ಹುದ್ದೆಗಳ ಭರ್ತಿಯಲ್ಲಿ ಸಂದರ್ಶನ ಕೈಬಿಡುವ ನಿರ್ಧಾರವೂ ಸರಿಯಲ್ಲ. ಎರಡನ್ನೂ ವಾಪಸ್ ಪಡೆಯಬೇಕು. ಪಿ.ಸಿ. ಹೋಟಾ ಸಮಿತಿ ವರದಿಯನ್ನು ಜಾರಿಗೊಳಿಸುವ ಮೂಲಕ ಕೆಪಿಎಸ್‌ಸಿಯಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು' ಎಂದು ಒತ್ತಾಯಿಸಿದರು.

'ಸಂದರ್ಶನಕ್ಕೆ 200 ಅಂಕ ನಿಗದಿ ಮಾಡಿದ್ದಾಗ ದೊಡ್ಡ ಪ್ರಮಾಣದ ಭ್ರಷ್ಟಾಚಾರದ ಆರೋಪ ಕೇಳಿಬರುತ್ತಿತ್ತು. ಈಗಲೂ ಅದೇ ಕಾರಣಕ್ಕಾಗಿ ಸಂದರ್ಶನದ ಅಂಕಗಳನ್ನು 25ಕ್ಕೆ ಕಡಿತಗೊಳಿಸಲು ತೀರ್ಮಾನಿಸಲಾಗಿದೆ. 'ಬಿ' ಶ್ರೇಣಿಯ ಎಲ್ಲ ಹುದ್ದೆಗಳ ಭರ್ತಿಗೂ 'ಸಿ' ಶ್ರೇಣಿಯ ಹುದ್ದೆಗಳ ಭರ್ತಿಯ ಪರೀಕ್ಷಾ ಮಾದರಿ ಅನ್ವಯಿಸುವುದಿಲ್ಲ. ಗೆಜೆಟೆಡ್ ಹುದ್ದೆಗಳ ಭರ್ತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ' ಎಂದು ಮಾಧುಸ್ವಾಮಿ ಉತ್ತರಿಸಿದರು.

'ಕರ್ನಾಟಕ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997'ಕ್ಕೆ ತಿದ್ದುಪಡಿಗಾಗಿ ಕರಡು ಅಧಿಸೂಚನೆ ಹೊರಡಿಸಿ, ಆಕ್ಷೇಪಣೆ ಆಹ್ವಾನಿಸಲಾಗಿದೆ' ಎಂದರು.

ಎರಡೂವರೆ ವರ್ಷದಲ್ಲಿ ₹47,343 ಕೋಟಿ ಖರ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಎರಡೂವರೆ ವರ್ಷಗಳಲ್ಲಿ ವಿವಿಧ ನೀರಾವರಿ ಯೋಜನೆಗಳಿಗೆ ಒಟ್ಟು ₹47,343 ಕೋಟಿ ಖರ್ಚು ಮಾಡಿದ್ದೇವೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಇಲಾಖೆ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ಕೋವಿಡ್ ಮತ್ತು ಆರ್ಥಿಕ ಸಂಕಷ್ಟದ ಮಧ್ಯೆಯೂ ಇಷ್ಟು ದೊಡ್ಡ ಮೊತ್ತವನ್ನು ಖರ್ಚು ಮಾಡಿದ್ದೇವೆ ಎಂದರು.

2018 ರ ಬಳಿಕ ಸುಮಾರು ನಾಲ್ಕು ಸಾವಿರ ಸಣ್ಣ ಗುತ್ತಿಗೆದಾರರ ಬಿಲ್‌ಗಳನ್ನು ಪಾವತಿ ಮಾಡಿದ್ದೇವೆ. ₹50 ಲಕ್ಷದಿಂದ ₹1 ಕೋಟಿವರೆಗಿನ ಕಾಮಗಾರಿಗಳನ್ನು ಮಾಡಿದ ಗುತ್ತಿಗೆದಾರರು ಸಂಕಷ್ಟದಲ್ಲಿದ್ದರು. ಮಂಡ್ಯದಿಂದ ಸಣ್ಣ ಗುತ್ತಿಗೆದಾರರೊಬ್ಬರು ತಮ್ಮ ಮಗಳ ಮದುವೆಯ ಆಹ್ವಾನ ಪತ್ರಿಕೆ ನೀಡಲು ಬಂದಿದ್ದರು. ತಮ್ಮ ಬಾಕಿ ಇರುವ ₹20 ಲಕ್ಷ ಬಿಲ್ ಪಾವತಿ ಮಾಡಿದರೆ ಮಾತ್ರ ಮಗಳ ಮದುವೆ ಮಾಡಲು ಸಾಧ್ಯ ಎಂದರು. ಇದರಿಂದ ನನ್ನ ಮನಸ್ಸು ಕಲಕಿತು. ಸರ್ಕಾರಕ್ಕೆ ಆರ್ಥಿಕ ಸಂಕಷ್ಟ ಇದ್ದರೂ ಸಣ್ಣ ಗುತ್ತಿಗೆದಾರರ ಬಿಲ್ ಪಾವತಿ ಮಾಡಲು ನಿರ್ಧರಿಸಲಾಯಿತು ಎಂದು ವಿವರಿಸಿದರು.

ಯುಕೆಪಿ3 ರಾಷ್ಟ್ರೀಯ ಯೋಜನೆ ಸಾಧ್ಯವಿಲ್ಲ: ಕೃಷ್ಣಾ ಮೇಲ್ದಂಡೆ 3 ನೇ ಹಂತದ ಯೋಜನೆಯನ್ನು 'ರಾಷ್ಟ್ರೀಯ ಯೋಜನೆ' ಎಂದು ಘೋಷಿಸಬೇಕು ಎಂದು ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಾರಜೋಳ, 'ಈ ಯೋಜನೆ ಬಗ್ಗೆ ಮಹಾರಾಷ್ಟ್ರದ ತಕರಾರು ಇಲ್ಲದಿದ್ದರೂ, ಆಂಧ್ರ ಮತ್ತು ತೆಲಂಗಾಣ ರಾಜ್ಯಗಳು ಸುಪ್ರೀಂಕೋರ್ಟ್‌ನಲ್ಲಿ ದಾವೆ ಹೂಡಿವೆ. ನ್ಯಾಯಾಲಯದಲ್ಲಿ ಅಂತರ್ ರಾಜ್ಯ ವ್ಯಾಜ್ಯ ಇದ್ದರೆ ಅಂತಹ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಸಾಧ್ಯವಾಗುವುದಿಲ್ಲ' ಎಂದು ಹೇಳಿದರು.

ಒಂದು ಶತಮಾನ ಬೇಕೇ?: ಕರ್ನಾಟಕದ ನೀರಾವರಿ ಯೋಜನೆಗಳ ಪೈಕಿ ಶೇ 72 ರಷ್ಟು ಭಾಗ ಕೃಷ್ಣಾ ಕಣಿವೆ ಯೋಜನೆಗಳೇ ಆಗಿವೆ. ಇವುಗಳನ್ನು ಪೂರ್ಣಗೊಳಿಸಲು ಸುಮಾರು ₹ 1ಲಕ್ಷ ಕೋಟಿಯಾದರೂ ಬೇಕಾಗಬಹುದು. ಈಗ ಸರ್ಕಾರ ಬಿಡುಗಡೆ ಮಾಡುವ ಮೊತ್ತ ನೋಡಿದರೆ ಒಂದು ಶತಮಾನ ಆದರೂ ಯೋಜನೆಗಳನ್ನು ಪೂರ್ಣಗೊಳಿಸುವುದು ಸಾಧ್ಯವಿಲ್ಲ. ಇವುಗಳನ್ನು ಬೇಗನೇ ಪೂರ್ಣಗೊಳಿಸಲು ರಾಷ್ಟ್ರೀಯ ಯೋಜನೆ ಎಂದು ಘೋಷಿಸಬೇಕು ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಒತ್ತಾಯಿಸಿದರು.

ಕೃಷ್ಣಾ– ಕಾವೇರಿ ಜಟಾಪಟಿ

ಜಲಸಂಪನ್ಮೂಲ ಸಚಿವರ ಉತ್ತರದ ವೇಳೆ ಉತ್ತರ ಕರ್ನಾಟಕ ಭಾಗದ ಶಾಸಕರೇ ಹೆಚ್ಚಿನ ಉಪಪ್ರಶ್ನೆಗಳನ್ನು ಕೇಳುತ್ತಿದ್ದರು. ಇದರಿಂದ ರೇಗಿದ ಜೆಡಿಎಸ್‌ನ ಕೆ.ಎಂ.ಶಿವಲಿಂಗೇಗೌಡ, 'ನೀರಾವರಿ ಯೋಜನೆ ಎಂದರೆ ಕೃಷ್ಣಾ ಮೇಲ್ದಂಡೆ ಯೋಜನೆ ಮಾತ್ರನಾ' ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಕರ್ನಾಟಕ ಭಾಗದ ಬಿಜೆಪಿ ಮತ್ತು ಕಾಂಗ್ರೆಸ್‌ನ ಆಕ್ಷೇಪ ವ್ಯಕ್ತಪಡಿಸಿದರು. ಇದು ಪರಸ್ಪರ ವಾಗ್ವಾದಕ್ಕೂ ಕಾರಣವಾಯಿತು.

ಶಿವಲಿಂಗೇಗೌಡರಿಗೆ ತಿರುಗೇಟು ನೀಡಿದ ಶಿವಾನಂದ ಪಾಟೀಲ ಅವರು, 'ಗೌಡರೇ, ಮೈಸೂರು ಮಹಾರಾಜರು ಕನ್ನಂಬಾಡಿ ಕಟ್ಟಿ ಹೋಗಿದ್ದಕ್ಕೆ ನೀವು ಬದುಕಿದ್ದೀರಿ. ನಮ್ಮ ಭಾಗದಲ್ಲಿ ಆ ರೀತಿ ಯಾರೂ ಕಟ್ಟಿಲ್ಲ' ಎಂದರು. ಆಗ ಮಧ್ಯ ಪ್ರವೇಶಿಸಿದ ಸಚಿವ ಕಾರಜೋಳ, 'ನಮ್ಮ ಸರ್ಕಾರ ಎಲ್ಲಾ ಭಾಗವನ್ನು ಸಮಾನವಾಗಿ ನೋಡುತ್ತದೆ' ಎಂದು ಹೇಳಿ ಶಾಸಕರನ್ನು ಸಮಾಧಾನಪಡಿಸಿದರು.

261 ಎಕರೆ ಭೂಕಬಳಿಕೆ: ಎಸಿಬಿ ತನಿಖೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿಯ ಶಾಂತನಪುರ ಗ್ರಾಮದ ಸರ್ವೆ ನಂಬರ್ 9ರಲ್ಲಿನ 261 ಎಕರೆ 13 ಗುಂಟೆ ಜಮೀನು ಕಬಳಿಕೆಯಾಗಿರುವ ಆರೋಪದ ಕುರಿತು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ತನಿಖೆಗೆ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

ಈ ಪ್ರಕರಣದ ಕುರಿತು ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯ ರಘುನಾಥ ರಾವ್ ಮಲ್ಕಾಪೂರೆ ಅವರ ಪ್ರಶ್ನೆಗೆ ಫೆಬ್ರುವರಿ 16ರಂದು ಉತ್ತರ ನೀಡಿದ್ದ ಕಂದಾಯ ಸಚಿವ ಆರ್. ಅಶೋಕ, ಎಸಿಬಿ ತನಿಖೆಗೆ ಆದೇಶಿಸುವ ಭರವಸೆ ನೀಡಿದ್ದರು. ಮಾರ್ಚ್ 21ರಂದು ಆದೇಶ ಹೊರಡಿಸಲಾಗಿದೆ.

ಪರಿಶಿಷ್ಟ ಜಾತಿಯ ಹಲವರಿಗೆ ಸರ್ಕಾರದಿಂದ ಈ ಜಮೀನು ಮಂಜೂರಾಗಿತ್ತು. ನೈಜ ಫಲಾನುಭವಿಗಳನ್ನು ಹೊರ ಹಾಕಿ ಬೇರೆಯವರು ಸರ್ಕಾರಿ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿ ಖಾತೆ ಮಾಡಿಸಿಕೊಂಡಿರುವುದು ಕಂಡುಬಂದಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ವರದಿ ಸಲ್ಲಿಸಿದ್ದರು.

ಶೇ 40ರಷ್ಟು ಕಮಿಷನ್: ಈಶ್ವರಪ್ಪ ವಿರುದ್ಧ ಪ್ರಧಾನಿ, ಕೇಂದ್ರ ಸಚಿವರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ತಾಲ್ಲೂಕಿನ ಹಿಂಡಲಗಾ ವ್ಯಾಪ್ತಿಯಲ್ಲಿ ₹ 4 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗಳ ಬಿಲ್ ಬಿಡುಗಡೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರು ಸಹವರ್ತಿಗಳ ಮೂಲಕ ಶೇ 40ರಷ್ಟು ಕಮಿಷನ್‌ಗೆ ಬೇಡಿಕೆ ಇಟ್ಟಿದ್ದಾರೆ. ಕೊಡದಿರುವುದರಿಂದ ಬಿಲ್ ಸಂದಾಯವಾಗಿಲ್ಲ' ಎಂದು ಆರೋಪಿಸಿ ಗಣೇಶಪುರದ ನಿವಾಸಿ, ಗುತ್ತಿಗೆದಾರ ಸಂತೋಷ್ ಕೆ. ಪಾಟೀಲ ಅವರು, ಪ್ರಧಾನಿ ಮತ್ತು ಹಾಗೂ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಈಚೆಗೆ ಪತ್ರ ಬರೆದಿದ್ದಾರೆ.

'ನಾನು ಹಿಂದೂ ವಾಹಿನಿ ಸಂಘಟನೆ ರಾಷ್ಟ್ರೀಯ ಕಾರ್ಯದರ್ಶಿಯೂ ಆಗಿದ್ದೇನೆ. ಕೂಡಲೇ ಹಣ ಕೊಡಿಸಿ, ಇಲ್ಲವಾದಲ್ಲಿ ಕುಟುಂಬಸಹಿತ ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ' ಎಂದೂ ಬೆದರಿಕೆ ಒಡ್ಡಿದ್ದಾರೆ.

'ಸಚಿವ ಈಶ್ವರಪ್ಪ ಅವರು 2021ರ ಫೆ.12ರಂದು ಕೆಲವು ರಸ್ತೆ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿದ್ದರು. ಅದರಂತೆ ₹ 4 ಕೋಟಿ ವೆಚ್ಚದಲ್ಲಿ 108 ಕಾಮಗಾರಿ ಮಾಡಿದ್ದೇನೆ. ಪೂರ್ಣಗೊಂಡು ವರ್ಷವಾದರೂ ಕಾರ್ಯಾದೇಶವಾಗಲಿ ಅಥವಾ ಹಣವಾಗಲಿ ಪ್ರಾಧಿಕಾರದಿಂದ ದೊರೆತಿಲ್ಲ. ಇದರಿಂದ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದೇನೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಪಕ್ಷದ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರನ್ನೂ ಭೇಟಿಯಾಗಿ ವಿವರಣೆ ನೀಡಿದ್ದಾರೆ. 'ಸಚಿವರು ನೇರವಾಗಿ ನನ್ನಿಂದ ಕಮಿಷನ್ ಕೇಳಿಲ್ಲ. ಸಹವರ್ತಿಗಳ ಮೂಲಕ ಬಯಸುತ್ತಿದ್ದಾರೆ. ಇದರಿಂದ ಮನನೊಂದು ಪತ್ರ ಬರೆದಿದ್ದೇನೆ' ಎಂದಿದ್ದಾರೆ.

'ನಿಮ್ಮ ಪತ್ರವನ್ನು ಸಂಬಂಧಿಸಿದ ಇಲಾಖೆಯ ಗಮನಕ್ಕೆ ತರಲಾಗಿದೆ ಎಂದು ಕೇಂದ್ರ ಸಚಿವರ ಕಚೇರಿಯಿಂದ ಇ–ಮೇಲ್‌ನಲ್ಲಿ ಪ್ರತಿಕ್ರಿಯೆ ಬಂದಿದೆ' ಎಂದು ಸಂತೋಷ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ತನಿಖೆಗೆ ಕಾಂಗ್ರೆಸ್ ಆಗ್ರಹ

ನವದೆಹಲಿ: ಗುತ್ತಿಗೆದಾರರೊಬ್ಬರ ಬಿಲ್ ಪಾವತಿಸಲು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಶೇ 40ರಷ್ಟು ಕಮೀಷನ್‌ಗೆ ಬೇಡಿಕೆ ಇರಿಸಿದ್ದಾರೆ. ಪ್ರಧಾನಿಯವರು ಕೂಡಲೇ ಎಚ್ಚೆತ್ತು ಕ್ರಮ ಜರುಗಿಸಬೇಕು ಎಂದು ಕಾಂಗ್ರೆಸ್ ಪಕ್ಷ ಆಗ್ರಹಪಡಿಸಿದೆ.

'2018ರಲ್ಲಿ ರಾಜ್ಯ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ಮೋದಿ, 'ಸಿದ್ದರಾಮಯ್ಯ ಅವರದು ಕಮಿಷನ್ ಸರ್ಕಾರ' ಎಂದು ಆಧಾರರಹಿತ ಆರೋಪ ಮಾಡಿದ್ದರು. ಆದರೆ, ಅವರದೇ ಪಕ್ಷದ ನೇತೃತ್ವದ ರಾಜ್ಯ ಸರ್ಕಾರದಲ್ಲಿನ ಕಮಿಷನ್ ದಂಧೆಯ ಬಗ್ಗೆ ಬಿಜೆಪಿ ಕಾರ್ಯಕರ್ತರೇ ದೂರಿದರೂ ಮೌನವಾಗಿದ್ದಾರೆ ಎಂದು ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಸಂಸದ ಡಾ.ಎಲ್.ಹನುಮಂತಯ್ಯ ಅವರು ಟೀಕಿಸಿದರು.

ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸುವ ಮೂಲಕ ಭ್ರಷ್ಟಾಚಾರ ಕೊನೆಗಾಣಿಸಲು ಮುಂದಾಗಬೇಕು ಎಂದು ಸಂಸದರಾದ ಡಿ.ಕೆ.ಸುರೇಶ್, ಸೈಯ್ಯದ್ ನಾಸಿರ್ ಹುಸೇನ್ ಹಾಗೂ ಜಿ.ಸಿ. ಚಂದ್ರಶೇಖರ್ ಕೋರಿದರು.

'ಇಂಧನ, ಅಡುಗೆ ಅನಿಲ ದರ ಇಳಿಸಿ'

ಲೋಕಸಭೆಯಲ್ಲಿ ಪ್ರತಿಪಕ್ಷಗಳ ಸದಸ್ಯರ ಆಗ್ರಹ ● ರಷ್ಯಾ– ಉಕ್ರೇನ್ ಯುದ್ಧದಿಂದ ಬೆಲೆ ಏರಿಕೆ: ಕೇಂದ್ರ

ನವದೆಹಲಿ(ಪಿಟಿಐ): ಇಂಧನ ಮತ್ತು ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆಯನ್ನು ಹಿಂಪಡೆಯುವಂತೆ ಸೋಮವಾರ ಒತ್ತಾಯಿಸಿರುವ ಪ್ರತಿಪಕ್ಷಗಳು, ಈ ವಿಷಯದ ಕುರಿತು ಸದನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿಕೆ ನೀಡಬೇಕು ಎಂದು ಆಗ್ರಹಿಸಿವೆ.

ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಕಾರಣದಿಂದಾಗಿ ಇಂಧನ ಬೆಲೆ ಏರಿಕೆಯಾಗಿದೆ ಎಂಬ ಆಡಳಿತಾರೂಢ ಸರ್ಕಾರದ ವಾದವನ್ನು ಪ್ರತಿಪಕ್ಷಗಳ ಸದಸ್ಯರು ತಳ್ಳಿಹಾಕಿದರು.

ಲೋಕಸಭೆಯ ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಕಾಂಗ್ರೆಸ್ ಸಂಸದ ಅಧೀರ್ ರಂಜನ್ ಚೌಧರಿ ಅವರು, 'ಇಂಧನ ಮತ್ತು ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರ ಜೇಬಿಗೆ ಹೊರೆಯಾಗುತ್ತಿದ್ದು, ಸಂಕಷ್ಟಕ್ಕೀಡಾಗಿದ್ದಾರೆ' ಎಂದು ಹೇಳಿದರು.



ಲೋಕಸಭೆಯಲ್ಲಿ ಸೋಮವಾರ ಕಾಂಗ್ರೆಸ್ ಸಂಸದ ಅಧೀರ್ ರಂಜನ್ ಚೌಧರಿ ಮಾತನಾಡಿದರು —ಪಿಟಿಐ ಚಿತ್ರ

ದೇಶದಲ್ಲಿ ನಿರಂತರವಾಗಿ ಪೆಟ್ರೋಲ್, ಡೀಸೆಲ್, ಸಿಎನ್‌ಜಿ, ಪಿಎನ್‌ಜಿ ಬೆಲೆಗಳು ಏರಿಕೆಯಾಗುತ್ತಿದ್ದು, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು 'ಬೆಲೆ ಏರಿಕೆ ಮುಕ್ತ ಭಾರತ' ಅಭಿಯಾನ (ಮೆಹಂಗಾಯಿ ಮುಕ್ತ್ ಭಾರತ್ ಅಭಿಯಾನ್) ಮಾಡಲು ನಿರ್ಧರಿಸಿದ್ದಾರೆ. ಇಂಧನ, ಅಡುಗೆ ಅನಿಲ ಬೆಲೆ ಏರಿಕೆಯಷ್ಟೇ ಅಲ್ಲ, ಏಪ್ರಿಲ್ ತಿಂಗಳಿಂದ 800 ಅತ್ಯಾವಶ್ಯಕ ಔಷಧಿಗಳ ಬೆಲೆಯನ್ನೂ ಏರಿಸಲಾಗುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ರಷ್ಯಾ– ಉಕ್ರೇನ್ ನಡುವಿನ ಯುದ್ಧದಿಂದಾಗಿ ಇಂಧನ ಬೆಲೆ ಏರಿಕೆಯಾಗುತ್ತಿದೆ ಎಂದು ಸರ್ಕಾರ ಸಮರ್ಥಿಸಿ ಕೊಳ್ಳುತ್ತಿದೆ. ಆದರೆ, ನಾವು ರಷ್ಯಾದಿಂದ ಶೇ 0.5ರಷ್ಟು ಮಾತ್ರ ಇಂಧನವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. 8 ವರ್ಷಗಳಿಂದ ನಿರಂತರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಏರಿಕೆಯಿಂದಾಗಿ ಸರ್ಕಾರವು ₹ 26 ಲಕ್ಷ ಕೋಟಿ ಅಬಕಾರಿ ಸುಂಕವನ್ನು ಗಳಿಸಿದೆ' ಎಂದು ಅವರು ಮಾಹಿತಿ ನೀಡಿದರು.

'ನಾವು ಒಳ್ಳೆಯ ದಿನಗಳನ್ನು (ಅಚ್ಛೇ ದಿನ್) ತಂದಿದ್ದೇವೆ ಎಂದು ಕೇಂದ್ರ ಸರ್ಕಾರ ಹೇಳುತ್ತದೆ. ಆದರೆ, ಜನಸಾಮಾನ್ಯರಿಗೆ ಇದಕ್ಕಿಂತ ಹೆಚ್ಚಿನ ಕೆಟ್ಟ ದಿನಗಳು (ಬೂರೇ ದಿನ್) ಇರಲಾರವು. ತಕ್ಷಣವೇ ಬೆಲೆ ಏರಿಕೆಯನ್ನು ಹಿಂಪಡೆಯಬೇಕು ಮತ್ತು ಈ ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆಸಬೇಕು ಎಂದು ಒತ್ತಾಯಿಸುತ್ತೇವೆ' ಚೌಧರಿ ಹೇಳಿದರು.

ಡಿಎಂಕೆ ಸದಸ್ಯ ಟಿ.ಆರ್. ಬಾಲು ಮಾತನಾಡಿ, ತೈಲ ಬೆಲೆ ಏರಿಕೆ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಪ್ರಾರಂಭದಲ್ಲಿಯೇ ಪೆಟ್ರೋಲ್ ಮೇಲೆ ಲೀಟರ್‌ಗೆ ₹ 3 ಕಡಿಮೆ ಮಾಡಿದ್ದಾರೆ. ಆದರೆ, ಕಳೆದ ಒಂದು ವಾರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ₹ 4 ಏರಿಕೆಯಾಗಿದ್ದು ಹೇಗೆ' ಎಂದು ಆಶ್ಚರ್ಯ ವ್ಯಕ್ತಪಡಿಸಿದರು,

'ಚುನಾವಣೆ ಸಂದರ್ಭದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಶೇ 50ರಷ್ಟು ಇಳಿಕೆ ಮಾಡುವುದಾಗಿ ಹೇಳಿದ್ದ ಪ್ರಧಾನಿ ಮೋದಿ ಈಗ ಸುಮ್ಮನಿರುವುದು ಏಕೆ' ಎಂದೂ ಅವರು ಪ್ರಶ್ನಿಸಿದರು.

ಟಿಎಂಸಿ ಸದಸ್ಯ ಸುದೀಪ್ ಬಂದೋಪಾಧ್ಯಾಯ ಅವರು ಮಾತನಾಡಿ, 'ಬೆಲೆ ಏರಿಕೆ ವಿಷಯವನ್ನು ಸದನದಲ್ಲಿ ಚರ್ಚಿಸಬೇಕು ಮತ್ತು ಇದು ಯಾವಾಗ ನಿಲ್ಲುತ್ತದೆ ಎಂಬುದನ್ನು ನಾವು ಪ್ರಧಾನಿಯಿಂದ ಕೇಳಲು ಬಯಸುತ್ತೇವೆ' ಎಂದು ಆಗ್ರಹಿಸಿದರು.

ಸಂಸದೀಯ ಸ್ಥಾಯಿ ಸಮಿತಿ ಶಿಫಾರಸು

ಸ್ಥಿರಾಸ್ತಿ ಮಾಹಿತಿ ನೀಡದ ಐಎಎಸ್ ಅಧಿಕಾರಿಗಳ ಹೆಸರು ಬಹಿರಂಗಪಡಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಐಎಎಸ್ ಅಧಿಕಾರಿಗಳು ತಮ್ಮ ಮಾಲೀಕತ್ವದ ಸ್ಥಿರಾಸ್ತಿಗಳ ವಾರ್ಷಿಕ ವರದಿಯನ್ನು ಸಲ್ಲಿಸುವುದು ಕಡ್ಡಾಯ. ಆದರೆ, ಸತತ ಮೂರು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಕನಿಷ್ಠ 32 ಐಎಎಸ್ ಅಧಿಕಾರಿಗಳು ಮತ್ತು ಮೂರು ವರ್ಷಗಳಿಂದ 44 ಮಂದಿ ಸ್ಥಿರಾಸ್ತಿಗಳ ವಾರ್ಷಿಕ ಮಾಹಿತಿಯನ್ನು ಸಲ್ಲಿಸಿಲ್ಲ. ಎರಡು ವರ್ಷಗಳಿಂದ 64 ಅಧಿಕಾರಿಗಳು ಈ ಮಾಹಿತಿ ನೀಡಿಲ್ಲ.

2021ರಲ್ಲಿ 158 ಐಎಎಸ್ ಅಧಿಕಾರಿಗಳು, 2020ರಲ್ಲಿ 146 ಅಧಿಕಾರಿಗಳು, 2019 ರಲ್ಲಿ 128 ಮತ್ತು 2018 ರಲ್ಲಿ 135 ಅಧಿಕಾರಿಗಳು ತಮ್ಮ ಸ್ಥಿರಾಸ್ತಿಗಳ ಬಗ್ಗೆ ವಾರ್ಷಿಕ ಮಾಹಿತಿ ಸಲ್ಲಿಸಿಲ್ಲ ಎಂದು ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ನೇತೃತ್ವದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿ ಸಚಿವಾಲಯದ ಅಧೀನದಲ್ಲಿರುವ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಸಂಸದೀಯ ಸ್ಥಾಯಿ ಸಮಿತಿ ತಿಳಿಸಿದೆ.

ಮಾಹಿತಿ ಸಲ್ಲಿಸದ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಸಮಿತಿಯು, ಸ್ಥಿರಾಸ್ತಿಗಳ ವಾರ್ಷಿಕ ಮಾಹಿತಿ ಸಲ್ಲಿಸದ ಅಧಿಕಾರಿಗಳ ಹೆಸರುಗಳನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ. ಈ ಕುರಿತು ಸಮಿತಿಯು ಇತ್ತೀಚೆಗೆ ಸಂಸತ್ತಿನಲ್ಲಿ ವರದಿ ಮಂಡಿಸಿದೆ.

ವೃತ್ತಿ ಪ್ರಗತಿಗೆ ಮತ್ತು ದಾಖಲಾತಿಗೆ ಜಾಗೃತದಳದ ಅನುಮತಿ ಅಗತ್ಯ. ಮುಂದಿನ ವರ್ಷದ ಜನವರಿ 31 ರೊಳಗೆ ಹಿಂದಿನ ವರ್ಷದ ಸ್ಥಿರಾಸ್ತಿಗಳ ಮಾಹಿತಿ ಸಲ್ಲಿಸಲು ವಿಫಲರಾದ ಅಧಿಕಾರಿಗಳಿಗೆ ಜಾಗೃತದಳದ ಅನುಮತಿ ನಿರಾಕರಿಸಲಾಗುವುದು ಎಂದು ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಈ ಹಿಂದೆ ನಿರ್ಧರಿಸಿತ್ತು. ಆದರೆ, ಈ ಕಾರ್ಯವು ಪರಿಣಾಮಕಾರಿಯಾಗಿಲ್ಲ ಎಂದು ಸಮಿತಿಯು ಸಚಿವಾಲಯಕ್ಕೆ ತಿಳಿಸಿದೆ.

ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಪ್ರಸ್ತಾವವನ್ನು ರೂಪಿಸಲು ಮತ್ತು ಪ್ರಸ್ತುತ ಸ್ಥಿತಿಯ ಕುರಿತು ಒಂದು ತಿಂಗಳೊಳಗೆ ಟಿಪ್ಪಣಿಯನ್ನು ಸಲ್ಲಿಸಲು ಸಮಿತಿಯು ಸೂಚಿಸಿದೆ. ಇಲಾಖೆಯ ವೆಬ್‌ಸೈಟ್‌ನಲ್ಲಿ ತಪ್ಪಿತಸ್ಥ ಅಧಿಕಾರಿಗಳ ಹೆಸರುಗಳನ್ನು ಪ್ರಕಟಿಸಲು ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಸಮಿತಿ ಶಿಫಾರಸು ಮಾಡಿದೆ. ಪ್ರತಿ ಅಧಿಕಾರಿಯ ವಿರುದ್ಧ ಒಂದು ತಿಂಗಳ ಅವಧಿಯಲ್ಲಿ ತೆಗೆದುಕೊಂಡ ಕ್ರಮಗಳ ವಿವರಗಳೊಂದಿಗೆ ಕರ್ತವ್ಯಲೋಪ ಎಸಗುವ ಅಧಿಕಾರಿಗಳ ಹೆಸರುಗಳನ್ನು ಒದಗಿಸುವಂತೆ ಸಮಿತಿಯು ಶಿಫಾರಸು ಮಾಡಿದೆ.

ಸಂಕ್ಷಿಪ್ತ ಸುದ್ದಿ

ಬಾಲಕಿ ಮೇಲೆ ಅತ್ಯಾಚಾರ: ಕೊಲೆ

ಹೈದರಾಬಾದ್(ಪಿಟಿಐ): ಇಲ್ಲಿನ ವಿಕಾರಾಬಾದ್ ಜಿಲ್ಲೆಯ ಅಂಗಡಿ ಚಿಟ್ಟಂಪಲ್ಲಿ ಗ್ರಾಮದ 16 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ.

ಗ್ರಾಮದ ಹೊರ ವಲಯದಲ್ಲಿ ಮೃತದೇಹ ಪತ್ತೆಯಾಗಿದ್ದು, ಸ್ಥಳೀಯರು ಗ್ರಾಮದಲ್ಲಿನ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ.

ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

'ಪಿಎಂಎವೈ–ಯು: 1.15 ಕೋಟಿ ಮನೆಗಳ ಮಂಜೂರು'

ನವದೆಹಲಿ: ಪ್ರಧಾನ ಮಂತ್ರಿ ಆವಾಸ್ ಯೋಜನೆ –ನಗರ (ಪಿಎಂಎವೈ–ಯು) ಅಡಿಯಲ್ಲಿ ರಾಜ್ಯಗಳ ಬೇಡಿಕೆಗಳಿಗೆ ಅನುಗುಣವಾಗಿ 1.15 ಕೋಟಿ ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ರಾಜ್ಯ ಸಭೆಯಲ್ಲಿ ಸೋಮವಾರ ತಿಳಿಸಿದ್ದಾರೆ.

2022 ಮಾರ್ಚ್‌ನಲ್ಲಿ ಕೊನೆಗೊಳ್ಳುವ ಈ ಯೋಜನೆಯ ಅಡಿಯಲ್ಲಿ ನಿರ್ಮಿಸಿರುವ 46 ಲಕ್ಷ ಮನೆಗಳನ್ನು ಈಗಾಗಲೇ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ. ಅಲ್ಲದೆ ವಿವಿಧ ಯೋಜನೆಗಳು ಮುಂದಿನ 18 ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದೂ ತಿಳಿಸಿದ್ದಾರೆ.

ಜೂನ್ 16ರಿಂದ ಸಿಇಟಿ

ಒಂದನೇ ಪುಟದಿಂದ

'ಹೊರನಾಡು ಹಾಗೂ ಗಡಿಭಾಗದ ವಿದ್ಯಾರ್ಥಿಗಳಿಗೆ ಕನ್ನಡ ಪರೀಕ್ಷೆಯನ್ನು 18ರಂದು ನಡೆಸಲು ಉದ್ದೇಶಿಸಲಾಗಿದೆ' ಎಂದು ಅವರು ತಿಳಿಸಿದರು.

ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 5ರಿಂದ 20ರವರೆಗೆ ತಮ್ಮ ಹೆಸರು ನೋಂದಾಯಿಸಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಮೂಲಕವೇ ನಿಗದಿತ ಶುಲ್ಕ ಸಲ್ಲಿಸಲು ಏ. 22ರವರೆಗೆ ಅವಕಾಶವಿದೆ.

'ಶುಲ್ಕ ಪಾವತಿಸಿದ ಬಳಿಕ, ಸಲ್ಲಿಸಿದ ಅರ್ಜಿಯಲ್ಲಿರುವ ಮಾಹಿತಿ ಪರಿಷ್ಕರಿಸುವುದಿದ್ದರೆ ಅಂಥವರಿಗೆ ಮೇ 2ರಿಂದ 6ವರೆಗೆ ಕಾಲಾವಕಾಶ ಇರಲಿದೆ. ಮೇ 30ರಿಂದ ಪ್ರವೇಶಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು' ಎಂದೂ ಅವರು ವಿವರಿಸಿದರು.

ಬೆಂಗಳೂರು –ಪುಣೆ ನಡುವೆ ಹೊಸ ಹೆದ್ದಾರಿ

ಹೊಸ ಹೆದ್ದಾರಿ ಬಳಿಕ 76 ಕಿ.ಮೀ ತಗ್ಗಲಿರುವ ಪ್ರಯಾಣ ಅವಧಿ –ನಿತಿನ್ ಗಡ್ಕರಿ

ಪುಣೆ (ಪಿಟಿಐ): 'ಬೆಂಗಳೂರು ಮತ್ತು ಪುಣೆಯ ನಡುವೆ ಸಂಪರ್ಕ ಕಲ್ಪಿಸುವ 699 ಕಿ.ಮೀ. ಅಂತರದ ನೂತನ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಪಡಿಸಲಾಗುವುದು' ಎಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಮುಂಗಾರು ಅವಧಿಯೂ ಸಂಚಾರ ವ್ಯವಸ್ಥೆ ವ್ಯತ್ಯಯವಾಗದಂತೆ ಹೊಸ ಹೆದ್ದಾರಿ ನಿರ್ಮಾಣವಾಗಲಿದೆ. ಮಾರ್ಗದ ರೂಪುರೇಷೆ ಅಂತಿಮಗೊಂಡಿದ್ದು ಬರಪೀಡಿತ ವಲಯವಾದ ಪುಣೆ-ಸತಾರ-ಸಾಂಗ್ಲಿ ಜಿಲ್ಲೆ ಮೂಲಕ ಹಾದುಹೋಗಲಿದೆ ಎಂದು ತಿಳಿಸಿದರು.

₹ 2,344 ಕೋಟಿ ವೆಚ್ಚದ ಹೆದ್ದಾರಿ ಯೋಜನೆಗಳಿಗೆ ಚಾಲನೆ ನೀಡಿ ಭಾನುವಾರ ಮಾತನಾಡಿದ ಅವರು, ಉಭಯ ನಗರಗಳ ನಡುವೆ ಪ್ರಸ್ತುತ ಅಂತರ 775 ಕಿ.ಮೀ. ಆಗಿದೆ. ಹೊಸ ಹೆದ್ದಾರಿ ನಿರ್ಮಾಣದಿಂದ ಅಂತರ 76 ಕಿ.ಮೀ.ನಷ್ಟು ತಗ್ಗಲಿದೆ ಎಂದರು.

ಅಲ್ಲದೆ, ಸಚಿವಾಲಯವು ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಡಾಂಬರು ರಸ್ತೆಗಳ ನಿರ್ಮಾಣಕ್ಕೂ ಒತ್ತು ನೀಡಿದೆ. ಮುಂಬೈನ ಪ್ರಜ್ ಕೈಗಾರಿಕೆಯು ಕಬ್ಬಿನ ಸಿಪ್ಪೆ, ಜೈವಿಕ ವಸ್ತು ಬಳಸಿ ಡಾಂಬರು ಮಿಶ್ರಣವನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದೆ ಎಂದು ತಿಳಿಸಿದೆ.

ಕಾಂಗ್ರೆಸ್ ಪ್ರಬಲಗೊಳ್ಳಲಿ: ಗಡ್ಕರಿ ಅಪೇಕ್ಷೆ

'ಪ್ರಜಾಪ್ರಭುತ್ವ ಬಲಗೊಳ್ಳಲು ಪ್ರಬಲ ವಿರೋಧಪಕ್ಷ ಅಗತ್ಯ. ಕಾಂಗ್ರೆಸ್ ಪಕ್ಷ ರಾಷ್ಟ್ರೀಯ ಮಟ್ಟದಲ್ಲಿ ಆ ನಿಟ್ಟಿನಲ್ಲಿ ಪ್ರಬಲವಾಗಲಿ ಎಂದು ಹೃದಯಪೂರ್ವಕವಾಗಿ ಆಶಿಸುತ್ತೇನೆ' ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದರು.

'ಪ್ರಜಾಪ್ರಭುತ್ವ ಎಂಬುದು ಎರಡು ಚಕ್ರಗಳ ಮೇಲೆ ನಡೆಯಲಿದೆ. ಒಂದು ಆಡಳಿತ ಪಕ್ಷ, ಮತ್ತೊಂದು ವಿರೋಧಪಕ್ಷ. ಇದೇ ಕಾರಣದಿಂದ ಕಾಂಗ್ರೆಸ್ ಬಲಗೊಳ್ಳಬೇಕು ಎಂಬುದು ನನ್ನ ಅಪೇಕ್ಷೆ' ಎಂದರು.

ಕಾಂಗ್ರೆಸ್ ದುರ್ಬಲಗೊಂಡರೆ ಆ ಸ್ಥಳವನ್ನು ಪ್ರಾದೇಶಿಕ ಪಕ್ಷಗಳು ಆವರಿಸಿಕೊಳ್ಳುತ್ತವೆ. ಈ ಬೆಳವಣಿಗೆಯು ಪ್ರಜಾಪ್ರಭುತ್ವದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯಲ್ಲ ಎಂದು ಅವರು ಪ್ರತಿಪಾದಿಸಿದರು.

ಮೋದಿ ಜೊತೆ ಚರ್ಚಿಸಿ– ಕಾಂಗ್ರೆಸ್: ಗಡ್ಕರಿ ಅವರ ಹೇಳಿಕೆಯನ್ನು ಮಹಾರಾಷ್ಟ್ರ ಕಾಂಗ್ರೆಸ್ ನಾಯಕ ಸಚಿನ್ ಸಾವಂತ್ ಸ್ವಾಗತಿಸಿದ್ದಾರೆ. 'ಬಿಜೆಪಿ ವಿರೋಧಪಕ್ಷಗಳನ್ನು ನಾಶಪಡಿಸಲಿದೆ ಎಂದು ಪ್ರತಿಪಾದಿಸುವ ಪ್ರಧಾನಿ ಜೊತೆಗೂ ಚರ್ಚಿಸಿ' ಎಂದಿದ್ದಾರೆ.

'ಬಿಜೆಪಿಯೇತರ ಸರ್ಕಾರ ಅಸ್ತಿತ್ವದಲ್ಲಿರುವ ರಾಜ್ಯಗಳಲ್ಲಿ ಕಿರುಕುಳ ನೀಡಲು ಕೇಂದ್ರದ ಸಂಸ್ಥೆಗಳ ದುರ್ಬಳಕೆ ಆಗುತ್ತಿದೆ. ಎಂಟು ವರ್ಷದಿಂದ ದೇಶದಲ್ಲಿ ಅನಪೇಕ್ಷಿತ ರಾಜಕಾರಣ ನಡೆಯುತ್ತಿದೆ. ಪ್ರಜಾಪ್ರಭುತ್ವ ಸ್ಥಾನದಲ್ಲಿ ಸರ್ವಾಧಿಕಾರ ಸ್ಥಾಪಿಸಲಾಗುತ್ತಿದೆ. ಸುಪ್ರೀಂ ಕೋರ್ಟ್ ಕೂಡಾ ಅಸಹಾಯಕವಾಗಿದೆ. ವಿರೋಧಪಕ್ಷಗಳನ್ನು ನಾಶಪಡಿಸುವ ಬಿಜೆಪಿಯ ಒಟ್ಟು ಮನಸ್ಥಿತಿ ಕುರಿತಂತೆ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಪ್ರಧಾನಿ ಜೊತೆಗೆ ಚರ್ಚೆ ಮಾಡಿ' ಎಂದೂ ಗಡ್ಕರಿ ಅವರಿಗೆ ಸಾವಂತ್ ಸಲಹೆ ಮಾಡಿದ್ದಾರೆ.

ನನ್ನದು ರಾಜಕಾರಣವಲ್ಲ, ಸಮಾಜಕಾರಣ: ಈ ಮಧ್ಯೆ, ಮರಾಠಿ ನಟ ರಾಮಲ್ ಸೋಲಾಪುರ್ಕರ್ ಜೊತೆಗಿನ ಸಂದರ್ಶನದಲ್ಲಿ ನಿತಿನ್ ಗಡ್ಕರಿ ಅವರು, 'ಇತ್ತೀಚಿನ ದಿನಗಳಲ್ಲಿ ನಾನು ರಾಜಕಾರಣ ಮಾಡುತ್ತಿಲ್ಲ. ಕೇವಲ ಸಮಾಜಕಾರಣವನ್ನಷ್ಟೇ ಮಾಡುತ್ತಿದ್ದೇನೆ' ಎಂದು ಹೇಳಿದರು.

'ನನ್ನ ಅಗತ್ಯ ಇದ್ದರಷ್ಟೇ ಮತ ನೀಡಿ ಎಂಬುದು ಜನತೆಗೆ ನನ್ನ ಮನವಿ. ನಾನು ಕಟೌಟ್ ಹಾಕುವುದಿಲ್ಲ, ಯಾರಿಗೂ ಮಾಲಾರ್ಪಣೆ ಮಾಡುವುದಿಲ್ಲ. ಯಾರನ್ನಾದರೂ ಬರಮಾಡಿಕೊಳ್ಳಲು ವಿಮಾನನಿಲ್ದಾಣಕ್ಕೆ ಹೋಗುವುದಿಲ್ಲ. ನನ್ನದೇ ಹಣ ವ್ಯಯಿಸಿ ನಾನು ಈವರೆಗೆ ಇಬ್ಬರಿಗೆ ಮಾಲಾರ್ಪಣೆ ಮಾಡಿದ್ದೇನೆ. ಒಬ್ಬರು ಎ.ಬಿ. ವಾಜಪೇಯಿ, ಇನ್ನೊಬ್ಬರು ಲತಾ ಮಂಗೇಶ್ಕರ್' ಎಂದರು.

'ಒಬ್ಬ ಸಚಿವ ಯಾವುದೇ ಒಂದು ಪಕ್ಷಕ್ಕೆ ಸೀಮಿತವಲ್ಲ. ಅವರು ಸರ್ಕಾರದ ಪ್ರತಿನಿಧಿ. ನಾನು ಆ ಸಿದ್ಧಾಂತವನ್ನು ಪಾಲಿಸುತ್ತೇನೆ. ನಾನು ಆರ್‌ಎಸ್‌ಎಸ್ ಕಾರ್ಯಕರ್ತ. ಅದು ನನ್ನ ಬಿಜೆಪಿಯ ಚಿಂತನೆಗಳು ನನ್ನ ಬದ್ಧತೆ. ಸಿದ್ಧಾಂತಕ್ಕಾಗಿ ವಿಚಾರದಲ್ಲಿ ನಾನು ರಾಜಿ ಆಗಲಾರೆ. ಒಂದು ಪಕ್ಷದ ಜೊತೆಗೆ ನಾನು ಗುರುತಿಸಿಕೊಂಡಿದ್ದರೂ, ಈ ಸಮಾಜ ಮತ್ತು ದೇಶ ಕೂಡಾ ನನ್ನದೇ. ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗೆ ರಾಜಕಾರಣ ಒಂದು ಪ್ರಬಲ ಅಸ್ತ್ರ ಎಂದಷ್ಟೇ ನಾನು ನಂಬುತ್ತೇನೆ' ಎಂದು ಹೇಳಿದರು.

ಮನೆ ಬಾಗಿಲಿಗೆ ಪಡಿತರ: ಪಂಜಾಬ್ ಸಿ.ಎಂ ಮಾನ್

ಚಂಡೀಗಢ (ಪಿಟಿಐ): ಪಂಜಾಬ್‌ನ ನೂತನ ಮುಖ್ಯಮಂತ್ರಿ ಭಗವಂತ್ ಮಾನ್ ಅವರು 'ಮನೆ ಬಾಗಿಲಿಗೆ ಪಡಿತರ ವಿತರಣೆ' ಯೋಜನೆ ಘೋಷಿಸಿದ್ದು, 'ಉತ್ತಮ ಗುಣಮಟ್ಟದ ಪಡಿತರವನ್ನು ಮನೆ ಬಾಗಿಲಿಗೆ ತಲುಪಿಸುವುದರಿಂದ ಪಡಿತರದಾರರು ಇನ್ನು ಮುಂದೆ ಸರತಿ ಸಾಲಿನಲ್ಲಿ ನಿಲ್ಲುವ ಅಗತ್ಯವಿಲ್ಲ' ಎಂದು ಹೇಳಿದ್ದಾರೆ.



'ಯೋಜನೆಯ ವಿವರಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು' ಎಂದೂ ಅವರು ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ. 'ನಮ್ಮ ಅಧಿಕಾರಿಗಳು ಫಲಾನುಭವಿಗಳಿಗೆ ಫೋನ್ ಕರೆ ಮಾಡುತ್ತಾರೆ. ಅವರ ಅನುಕೂಲ ಹಾಗೂ ಲಭ್ಯತೆಗೆ ಅನುಗುಣವಾಗಿ ಅವರ ಮನೆಗಳಿಗೆ ಪಡಿತರವನ್ನು ತಲುಪಿಸಲಾಗುತ್ತದೆ. ಅರ್ಹ ಫಲಾನುಭವಿಗಳಿಗೆ ಈ ಯೋಜನೆಯು ಐಚ್ಛಿಕವಾಗಿರುತ್ತದೆ. ನಿಮ್ಮ ಮನೆ ಪಡಿತರ ಅಂಗಡಿಯ ಸಮೀಪದಲ್ಲಿದ್ದರ ಅಲ್ಲಿಂದಲೇ ಪಡಿತರವನ್ನು ತರಬಹುದು' ಎಂದು ಮಾನ್ ಹೇಳಿದ್ದಾರೆ.

'ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನೇತೃತ್ವದ ಸರ್ಕಾರವು ದೆಹಲಿಯಲ್ಲೂ ಈ ಯೋಜನೆಯನ್ನು ಪ್ರಾರಂಭಿಸಿತ್ತು. ಆದರೆ, ದುರದೃಷ್ಟವಶಾತ್ ಅದನ್ನು ನಿಲ್ಲಿಸಲಾಯಿತು. ಆದರೆ, ಪಂಜಾಬ್‌ನಲ್ಲಿ ನಾವು ಈ ಯೋಜನೆಯನ್ನು ಜಾರಿಗೆ ತರಲಿದ್ದೇವೆ ಮತ್ತು ನಾವು ಅದನ್ನು ಯಶಸ್ವಿಯಾಗಿ ನಡೆಸುತ್ತೇವೆ' ಎಂದು ಅವರು ತಿಳಿಸಿದ್ದಾರೆ.

'ಅನೇಕ ಕಡೆ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಪಡೆಯಲು ಬಡವರು ತಮ್ಮ ದಿನದ ಕೂಲಿ ಕೆಲಸವನ್ನು ಬಿಟ್ಟು ಸರತಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ಇದೆ. ಅಲ್ಲದೆ ವಯೋವೃದ್ಧರು 2 ಕಿ.ಮೀ. ದೂರದ ಪಡಿತರ ಅಂಗಡಿಗೆ ನಡೆದು ಹೋಗುವಂಥ ಸ್ಥಿತಿಯೂ ಇದೆ. ಆದರೆ, ಪಂಜಾಬ್ ಸರ್ಕಾರ ಜಾರಿಗೆ ತರಲಿರುವ ಮನೆಬಾಗಿಲಿಗೆ ಪಡಿತರ ಯೋಜನೆಯು ಈ ಸಮಸ್ಯೆಗಳಿಂದ ಫಲಾನುಭವಿಗಳಿಗೆ ಮುಕ್ತಿ ನೀಡಲಿದೆ' ಎಂದು ಅವರು ಹೇಳಿದರು.

ಸೋಮವಾರ ಆನ್‌ಲೈನ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅರವಿಂದ ಕೇಜ್ರಿವಾಲ್ ಅವರು, 'ಪಂಜಾಬ್ ಸರ್ಕಾರವು ಮನೆಬಾಗಿಲಿಗೆ ಪಡಿತರ ಯೋಜನೆ ಜಾರಿಗೆ ತಂದರೆ, ಇತರ ರಾಜ್ಯಗಳ ನಾಗರಿಕರೂ ಈ ಕುರಿತು ಬೇಡಿಕೆಯನ್ನು ಮಂಡಿಸುತ್ತಾರೆ. ಆಗ ದೇಶದಾದ್ಯಂತ ಈ ಯೋಜನೆ ಜಾರಿಗೆ ಬರಲಿದೆ. ಆದರೆ, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಅಡ್ಡಿಪಡಿಸುತ್ತಿದೆ' ಎಂದು ಆರೋಪಿಸಿದರು.

'ಬೆಂಗಳೂರು–ಮೈಸೂರು ಪ್ರಯಾಣ ಅವಧಿ 75 ನಿಮಿಷಕ್ಕೆ'

ನವದೆಹಲಿ: ಬೆಂಗಳೂರು–ಮೈಸೂರು ನಡುವಿನ ಪ್ರಯಾಣದ ಅವಧಿಯನ್ನು 3 ಗಂಟೆಯ ಬದಲಿಗೆ ಕೇವಲ 75 ನಿಮಿಷಗಳಿಗೆ ತಗ್ಗಿಸುವ ಉದ್ದೇಶದೊಂದಿಗೆ ಆರಂಭಿಸಲಾಗಿರುವ ರಾಷ್ಟ್ರೀಯ ಹೆದ್ದಾರಿ– 275ರ ವಿಸ್ತರಣಾ ಯೋಜನೆಯ ಕಾಮಗಾರಿಯು ಅಕ್ಟೋಬರ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಕೇಂದ್ರದ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

'ಬೆಂಗಳೂರು– ನಿಡಘಟ್ಟ– ಮೈಸೂರು ನಡುವಿನ ಒಟ್ಟು 117 ಕಿಲೋಮೀಟರ್ ಅಂತರದ ಹೆದ್ದಾರಿಯ ಅಭಿವೃದ್ಧಿ ಕಾಮಗಾರಿಗಾಗಿ ₹ 8,350 ಕೋಟಿ ವೆಚ್ಚ ಮಾಡಲಾಗಿದೆ. ಪಾರದರ್ಶಕವಾಗಿ ಮತ್ತು ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವುದು ನಮ್ಮ ಬದ್ಧತೆಯಾಗಿದೆ' ಎಂದು ಅವರು ಸೋಮವಾರ ಸರಣಿ ಟ್ವೀಟ್‌ಗಳಲ್ಲಿ ಮಾಹಿತಿ ನೀಡಿದ್ದಾರೆ.

ಹೆದ್ದಾರಿಯು 10 ಲೇನ್‌ಗೆ ವಿಸ್ತರಣೆಯಾಗಲಿದ್ದು, ಕರ್ನಾಟಕದ ಎರಡು ಪ್ರಮುಖ ನಗರಗಳ ನಡುವಿನ ಸಂಚಾರ ಅವಧಿಯನ್ನು ಕಡಿತಗೊಳಿಸಲಿದೆ. ಅಲ್ಲದೆ, ಸಂಪರ್ಕ ವೃದ್ಧಿಗೆ ಸಹಕಾರಿಯಾಗಲಿದೆ. ಈ ಮೂಲಕ ಈ ಭಾಗದಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿ ಹಾಗೂ ಆರ್ಥಿಕತೆಗೆ ಉತ್ತೇಜನ ನೀಡುತ್ತದೆ ಎಂದು ಅವರು ಆಶಯ ವ್ಯಕ್ತಪಡಿಸಿದ್ದಾರೆ.

ಶೇ 40 ಲಂಚ: ಜಟಾಪಟಿ

ಒಂದನೇ ಪುಟದಿಂದ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಗುತ್ತಿಗೆದಾರರ ಸಂಘದವರು ಆರೋಪ ಮಾಡಿರುವುದು ನಿಮ್ಮ ಸರ್ಕಾರದ ಬಗ್ಗೆ. ಅದು ಬಿಟ್ಟು ಶಾಸಕರ ಬಗ್ಗೆ ಆರೋಪ ಮಾಡುವುದು ಎಷ್ಟರ ಮಟ್ಟಿಗೆ ಸರಿ' ಎಂದು ದೂರಿನ ಪತ್ರವನ್ನು ಪ್ರದರ್ಶಿಸಿದರು. ಈ ವೇಳೆ ಕಾರಜೋಳ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದ ನಡೆಯಿತು.

ಮೊತ್ತ ಪರಿಷ್ಕರಣೆ 4 ಜನರ ಕೈಯಲ್ಲಿ!

ಒಂದನೇ ಪುಟದಿಂದ

'ಹಲವು ದಶಕಗಳಿಂದ ಇವರೇ ಕಾಮಗಾರಿಗಳ ಮೂಲಕ ಸಾವಿರಾರು ಕೋಟಿ ಲೂಟಿ ಮಾಡಿದ್ದಾರೆ. ಇವರಿಂದಾಗಿಯೇ ಯೋಜನೆಗಳ ಅಂದಾಜು ಮೊತ್ತ ₹2,000 ಕೋಟಿಯಿಂದ ₹10,000 ಕೋಟಿಯವರೆಗೆ ಪರಿಷ್ಕರಣೆಗೊಳ್ಳುತ್ತವೆ. ಯೋಜನೆಗಳ ಮೊತ್ತವನ್ನು ಪರಿಷ್ಕರಿಸುವಂತೆ ಮಾಡುವಲ್ಲಿ ಇವರು ಸಿದ್ಧಹಸ್ತರು' ಎಂದರು.

'ಈ ಗುತ್ತಿಗೆದಾರರಿಗೆ ಹೇಗೆ ಗುತ್ತಿಗೆ ಸಿಗುತ್ತದೆ ಎಂಬುದನ್ನು ನಾನು ಹೇಳುವುದಿಲ್ಲ. ಒಟ್ಟಿನಲ್ಲಿ ರಾಜ್ಯದ ಬೊಕ್ಕಸದ ಹಣ ಲೂಟಿ ಆಗುತ್ತದೆ' ಎಂದು ಶಿವಾನಂದ ಪಾಟೀಲ ಹೇಳಿದರು.

ಜಲಸಂಪನ್ಮೂಲ ಇಲಾಖೆ ಮೇಲಿನ ಚರ್ಚೆಗೆ ಸಚಿವ ಗೋವಿಂದ ಕಾರಜೋಳ ಉತ್ತರ ನೀಡುವಾಗ ಮಧ್ಯ ಪ್ರವೇಶಿಸಿದ ಬಿಜೆಪಿಯ ಅರವಿಂದ ಬೆಲ್ಲದ, 'ಕಳೆದ 70 ವರ್ಷಗಳಲ್ಲಿ ರಾಜ್ಯಗಳ ನೀರಾವರಿ ಯೋಜನೆಗಳ ಕಾಮಗಾರಿಗಳ ಗುತ್ತಿಗೆಗಳು ಕೇವಲ ಆಂಧ್ರದವರಿಗೆ ಸಿಗುತ್ತಿದೆ. ಅವರನ್ನು ಬಿಟ್ಟು ಬೇರೆಯವರಿಗೆ ಸಿಗುತ್ತಿಲ್ಲ. ಈ ಬಗ್ಗೆ ಪ್ರತ್ಯೇಕ ಚರ್ಚೆ ನಡೆಸಬೇಕು' ಎಂದು ಒತ್ತಾಯಿಸಿದರು. ಇದಕ್ಕೆ ಹಲವು ಸದಸ್ಯರು ಧ್ವನಿಗೂಡಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಸೂತ್ರ

ಒಂದನೇ ಪುಟದಿಂದ

ಶಿವಮೊಗ್ಗದ ಕಸ್ತೂರಬಾ ಪ್ರೌಢಶಾಲೆ ಮತ್ತು ಹುಬ್ಬಳ್ಳಿಯ ಶಾಂತಿನಿಕೇತನ ಪಿಯು ಕಾಲೇಜಿಗೆ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರು ತೆಗೆಯಲು ನಿರಾಕರಿಸಿ ಮನೆಗೆ ಮರಳಿದ್ದರು. ಆದರೆ, ಬಳಿಕ ಶಾಲಾ ಸಮವಸ್ತ್ರ ಧರಿಸಿ ಹಾಜರಾದರು.

ಶಿಕ್ಷಣ ಸಚಿವರ ತವರು ಕ್ಷೇತ್ರ ತಿಪಟೂರು ನಗರದ ಸರ್ಕಾರಿ ಬಾಲಕರ ಹಾಗೂ ಬಾಲಕಿಯರ ಪ್ರೌಢಶಾಲೆಯ ಪರೀಕ್ಷಾ ಕೇಂದ್ರಕ್ಕೆ 15 ಮಂದಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದರು. ಸಿಬ್ಬಂದಿ ಯಾವುದೇ ಸೂಚನೆ ನೀಡದ ಕಾರಣ ಪರೀಕ್ಷಾ ಕೇಂದ್ರದ ಒಳಗೂ ಹಿಜಾಬ್ ಧರಿಸಿ ಪ್ರವೇಶಿಸಿದ್ದರು. ಆದರೆ, ಪರೀಕ್ಷಾ ಕೇಂದ್ರದ ಮುಖ್ಯ ಅಧಿಕಾರಿ ಕೊಠಡಿಗಳಿಗೆ ತೆರಳಿ ಸೂಚನೆ ನೀಡಿದ ಬಳಿಕ ಹಿಜಾಬ್ ತೆಗೆದರು.

ಕೋವಿಡ್ ಮಾರ್ಗಸೂಚಿ ಅನ್ವಯ ಪರೀಕ್ಷೆ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳ ಕೈಗೆ ಸ್ಯಾನಿಟೈಸರ್ ಸಿಂಪಡಿಸಲಾಯಿತು.

ಹೆಜ್ಜೇನು ದಾಳಿ: ಶಿವಮೊಗ್ಗದ ಸೇಕ್ರೆಡ್ ಹಾರ್ಟ್ ಚರ್ಚ್ ಆವರಣದಲ್ಲಿರುವ ಮೇರಿ ಇಮ್ಯಾಕ್ಯುಲೇಟ್ ಪರೀಕ್ಷಾ ಕೇಂದ್ರದಲ್ಲಿ ಹೆಜ್ಜೇನು ದಾಳಿ ನಡೆಸಿದ್ದು, 12 ಪೋಷಕರು, ಐವರು ವಿದ್ಯಾರ್ಥಿಗಳಿಗೆ ಕಚ್ಚಿದವು. ಆರೋಗ್ಯ ಸಿಬ್ಬಂದಿ ತಕ್ಷಣ ಸ್ಥಳದಲ್ಲೇ ಚಿಕಿತ್ಸೆ ನೀಡಿ ಪರೀಕ್ಷೆ ಬರೆಯಲು ಸಹಕರಿಸಿದರು. ನಿಗದಿತ ಸಮಯಕ್ಕಿಂತ ಸ್ವಲ್ಪ ತಡವಾದ ಕಾರಣ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸಮಯ ನೀಡಲಾಯಿತು.

ಕುಸಿದುಬಿದ್ದು ವಿದ್ಯಾರ್ಥಿನಿ ಸಾವು

ನೋಂದಣಿ ಸಂಖ್ಯೆಯ ಗೊಂದಲದಿಂದಾಗಿ ಬೇರೊಂದು ಕೇಂದ್ರದ ಕೊಠಡಿಯಲ್ಲಿ ಪರೀಕ್ಷೆ ಬರೆಯುತ್ತಿದ್ದ ಅನುಶ್ರೀ (16) ಎಂಬ ವಿದ್ಯಾರ್ಥಿನಿ, 15 ನಿಮಿಷದ ಬಳಿಕ ತನ್ನ ಸಂಖ್ಯೆ ಇದ್ದ ಪರೀಕ್ಷಾ ಕೇಂದ್ರಕ್ಕೆ ಅವಸರದಲ್ಲಿ ತೆರಳುವಾಗ ಕುಸಿದು ಬಿದ್ದು ಮೃತಪಟ್ಟ ಘಟನೆ ಮೈಸೂರು ಜಿಲ್ಲೆಯ ತಿ. ನರಸೀಪುರದಲ್ಲಿ ನಡೆದಿದೆ.

ಈಕೆ ಅಕ್ಕೂರು ಗ್ರಾಮದ ಕೆಂಪರಾಜು ಎಂಬುವವರ ಮಗಳು. ಮಾದಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ. ಪ್ರವೇಶಪತ್ರ ಪರಿಶೀಲಿಸುವಾಗ, ಅನುಶ್ರೀ ಬೇರೆ ಕೊಠಡಿಗೆ ಬಂದು, ಗೈರಾಗಿದ್ದ ವಿದ್ಯಾರ್ಥಿಯ ಸ್ಥಳದಲ್ಲಿ ಕುಳಿತು ಪರೀಕ್ಷೆ ಬರೆಯುತ್ತಿರುವುದು ಮೇಲ್ವಿಚಾರಕರಿಗೆ ಗೊತ್ತಾಯಿತು. ತಕ್ಷಣ ಅದೇ ಆವರಣದಲ್ಲಿದ್ದ, ಆಕೆ ಪರೀಕ್ಷೆ ಬರೆಯಬೇಕಿದ್ದ ಕೇಂದ್ರಕ್ಕೆ ಆಕೆಯನ್ನು ಸಿಬ್ಬಂದಿ ಕಳುಹಿಸಿಕೊಟ್ಟಿದ್ದರು. ಆ ಕೇಂದ್ರದ ಮೆಟ್ಟಿಲನ್ನು ಹತ್ತುವ ವೇಳೆ ವಿದ್ಯಾರ್ಥಿನಿ ಕುಸಿದುಬಿದ್ದರು ಎಂದು ಮೂಲಗಳು ತಿಳಿಸಿವೆ.

'ವಿದ್ಯಾರ್ಥಿನಿಯನ್ನು ತಕ್ಷಣ ನರಸೀಪುರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತು. ಪುತ್ರಿಗೆ ಯಾವುದೇ ತೊಂದರೆ ಇರಲಿಲ್ಲ ಎಂದು ಪೋಷಕರು ಹೇಳಿದ್ದಾರೆ. ಇಲಾಖೆಯಿಂದ ₹ 1 ಲಕ್ಷ ಪರಿಹಾರ ಘೋಷಿಸಲಾಗಿದೆ. ಗೊಂದಲದ ಬಗ್ಗೆ ಪರೀಕ್ಷಾ ಕೇಂದ್ರದ ಸಿಬ್ಬಂದಿಯ ವಿಚಾರಣೆ ನಡೆಸಿ, ಮೇಲಧಿಕಾರಿಗಳಿಗೆ ವರದಿ ನೀಡಲಾಗುವುದು' ಎಂದು ಡಿಡಿಪಿಐ ತಿಳಿಸಿದರು.

ನಕಲಿ ಅಭ್ಯರ್ಥಿಗಳು ವಶಕ್ಕೆ: ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯ ಆರ್.ಡಿ. ಕಾಲೇಜು ಕೇಂದ್ರದಲ್ಲಿ ಅಸಲಿ ವಿದ್ಯಾರ್ಥಿಗಳ ಪರ ಪರೀಕ್ಷೆ ಬರೆಯಲು ಬಂದಿದ್ದ ಯುವತಿ ಸೇರಿದಂತೆ ಆರು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದರು.

ಸಿಕ್ಕಿಬಿದ್ದ 12 ನಕಲಿ ಅಭ್ಯರ್ಥಿಗಳು, 8 ಮಂದಿ ಪರಾರಿ(ಕಲಬುರಗಿ ವರದಿ): ಬೀದರ್ ಜಿಲ್ಲೆ ಹುಮನಾಬಾದ್‌ನ ಶಾಹೀನ್ ಹಾಗೂ ಅಲ್ ಅಮೀನ್ ಪರೀಕ್ಷಾ ಕೇಂದ್ರಗಳಲ್ಲಿ ಸೋಮವಾರ, ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಬಂದಿದ್ದ 12 ನಕಲಿ ಪರೀಕ್ಷಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದರು.

ಪರೀಕ್ಷಾ ಸಿಬ್ಬಂದಿ ಹಾಲ್ ಟಿಕೆಟ್ ಪರಿಶೀಲಿಸುತ್ತಿದ್ದಾಗ ನಕಲಿ ಪರೀಕ್ಷಾರ್ಥಿಗಳು ಸಿಕ್ಕಿಬಿದ್ದರು ಎಂದು ತಹಶೀಲ್ದಾರ್ ಪ್ರದೀಪಕುಮಾರ ಹಿರೇಮಠ ತಿಳಿಸಿದ್ದಾರೆ.

ಮೈಸೂರಿನಲ್ಲಿ 39 ಮುಸ್ಲಿಂ ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿದ್ದರು. ಆದರೆ, ಹಿಜಾಬ್‌ಗೂ ಇದಕ್ಕೂ ಸಂಬಂಧವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಮೋದ್ ಸಾವಂತ್ ಪ್ರಮಾಣ ವಚನ

ಪಣಜಿ (ಪಿಟಿಐ): ಗೋವಾ ಮುಖ್ಯಮಂತ್ರಿ ಆಗಿ ಪ್ರಮೋದ್ ಸಾವಂತ್ ಅವರು ಎರಡನೇ ಅವಧಿಗೆ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ಅವರ ಜೊತೆ ಎಂಟು ಶಾಸಕರು ಸಂಪುಟ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಪಣಜಿಯ ಡಾ. ಶ್ಯಾಮ್ ಪ್ರಸಾದ್ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಗೋವಾ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ ಅವರು ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.



ಗೋವಾ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಪ್ರಮೋದ್ ಸಾವಂತ್ ಹಾಗೂ ನೂತನ ಸಚಿವರ ಜೊತೆ ಪ್ರಧಾನಿ ನರೇಂದ್ರ ಮೋದಿ —ಪಿಟಿಐ ಚಿತ್ರ

> **ಪ್ರಮೋದ್ ಸಾವಂತ್ ಅವರ ತಂಡವು ಉತ್ತಮ ಆಡಳಿತ ನೀಡುತ್ತದೆ. ಕಳೆದ ದಶಕದಿಂದ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳನ್ನು ಮುಂದುವರೆಸುತ್ತದೆ**
> **ನರೇಂದ್ರ ಮೋದಿ,** ಪ್ರಧಾನಿ

ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಶ್ರೀಪಾದ್ ನಾಯ್ಕ್, ಹಿಮಾಚಲ ಪ್ರದೇಶದ ರಾಜ್ಯಪಾಲ ರಾಜೇಂದ್ರ ಆಲೇಕರ್ ಮತ್ತು ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತಿತರ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಸಾವಂತ್ ಅವರು ಕೊಂಕಣಿ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ವಿಶ್ವಜಿತ್ ರಾಣೆ, ರವಿ ನಾಯ್ಕ್, ಸುಭಾಷ್ ಶಿರೋಡ್ಕರ್ ಮೊದಲಾದವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಸಮಾರಂಭದಲ್ಲಿ 10,000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ಅಲ್ಪಸಂಖ್ಯಾತರ ಸ್ಥಾನಮಾನ: ಕೇಂದ್ರಕ್ಕೆ ಕಾಲಾವಕಾಶ

ನವದೆಹಲಿ: ಅಲ್ಪಸಂಖ್ಯಾತರ ಕುರಿತು ಅಧಿಸೂಚನೆ ಹೊರಡಿಸುವ ಕೇಂದ್ರದ ಅಧಿಕಾರ ಪ್ರಶ್ನಿಸಿ ಹಾಗೂ ಹಿಂದೂಗಳು ಕಡಿಮೆ ಸಂಖ್ಯೆಯಲ್ಲಿರುವ ರಾಜ್ಯಗಳು ಅವರನ್ನು ಅಲ್ಪಸಂಖ್ಯಾತರೆಂದು ಘೋಷಿಸಬೇಕು ಎಂದು ಕೋರಿದ ಅರ್ಜಿ ಕುರಿತು ತನ್ನ ನಿಲುವನ್ನು ಸ್ಪಷ್ಟಪಡಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೋಮವಾರ ಮತ್ತಷ್ಟು ಅವಕಾಶ ನೀಡಿತು.



'ರಾಜ್ಯಗಳಲ್ಲಿ ಹಿಂದೂಗಳು ಅಥವಾ ಇತರ ಧರ್ಮದವರು ಕಡಿಮೆ ಸಂಖ್ಯೆಯಲ್ಲಿ ಇದ್ದರೆ, ರಾಜ್ಯಗಳು ಅಂತಹವರನ್ನು ತಮ್ಮ ಪ್ರಾದೇಶಿಕ ವ್ಯಾಪ್ತಿಯೊಳಗೆ ಅಲ್ಪಸಂಖ್ಯಾತರು ಎಂದು ಘೋಷಿಸಬಹುದು' ಎಂಬುದಾಗಿ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ಸುಪ್ರೀಂಕೋರ್ಟ್‌ಗೆ ತಿಳಿಸಿತ್ತು.

'ಅಲ್ಪಸಂಖ್ಯಾತರ ಸಚಿವಾಲಯ ಸಲ್ಲಿಸಿರುವ ಈ ಪ್ರತಿಕ್ರಿಯೆಯ ಪ್ರತಿ ನನಗೆ ಲಭಿಸಿದ್ದು, ಇನ್ನೂ ಓದಿಲ್ಲ. ಹೀಗಾಗಿ ನನಗೆ ಸರ್ಕಾರದ ನಿಲುವು ಏನು ಎಂಬುದು ಗೊತ್ತಿಲ್ಲ' ಎಂದು ನ್ಯಾಯಮೂರ್ತಿ ಸಂಜಯಕಿಶನ್ ಕೌಲ್ ನೇತೃತ್ವದ ಪೀಠಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದರು.

'ಬಿಜೆಪಿಯಿಂದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ'

ಚಂಡೀಗಢ (ಪಿಟಿಐ): ಕೇಂದ್ರಾಡಳಿತ ಪ್ರದೇಶವಾದ ಚಂಡೀಗಢದ ಉದ್ಯೋಗಿಗಳಿಗೆ 'ಕೇಂದ್ರೀಯ ಸೇವಾ ನೀತಿಗಳು' ಅನ್ವಯವಾಗುತ್ತವೆ ಎಂದು ಏಕಪಕ್ಷೀಯವಾಗಿ ಘೋಷಿಸುವ ಮೂಲಕ ಕೇಂದ್ರ ಸರ್ಕಾರವು ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತಂದಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಅಕಾಲಿ ದಳವೂ ಇದಕ್ಕೆ ದನಿಗೂಡಿಸಿವೆ.

> **ಈ ನಿಯಮವು ಪಂಜಾಬ್ ಮರುವಿಂಗಡಣೆ ಕಾಯ್ದೆ–1966ಕ್ಕೆ ವಿರುದ್ಧವಾಗಿದೆ. ಚಂಡೀಗಢದ ಮೇಲೆ ಪಂಜಾಬ್‌ಗೆ ಇರುವ ಹಕ್ಕನ್ನು ಉಳಿಸಿಕೊಳ್ಳುತ್ತೇವೆ**
> **ಭಗವಂತ ಮಾನ್,** ಪಂಜಾಬ್ ಮುಖ್ಯಮಂತ್ರಿ

ಚಂಡೀಗಢದಲ್ಲಿ ಸೇವೆಯಲ್ಲಿರುವ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 60ಕ್ಕೆ ಹೆಚ್ಚಿಸಲಾಗುತ್ತದೆ ಮತ್ತು ತಾಯ್ತನದ ರಜೆಯನ್ನು ಒಂದು ವರ್ಷದಿಂದ ಎರಡು ವರ್ಷಕ್ಕೆ ಹೆಚ್ಚಿಸಲಾಗುತ್ತದೆ ಎಂದು ಅಮಿತ್ ಶಾ ಅವರು ಘೋಷಿಸಿದ್ದರು.

'ಚಂಡೀಗಢದ ಸರ್ಕಾರಿ ನೌಕರರು ಪಂಜಾಬ್ ಉದ್ಯೋಗ ನೀತಿಯ ಅಡಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ವಿಚಾರದಲ್ಲಿ ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುವ ಮೂಲಕ ದೇಶದ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ಕೇಂದ್ರ ಸರ್ಕಾರ ನಡೆದುಕೊಂಡಿದೆ' ಎಂದು ಮಾನ್ ಆರೋಪಿಸಿದ್ದಾರೆ. ಕೇಂದ್ರದ ಹೊಸ ನೀತಿಯನ್ನು ಪಂಜಾಬ್ ವಿರೋಧಿಸುತ್ತದೆ. ಅದರ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಗುಜರಾತ್: ಎಎಪಿ–ಬಿಟಿಪಿ ಮೈತ್ರಿ ಸಂಭವ

ಅಹಮದಾಬಾದ್ (ಪಿಟಿಐ): ಮುಂಬರಲಿರುವ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಇಲ್ಲಿನ ಭಾರತೀಯ ಟ್ರೈಬಲ್ ಪಾರ್ಟಿಯು (ಬಿಟಿಪಿ) ಎಎಪಿ ಜತೆಗೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆ ಇದೆ. ಬಿಟಿಪಿ ಮುಖ್ಯಸ್ಥ ಮಹೇಶ್ ವಾಸವಾ ಅವರು ಎಎಪಿ ಸಂಚಾಲಕ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಸೋಮವಾರ ದೆಹಲಿಯಲ್ಲಿ ಭೇಟಿ ಮಾಡಿದರು.

ದೆಹಲಿಯಲ್ಲಿ ಎಎಪಿ ಸರ್ಕಾರವು ಆರಂಭಿಸಿರುವ ಮೊಹಲ್ಲಾ ಕ್ಲಿನಿಕ್‌ಗಳಿಗೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳನ್ನು ಮಹೇಶ್ ನೋಡಿದ್ದಾರೆ. ಜತೆಗೆ ದೆಹಲಿ ಸರ್ಕಾರಿ ಶಾಲೆಗಳಿಗೂ ಭೇಟಿ ನೀಡಿದ್ದಾರೆ. 'ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಬುಡಕಟ್ಟು ಜನರನ್ನು ತಮ್ಮ ಲಾಭಕ್ಕೆ ಬಳಸಿಕೊಂಡಿವೆ. ಅವುಗಳ ಮೇಲೆ ನಮಗೆ ನಂಬಿಕೆ ಇಲ್ಲ. ಹೀಗಾಗಿ ಎಎಪಿ ಜತೆಗೆ ಮೈತ್ರಿ ಮಾಡಿಕೊಳ್ಳಲು ಯೋಚಿಸುತ್ತಿದ್ದೇವೆ' ಎಂದು ಅವರು ಹೇಳಿದ್ದಾರೆ.

701 ಕಿ.ಮೀ. ಉದ್ದದ ಮಹತ್ವಾಕಾಂಕ್ಷಿ ಹೆದ್ದಾರಿ

ನಾಗ್ಪುರ–ಮುಂಬೈ ಎಕ್ಸ್‌ಪ್ರೆಸ್‌ವೇ ಮೇಗೆ ಸಿದ್ಧ

ಪ್ರಜಾವಾಣಿ ವಾರ್ತೆ

ಮುಂಬೈ: ದೇಶದ ಅತಿಉದ್ದದ ಹೆದ್ದಾರಿ ಎಂದೇ ಪರಿಗಣಿಸಲಾಗುವ 'ನಾಗ್ಪುರ–ಮುಂಬೈ ಸೂಪರ್ ಕಮ್ಯುನಿಕೇಷನ್ ಎಕ್ಸ್‌ಪ್ರೆಸ್‌ವೇ' ಬರುವ ಮೇ ತಿಂಗಳಲ್ಲಿ ಸಂಚಾರಕ್ಕೆ ಮುಕ್ತವಾಗಲಿದೆ.

ಈ ಎಕ್ಸ್‌ಪ್ರೆಸ್‌ವೇ ಅನ್ನು 'ಹಿಂದೂ ಹೃದಯಸಾಮ್ರಾಟ್ ಬಾಳಾಸಾಹೇಬ್ ಠಾಕ್ರೆ ಮಹಾರಾಷ್ಟ್ರ ಸಮೃದ್ಧಿ ಮಹಾಮಾರ್ಗ' ಎಂದೂ ಕರೆಯಲಾಗುತ್ತದೆ. ಇದು ಮಹಾರಾಷ್ಟ್ರ ಮಾತ್ರವಲ್ಲ, ಭಾರತದಲ್ಲಿಯೇ ಈ ವರೆಗೆ ಅನುಷ್ಠಾನಗೊಳಿಸಲಾಗಿರುವ ಮಹತ್ವಾಕಾಂಕ್ಷೆಯ ಯೋಜನೆ ಎಂಬ ಹೆಗ್ಗಳಿಕೆ ಹೊಂದಿದೆ.

ಮೊದಲ ಹಂತದಲ್ಲಿ, ಈ ಎಕ್ಸ್‌ಪ್ರೆಸ್‌ವೇ ಪೈಕಿ 'ಕಿತ್ತಳೆ ನಗರ' ನಾಗ್ಪುರ ಹಾಗೂ ಪ್ರಸಿದ್ಧ ಯಾತ್ರಾಕ್ಷೇತ್ರ ಶಿರಡಿಯನ್ನು ಸಂಪರ್ಕಿಸುವ ಮಾರ್ಗ ಮೇನಲ್ಲಿ ವಾಹನಗಳ ಸಂಚಾರಕ್ಕೆ ಮುಕ್ತವಾಗಲಿದೆ ಎಂದು ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಸಚಿವ ಏಕನಾಥ್ ಶಿಂಧೆ ಹೇಳಿದ್ದಾರೆ.

ಮುಖ್ಯಾಂಶಗಳು
- ಅಂತರರಾಷ್ಟ್ರೀಯ ಮಾನದಂಡಕ್ಕೆ ಅನುಗುಣವಾಗಿ ನಿರ್ಮಾಣ
- ಒಟ್ಟು 8 ಪಥಗಳಿರುವ ಹೆದ್ದಾರಿ
- ನಾಗ್ಪುರದಿಂದ ಮುಂಬೈ ತಲುಪಲು 8 ಗಂಟೆ ಸಾಕು

ಈ ಎಕ್ಸ್‌ಪ್ರೆಸ್‌ವೇ ಪೈಕಿ ನಾಗ್ಪುರ–ಶಿರಡಿ ನಡುವಿನ ಹೆದ್ದಾರಿಯಲ್ಲಿ ಸ್ವತಃ ಸಂಚರಿಸಿ, ಅಂತಿಮ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದ ನಂತರ ಅವರು ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು.

701 ಕಿ.ಮೀ. ಉದ್ದದ ಈ ಎಕ್ಸ್‌ಪ್ರೆಸ್‌ವೇ ಯೋಜನೆಗೆ ಬಿಜೆಪಿ–ಶಿವಸೇನಾ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ದೇವೇಂದ್ರ ಫಡಣವೀಸ್ ಚಾಲನೆ ನೀಡಿದ್ದರು. ಈ ಹೆದ್ದಾರಿಯು ನಾಗ್ಪುರ, ವಾರ್ಧಾ, ಅಮರಾವತಿ, ವಾಶಿಮ್, ಬುಲ್ಢಾನಾ, ಔರಂಗಾಬಾದ್, ಜಲ್ನಾ, ಅಹ್ಮದ್‌ನಗರ, ನಾಸಿಕ್ ಹಾಗೂ ಠಾಣೆ ಜಿಲ್ಲೆಗಳ ಮೂಲಕ ಹಾಯ್ದು ಹೋಗುತ್ತದೆ. ಅಕ್ಕಪಕ್ಕದ 14 ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುತ್ತದೆ.



ಮಹಾರಾಷ್ಟ್ರದ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಸಚಿವ ಏಕನಾಥ್ ಶಿಂಧೆ ಅವರು ಸೋಮವಾರ 'ನಾಗ್ಪುರ–ಮುಂಬೈ ಸೂಪರ್ ಕಮ್ಯುನಿಕೇಷನ್ ಎಕ್ಸ್‌ಪ್ರೆಸ್‌ವೇ' ಕಾಮಗಾರಿಯನ್ನು ಪರಿಶೀಲಿಸಿದರು

ದೇಶದ ಬೃಹತ್ ಬಂದರು ಜೆಎನ್‌ಪಿಟಿಗೆ (ಜವಾಹರಲಾಲ್ ನೆಹರೂ ಪೋರ್ಟ್ ಟ್ರಸ್ಟ್) ಈ ಹೆದ್ದಾರಿ ನೇರ ಸಂಪರ್ಕ ಕಲ್ಪಿಸಲಿದ್ದು, ಆಮದು–ರಫ್ತು ವ್ಯವಹಾರಕ್ಕೆ ಉತ್ತೇಜನ ಸಿಗಲಿದೆ.

ಪ್ರಮುಖ ಪ್ರವಾಸಿ ತಾಣಗಳ ಜೊತೆಗೆ, ದೆಹಲಿ–ಮುಂಬೈ ಕೈಗಾರಿಕಾ ಕಾರಿಡಾರ್, ಪಶ್ಚಿಮ ಸರಕು ಕಾರಿಡಾರ್ ಹಾಗೂ ವಾರ್ಧಾ ಮತ್ತು ಜಲ್ನಾದಲ್ಲಿರುವ ಬಂದರು ಸೇರಿದಂತೆ ಪ್ರಮುಖ ಕೈಗಾರಿಕಾ ಪ್ರದೇಶಗಳಿಗೂ ಸಂಪರ್ಕ ಕಲ್ಪಿಸಲಿದೆ.

ವೈಶಿಷ್ಟ್ಯಗಳು: ಈ ಎಕ್ಸ್‌ಪ್ರೆಸ್‌ನಲ್ಲಿ 50ಕ್ಕೂ ಹೆಚ್ಚು ಮೇಲ್ಸೇತುವೆಗಳು ಹಾಗೂ 5ಕ್ಕೂ ಹೆಚ್ಚು ಸುರಂಗಗಳಿವೆ. ವಾಹನಗಳ ಸಂಚಾರಕ್ಕಾಗಿ 400ಕ್ಕೂ ಅಧಿಕ ಅಂಡರ್‌ಪಾಸ್‌ಗಳಿದ್ದರೆ, ಜನರ ಓಡಾಟಕ್ಕಾಗಿ 300ಕ್ಕೂ ಹೆಚ್ಚು ಪಾದಚಾರಿ ಅಂಡರ್‌ಪಾಸ್‌ಗಳನ್ನು ನಿರ್ಮಿಸಲಾಗಿದೆ.

ಉಕ್ರೇನ್ ತ್ವರಿತವಾಗಿ ಶಾಂತಿ ಬಯಸುತ್ತಿದೆ: ಅಧ್ಯಕ್ಷ ವೊಲೊಡೊಮಿರ್ ಝೆಲೆನ್‌ಸ್ಕಿ ಇಂಗಿತ

‘ಪುಟಿನ್ ಜತೆ ಮಾತುಕತೆಯಿಂದ ಮಾತ್ರ ಪರಿಹಾರ’

ಎಲ್ವಿವ್ (ಎಪಿ): ‘ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ನೇರ ಮುಖಾಮುಖಿ ಭೇಟಿಯು ಮಾತ್ರ ಯುದ್ಧವನ್ನು ಕೊನೆಗೊಳಿಸಬಹುದು’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡೊಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಎರಡು ಕಡೆಯಿಂದಲೂ ಮತ್ತೊಂದು ಸುತ್ತಿನ ಮಾತುಕತೆಯ ನಿರೀಕ್ಷೆಯಲ್ಲಿರುವ ಝೆಲೆನ್‌ಸ್ಕಿ ಅವರು, ‘ಉಕ್ರೇನ್ ತನ್ನ ತಟಸ್ಥ ನಿಲುವನ್ನು ಘೋಷಿಸಲು ಮತ್ತು ತಡಮಾಡದೇ ಶಾಂತಿ ಪರಿಪಾಲಿಸಲು ರಷ್ಯಾಕ್ಕೆ ಖಾತರಿ ನೀಡಲು ಸಿದ್ಧ’ ಎಂದಿದ್ದಾರೆ.

ರಷ್ಯಾದ ಸ್ವತಂತ್ರ ಮಾಧ್ಯಮಗಳಿಗೆ ನೀಡಿದ ಸಂದರ್ಶನದಲ್ಲಿ ಅವರು, ‘ಉಕ್ರೇನ್, ರಷ್ಯಾದ ವಿರುದ್ಧ ತನ್ನ ಸಾರ್ವಭೌಮತ್ವವನ್ನು ಎತ್ತಿಹಿಡಿಯುವುದನ್ನು ಆದ್ಯತೆಯಾಗಿ ಪರಿಗಣಿಸಿದೆ’ ಎಂದು ಪ್ರತಿಪಾದಿಸಿದ್ದಾರೆ.

ತನ್ನ ವಿರುದ್ಧದ ನ್ಯಾಟೊ ಮೈತ್ರಿ ಒಕ್ಕೂಟದಿಂದ ಉಕ್ರೇನ್ ಅಂತರ ಕಾಯ್ದುಕೊಳ್ಳಬೇಕೆಂಬುದು ರಷ್ಯಾದ ದೀರ್ಘಕಾಲದ ಬೇಡಿಕೆಯಾಗಿದೆ. ತಟಸ್ಥತೆಯ ಪ್ರಶ್ನೆ ಬಂದಾಗ ಉಕ್ರೇನ್ ಅನ್ನು ನ್ಯಾಟೊ ಮತ್ತು ಇತರ ಮಿಲಿಟರಿ ಮೈತ್ರಿಕೂಟಗಳಿಂದ ಹೊರಗಿಡುವ ವಿಷಯದ ಕುರಿತು ಉಕ್ರೇನ್ ಜನರಿಂದ ಜನಾಭಿಪ್ರಾಯ ಸಂಗ್ರಹಿಸಬೇಕು ಎಂದೂ ಝೆಲೆನ್‌ಸ್ಕಿ ಹೇಳಿದ್ದಾರೆ. ‘ನಾವು ರಷ್ಯಾದ ಅಧ್ಯಕ್ಷರೊಂದಿಗೆ ಒಪ್ಪಂದಕ್ಕೆ ಬರಬೇಕಾಗಿದೆ. ಅದಕ್ಕಾಗಿ ಅವರ ಮತ್ತು ನನ್ನ ಮುಖಾಮುಖಿ ಭೇಟಿಯಾಗಬೇಕು’ ಎಂದೂ ಹೇಳಿದ್ದಾರೆ.



ಉಕ್ರೇನ್‌ನ ಪೂರ್ವ ಹಾರ್ಕಿವ್ ಸಮೀಪದ ಮಾಲಾ ರೋಗನ್ ಗ್ರಾಮವನ್ನು ಸೋಮವಾರ ಉಕ್ರೇನ್ ಸೇನಾ ಪಡೆ ಮರುವಶಕ್ಕೆ ಪಡೆಯಿತು — ಎಎಫ್‌ಪಿ ಚಿತ್ರ

ಮಾಧ್ಯಮಗಳಿಗೆ ರಷ್ಯಾ ಎಚ್ಚರಿಕೆ

ಮಾಸ್ಕೊ: ಉಕ್ರೇನ್ ಅಧ್ಯಕ್ಷ ವೊಲೊಡೊಮಿರ್ ಝೆಲೆನ್‌ಸ್ಕಿ ಅವರ ಜತೆ ನಡೆಸಿದ ಸಂದರ್ಶನವನ್ನು ಪ್ರಕಟಿಸದಂತೆ ರಷ್ಯಾ ಮಾಧ್ಯಮಗಳಿಗೆ ಅಲ್ಲಿನ ಸರ್ಕಾರ ಎಚ್ಚರಿಕೆ ನೀಡಿದೆ. ಉಕ್ರೇನ್ ನಾಯಕನ ಸಂದರ್ಶನ ನಡೆಸಿದ ಮಾಧ್ಯಮ ಸಂಸ್ಥೆಗಳ ಬಗ್ಗೆ ತನಿಖೆ ಆರಂಭಿಸಲಾಗಿದೆ ಎಂದು ರಷ್ಯಾದ ಸಂವಹನ ಕಾವಲುಪಡೆ ತಿಳಿಸಿದೆ. ರಷ್ಯಾದ ಹಲವು ಸಂಸ್ಥೆಗಳು ಝೆಲೆನ್‌ಸ್ಕಿ ಸಂದರ್ಶನ ನಡೆಸಿವೆ. ಈ ಸಂದರ್ಶನಗಳು ಪ್ರಕಟವಾಗದಂತೆ ತಡೆಯುವ ಅಗತ್ಯವಿದೆ ಎಂದು ಕಾವಲುಪಡೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಟರ್ಕಿಯಲ್ಲಿ ಮಾತುಕತೆ ಇಂದು ಆರಂಭ: ಕ್ರೆಮ್ಲಿನ್

ಮಾಸ್ಕೊ (ರಾಯಿಟರ್ಸ್): ರಷ್ಯಾ ಹಾಗೂ ಉಕ್ರೇನ್ ನಡುವೆ ಶಾಂತಿ ಮಾತುಕತೆಗೆ ಟರ್ಕಿಯಲ್ಲಿ ವೇದಿಕೆ ಸಿದ್ಧವಾಗಿದ್ದು, ಮಾತುಕತೆ ಮಂಗಳವಾರ ಆರಂಭವಾಗಲಿದೆ. ಸೋಮವಾರ ಮಧ್ಯರಾತ್ರಿ ರಷ್ಯಾದ ನಿಯೋಗ ಅಂಕಾರಕ್ಕೆ ಬಂದಿಳಿದಿದೆ.

‘ಮಾತುಕತೆ ನಡೆಯುತ್ತಿರುವ ಬಗ್ಗೆಯಾಗಲಿ, ಈ ನಿಟ್ಟಿನಲ್ಲಿ ಸಾಧಿಸಲಾಗಿರುವ ಪ್ರಗತಿ ಕುರಿತಾಗಲಿ ನಾವು ಮಾತನಾಡುವುದಿಲ್ಲ. ಉಭಯ ದೇಶಗಳ ಪ್ರತಿನಿಧಿಗಳು ಮುಖಾಮುಖಿಯಾಗುತ್ತಿರುವುದೇ ಮಹತ್ವದ ವಿಷಯ’ ಎಂದು ‘ಕ್ರೆಮ್ಲಿನ್’ನ ವಕ್ತಾರ ಡಿಮಿಟ್ರಿ ಪೆಸ್ಕೊವ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಶಾಂತಿ–ಸಂಧಾನ ಕುರಿತ ಮಾಹಿತಿಯನ್ನು ಬಹಿರಂಗಪಡಿಸಬಾರದು ಎಂಬ ನಮ್ಮ ನೀತಿಗೆ ಬದ್ಧವಾಗಿದ್ದೇವೆ. ಈ ನೀತಿಗೆ ವಿರುದ್ಧವಾಗಿ ನಡೆದಿದ್ದೇ ಆದಲ್ಲಿ, ನಾವು ಸಂಧಾನ ಪ್ರಕ್ರಿಯೆಗೆ ಧಕ್ಕೆ ತಂದಂತೆ ಆಗಲಿದೆ’ ಎಂದೂ ಅವರು ಹೇಳಿದರು.

‘ಪುಟಿನ್–ಝೆಲೆನ್‌ಸ್ಕಿ ಭೇಟಿ ಸಾಧ್ಯತೆ ಇಲ್ಲ’: ‘ಅಧ್ಯಕ್ಷ ಪುಟಿನ್ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಮುಖಾಮುಖಿಯಾಗಿಸುವ ಯಾವುದೇ ಚಿಂತನೆ ಇಲ್ಲ’ ಎಂದು ಪೆಸ್ಕೊವ್ ಹೇಳಿದರು.

ಈ ಕುರಿತು ಸರ್ಬಿಯಾ ಮಾಧ್ಯಮಗಳೊಂದಿಗೆ ಮಾತನಾಡಿದ ರಷ್ಯಾ ವಿದೇಶಾಂಗ ಸಚಿವ ಸರ್ಗೆ ಲಾವ್ರೋವ್, ‘ಪ್ರಸ್ತುತ ಸನ್ನಿವೇಶದಲ್ಲಿ ಪುಟಿನ್ ಹಾಗೂ ಝೆಲೆನ್‌ಸ್ಕಿ ನಡುವೆ ಸಭೆ ಆಯೋಜಿಸುವುದು ಪ್ರತಿಕೂಲ ಪರಿಣಾಮ ಉಂಟು ಮಾಡಬಹುದು. ಉಭಯ ದೇಶಗಳ ನಡುವಿನ ಶಾಂತಿ ಮಾತುಕತೆಯಲ್ಲಿ ಏನಾದರೂ ಪ್ರಗತಿ ಕಂಡುಬಂದಾಗ ಮಾತ್ರ ಅವರು ಭೇಟಿಯಾಗಬೇಕು’ ಎಂದರು.

ಪುಟಿನ್ ಕಟುಕ ಎಂದಿದ್ದ ಬೈಡನ್ ಹೇಳಿಕೆ ಆತಂಕಕಾರಿ: ರಷ್ಯಾ

ಮಾಸ್ಕೊ: ಉಕ್ರೇನ್ ಮೇಲಿನ ರಷ್ಯಾ ಕಾರ್ಯಾಚರಣೆ 32ನೇ ದಿನಕ್ಕೆ ಕಾಲಿಟ್ಟಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ನಡೆಯನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಟೀಕಿಸಿದ್ದಾರೆ. ಬೈಡನ್ ಹೇಳಿಕೆಗೆ ಸೋಮವಾರ ರಷ್ಯಾ ಕಳವಳ ವ್ಯಕ್ತಪಡಿಸಿದೆ.

‘ಇದು ನಿಸ್ಸಂಶಯವಾಗಿ ಆತಂಕಕಾರಿ ಹೇಳಿಕೆ’ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಬೈಡನ್ ಹೇಳಿಕೆಗಳನ್ನು ಮಾಸ್ಕೊ ‘ಸೂಕ್ಷ್ಮವಾಗಿ ಗಮನಿಸುವುದನ್ನು ಮುಂದುವರಿಸುತ್ತದೆ’ ಎಂದಿದ್ದಾರೆ.

33ನೇ ದಿನದ ಬೆಳವಣಿಗೆಗಳು

- ರಷ್ಯಾದ ದಾಳಿಯಿಂದ ಸಂಕಷ್ಟಕ್ಕೀಡಾದ ಉಕ್ರೇನ್ ನಾಗರಿಕರಿಗೆ ನೆರವಾಗುವ ನಿಟ್ಟಿನಲ್ಲಿ ಆರ್ಥಿಕ ನೆರವು ನೀಡಬೇಕು ಎಂಬ ಸಂದೇಶವನ್ನು ಆಸ್ಕರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಹಾಲಿವುಡ್ ಹಂಚಿಕೊಂಡಿದೆ
- ಗ್ರೀಸ್ ಸಂಸತ್ತನ್ನು ಉದ್ದೇಶಿಸಿ ಏಪ್ರಿಲ್ 7ರಂದು ಉಕ್ರೇನ್ ಅಧ್ಯಕ್ಷ ವೊಲೊಡೊಮಿರ್ ಝೆಲೆನ್‌ಸ್ಕಿ ಅವರು ಭಾಷಣ ಮಾಡಲಿದ್ದಾರೆ
- ರಷ್ಯಾಕ್ಕೆ ಶ್ರೀಲಂಕಾ ಸರ್ಕಾರ ವಿಮಾನ ಸೇವೆಯನ್ನು ಅಮಾನತುಗೊಳಿಸಿದೆ
- ರಷ್ಯಾದ ಸೇನಾ ಕಾರ್ಯಾಚರಣೆ ನಿಲ್ಲುವವರೆಗೆ ದಿನ ಪತ್ರಿಕೆ ಮುದ್ರಣವನ್ನು ಸ್ಥಗಿತಗೊಳಿಸುತ್ತಿದ್ದೇವೆ. ಜೊತೆಗೆ ನಮ್ಮ ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮಗಳು ಸಹ ಕಾರ್ಯ ನಿರ್ವಹಿಸುವುದಿಲ್ಲ ಎಂದು ರಷ್ಯಾದ ಸ್ವಾವಲಂಬಿ ಪತ್ರಿಕೆ ಖ್ಯಾತಿಯ ‘ನೊವಾಯ ಗೆಜೆಟಾ’ ತಿಳಿಸಿದೆ.
- ಉಕ್ರೇನ್ ಮೇಲಿನ ರಷ್ಯಾದ ದಾಳಿಯಿಂದಾಗಿ ಸುಮಾರು 40 ಲಕ್ಷ ಮಂದಿ ಇತರೆ ದೇಶಗಳಿಗೆ ವಲಸೆ ಹೋಗಿದ್ದಾರೆ. ಯುದ್ಧ ಆರಂಭವಾದ ಫೆ.24ರ ಬಳಿಕ ಮೊದಲೆರಡು ವಾರಗಳಲ್ಲಿ ರಷ್ಯಾದ ಬಾಂಬ್ ದಾಳಿಯಿಂದ ತಪ್ಪಿಸಿಕೊಳ್ಳಲು 4.4 ಕೋಟಿ ಜನರ ಪೈಕಿ 25 ಲಕ್ಷ ಮಂದಿ ಉಕ್ರೇನ್ ತೊರೆದು ಅನ್ಯ ದೇಶಗಳಿಗೆ ಹೋಗಿದ್ದರು.
- ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಅವರು ಈ ವಾರ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ. ಈ ವೇಳೆ ತೈಲ ಮತ್ತು ಮಿಲಿಟರಿ ಉಪಕರಣಗಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸುವ ಸಾಧ್ಯತೆ ಇದೆ
- ರಷ್ಯಾ– ಉಕ್ರೇನ್ ಬಿಕ್ಕಟ್ಟಿನ ಸಂಧಾನಕಾರರಾಗಿ ಕೆಲಸ ನಿರ್ವಹಿಸಿದ್ದ ರಷ್ಯಾದ ಶತಕೋಟ್ಯಧಿಪತಿಗಳಾದ ರೋಮನ್ ಅಬ್ರಮೊವಿಚ್ ಮತ್ತು ಇತರರಿಗೆ ಪುಟಿನ್ ಬೆಂಬಲಿಗರು ವಿಷವುಣಿಸಿರುವ ಸಾಧ್ಯತೆ ಇದೆ ಎಂದು ವಾಲ್‌ಸ್ಟ್ರೀಟ್ ಜರ್ನಲ್ ಶಂಕೆ ವ್ಯಕ್ತಪಡಿಸಿದೆ

‘₹ 43 ಲಕ್ಷ ಕೋಟಿಗೂ ಅಧಿಕ ಮೌಲ್ಯದಷ್ಟು ಹಾನಿ’

ಕಿವ್ (ರಾಯಿಟರ್ಸ್): ‘ದೇಶದ ಮೇಲೆ ರಷ್ಯಾ ಯುದ್ಧ ಸಾರಿದ ದಿನದಿಂದ ಈ ವರೆಗೆ ₹ 43 ಲಕ್ಷ ಕೋಟಿಗೂ (564.9 ಶತಕೋಟಿ ಡಾಲರ್) ಅಧಿಕ ಮೌಲ್ಯದಷ್ಟು ಹಾನಿಯಾಗಿದೆ’ ಎಂದು ಉಕ್ರೇನ್ ಹಣಕಾಸು ಸಚಿವೆ ಯೂಲಿಯಾ ಸಿವಿರಿಡೆಂಕೊ ಸೋಮವಾರ ಹೇಳಿದ್ದಾರೆ.



ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ವಿವಿಧ ಕ್ಷೇತ್ರಗಳ ಸಾಧಕರಿಗೆ ‘ಪದ್ಮ’ ಪ್ರಶಸ್ತಿ ಪ್ರದಾನ ಮಾಡಿದರು. ಹಿನ್ನೆಲೆ ಗಾಯಕ ಸೋನು ನಿಗಮ್, ಹಿರಿಯ ನಟಿ ಸಾಹುಕಾರ್ ಜಾನಕಿ, ಶಿವಮೊಗ್ಗದ ಗಮಕಿ ಎಚ್‌.ಆರ್‌. ಕೇಶವಮೂರ್ತಿ, ಅಣ್ಣಿಗೇರಿಯ ಕೃಷಿ ಮತ್ತು ಸಂಶೋಧನೆ ಕ್ಷೇತ್ರದ ಸಾಧಕ ಅಬ್ದುಲ್ ಖಾದರ್ ನಡಕಟ್ಟಿನ್, ವಿಟ್ಲದ ಕೃಷಿ ಕ್ಷೇತ್ರದ ಸಾಧಕ ಅಮ್ಮೈ ಮಹಾಲಿಂಗ ನಾಯ್ಕ ‘ಪದ್ಮಶ್ರೀ’ ಸ್ವೀಕರಿಸಿದರು

ಶ್ರೀಲಂಕಾ: ಆರ್ಥಿಕ ಸ್ಥಿತಿ ಚರ್ಚೆ– ನೆರವಿನ ಭರವಸೆ

ಕೊಲಂಬೊ/ನವದೆಹಲಿ (ಪಿಟಿಐ): ಶ್ರೀಲಂಕಾ ಪ್ರವಾಸದಲ್ಲಿರುವ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್, ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ದ್ವೀಪ ರಾಷ್ಟ್ರಕ್ಕೆ ಅಗತ್ಯವಿರುವ ಎಲ್ಲಾ ನೆರವು ಮುಂದುವರಿಸುವುದಾಗಿ ಭರವಸೆ ನೀಡಿದರು.

ಸೋಮವಾರ ಲಂಕಾದ ಅಧ್ಯಕ್ಷ ಗೊಟಬಯ ರಾಜಪಕ್ಸ ಮತ್ತು ಪ್ರಧಾನಿ ಮಹಿಂದಾ ರಾಜಪಕ್ಸ ಅವರನ್ನು ಭೇಟಿ ಮಾಡಿದ ಸಚಿವ ಜೈಶಂಕರ್ ಅವರು, ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ ಶ್ರೀಲಂಕಾಕ್ಕೆ ಭಾರತವು ನಿರಂತರ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದ್ದಾರೆ.

ಇತ್ತೀಚೆಗಷ್ಟೇ ಶ್ರೀಲಂಕಾಕ್ಕೆ ಭಾರತ ₹ 7,600 ಕೋಟಿ (ಶತಕೋಟಿ ಡಾಲರ್) ಸಾಲ ನೀಡುವುದಾಗಿ ಘೋಷಿಸಿದೆ. ಈ ನಡುವೆ, 2.5 ಶತಕೋಟಿ ಡಾಲರ್ ನೆರವು ನೀಡುವಂತೆ ಶ್ರೀಲಂಕಾ ಇತ್ತೀಚೆಗೆ ಚೀನಾಕ್ಕೆ ಮೊರೆ ಇಟ್ಟಿತ್ತು. ಇದಕ್ಕೂ ಮೊದಲು ಅವರು ಹಣಕಾಸು ಸಚಿವ ಬಸಿಲ್ ರಾಜಪಕ್ಸ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

‘ಹಣಕಾಸು ಸಚಿವ ಬಸಿಲ್ ರಾಜಪಕ್ಸ ಅವರ ಭೇಟಿಯೊಂದಿಗೆ ಶ್ರೀಲಂಕಾ ಪ್ರವಾಸ ಆರಂಭಿಸಿರುವೆ. ದೇಶದ ಆರ್ಥಿಕ ಸ್ಥಿತಿ ಹಾಗೂ ಭಾರತದ ನೆರವು ಕುರಿತು ಅವರೊಂದಿಗೆ ಚರ್ಚಿಸಲಾಯಿತು’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಭೇಟಿ: ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಅಂಗಸಂಸ್ಥೆ ‘ಲಂಕಾ ಐಒಸಿ’ ಘಟಕಕ್ಕೆ ಭೇಟಿದ ಜೈಶಂಕರ್, ಇಂಧನ ಲಭ್ಯತೆ ಹಾಗೂ ಪೂರೈಕೆಗೆ ಸಂಬಂಧಿಸಿ ಮಾಹಿತಿ ಪಡೆದರು.

ಮನವಿ: ಹೆಚ್ಚುವರಿಯಾಗಿ ₹ 11,400 ಕೋಟಿ (1.5 ಶತಕೋಟಿ ಡಾಲರ್) ಸಾಲ ನೀಡುವಂತೆ ಶ್ರೀಲಂಕಾ ಸರ್ಕಾರ ಭಾರತಕ್ಕೆ ಮನವಿ ಸಲ್ಲಿಸಿದೆ.

ಅಗತ್ಯ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಈ ನೆರವು ಅಗತ್ಯವಾಗಿದೆ ಎಂದು ಸರ್ಕಾರ ಹೇಳಿದೆ.

ಬಿಮ್‌ಸ್ಟೆಕ್ ಶೃಂಗ: ಮಾರ್ಚ್ 30 ರಂದು ನಡೆಯಲಿರುವ ಬಿಮ್‌ಸ್ಟೆಕ್‌ನ ಶೃಂಗಸಭೆಯಲ್ಲಿ ಸಚಿವ ಜೈಶಂಕರ್ ಪಾಲ್ಗೊಳ್ಳುವರು. ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಮೂಲಕ ಈ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.




ವಿದೇಶಾಂಗ ಸಚಿವ ಎಸ್‌.ಜೈಶಂಕರ್ ಅವರು ಕೊಲಂಬೊದಲ್ಲಿ ಸೋಮವಾರ ಶ್ರೀಲಂಕಾ ಹಣಕಾಸು ಸಚಿವ ಬಸಿಲ್ ರಾಜಪಕ್ಸ ಅವರನ್ನು ಭೇಟಿ ಮಾಡಿದರು — ಪಿಟಿಐ ಚಿತ್ರ

ಹಿಂದೂ ಅಲ್ಲ ಎಂಬ ಕಾರಣಕ್ಕೆ ನೃತ್ಯ ಪ್ರದರ್ಶನಕ್ಕೆ ನಕಾರ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕರ್ನಾಟಕದಲ್ಲಿ ಜಾತ್ರೆ, ಹಬ್ಬ ಮತ್ತು ದೇವಸ್ಥಾನಗಳ ಸುತ್ತಮುತ್ತ ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ನೀಡಬಾರದು ಎಂಬ ಒತ್ತಾಯಗಳ ಬೆನ್ನಲ್ಲೇ, ಕೇರಳದಲ್ಲಿ ಹಿಂದೂ ಅಲ್ಲ ಎಂಬ ಕಾರಣಕ್ಕೆ ದೇವಸ್ಥಾನದ ಉತ್ಸವವೊಂದರಲ್ಲಿ ಶಾಸ್ತ್ರೀಯ ನೃತ್ಯಗಾರ್ತಿಯೊಬ್ಬರ ಪ್ರದರ್ಶನಕ್ಕೆ ಅವಕಾಶ ನಿರಾಕರಿಸಲಾಗಿದೆ.

ಮದ್ರಾಸ್ ವಿ.ವಿಯಿಂದ ಎಂ.ಎ ಭರತನಾಟ್ಯಂ ಕೋರ್ಸ್‌ನಲ್ಲಿ ಮೊದಲ ರ್‍ಯಾಂಕ್ ಪಡೆದ ಶಾಸ್ತ್ರೀಯ ನೃತ್ಯಗಾರ್ತಿ ಮಾನ್ಸಿಯಾ ವಿ.ಪಿ ಅವರು ಹಿಂದೂ ಅಲ್ಲ ಎಂಬ ಕಾರಣಕ್ಕೆ ತ್ರಿಶ್ಶೂರು ಜಿಲ್ಲೆಯ ಇರಿಂಜಲಕೂಡದಲ್ಲಿರುವ ಕೂಡಲ್ ಮಾಣಿಕ್ಯಂ ದೇವಸ್ಥಾನದಲ್ಲಿ ನೃತ್ಯ ಪ್ರದರ್ಶನಕ್ಕೆ ಅವಕಾಶ ನಿರಾಕರಿಸಲಾಗಿದೆ. ಈ ವಿಚಾರದ ಬಗ್ಗೆ ಅವರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದು, ದೇವಸ್ಥಾನದ ಈ ನಿರ್ಧಾರಕ್ಕೆ ಕೇರಳದ ಮಾಜಿ ಆರೋಗ್ಯ ಸಚಿವೆ ಹಾಗೂ ಸಿಪಿಎಂ ಹಿರಿಯ ನಾಯಕಿ ಕೆ.ಕೆ ಶೈಲಜಾ ಅವರು ಸೇರಿದಂತೆ ಸಾಮಾಜಿಕ ಮತ್ತು ರಾಜಕೀಯ ಕಾರ್ಯ ಕರ್ತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಮಾನ್ಸಿಯಾ

ಹಬ್ಬದ ಉತ್ಸವದ ಭಾಗವಾಗಿ ಏಪ್ರಿಲ್ 21ರಂದು ಮಾನ್ಸಿಯ ಅವರ ನೃತ್ಯ ಪ್ರದರ್ಶನ ನಿಗದಿಯಾಗಿತ್ತು.

ಈ ಕುರಿತು ಜಾಹೀರಾತನ್ನು ದೇವಸ್ಥಾನ ಪ್ರಕಟಿಸಿತ್ತು. ಆದರೆ ಕೆಲ ದಿನಗಳ ಬಳಿಕ ಹಿಂದೂ ಧರ್ಮಕ್ಕೆ ಸೇರಿದವರು ಅಲ್ಲ ಎಂಬ ಕಾರಣಕ್ಕೆ ದೇವಸ್ಥಾನದಲ್ಲಿ ನೃತ್ಯಕ್ಕೆ ಅವಕಾಶ ನೀಡಲಾಗದು ಎಂದು ಮಾನ್ಸಿಯಾ ಅವರಿಗೆ ದೇವಸ್ಥಾನದ ಅಧಿಕಾರಿಗಳು ತಿಳಿಸಿದ್ದಾರೆ.

ದೇವಸ್ಥಾನದ ಸಂಪ್ರದಾಯದ ಪ್ರಕಾರ ಹಿಂದೂ ಧರ್ಮದ ನಂಬಿಕಸ್ಥರಿಗೆ ಮಾತ್ರ ದೇವಸ್ಥಾನದ ಒಳಗೆ ಪ್ರವೇಶ ನೀಡಲಾಗುತ್ತದೆ. ನೃತ್ಯದ ವೇದಿಕೆ ದೇವಸ್ಥಾನದ ಒಳಗಿರುವ ಕಾರಣ ಮಾನ್ಸಿಯಾ ಅವರ ನೃತ್ಯಕ್ಕೆ ಅವಕಾಶ ನೀಡಲಾಗದು ಎಂದು ಕೆಲ ಮಾಧ್ಯಮ ಪ್ರತಿನಿಧಿಗಳಿಗೆ ದೇವಸ್ಥಾನದ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಸಿದ್ಧ ಗುರುವಾಯೂರು ಶ್ರೀ ಕೃಷ್ಣ ದೇವಸ್ಥಾನದ ಹಬ್ಬದ ಉತ್ಸವದಲ್ಲೂ ಇದೇ ಕಾರಣಕ್ಕೆ ನನ್ನ ಪ್ರದರ್ಶನಕ್ಕೆ ಅವಕಾಶ ನಿರಾಕರಿಸಲಾಗಿತ್ತು ಎಂದು ಮಾನ್ಸಿಯಾ ಅವರು ಸಾಮಾಜಿಕ ಜಾಲತಾಣದಲ್ಲಿ ಅಲವತ್ತುಕೊಂಡಿದ್ದಾರೆ.

ಹಿಜಾಬ್: ‘ಸುಪ್ರೀಂ’ಗೆ ಮತ್ತೊಂದು ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಾಲೆಗಳಲ್ಲಿ ಹಿಜಾಬ್ ನಿರ್ಬಂಧಿಸಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ಎತ್ತಿಹಿಡಿದಿರುವ ಕರ್ನಾಟಕ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಎಐಎಂಪಿಎಲ್‌ಬಿ) ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

‘ಇದು ಮುಸ್ಲಿಂ ಬಾಲಕಿಯರ ವಿರುದ್ಧ ನೇರವಾದ ತಾರತಮ್ಯ’ ಎಂದಿರುವ ಮಂಡಳಿಯು, ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಮಂಡಳಿಯು ಖಾಸಗಿ ಸಂಸ್ಥೆಯಾಗಿದ್ದು, ಸೊಸೈಟಿಯಾಗಿ ನೋಂದಾಯಿಸಿಕೊಂಡಿದೆ.

ಪವಿತ್ರ ಕುರಾನ್‌ನಲ್ಲಿನ ಧರ್ಮ ಗ್ರಂಥಗಳ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ, ಹನಫಿ, ಮಾಲಿಕಿ, ಶಾಫಾಯಿ ಮತ್ತು ಹಂಬ್ಲಿ ಎಂಬ ಎಲ್ಲಾ ಚಿಂತನಾ ಶಾಖೆಗಳ ಧಾರ್ಮಿಕ ವಿದ್ವಾಂಸರಲ್ಲಿ ಹಿಜಾಬ್ ಅಭ್ಯಾಸವು ‘ವಾಜಿಬ್’ (ಕಡ್ಡಾಯ) ಎಂಬ ಒಮ್ಮತವಿದೆ ಎಂದು ಅದು ವಾದಿಸಿದೆ.

ಈ ಕಟ್ಟುಪಾಡನ್ನು ಅನುಸರಿಸದಿದ್ದಲ್ಲಿ ಪಾಪವಾಗುತ್ತದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

‘ಕಳೆದ ವರ್ಷ ಚೀನಾ ಸಮೀಪ ಅಮೆರಿಕ ಪಡೆಗಳಿಂದ ಸಮರಾಭ್ಯಾಸ’

ಬೀಜಿಂಗ್ (ಪಿಟಿಐ): ಅಮೆರಿಕ ಪಡೆಗಳು ಚೀನಾ ಸಮೀಪ ಕಳೆದ ವರ್ಷ 100ಕ್ಕೂ ಹೆಚ್ಚು ಬಾರಿ ಬೃಹತ್ ಪ್ರಮಾಣದ ಸಮರಾಭ್ಯಾಸ ನಡೆಸಿದ್ದವು ಎಂದು ವರದಿಯೊಂದು ಹೇಳಿದೆ.

ದಕ್ಷಿಣ ಚೀನಾ ಸಮುದ್ರದಲ್ಲಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಯತ್ನಿಸುತ್ತಿರುವ ಚೀನಾಕ್ಕೆ ತಿರುಗೇಟು ನೀಡುವುದು ಈ ಯುದ್ಧತಾಲೀಮಿನ ಉದ್ದೇಶವಾಗಿತ್ತು. ಅಲ್ಲದೇ, ನವೀನ ಯುದ್ಧತಂತ್ರಗಳ ಅಭ್ಯಾಸಕ್ಕೆ ಹೆಚ್ಚು ಒತ್ತು ನೀಡಲಾಗಿತ್ತು ಎಂದು ದಕ್ಷಿಣ ಚೀನಾ ಸಮುದ್ರದಲ್ಲಿನ ಪರಿಸ್ಥಿತಿ ಕುರಿತು ಸಂಶೋಧನೆ ನಡೆಸುವ ಸಂಸ್ಥೆ ಎಸ್‌ಸಿಎಸ್‌ಪಿಐ ತನ್ನ ವರದಿಯಲ್ಲಿ ಹೇಳಿದೆ.

‘ಅಧಿಕೃತವಾಗಿ ಲಭ್ಯವಿರುವ ಮಾಹಿತಿಯಂತೆ, ವಿವಾದಿತ ದಕ್ಷಿಣ ಚೀನಾ ಸಮುದ್ರದಲ್ಲಿ ಅಮೆರಿಕ ಮಿಲಿಟರಿ 95 ಬಾರಿ ಅಭ್ಯಾಸಗಳನ್ನು ನಡೆಸಿದೆ. ಆದರೆ, ಈ ಸಂಖ್ಯೆ 100ರ ಗಡಿ ದಾಟುವುದು’ ಎಂದು ಸಂಸ್ಥೆ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಇಸ್ರೇಲ್ ಪ್ರಧಾನಿಗೆ ಕೋವಿಡ್

ಜೆರುಸಲೇಂ (ಪಿಟಿಐ): ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಅವರು ಕೊರೊನಾ ಸೋಂಕಿಗೆ ತುತ್ತಾಗಿದ್ದಾರೆ ಎಂದು ಅವರ ಮಾಧ್ಯಮ ಸಲಹೆಗಾರ ತಿಳಿಸಿದ್ದಾರೆ. ಇದೇ ಕಾರಣಕ್ಕೆ ಬೆನೆಟ್ ಅವರ ಭಾರತದ ಪ್ರವಾಸ ರದ್ದಾಗುವ ಸಾಧ್ಯತೆಯಿದೆ ಎನ್ನಲಾಗಿದೆ.



ನಫ್ತಾಲಿ ಬೆನೆಟ್

ಅವರು ಏಪ್ರಿಲ್ 3ರಿಂದ ಏಪ್ರಿಲ್ 5ರವರೆಗೆ ಭಾರತ ಪ್ರವಾಸ ಕೈಗೊಳ್ಳಬೇಕಿತ್ತು.

ಸೋಮವಾರ ಹೇಳಿಕೆ ಬಿಡುಗಡೆ ಮಾಡಿರುವ ಇಸ್ರೇಲ್ ಪ್ರಧಾನಿ ಕಾರ್ಯಾಲಯವು, ‘ಪ್ರಧಾನಿ ಬೆನೆಟ್ ಅವರ ಆರೋಗ್ಯ ಚೆನ್ನಾಗಿದೆ. ಆದಾಗ್ಯೂ ಅವರು ಮನೆಯಿಂದಲೇ ತಮ್ಮ ಜವಾಬ್ದಾರಿ ನಿರ್ವಹಿಸಲಿದ್ದಾರೆ’ ಎಂದು ತಿಳಿಸಿದೆ. ಹೀಗಾಗಿ ಅವರ ಭಾರತದ ಪ್ರವಾಸ ರದ್ದಾಗಲಿದೆಯೇ ಎಂಬ ಪ್ರಶ್ನೆ ಉದ್ಭವಿಸಿದೆ.

ಪ್ರಧಾನಿ ರಾಜ್ಯ ಪ್ರವಾಸ ರದ್ದು

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಏ. 5ರ ಕರ್ನಾಟಕ ಪ್ರವಾಸ ರದ್ದಾಗಿದೆ. ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಅವರ ಜತೆ ಬೆಂಗಳೂರಿಗೆ ಮೋದಿ ಭೇಟಿ ನೀಡಬೇಕಿತ್ತು.

ಬೆನೆಟ್ ಅವರಿಗೆ ಕೋವಿಡ್ ತಗುಲಿರುವುದರಿಂದ ಅವರ ಭಾರತ ಪ್ರವಾಸ ರದ್ದಾಗಿದೆ. ಇಬ್ಬರು ಬೆಂಗಳೂರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಉದ್ಘಾಟಿಸಬೇಕಾಗಿತ್ತು. ಮತ್ತೊಂದು ದಿನಾಂಕ ನಿಗದಿ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಉದ್ಘಾಟನೆ, ಬೆಂಗಳೂರು ಉಪನಗರ ರೈಲು ಯೋಜನೆ ಕಾಮಗಾರಿಗೆ ಚಾಲನೆ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳಬೇಕಿತ್ತು.

ಕೋವಿಡ್: ದೇಶದಲ್ಲಿ 1,270 ಹೊಸ ಪ್ರಕರಣ



ನವದೆಹಲಿ(ಪಿಟಿಐ): ಸೋಮವಾರ ಬೆಳಿಗ್ಗೆ 8ಕ್ಕೆ ಲಭ್ಯವಿರುವ ಮಾಹಿತಿ ಪ್ರಕಾರ ಕಳೆದ 24 ಗಂಟೆಗಳಲ್ಲಿ ದೇಶದಲ್ಲಿ ಕೋವಿಡ್‌ನ 1,270 ಹೊಸ ಪ್ರಕರಣಗಳು ವರದಿಯಾಗಿವೆ. ಸಕ್ರಿಯ ಪ್ರಕರಣಗಳು 15,859ಕ್ಕೆ ಇಳಿಕೆಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. 31 ಮಂದಿ ಸಾವನ್ನಪ್ಪಿದ್ದು, ಇದುವರೆಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 5.21 ಲಕ್ಷಕ್ಕೆ ಏರಿಕೆಯಾಗಿದೆ. ಮೃತಪಟ್ಟ 31 ಜನರ ಪೈಕಿ 25 ಮಂದಿ ಕೇರಳದವರು.

‘ಸ್ಲ್ಯಾಪ್‌ಗೇಟ್’ಗೆ ಸಾಕ್ಷಿಯಾದ 94ನೇ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ

‘ಕೋಡ’ ಅತ್ಯುತ್ತಮ ಚಿತ್ರ, ವಿಲ್ ಸ್ಮಿತ್ ಅತ್ಯುತ್ತಮ ನಟ

ಲಾಸ್ ಏಂಜಲಿಸ್ (ಪಿಟಿಐ, ಎಎಫ್‌ಪಿ): ಅತಿ ಹೆಚ್ಚಿನ ಸಂಖ್ಯೆಯಲ್ಲಿ ಶ್ರವಣದೋಷವುಳ್ಳ ಕಲಾವಿದರೇ ಅಭಿನಯಿಸಿದ್ದ, ‘ಕೋಡ’(CODA-ಚೈಲ್ಡ್ ಆಫ್ ಡೆಫ್ ಅಡಲ್ಟ್ಸ್) ಸಿನಿಮಾವು 94ನೇ ಆಸ್ಕರ್ ಪ್ರಶಸ್ತಿ ಸಮಾರಂಭದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಬಾಚಿ ಇತಿಹಾಸ ಬರೆಯಿತು.

ಕೋವಿಡ್ ಸಾಂಕ್ರಾಮಿಕ ಕಾಣಿಸಿಕೊಂಡ ಮೂರು ವರ್ಷಗಳ ಬಳಿಕ ನಡೆದ ಮೊದಲ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭವು ಭಾನುವಾರ ಸಂಜೆ ಇಲ್ಲಿನ ಹಾಲಿವುಡ್‌ನ ಡಾಲ್ಬಿ ಥಿಯೇಟರ್‌ನಲ್ಲಿ ಅದ್ದೂರಿಯಾಗಿ ನಡೆಯಿತು. ಮೂವರು ಮಹಿಳೆಯರೇ ಈ ಬಾರಿಯ ಸಮಾರಂಭವನ್ನು ನಿರೂಪಣೆ ಮಾಡಿದ್ದು ವಿಶೇಷ.

ಶಾನ್ ಹೇಡರ್ ನಿರ್ದೇಶನದ ‘ಕೋಡ’ ಚಿತ್ರವು, ‘ದಿ ಪವರ್ ಆಫ್ ದಿ ಡಾಗ್’, ‘ಡ್ಯೂನ್’, ‘ಕಿಂಗ್ ರಿಚರ್ಡ್’, ‘ವೆಸ್ಟ್ ಸೈಡ್ ಸ್ಟೋರಿ’ ಮುಂತಾದ ಚಿತ್ರಗಳನ್ನು ಹಿಂದಿಕ್ಕಿ ಆಸ್ಕರ್ ಬಾಚಿಕೊಂಡಿದೆ. ಇದೇ ಚಿತ್ರದ ನಟನೆಗಾಗಿ, ಟ್ರಾಯ್ ಕಾಟ್ಸರ್ ಅವರಿಗೆ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಒಲಿದಿದೆ. ಟ್ರಾಯ್, ಶ್ರವಣದೋಷವುಳ್ಳ ಮೊದಲ ಆಸ್ಕರ್ ಪುರಸ್ಕೃತ ನಟ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ.

‘ಕೋಡ’ ನಾಲ್ವರು ಸದಸ್ಯರಿರುವ ಕುಟುಂಬದ ಕಥೆಯಾಗಿದ್ದು, ಇದರಲ್ಲಿ ಮೂವರಿಗೆ ಶ್ರವಣದೋಷವಿರುತ್ತದೆ. ಹಾಡುಗಾರ್ತಿಯಾಗಬೇಕು ಎಂಬ ಹಂಬಲವಿರುವ ಶ್ರವಣದೋಷವಿರದ ಮಗಳ ತಂದೆಯಾಗಿ ಟ್ರಾಯ್ ಈ ಚಿತ್ರದಲ್ಲಿ ನಟಿಸಿದ್ದಾರೆ. ಇದೇ ಚಿತ್ರದಲ್ಲಿ ನಟಿಸಿದ್ದ ನಟಿ ಮಾರ್ಲಿ ಮ್ಯಾಟ್ಲಿನ್ 1987ರಲ್ಲಿ ಆಸ್ಕರ್ ಪಡೆದಿದ್ದರು.

‘ಕಿಂಗ್ ರಿಚರ್ಡ್’ ಚಿತ್ರದಲ್ಲಿ ಟೆನಿಸ್ ತಾರೆಗಳಾದ ವೀನಸ್ ಹಾಗೂ ಸೆರೇನಾ ವಿಲಿಯಮ್ಸ್ ತಂದೆ ‘ರಿಚರ್ಡ್ ವಿಲಿಯಮ್ಸ್’ ಪಾತ್ರಕ್ಕಾಗಿ ನಟ ವಿಲ್ ಸ್ಮಿತ್ ಅತ್ಯುತ್ತಮ ನಟ ಪ್ರಶಸ್ತಿ ಪಡೆದರು. ಇದು ವಿಲ್ ಸ್ಮಿತ್ ಅವರಿಗೆ ಚೊಚ್ಚಲ ಆಸ್ಕರ್ ಪ್ರಶಸ್ತಿ.

ಡುನಿ ವಿಲುನವ್ ನಿರ್ದೇಶನದ ಸೈಂಟಿಫಿಕ್ ಫಿಕ್ಷನ್ ಸಿನಿಮಾ ‘ಡ್ಯೂನ್’, ತಾಂತ್ರಿಕ ವಿಭಾಗದಲ್ಲಿ ಆರು ಆಸ್ಕರ್ ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

ಅತ್ಯುತ್ತಮ ಸಾಕ್ಷ್ಯಚಿತ್ರ ವಿಭಾಗದಲ್ಲಿ ಪ್ರವೇಶ ಪಡೆದಿದ್ದ ಭಾರತದ ‘ರೈಟಿಂಗ್ ವಿದ್ ಫೈರ್’ ಸಾಕ್ಷ್ಯಚಿತ್ರವು ‘ಸಮ್ಮರ್ ಆಫ್ ಸೋಲ್’ ಚಿತ್ರದ ವಿರುದ್ಧ ಸೋತಿತು.

ರಿಂಟು ಥಾಮಸ್ ಮತ್ತು ಸುಶ್ಮಿತ್ ಘೋಷ್ ರಚಿಸಿದ್ದ ಈ ಸಾಕ್ಷ್ಯಚಿತ್ರವು, ಉತ್ತರ ಪ್ರದೇಶದಲ್ಲಿ ದಲಿತ ಮಹಿಳೆಯರೇ ನಡೆಸುತ್ತಿರುವ ‘ಖಬರ್ ಲೆಹರಿಯಾ’ ಪತ್ರಿಕೆಯ ಕಥೆಯನ್ನು ಹೊಂದಿದೆ.

ಕಾರ್ಯಕ್ರಮದಲ್ಲಿ ಮೌನಾಚರಣೆ ಮಾಡುವ ಮೂಲಕ ಉಕ್ರೇನ್‌ಗೆ ಬೆಂಬಲವನ್ನು ನೀಡಲಾಯಿತು.

ಆಸ್ಕರ್ ಪ್ರಶಸ್ತಿಗಳ ವಿವರ

ಅತ್ಯುತ್ತಮ ನಟಿ	ಜೆಸಿಕಾ ಚೆಸ್ಟೀನ್ (ಸಿನಿಮಾ : ದಿ ಐಸ್ ಆಫ್ ಟ್ಯಾಮಿ ಫೇಯ್)
ಅತ್ಯುತ್ತಮ ಪೋಷಕ ನಟಿ	ಅರಿಯಾನ ಡಿಬೋಸ್ (ಸಿನಿಮಾ: ವೆಸ್ಟ್ ಸೈಡ್ ಸ್ಟೋರಿ)
ಅತ್ಯುತ್ತಮ ನಿರ್ದೇಶಕ	ಜೇನ್ ಕ್ಯಾಂಪಿಯನ್ (ಸಿನಿಮಾ: ದಿ ಪವರ್ ಆಫ್ ದಿ ಡಾಗ್)
ಅತ್ಯುತ್ತಮ ಚಿತ್ರಕಥೆ(ಸ್ಕ್ರೀನ್‌ಪ್ಲೇ)	ಶಾನ್ ಹೇಡರ್ (ಕೋಡ)
ಅತ್ಯುತ್ತಮ ಅಂತರರಾಷ್ಟ್ರೀಯ ಸಿನಿಮಾ	ಡ್ರೈವ್ ಮೈ ಕಾರ್ (ಜಪಾನ್)
ಅತ್ಯುತ್ತಮ ಮೂಲ ಚಿತ್ರಕಥೆ	ಕೆನೆತ್ ಬ್ರ್ಯಾನ್ಹ (ಸಿನಿಮಾ: ಬೆಲ್‌ಫಾಸ್ಟ್)
ಅತ್ಯುತ್ತಮ ಹಾಡು	ಬಿಲ್ಲಿ ಐಲಿಶ್ ಮತ್ತು ಫಿನಿಯಸ್ (ಸಿನಿಮಾ : ನೋ ಟೈಮ್ ಟು ಡೈ)
ಅತ್ಯುತ್ತಮ ವಸ್ತ್ರವಿನ್ಯಾಸ	ಜೆನ್ನಿ ಬೀವನ್ (ಸಿನಿಮಾ: ಕ್ರುವೆಲ್ಲಾ)
ಅತ್ಯುತ್ತಮ ಆ್ಯನಿಮೇಟೆಡ್ ಸಿನಿಮಾ	ಎನ್ಕಾಂಟೊ

ಲತಾ, ದಿಲೀಪ್‌ಕುಮಾರ್ ಸ್ಮರಣೆ ಮರೆತ ‘ಅಕಾಡೆಮಿ’

ಲಾಸ್ ಏಂಜಲಿಸ್/ಮುಂಬೈ (ಪಿಟಿಐ): ಲಾಸ್ ಏಂಜಲಿಸ್‌ನಲ್ಲಿ ನಡೆದ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾರತೀಯ ಚಿತ್ರಗಳ ಅಭಿಮಾನಿಗಳಿಗೆ ನಿರಾಸೆ ಹಾಗೂ ಆಘಾತ ಕಾದಿತ್ತು.

ಚಿತ್ರರಂಗಕ್ಕೆ ಅಗಾಧ ಕೊಡುಗೆ ನೀಡಿ, ಇತ್ತೀಚೆಗೆ ಅಗಲಿದ ಗಣ್ಯರನ್ನು ಸ್ಮರಿಸುವ ವಿಭಾಗದಡಿ (ಇನ್ ಮೆಮೊರಿಯಮ್), ಭಾರತೀಯ ಚಿತ್ರರಂಗದ ಹೆಸರಾಂತ ಗಾಯಕಿ ಲತಾ ಮಂಗೇಶ್ಕರ್ ಹಾಗೂ ನಟ ದಿಲೀಪ್ ಕುಮಾರ್ ಅವರ ಹೆಸರುಗಳಿಗೆ ಈ ವಿಭಾಗದಲ್ಲಿ ಸ್ಥಾನ ನೀಡದೇ ಇರುವುದು ಈ ನಿರಾಸೆ–ಆಘಾತಕ್ಕೆ ಕಾರಣವಾಗಿದೆ.

‘ಅಕಾಡೆಮಿ ಅವಾರ್ಡ್ಸ್’ನ ಈ ನಡೆ ಬಗ್ಗೆ ಅನೇಕರು ಟ್ವಿಟರ್‌ನಲ್ಲಿ ಅಸಮಾಧಾನ ಹೊರಹಾಕಿದ್ದಾರೆ. ಭಾರತೀಯ ಚಿತ್ರರಂಗದ ಈ ಇಬ್ಬರು ಮಹನೀಯರನ್ನು ಸ್ಮರಿಸದ ಸಂಘಟಕರ ನಡೆಯನ್ನು ಖಂಡಿಸಿದ್ದಾರೆ.

‘ಬ್ರಿಟಿಷ್ ಅಕಾಡೆಮಿ ಆಫ್ ಫಿಲ್ಮ್ ಆ್ಯಂಡ್ ಟೆಲಿವಿಷನ್ ಅವಾರ್ಡ್ಸ್’ ಸಂಸ್ಥೆಯು ಇದೇ ತಿಂಗಳ ಆರಂಭದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲತಾ ಮಂಗೇಶ್ಕರ್ ಹಾಗೂ ದಿಲೀಪ್ ಕುಮಾರ್ ಅವರಿಗೆ ಗೌರವ ಸಲ್ಲಿಸಿತ್ತು. ಅವರ ಸಾಧನೆ, ಚಿತ್ರರಂಗ ನೀಡಿದ ಕೊಡುಗೆಯನ್ನು ಸ್ಮರಿಸಿತ್ತು.

ನಿರೂಪಕ ಕ್ರಿಸ್ ರಾಕ್ ಕೆನ್ನೆಗೆ ಬಾರಿಸಿದ ವಿಲ್ ಸ್ಮಿತ್

94ನೇ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟ, ನಿರೂಪಕ ಕ್ರಿಸ್ ರಾಕ್‌ಗೆ ನಟ ವಿಲ್ ಸ್ಮಿತ್ ವೇದಿಕೆ ಏರಿ ಕಪಾಳಮೋಕ್ಷ ಮಾಡಿದ ಘಟನೆ ನಡೆಯಿತು.

ಆಗಿದ್ದೇನು?: ಅತ್ಯುತ್ತಮ ಸಾಕ್ಷ್ಯಚಿತ್ರ ಪ್ರಶಸ್ತಿ ಘೋಷಣೆ ಮಾಡಲು ವೇದಿಕೆಗೆ ರಾಕ್ ಆಗಮಿಸಿದ್ದರು. ಪ್ರಶಸ್ತಿ ಘೋಷಣೆ ಮಾಡುವುದಕ್ಕೂ ಮುನ್ನ, ವಿಲ್ ಸ್ಮಿತ್ ಅವರ ಪತ್ನಿ ಜೇಡ ಪಿಂಕೆಟ್ ಸ್ಮಿತ್ ಕುರಿತು ರಾಕ್ ಚಟಾಕಿ ಹಾರಿಸಿದರು. ‘ಜೇಡ, ಜಿ.ಐ.ಜೇನ್ ಸಿನಿಮಾದ ಎರಡನೇ ಭಾಗದಲ್ಲಿ ನಿಮ್ಮನ್ನು ನೋಡಲು ಕಾತುರದಿಂದಿದ್ದೇನೆ’ ಎಂದಿದ್ದರು. ಕೂದಲುದುರುವಿಕೆಯ ಕಾಯಿಲೆಯಿಂದ (ಅಲೋಪೀಸಿಯಾ) ಬಳಲುತ್ತಿರುವ ಜೇಡ ಅವರ ಬೋಳು ತಲೆಯನ್ನು ಉದ್ದೇಶಿಸಿ ರಾಕ್ ಈ ರೀತಿ ಹೇಳಿಕೆ ನೀಡಿದ್ದರು.



ಆಸ್ಕರ್ ಪ್ರಶಸ್ತಿ ಸ್ವೀಕರಿಸಿದ ವಿಲ್ ಸ್ಮಿತ್

ನಗುತ್ತಲೇ ಈ ಹೇಳಿಕೆಯನ್ನು ಸ್ವೀಕರಿಸಿದ ಸ್ಮಿತ್, ನಂತರ ಏಕಾಏಕಿ ವೇದಿಕೆ ಏರಿ ರಾಕ್ ಕೆನ್ನೆಗೆ ಬಾರಿಸಿದರು. ಈ ಘಟನೆಯು ಸಭಿಕರನ್ನು, ಪ್ರೇಕ್ಷಕರನ್ನು ಕ್ಷಣಕಾಲ ಗಲಿಬಿಲಿಗೊಳಿಸಿತು.

ಅಕಾಡೆಮಿ ಕ್ಷಮೆ ಕೋರಿದ ಸ್ಮಿತ್: ಈ ಎಲ್ಲ ಘಟನೆಯ ಬಳಿಕ ಅತ್ಯುತ್ತಮ ನಟ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸ್ಮಿತ್, ‘ನಾನು ಅಕಾಡೆಮಿ, ನಾಮನಿರ್ದೇಶನಗೊಂಡ ನಟರ ಕ್ಷಮೆಯಾಚಿಸುತ್ತೇನೆ’ ಎಂದಿದ್ದಾರೆ. ಆದರೆ ನೇರವಾಗಿ ರಾಕ್ ಅವರ ಕ್ಷಮೆಯನ್ನು ಅವರು ಕೋರಿಲ್ಲ.

ಘಟನೆ ಕುರಿತು ಟ್ವೀಟ್ ಮೂಲಕ ಪ್ರತಿಕ್ರಿಯೆ ನೀಡಿರುವ ಅಕಾಡೆಮಿ ಆಫ್ ಮೋಷನ್ ಪಿಕ್ಚರ್ಸ್ ಆರ್ಟ್ಸ್ ಆ್ಯಂಡ್ ಸೈನ್ಸ್(ಎಎಂಪಿಎಎಸ್), ‘ಯಾವುದೇ ರೀತಿಯ ಹಿಂಸೆಯನ್ನು ನಾವು ಕ್ಷಮಿಸುವುದಿಲ್ಲ’ ಎಂದಿದೆ. ಜೊತೆಗೆ ‘ರಾಕ್ ಕೂಡಾ ದೂರು ದಾಖಲಿಸಲು ನಿರಾಕರಿಸಿದ್ದಾರೆ’ ಎಂದು ಲಾಸ್ ಏಂಜಲಿಸ್ ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.



ಕ್ರಿಸ್ ರಾಕ್ ಕೆನ್ನೆಗೆ ಬಾರಿಸಿದ ವಿಲ್ ಸ್ಮಿತ್

ಭಾರತದ ನಮಿತ್ ಮಲ್ಹೋತ್ರಾರ ‘ಡಿಎನ್‌ಇಜಿ’ಗೂ ಪುರಸ್ಕಾರ

ಲಾಸ್ ಏಂಜಲಿಸ್: ಅಮೆರಿಕ ವೈಜ್ಞಾನಿಕ ಕಾಲ್ಪನಿಕ 'ಡ್ಯೂನ್' ಚಿತ್ರಕ್ಕೆ ಅತ್ಯುತ್ತಮ ವಿಷುವಲ್ ಎಫೆಕ್ಟ್ ನೀಡಿದ ಭಾರತ ಮೂಲದ ಚಿತ್ರೋದ್ಯಮಿ ನಮಿತ್ ಮಲ್ಹೋತ್ರಾ ಅವರ ಒಡೆತನದ 'ಡಿಎನ್‌ಇಜಿ' ಕಂಪನಿಯು ಪ್ರತಿಷ್ಠಿತ ಆಸ್ಕರ್ ಪುರಸ್ಕಾರವನ್ನು ಮುಡಿಗೇರಿಸಿಕೊಂಡಿದೆ. ಡೆನಿಸ್ ವಿಲೆನ್ಯೂವ್ ಅವರ ನಿರ್ದೇಶನದ 'ಡ್ಯೂನ್' ಚಿತ್ರವು 2022ನೇ ಸಾಲಿನ ಅತಿಹೆಚ್ಚು ಆಸ್ಕರ್ ಪುರಸ್ಕಾರಕ್ಕೆ ಭಾಜನವಾಗಿದೆ.

ಮಲ್ಹೋತ್ರಾ ಅವರು ಅಧ್ಯಕ್ಷ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ(ಸಿಇಒ) ಆಗಿರುವ ಡಿಎನ್‌ಇಜಿ ಮತ್ತು ವಿಎಫ್‌ಎಕ್ಸ್, 'ಡ್ಯೂನ್' ಚಿತ್ರಕ್ಕೆ ಪರಿಣಾಮಕಾರಿಯಾದ 'ವಿಷುವಲ್ ಎಫೆಕ್ಟ್' ನೀಡಿದ್ದವು. ಸಿನಿಮಾದಲ್ಲಿ ವಿಷುವಲ್ ಎಫೆಕ್ಟ್ ಮುಖಾಂತರವೂ ಕಥೆಯನ್ನು ಹೇಳಬಹುದು ಎಂಬ ಹೊಸ ಮೈಲುಗಲ್ಲನ್ನು ಡ್ಯೂನ್ ಚಿತ್ರ ನಿರ್ಮಿಸಿದೆ. ಈ ಪುರಸ್ಕಾರಕ್ಕೆ ಡಿಎನ್‌ಇಜಿ ಕಂಪನಿ ಭಾಜನವಾಗಿರುವ ಹಿನ್ನೆಲೆಯಲ್ಲಿ ಅಕಾಡೆಮಿ ಆಫ್ ಮೋಷನ್ ಪಿಕ್ಚರ್ಸ್ ಆರ್ಟ್ಸ್ ಅಂಡ್ ಸೈನ್ಸಸ್‌ಗೆ ಅಭಾರಿಯಾಗಿದ್ದೇನೆ ಎಂದು ಮಲ್ಹೋತ್ರಾ ಪ್ರತಿಕ್ರಿಯಿಸಿದ್ದಾರೆ.



ನಮಿತ್ ಮಲ್ಹೋತ್ರಾ

ಕ್ಷೇಮ ಕುಶಲ

ಬಿಸಿಲ ಧಗೆಯಲ್ಲಿ ದೇಹ-ಮನಸ್ಸು



ಡಾ. ಕೆ. ಎಸ್. ಪವಿತ್ರ



'ಬಂದಿತಿದಿಗೋ ಬೇಸಿಗೆ, ಸಂದ ಸಮಯದ ಕೊರಗ ಕಳೆಯುತ ಮಂದಿಯೆಲ್ಲರ ಲೇಸಿಗೆ' ಎಂದು ಕವಿವಾಣಿ ಬೇಸಿಗೆಯ ಸಂತಸವನ್ನು ನೆನೆದು ಹೇಳಿರಬಹುದು. ಆದರೆ ಬೇಸಿಗೆಯ ಬಿಸಿಲ ಧಗೆಯಲ್ಲಿ ಹಲವು ಆರೋಗ್ಯದ ಸಮಸ್ಯೆಗಳು ಎದುರಾಗುತ್ತವೆ. ದೇಹ-ಮನಸ್ಸುಗಳು ಬೇಯುವಂತೆ ಮಾಡುತ್ತವೆ. ಪ್ರತಿ ವರ್ಷ ಬೇಸಿಗೆ ಬಂದೇ ತೀರುತ್ತದಷ್ಟೆ. ಹೀಗಾಗಿ ಆರೋಗ್ಯಸಮಸ್ಯೆಗಳನ್ನು ಆ ಸಮಯದಲ್ಲಿ ನಿಭಾಯಿಸುವ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದೇ ಸೂಕ್ತ.

ಯಾವುದೇ ಕಾಲದಲ್ಲಿ ಆರೋಗ್ಯಸಮಸ್ಯೆಗಳು ಏಕೆ ಉಂಟಾಗುತ್ತವೆ ಎನ್ನುವುದಕ್ಕೆ ವೈಜ್ಞಾನಿಕ ಕಾರಣಗಳಿವೆ. ಆ ವೈಜ್ಞಾನಿಕ ಕಾರಣಗಳನ್ನು ಅರ್ಥ ಮಾಡಿಕೊಂಡು ಸರಳವಾದ, ಸುಲಭವಾದ ಕ್ರಮಗಳನ್ನು ಅನುಸರಿಸಿದರೆ ಬಿರುಬಿರು ಬೇಸಿಗೆಯಲ್ಲಿಯೂ ಆರೋಗ್ಯದ ಆನಂದ ಅನುಭವಿಸಲು ಸಾಧ್ಯವಿದೆ. ಬೇಸಿಗೆಯನ್ನು ಎದುರು ನೋಡಲೂ ಸಾಧ್ಯವಿದೆ!

ನಮ್ಮ ದೇಹದ ಒಳಗೊಂದು ಜೈವಿಕ ಗಡಿಯಾರವಿದೆ. ಹಾರ್ಮೋನುಗಳ ಉತ್ಪತ್ತಿ, ರಕ್ತದೊತ್ತಡ, ಜೀರ್ಣಕ್ರಿಯೆ, ನಿದ್ರೆ-ಎಚ್ಚರಗಳ ಚಕ್ರವನ್ನು ನಿಯಂತ್ರಿಸುವುದು, ಇದರ ಕೆಲಸ. ಇದಕ್ಕೆ ಕೀಲಿ ಕೊಟ್ಟು ಆಗಾಗ್ಗೆ ಹೊಂದಿಸಲು ಹಲವು ಅಂಶಗಳು ಕಾರಣವಾಗುತ್ತವೆ. ಅವುಗಳಲ್ಲಿ ಪ್ರಮುಖವಾದವೆಂದರೆ ಹೊರಗಿನ ವಾತಾವರಣದ ಉಷ್ಣಾಂಶ ಮತ್ತು ಸೂರ್ಯನ ಬೆಳಕಿನ ಪ್ರಮಾಣ. ಹಾಗಾಗಿಯೇ ನಮ್ಮ ಇಡೀ ದೇಹದಲ್ಲಿ ಪ್ರತಿಯೊಂದು ಜೀವಕೋಶದಲ್ಲಿರುವ ಇಂಥ ಅಸಂಖ್ಯಾತ 'ಮಿನಿ ಗಡಿಯಾರ'ಗಳು ಬೇಸಿಗೆಯಲ್ಲಿ ಜಾಗೃತಗೊಳ್ಳುತ್ತವೆ. ದೇಹ ಸರಿಯಾದ ಸ್ಥಿತಿಯಲ್ಲಿರಲು ಹಗಲು-ರಾತ್ರಿ ದುಡಿಯುತ್ತವೆ. ನಾವೂ ಅವುಗಳೊಂದಿಗೆ ಕೈ ಜೋಡಿಸಿದರೆ, ಯಾವ ಕಾಯಿಲೆಯೂ ಬರದೆ ಬೇಸಿಗೆಯನ್ನು ಕಳೆದು ಮುಂದುವರಿಯಬಹುದು. ಇಲ್ಲವಾದರೆ ವಿವಿಧ ಜ್ವರಗಳು, ವಾಂತಿ, ಭೇದಿ, ಮಲಬದ್ಧತೆ, ಮೂತ್ರದ ಸೋಂಕು, ಚರ್ಮದ ವಿವಿಧ ಕಡಿತ-ಗುಳ್ಳೆ ಮುಂತಾದ ಆರೋಗ್ಯಸಮಸ್ಯೆಗಳು ಕಟ್ಟಿಟ್ಟ ಬುತ್ತಿ. ಇವೆಲ್ಲವೂ ಮನಸ್ಸಿಗೂ ಸಾಕಷ್ಟು ಕಿರಿಕಿರಿಯುಂಟು ಮಾಡಿ, ಸೋಂಕು-ಚರ್ಮ ಸಮಸ್ಯೆಗಳನ್ನು ಇನ್ನಷ್ಟು ಹೆಚ್ಚಿಸುತ್ತವೆ. ರೋಗನಿರೋಧಕ ಶಕ್ತಿ ಕಡಿಮೆಯಾಗುವಂತೆ ಮಾಡುತ್ತದೆ. 'ಬೇಸಿಗೆ ಬೇಡವಪ್ಪಾ' ಎಂದು ಹೆದರುವಂತೆ ಮಾಡುತ್ತದೆ.

ಬೇಸಿಗೆಯ ಬಹಳಷ್ಟು ಆರೋಗ್ಯಸಮಸ್ಯೆಗಳಿಗೆ, ಮೆದುಳಿನ ಅನಾರೋಗ್ಯಕ್ಕೆ ಕಾರಣವಾಗುವಂತಹದ್ದು ನೀರಿನ ಪ್ರಮಾಣ ದೇಹಕ್ಕೆ ಸಾಕಾಗದಿರುವುದು. ನಮ್ಮೆಲ್ಲರ ಬಿಡುವಿಲ್ಲದ ಧಾವಂತದ ಬದುಕಿನಲ್ಲಿ ನಮಗಿಂದು 'ನೀರು ಕುಡಿಯಲು ಪುರುಸೊತ್ತಿಲ್ಲ'! ತತ್‌ಕ್ಷಣ ಇದರಿಂದ ಉದ್ಭವಿಸುವ ಸಮಸ್ಯೆ 'ಮಲಬದ್ಧತೆ'. 'ಚಳಿಗಾಲ ಕಳೆದು ಬೇಸಿಗೆ ಬಂದಿದೆ' ಎಂದು ನಮಗೆ ತಿಳಿಯಲು ಬೆಳಗಿನ ಶೌಚಕ್ಕೆ ಹೋಗಿ ಕುಳಿತರೆ ಸಾಕು, ತಿಳಿದುಬಿಡುವಷ್ಟು ಇದು ಎಲ್ಲರಲ್ಲಿ ಸಾಮಾನ್ಯ. ಬೇಸಿಗೆಯಲ್ಲಿ ಬೆವರು ಹೆಚ್ಚಷ್ಟೆ. ಬಾಯಾರಿ ನೀರು ಕುಡಿದರೂ, ಅದು ಬೆವರಾಗಿ ಹರಿಯುವ ಕಾರಣ ದೊಡ್ಡ ಕರುಳಿಗೆ ಬೇಕಾಗುವ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಪರಿಣಾಮ ಮಲಬದ್ಧತೆ.

ರಜಾದಿನಗಳೆಂದು ಪ್ರವಾಸ-ಪಿಕ್‌ನಿಕ್ ಹೊರಟಾಗ ಬಿಸಿಲಲ್ಲಿ ಸುತ್ತಾಡುತ್ತೇವೆ. ಟಾಯ್ಲೆಟ್ ಸರಿಯಿಲ್ಲವೆಂದು ಮಾಡಬೇಕಾದಾಗ ಮೂತ್ರ ಮಾಡದೆ ಕಟ್ಟಿಕೊಂಡು ಹೇಗೋ ನಿಭಾಯಿಸುತ್ತೇವೆ. ಆಮೇಲೆ 'ತರಾತುರಿ', 'ಅರ್ಜೆಂಟ್' ಎಂದಾಗ ಶೌಚಾಲಯ ಹೇಗಿದ್ದರೂ ಮಾಡಿ, ಸೋಂಕು ತಗಲುತ್ತದೆ. 'ಮೂತ್ರ ಬಂದರೆ' ಎಂಬ ಭಯದಿಂದ ಕಡಿಮೆ ನೀರು ಸೇವಿಸುತ್ತಿದ್ದೇವೆ. ಹೀಗಾಗಿ ದೇಹದಲ್ಲಿ ಸರಿಯಾಗಿ ಕ್ರಿಯೆಗಳು ನಡೆಯಲು ಇರುವ ನೀರಿನ ಪ್ರಮಾಣ ಕಡಿಮೆ ಬೇರೆ. ಈ ಎಲ್ಲವೂ ಸೇರಿ ಬೇಸಿಗೆಯಲ್ಲಿ ಬಹುಮಂದಿ ಎದುರಿಸುವ ಸಾಮಾನ್ಯ ಸಮಸ್ಯೆಯೆಂದರೆ ಪ್ರವಾಸ ಮುಗಿಸಿ ಬಂದ ನಂತರ, ಪ್ರವಾಸ ಮಾಡುವಾಗ ಮೂತ್ರದ ಸೋಂಕು. ತಲೆನೋವು-ವಾಂತಿಯಾಗುವಿಕೆ-ಭೇದಿ - ಇವುಗಳಿಗೂ ನಾವು ಸೇವಿಸುವ ನೀರಿಗೂ ಸಂಬಂಧವಿದೆ. ಇವೆಲ್ಲವೂ ಬೇಸಿಗೆಯಲ್ಲಿ ಹೆಚ್ಚೇ. ಸ್ವಚ್ಛವಾದ ಸಾಕಷ್ಟು ಪ್ರಮಾಣದ ನೀರಿನಿಂದ ಬಹಳಷ್ಟನ್ನು ತಡೆಗಟ್ಟಬಹುದು. ಅದೇ ಅಶುಚಿಯಾದ ನೀರು ಸೋಂಕುಕಾಯಿಲೆಗಳನ್ನು ಹರಡುವ ಸಶಕ್ತ 'ಏಜೆಂಟ್'! ಆದ್ದರಿಂದ ಸ್ವಚ್ಛವಾದ, ಕನಿಷ್ಠ 7-8 ದೊಡ್ಡ ಲೋಟ (ಅಂದಾಜು 3-3.5 ಲೀ.ಗಳಷ್ಟು) ನೀರಿನ ಸೇವನೆಯನ್ನು, ಆಗಾಗ್ಗೆ ಮಾಡುವುದು, ಹಸಿರುಸೊಪ್ಪು, ಹಸಿ ತರಕಾರಿ, ನಾರಿರುವ ತರಕಾರಿಗಳು, ಆದಷ್ಟು ಬೇಯಿಸದೆ ಮಾಡಬಹುದಾದ ಹಲವು ರುಚಿಕರ ಖಾದ್ಯಗಳು, ನಮ್ಮ ಸಾಂಪ್ರದಾಯಿಕ ಅಡುಗೆಯ ಕ್ರಮಗಳಲ್ಲಿ ಬರುವಂತಹ ಪಚಡಿ, ಗೊಜ್ಜು, ತಂಬುಳಿ, ಮಜ್ಜಿಗೆ-ಮೊಸರು ಬೆರೆಸಿ ಮಾಡಬಹುದಾದ ಹಲವು ಪದಾರ್ಥಗಳನ್ನು ಆನಂದಿಸಿ, ಸೇವಿಸುವುದು, ನಾಲಿಗೆಗೂ ರುಚಿ, ದೇಹಕ್ಕೂ ಹಿತ. ಬಿಸಿಲಿನ ಝಳ ತಡೆಯುವ ಕ್ಯಾಪ್/ಟೊಪ್ಪಿ/ಪುಟ್ಟ ಛತ್ರಿ, ಒದ್ದೆಯಾದ ಟಿಷ್ಯೂ, ಒಂದು ಪುಟ್ಟ ಬಾಟಲಿ ನೀರು - ಇವು ಹೊರಗೆ ಹೋಗುವಾಗ ನಮ್ಮ ಸಂಗಾತಿಯಾಗಲೇ ಬೇಕು.

ಚರ್ಮದ ಸಮಸ್ಯೆಗಳಿಗೆ ಒಂದಿಷ್ಟು ಆರೈಕೆಯೂ ನೀರು-ಹಸಿ ತರಕಾರಿಗಳೊಂದಿಗೆ ಅಗತ್ಯವಿದೆ. ಪ್ರತಿದಿನ ಎರಡು ಬಾರಿ ಸ್ನಾನ ಮಾಡುವುದು, ಕನಿಷ್ಠ ಒಂದು ಬಾರಿ ತಣ್ಣೀರಿನ ಸ್ನಾನ, ಜೊತೆಗೇ ಬೆವರುಸಾಲೆಯನ್ನು ತಡೆಯುವ ಆ್ಯಂಟಿಫಂಗಲ್ ಪೌಡರ್ ಅನ್ನು ಉಪಯೋಗಿಸುವುದು ಸೂಕ್ತ. ವಿಶೇಷವಾಗಿ ಮಹಿಳೆಯರಲ್ಲಿ ಒಳ ಉಡುಪುಗಳು ದೇಹದ ಸಂಧಿಗಳಲ್ಲಿ (ತೊಡೆ ಸಂದು / ಕಂಕುಳು) ದೇಹಕ್ಕೆ ಬೆವರಿನಿಂದ ಅಂಟಿ, ಚರ್ಮ ಕೊಯ್ದಂತಾಗುವುದು; ಅದರಿಂದ ಉಂಟಾಗುವ ಅಪಾರ ನೋವು-ಕಿರಿಕಿರಿಗಳನ್ನು ಪೌಡರ್ ಸೂಸುವ, ಸ್ನಾನ ಮಾಡುವ ಅಭ್ಯಾಸ ತಡೆಯುತ್ತದೆ. ಪುರುಷರಲ್ಲಿ ಮೈಯ್ಯ ದುರ್ನಾತದ ಸಮಸ್ಯೆಯನ್ನು ಸ್ನಾನ - ಆ್ಯಂಟಿಫಂಗಲ್ ಪೌಡರ್‌ಗಳ ಅಭ್ಯಾಸಗಳು ತಡೆಯುತ್ತವೆ.

ಇವಲ್ಲದೆ ಮಾನಸಿಕ ಸಮಸ್ಯೆಗಳು ಹೆಚ್ಚಲೂ ಬೇಸಿಗೆ ಕಾರಣವಾಗಬಹುದು. ಮಕ್ಕಳು ರಜೆ ಎಂಬ ಕಾರಣಕ್ಕೆ ಮನೆಯಲ್ಲಿರುವುದು, ಅವರನ್ನು ನಿರ್ವಹಿಸುವುದು, ಹೆಚ್ಚುವ ಕೆಲಸದ ಒತ್ತಡ – ಇವು ವಿಶೇಷವಾಗಿ ತಾಯಂದಿರಲ್ಲಿ ಆತಂಕ-ಕಿರಿಕಿರಿ ಹೆಚ್ಚಿಸಬಹುದು. ನಿಯಮಿತವಾಗಿ ಅನುಸರಿಸುತ್ತಿರುವ ದಿನಚರಿ ಬದಲಾಗುವುದೂ ಇದಕ್ಕೊಂದು ಕಾರಣ. ನಿದ್ರೆಯಲ್ಲಿ ಬೇಸಿಗೆಯ ಕಣ್ಣು ಬಿಡಲಾಗದ 'ಅಂಟು'ನಿದ್ರೆ, ಎಷ್ಟು ನಿದ್ರೆ ಮಾಡಿದರೂ 'ತಾಜಾ' ಅನುಭವ ಸಾಧ್ಯವಾಗಿಸದ ನಿದ್ರೆ – ಇವು ಎಲ್ಲರಲ್ಲಿ ಸಹಜವಾಗಿ ಕಂಡುಬರುತ್ತದೆ. ಇವೆಲ್ಲಕ್ಕೂ ಹೀಗಾಗುವ ಬಗ್ಗೆ ಅರಿವು, ಅವು ಸಹಜ, ಎಲ್ಲರಿಗೂ ಬೇಸಿಗೆಯೊಂದಿಗೆ ಎದುರಾಗುವಂತದ್ದು ಎಂಬ ಜ್ಞಾನ ಮತ್ತು ಜೀವನಶೈಲಿಯ ಸ್ವಲ್ಪ ಮಾರ್ಪಾಡು ಇವು ಸಹಾಯಕ.

ಬೇಸಿಗೆಯ ಬಹು ಮುಖ್ಯ ಉಪಯುಕ್ತತೆಯೆಂದರೆ ವ್ಯಾಯಾಮಕ್ಕೆಂದು ಬೆಳಿಗ್ಗೆ ಏಳಲಾರದವರಿಗೆ! ಬೇಸಿಗೆ ಸುಲಭವಾಗಿ ಬೆಳಿಗ್ಗೆ ಬೇಗ ಎದ್ದು ವ್ಯಾಯಾಮದ ಅಭ್ಯಾಸ ಮಾಡಿಕೊಳ್ಳಲು ಸಕಾಲ. ಎಳೆಯ ಬಿಸಿಲು 'ವಿಟಮಿನ್ ಡಿ'ಗೂ ಒಳ್ಳೆಯ ಮೂಲ. ಮಕ್ಕಳಲ್ಲಿ ಬೆಳವಣಿಗೆಯ ಗತಿ ಬೇಸಿಗೆಯಲ್ಲಿ ಏರುವುದರಿಂದ, ವಿವಿಧ ದೈಹಿಕ ಆಟಗಳನ್ನು ಬೆಳಿಗ್ಗೆ ಆಡಿಸುವುದು ಉಪಯುಕ್ತ. ಹೀಗೆ ವಿವಿಧ ಚಟುವಟಿಕೆಗಳು, ಸಾಕಷ್ಟು ಪ್ರಮಾಣದ ಶುಚಿಯಾದ ನೀರು ಮತ್ತು ಸೂಕ್ತ ಆಹಾರವನ್ನು ಕಡಿಮೆ ಪ್ರಮಾಣದಲ್ಲಿ ಆಗಾಗ್ಗೆ ತಿನ್ನುವುದು ಬೇಸಿಗೆಯ ಧಗೆಯಲ್ಲಿಯೂ ಮೈ-ಮನಗಳು ಹಗುರಾಗಿ, ಆರಾಮದಿಂದಿರುವಂತೆ ಮಾಡಬಲ್ಲವು.

ಪರೀಕ್ಷೆಗೆ ಬೇಕು ಮಾನಸಿಕ ತಯಾರಿ

ರಮ್ಯಾ ಶ್ರೀಹರಿ

> ಪರೀಕ್ಷಾ ಸಮಯದಲ್ಲಿ ಪೋಷಕರು ಹೇಗೆ ನಡೆದುಕೊಳ್ಳುತ್ತಾರೆ ಎನ್ನುವುದನ್ನು ಮಕ್ಕಳು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಪರೀಕ್ಷೆಯನ್ನು ಎದುರಿಸುವ ಸಮಯದಲ್ಲಿ ಅವರಿಗೆ ದೊರೆತ ಮಾನಸಿಕ ಬೆಂಬಲ ಮುಂದೆ ಅವರಿಗೆ ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ತುಂಬುತ್ತದೆ.

ಪರೀಕ್ಷಾ ಕೊಠಡಿಯೂ ಸಮಾಜದ ಒಂದು ಭಾಗವೇ ಅಲ್ಲವೇ? ಪ್ರಪಂಚದ ಆಗುಹೋಗುಗಳೆಲ್ಲ ಪರೀಕ್ಷಾ ಕೊಠಡಿಯಲ್ಲೂ ಪ್ರತಿಫಲಿಸುತ್ತವೆ. ಹೊರಗಿನ ಪ್ರಪಂಚದಲ್ಲಿ ಇರುವ ಅವ್ಯವಸ್ಥೆ, ಆತಂಕ, ಭಯಗಳೆಲ್ಲಾ ಪರೀಕ್ಷಾ ಕೇಂದ್ರಗಳಲ್ಲಿಯೂ ಕಾಣಿಸಿಕೊಳ್ಳುತ್ತವೆ. ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯ ಉತ್ತರಪತ್ರಿಕೆಯ ನಡುವೆ ಕೇವಲ ಓದಿದ ವಿಷಯಗಳು, ಗೊತ್ತಿರುವ ಉತ್ತರ ಮತ್ತು ಅರ್ಥವಾಗದೇ ಉಳಿದ ಪಠ್ಯಭಾಗಗಳಷ್ಟೇ ಇರುವುದಿಲ್ಲ, ಬದಲಾಗಿ ಇಡೀ ಸಮಾಜದ ಎಲ್ಲ ಓರೆಕೋರೆಗಳು ಮತ್ತು ವೈರುಧ್ಯಗಳು ಪರೀಕ್ಷೆಯ ಸ್ಥಳದಲ್ಲಿ ತಮ್ಮ ಇರುವಿಕೆಯನ್ನು ತೋರ್ಪಡಿಸಿಕೊಳ್ಳುತ್ತವೆ.

ಈಗ ಎರಡು ವರ್ಷಗಳಿಂದಲಂತೂ ಕೋವಿಡ್ ನಮ್ಮ ಕಲಿಕೆಯ ರೀತಿ, ವಿದ್ಯಾರ್ಥಿಜೀವನ ಮತ್ತು ಪರೀಕ್ಷಾ ಮಾದರಿಗಳನ್ನು ಹಿಂದೆಂದೂ ಇಲ್ಲದಷ್ಟು ಬದಲಾಯಿಸಿಬಿಟ್ಟಿದೆ. ಶಾಲೆಗೇ ಹೋಗದೆ ಬರೆಯುವ ಪರೀಕ್ಷೆಗೆ ಮೊದಲೆಲ್ಲ ಹೆಚ್ಚಿನ ಮಾನ್ಯತೆಯೇ ಇರಲಿಲ್ಲ. ದೂರಶಿಕ್ಷಣದಲ್ಲಿ ಪಡೆದುಕೊಂಡ ಪದವಿಗಳಿಗೆ ಯಾವತ್ತೂ ಒಂದು ರೀತಿಯ ಅಪೂರ್ಣತೆ, ಕೀಳರಿಮೆ ಅಂಟಿಕೊಂಡೇ ಇರುತ್ತಿತ್ತು. ಆದರೆ ಇಂದು ನಾವು ದೂರಶಿಕ್ಷಣದ ಮಾದರಿಯನ್ನೇ ಹೆಚ್ಚಾಗಿ ಅನುಸರಿಸಬೇಕಾಗಿ ಬಂದಿರುವುದು ಶಿಕ್ಷಣದ ಕುರಿತಾದ ಹಲವು ಮೂಲಭೂತ ಪ್ರಶ್ನೆಗಳಿಗೆ ದಾರಿಮಾಡಿಕೊಟ್ಟಿದೆ. ಕಲಿಸುವವರು ಮತ್ತು ಕಲಿಯುವವರು ಮುಖಾಮುಖಿಯಾಗದೆ ಪಡೆದ ವಿದ್ಯೆಗೆ ಬೆಲೆಯಿದೆಯೇ? ವಿದ್ಯೆಯನ್ನು ಗಳಿಸುವ ಪ್ರಕ್ರಿಯೆಯಲ್ಲಿ ಶಿಕ್ಷಕರ ಪಾತ್ರ ಏನು? ಎಲ್ಲರೊಡನೆ ಬೆರೆತು ಕುಳಿತು ಕಲಿಯದ ವಿದ್ಯೆಯ ಮಿತಿಗಳೇನು? ಹೀಗೆ ಹಲವು ಸಂದೇಹಗಳು ಹುಟ್ಟುತ್ತವೆ.

ಇನ್ನು ಮಲ್ಟಿಪಲ್ ಚಾಯ್ಸ್ ಪ್ರಶ್ನೆಗಳಂತೂ ಭಿನ್ನ ಪ್ರದೇಶಗಳಲ್ಲಿ, ಭಿನ್ನ ಸಾಂಸ್ಕೃತಿಕ ಪರಿಸರಗಳಲ್ಲಿ ಕಲಿತ ವಿದ್ಯಾರ್ಥಿಗಳ ಕಲಿಕೆಯ ಸಮರ್ಥ ಅಭಿವ್ಯಕ್ತಿಯಾಗಲಾರದು ಎನ್ನುವುದೂ ಕೂಡ ಮನನ ಮಾಡಬೇಕಾದ ವಿಚಾರ. ಇಷ್ಟೇ ಅಲ್ಲದೆ ರಾಜಕೀಯ, ಸಾಮಾಜಿಕ ಗಲಾಟೆ ಗೊಂದಲಗಳು, ಆರ್ಥಿಕ ಅಸಮಾನತೆ, ಪ್ರತಿನಿತ್ಯ ಪ್ರತಿಕ್ಷಣವೂ ನೂರಾರು ಮಾಧ್ಯಮಗಳ ಮುಖಾಂತರ ನಮ್ಮನ್ನು ಬಂದು ತಲುಪುವ ಕಳವಳಕಾರಿ ಸಮಾಚಾರಗಳು, ಸುಳ್ಳುಸುದ್ದಿಗಳು, ಇನ್ನೂ ಹಲವು ಅಸ್ವಸ್ಥ ಸಂದರ್ಭಗಳು ವಿದ್ಯಾರ್ಥಿಗಳನ್ನು ನಿಜಕ್ಕೂ ಕಂಗೆಡಿಸುವಂಥದ್ದು. ಒಟ್ಟಿನಲ್ಲಿ ಸಾವಧಾನದಿಂದ ಕಲಿಯುವುದು, ಕಲಿಸುವುದು ಎರಡೂ ಕಷ್ಟಸಾಧ್ಯವಾಗಿ ಹೋಗಿರುವ ಸಂದರ್ಭವನ್ನು ನಾವಿಂದು ಎದುರಿಸುತ್ತಿದ್ದೇವೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಪರೀಕ್ಷೆಗೆ ಹೋಗಲೇಬೇಕು, ಪರೀಕ್ಷೆ ಬರೆಯಲೇಬೇಕು. ಪರೀಕ್ಷಾ ಕೇಂದ್ರದಲ್ಲಿ ಆಗುವ ಭಯ, ಉದ್ವೇಗ, ಪರೀಕ್ಷೆಯ ನಂತರ ಬರುವ ಫಲಿತಾಂಶಗಳಿಗೆ ಹೆದರಿ ಪರೀಕ್ಷೆಗೆ ಹೋಗದಿದ್ದರೆ ಅದೇ ನಿಜವಾದ ಸೋಲು. ಹಾಗಾಗಿ ತಯಾರಿ ಹೇಗೆ ಇರಲಿ ಪರೀಕ್ಷಾ ಕೇಂದ್ರಕ್ಕೆ ಬರುವ ಪ್ರತಿ ವಿದ್ಯಾರ್ಥಿಯನ್ನೂ ಶ್ಲಾಘಿಸಲೇಬೇಕು.

ಪರೀಕ್ಷೆಯ ದಿನಗಳು ಬಂದೇ ಬಿಟ್ಟಿರುವ ಈ ದಿನಗಳಲ್ಲಿ ಧೈರ್ಯವನ್ನು, ನೆಮ್ಮದಿಯನ್ನು ಸ್ವಲ್ಪಮಟ್ಟಿಗಾದರೂ ಕೊಡಬಹುದಾದ ಕೆಲವು ವಿಚಾರಗಳೆಡೆಗೆ ಗಮನ ಹರಿಸೋಣ:

ನಾಳೆ ಪರೀಕ್ಷೆ ಎನ್ನುವಾಗ ಇವತ್ತು ಅರ್ಥವಾಗದ ವಿಷಯಗಳನ್ನು ಓದುತ್ತಾ ಆತಂಕಗೊಳ್ಳುವುದು ಬೇಡ. ಶಾಲೆ/ಕಾಲೇಜಿಗೆ ಹೋಗದೇ ಕೇವಲ ಆನ್‌ಲೈನ್‌ನಲ್ಲಿ ಕ್ಲಾಸಿಗೆ ಹಾಜರಾಗಿದ್ದರಿಂದ ಪಾಠಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಅನ್ವಯಿಸುವ ಕೌಶಲ ಅಷ್ಟಾಗಿ ಕೈಗೂಡಿರುವುದಿಲ್ಲ. ಆನ್‌ಲೈನ್ ಪಾಠಗಳ ಕಾಲದಲ್ಲಿ ಹೆಚ್ಚಾಗಿ ಕುಂಠಿತಗೊಂಡಿರುವ ಮತ್ತೊಂದು ಕೌಶಲವೆಂದರೆ ಬರವಣಿಗೆಯದ್ದು. ದೀರ್ಘ ಉತ್ತರಗಳನ್ನು ತಪ್ಪಿಲ್ಲದೆ ಸ್ವಂತವಾಗಿ ರಚಿಸುವ ಸಾಮರ್ಥ್ಯಕ್ಕೆ ಹೊಡೆತ ಬಿದ್ದಿರುವುದು ಸ್ಪಷ್ಟ. ಹಾಗೆಯೇ ಸೃಜನಶೀಲ ಚಿಂತನೆ ಕೂಡ ಸಹಪಾಠಿಗಳೊಡನೆ ಬೆರೆತು ಕಲಿತಾಗಲೇ ಬೆಳೆಯುವಂಥದ್ದು. ಈ ಎಲ್ಲ ಮಿತಿಗಳ ಬಗೆಗೆ ಈ ಸಮಯದಲ್ಲಿ ಚಿಂತೆ ಬೇಡ. ಪರೀಕ್ಷೆಯ ಈ ಹೊತ್ತಿನಲ್ಲಿ ಓದದೇ ಕಳೆದ ಸಮಯದ ಬಗೆಗೆ ವಿದ್ಯಾರ್ಥಿಗಳು ಪಶ್ಚಾತ್ತಾಪ ಪಡುವುದಾಗಲಿ, ಪೋಷಕರು ಕೋಪ ತೋರಿಸುವುದಾಗಲಿ ಎರಡೂ ಉಪಯೋಗವಿಲ್ಲದ್ದು.




ಪರೀಕ್ಷೆಯ ಹಿಂದಿನ ದಿನಗಳು ಅಥವಾ ಪರೀಕ್ಷೆಯ ದಿನದ ಬೆಳಗ್ಗೆ ಯಾವುದೇ ಕಾರಣಕ್ಕೂ ಮಕ್ಕಳಿಂದ ದೂರವಿರದಂತೆ ಪೋಷಕರು ನೋಡಿಕೊಂಡರೆ ಒಳ್ಳೆಯದು. ಹಾಗೆಯೇ ಪರೀಕ್ಷೆಯ ದಿನಗಳಲ್ಲಿ ಮಕ್ಕಳ ಜೊತೆ ಜಗಳ, ವಾದ- ವಿವಾದ, ಅವರನ್ನು ಶಿಕ್ಷಿಸುವುದು, ಅವಮಾನಿಸುವುದು, ಮನೆಯ ಕೆಲಸಗಳನ್ನು ಮಾಡುವಂತೆ ಒತ್ತಾಯಿಸುವುದು, ಸೋಲಿನ ಬಗೆಗೆ ಭಯಪಡಿಸುವುದು ಮುಂತಾದವು ಮಕ್ಕಳಲ್ಲಿ ಒತ್ತಡದ ಭಾವ ಮತ್ತು ಏಕಾಂಗಿತನವನ್ನು ಹುಟ್ಟಿಸುತ್ತದೆ.

ಕೆಲವರು ಪೋಷಕರು ತಮ್ಮ ಮಹತ್ವಾಕಾಂಕ್ಷೆಗಳನ್ನು ಮಕ್ಕಳ ಮೇಲೆ ಹೇರಿದರೆ ಇನ್ನು ಕೆಲವು ಪೋಷಕರು ಮಕ್ಕಳ ಪರೀಕ್ಷೆಯ ಬಗೆಗೆ ನಿರ್ಲಕ್ಷ್ಯ ತೋರುತ್ತಾರೆ. ಸದ್ಯದ ಪರಿಸ್ಥಿತಿಯಲ್ಲಿ ನಾವಂದುಕೊಂಡ ಗುರಿಯನ್ನು ನಮ್ಮ ಮಕ್ಕಳು ಮುಟ್ಟುವುದಕ್ಕಿಂತಲೂ ಸಹಜವಾದ ರೀತಿಯಲ್ಲಿ ಅವರು ಬೆಳೆಯುವುದೂ ಅರಳುವುದೂ ಮುಖ್ಯ.

ಮಕ್ಕಳು ಅವರ ಪರೀಕ್ಷಾ ಸಮಯದಲ್ಲಿ ಪೋಷಕರು ಹೇಗೆ ನಡೆದುಕೊಳ್ಳುತ್ತಾರೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಪೋಷಕರ ನಡೆ, ನುಡಿ, ಭಾವಗಳು ಮಕ್ಕಳ ಮೇಲೆ ದೀರ್ಘಕಾಲ ಪರಿಣಾಮ ಬೀರುತ್ತದೆ. ಸೋಲು ಗೆಲುವಿನ ಹೊರತಾಗಿಯೂ ತಮ್ಮ ಐಡೆಂಟಿಟಿಯನ್ನು ಮಕ್ಕಳು ಕೊಂಡುಕೊಳ್ಳಲು ಈ ಸಮಯದಲ್ಲಿ ಪೋಷಕರು ಅವರಿಗೆ ಜೊತೆಯಾಗಿ ನಿಲ್ಲಬೇಕು. ಪರೀಕ್ಷೆಯನ್ನು ಎದುರಿಸುವ ಸಮಯದಲ್ಲಿ ಅವರಿಗೆ ದೊರೆತ ಮಾನಸಿಕ ಬೆಂಬಲ ಮುಂದೆ ಅವರಿಗೆ ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ನೀಡುತ್ತದೆ.

ಬೇಸರ ಕಳೆಯಲು ಕಲೆ



ವಿ. ಮಂಜುಳಾ ಸುಬ್ರಹ್ಮಣ್ಯ

ಜಗತ್ತು ಚಲನಶೀಲವಾದುದು. ಮನುಷ್ಯ ಸದಾ ಚಟುವಟಿಕೆಯಿಂದಿರುವುದು ಆತನ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ಒಳ್ಳೆಯದು. ಚಟುವಟಿಕೆ ಅಂದರೆ, ಉದ್ಯೋಗದಲ್ಲಿ ತೊಡಗಿಕೊಂಡರಷ್ಟೇ ಸಾಕೆ? ಇದಿಷ್ಟೇ ಆದಾಗ ಮನುಷ್ಯ ಯಂತ್ರವಾಗಿ ಬಿಡುತ್ತಾನೆ. ನಮ್ಮನ್ನು ಆಂತರಿಕವಾಗಿ ಅರಿತುಕೊಳ್ಳಲು ಇರುವಂತಹ ಒಂದು ಸೃಜನಾತ್ಮಕ ಮಾಧ್ಯಮ ಕಲೆ. ಈ ಜಗತ್ತನ್ನು ತಿಳಿದುಕೊಳ್ಳಲು ಸಾಧ್ಯ ಮಾಡುತ್ತದೆ ಕಲಾಪ್ರಕಾರಗಳು.

ಕಲೆ ಎರಡು ಕಾರಣಕ್ಕೆ ಮುಖ್ಯವಾಗುತ್ತದೆ. ಒಂದು ಸ್ವತಃ ಕಲಾವಿದನ ಮನಃಸಂತೋಷಕ್ಕಾಗಿ, ಇನ್ನೊಂದು ಕಲೆಯನ್ನು ಆಸ್ವಾದಿಸುವವರ ಖುಷಿಗಾಗಿ. ಕಲಾವಿದನ ಸಂತೋಷವೆಂದರೆ ಅಲ್ಲಿ ಲೈಕ್, ಕಮೆಂಟ್, ಶೇರ್‌ಗಳ ಹಂಗಿಲ್ಲ. ಯಾರೂ ನೋಡುತ್ತಾರೆ ಎಂಬ ಹಂಗೂ ಇಲ್ಲ, ಯಾರನ್ನೋ ಮೆಚ್ಚಿಸಲಂತೂ ಖಂಡಿತ ಅಲ್ಲ. ನಮ್ಮ ವೈಯಕ್ತಿಕ ತೃಪ್ತಿಗೆ, ನಮ್ಮ ಸುಧಾರಣೆಗೆ, ನಮ್ಮನ್ನು ನಾವು ಅರಿತುಕೊಳ್ಳುವುದಕ್ಕೆ, ಜೀವನಪ್ರೀತಿಗೆ.

ಇನ್ನೊಂದು ಬೇರೆಯವರ ಬೇಸರ ಕಳೆಯಲು ಕಲೆ. ಕಲೆಯನ್ನು ನೋಡುವುದು, ಕೇಳುವುದು, ಆಸ್ವಾದಿಸುವುದು ಒಂದು ಕಲೆಯೇ. ಕಲಾವಿದ ತಾನು ತಲ್ಲೀನನಾಗಿ ತೊಡಗಿಸಿಕೊಂಡು ವೇದಿಕೆಯಲ್ಲಿ ಪ್ರದರ್ಶನ ನೀಡಿದಾಗ ಇತರರ ಬೇಸರ ಕಳೆಯಲೂ ಕಾರಣನಾಗುತ್ತಾನೆ/ಆಗುತ್ತಾಳೆ. ಬೇಸರ ಕಳೆಯಲೆಂದೇ ಕಲೆಯ ವೀಕ್ಷಣೆಗೆ ಬರುವವರಿದ್ದಾರೆ. ಅದು ಇಂತಹುದೇ ಕಲಾಪ್ರಕಾರ ಅಂತೇನಿಲ್ಲ. ವ್ಯಕ್ತಿಯ ಅಭಿರುಚಿಗೆ ಹೊಂದುವ ನೃತ್ಯ, ಸಂಗೀತ, ನಾಟಕ, ಯಕ್ಷಗಾನ, ಸಿನಿಮಾ – ಹೀಗೆ ಯಾವುದೂ ಆಗಬಹುದು. ಯಾಂತ್ರಿಕ ಬದುಕಿನ ಜಂಜಾಟಗಳ ನಡುವೆ ಪ್ರತಿಯೊಬ್ಬರ ದೈಹಿಕ, ಮಾನಸಿಕ ಸ್ಥಿತಿಗಳು ವಿಶ್ರಾಂತಿಯನ್ನು ಬೇಡುತ್ತವೆ. ಹಾಗಿರುವಾಗ ಒಂದೋ ಎರಡೋ ಗಂಟೆ ರಂಗದೆದುರು ಕುಳಿತು ಹೋಗುವಾಗ ಮನದ ಬೇಸರ ತೊಲಗಿ ಖುಷಿಯಿಂದ ತೆರಳಬೇಕು ಅಥವಾ ಹೊಸದೇನನ್ನಾದರೂ ಪಡೆದಿರಬೇಕು. ಜೀವನೋತ್ಸಾಹವವನ್ನು ಹೆಚ್ಚಿಸಿಕೊಳ್ಳಲಿರುವ ಒಂದು ಮಾಧ್ಯಮ ಕಲೆ. ಕಲೆ ಬೇಸರ ಕಳೆಯುವುದೇನೋ ಹೌದು. ಎಷ್ಟೋ ಸಲ ಕಲಾವಿದನ ಪ್ರದರ್ಶನದ ಹಿಂದೆ ಕಲಾವಿದನ ವೈಯಕ್ತಿಕ ಬೇಸರಗಳು ಬೆಳಕಿಗೆ ಬರುವುದೇ ಇಲ್ಲ. ರಂಗದಲ್ಲಿ ಪ್ರಜ್ವಲಿಸುವ ಬೆಳಕಿದ್ದರೂ ಅಂತರಂಗದ ಬೇಸರಗಳು ರಂಗದ ಅಬ್ಬರದಲ್ಲಿ, ತಲ್ಲೀನತೆಯಲ್ಲಿ ಎಲ್ಲೋ ಮೂಲೆಯಲ್ಲಿ ಮುದುಡಿರುತ್ತವೆ. ಅದು ಪ್ರೇಕ್ಷಕನಿಗೆ ಕಾಣುವುದಿಲ್ಲ. ಕಲಾವಿದನ ವೈಯಕ್ತಿಕ ಸುಖದುಃಖಗಳು ಅಲ್ಲಿ ಮುಖ್ಯವಾಗುವುದಿಲ್ಲ. ತಾನು ಅತ್ತರೂ ಇತರರನ್ನು ನಗಿಸುತ್ತಾನೆ ಕಲಾವಿದ. ವ್ಯಕ್ತಿಗಿಂತ ಕಲೆ ಮುಖ್ಯ. ಇಲ್ಲಿ ತನ್ನ ಬೇಸರಕ್ಕಿಂತ ಪರರ ಖುಷಿ ಮುಖ್ಯ. ಆಗ ಕಲಾವಿದನೂ ಖುಷಿಗೊಳ್ಳದೇ ಇರುವುದರಲ್ಲಿ ಸಂದೇಹವಿಲ್ಲ. ಕಲೆ ಯಾವತ್ತು ಮನಸ್ಸನ್ನು ಅರಳಿಸುವಂತಿರಬೇಕೇ ಹೊರತು ಕೆರಳಿಸುವಂತಿರಬಾರದು.

ಬೇಸರ ಹೋಗಬೇಕಾದರೆ ತಲ್ಲೀನತೆ ಬೇಕು. ಇದಕ್ಕಾಗಿ ಕಠಿಣ ಪರಿಶ್ರಮ ಅತ್ಯಗತ್ಯ. ಹಾಗಿದ್ದಾಗ ಕಲೆ ಅದನ್ನು ನೀಡಿದವನಿಗೂ ರಸಿಕನಿಗೂ ತೃಪ್ತಿಯನ್ನು ಕೊಡಬಲ್ಲುದು. ಕಲೆ ಬದುಕಿಗೆ ಹತ್ತಿರವಾಗುವುದು. ಹೋಲಿಕೆಗೆ, ಪಾಠಕ್ಕೆ, ಅನುಭವಕ್ಕೆ ಸಮೀಪ ಅನಿಸುವುದು, ಅದರಲ್ಲಿನ ವಾಸ್ತವಿಕ ಪ್ರಜ್ಞೆ ಪ್ರೇಕ್ಷಕನಿಗೆ ಹತ್ತಿರವಾದಾಗ. ಕಲಾವಿದನಿಗೂ ಪ್ರೇಕ್ಷಕನಿಗೂ ನಡುವೆ ಸಂವಹನ ನಡೆದಾಗ. ಕಲಾವಿದ ತನ್ನ ವಿದ್ವತ್ ಪ್ರದರ್ಶಿಸಲು ಹೋದರೆ, ಆತನ ಕಲಾಪ್ರಕಾರದ ಅರಿವಿಲ್ಲದ ಸಾಮಾನ್ಯ ಪ್ರೇಕ್ಷಕ ಆ ಪ್ರದರ್ಶನವನ್ನು ಅನುಭವಿಸಲು ಸಾಧ್ಯವಾಗದೇ ಹೋಗಬಹುದು. ಆಗ ಅರ್ಥ ಮಾಡಿಸಲಾಗದ ಕಲಾವಿದ, ಅರ್ಥ ಆಗದ ಕಲಾವಿದ ಇಬ್ಬರಿಗೂ ಖುಷಿಗಿಂತ ಹೆಚ್ಚು ಬೇಸರವೇ.

ಕಲೆ ಬೇಸರ ಕಳೆಯಲೇಬೇಕೆಂದಿಲ್ಲ. ದುರಂತದ ಅಥವಾ ಮನ ಕಲಕುವ ವಸ್ತುವಿಚಾರವನ್ನು ಹೊಂದಿದ ಪ್ರದರ್ಶನ ಕಲೆಗಳು ಪ್ರೇಕ್ಷಕನನ್ನೂ ಅಳುವಿಗೂ ನೂಕಬಹುದು. ಕಲೆ ಸಾಮಾಜಿಕ ಬದಲಾವಣೆಗೂ ಕಾರಣವಾಗಬಹುದು.

ಕಾಲ್ಪನಿಕ ಕಥೆಗಳು ಬದುಕಿಗಿಂತ ಭಿನ್ನವಾಗಿ ನಮ್ಮನ್ನು ಆವರಿಸಿದಾಗ, ಇಹ ಮರೆತು ಮತ್ತೊಂದು ಕಲ್ಪನೆಯ ವಿಹಾರಕ್ಕೆ ತೆರಳಿದಾಗ ಮನಸ್ಸು ಪ್ರಫುಲ್ಲವಾಗಬಲ್ಲುದು. ಸುಂದರ ಕಲ್ಪನೆಗಳ ಕನಸುಗಳು ಹೆಚ್ಚು ಹೆಚ್ಚು ನಮ್ಮನ್ನು ಆವರಿಸಿಕೊಂಡಷ್ಟು ನಾವು ಲವಲವಿಕೆಯಿಂದಿರುತ್ತೇವೆ. ಕಲೆ ಮನಸ್ಸಿನ ಒತ್ತಡವನ್ನು, ಆತಂಕವನ್ನು, ತುಮುಲವನ್ನು ಕೆಲಕಾಲವಾದರೂ ದೂರ ಸರಿಸುವಂತೆ ಮಾಡುತ್ತದೆ. ನಮ್ಮೊಳಗಿನ ತಲ್ಲಣಗಳನ್ನು, ಗೊಂದಲಗಳನ್ನು ಮರೆಮಾಚುವ ಉತ್ತರವಾಗಿ ಕಲೆ ನೆರವಾಗುತ್ತದೆ.

ಭಾರತೀಯ ಸಂಸ್ಕೃತಿಯ ಪ್ರಕಾರ ಎಲ್ಲರೂ ಕಲಾವಿದರೇ ಆಗಬೇಕೆಂದಿಲ್ಲ; ಒಳ್ಳೆಯ ಪ್ರೇಕ್ಷಕನಾಗುವುದು ಕೂಡ ಅಷ್ಟೇ ಮುಖ್ಯ. ಹೀಗಾಗಿ ಮನಸ್ಸಿನ ನೆಮ್ಮದಿಗೆ, ಖುಷಿಗೆ ಯಾವುದಾದರೊಂದು ಕಲೆಯ ಅಭ್ಯಾಸ ಅಥವಾ ಆಸ್ವಾದಿಸುವ ಹವ್ಯಾಸವನ್ನು ಬೆಳೆಸಿಕೊಳ್ಳುವುದು ಹೆಚ್ಚು ಹೆಚ್ಚು ಆಗಬೇಕಾಗಿದೆ. ಕಲಿಕೆಗೆ ವಯಸ್ಸಿನ ಹಂಗಿಲ್ಲ.

ಕಲೆ ಕಲಿಸುತ್ತದೆ, ಕಲೆಯುವಂತೆ ಮಾಡುತ್ತದೆ, ಕಲಿತದ್ದನ್ನು ಸುಧಾರಿಸುತ್ತದೆ. ಇನ್ನಷ್ಟು ಕಲಿಯುವಂತೆ ಪ್ರೇರೇಪಿಸುತ್ತದೆ, ಬದುಕನ್ನು ಪ್ರೀತಿಸುವಂತೆ ಮಾಡುತ್ತದೆ.

(ಲೇಖಕಿ ನೃತ್ಯಕಲಾವಿದೆ)

ಪಿಯುಸಿ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಆಲ್ಕೋಹಾಲ್

ರಸಾಯನ ಶಾಸ್ತ್ರ

50. ಆಲ್ಕೋಹಾಲ್ ಮತ್ತು ಫೀನಾಲ್‌ಗಳು, ಯಾವುದರೊಂದಿಗೆ ವರ್ತಿಸಿ ಎಸ್ಟರ್‌ಗಳನ್ನು ಉಂಟುಮಾಡುತ್ತವೆ?

ಉತ್ತರ:-ಆಲ್ಕೋಹಾಲ್ ಮತ್ತು ಫೀನಾಲ್‌ಗಳು, ಕಾರ್ಬಾಕ್ಸಿಲಿಕ್ ಆಮ್ಲಗಳು, ಆಮ್ಲ ಕ್ಲೋರೈಡ್‌ಗಳು ಮತ್ತು ಆಮ್ಲ ಆನ್‌ಹೈಡ್ರೇಡ್‌ಗಳೊಂದಿಗೆ ವರ್ತಿಸಿ ಎಸ್ಟರ್‌ಗಳನ್ನು ಉಂಟುಮಾಡುತ್ತವೆ.

51. ಆಲ್ಕೋಹಾಲ್‌ಗಳಲ್ಲಿ ಕಾರ್ಬನ್- ಆಕ್ಸಿಜನ್ (C–O) ಬಂಧ (ಆಸ್ಪಿರಿನ್) ಸೀಳಿಕೆ ಒಳಗೊಂಡಿರುವ ಕ್ರಿಯೆಗಳ ಬಗ್ಗೆ ಬರೆಯಿರಿ

ಉತ್ತರ:- ಆಲ್ಕೋಹಾಲ್‌ಗಳಲ್ಲಿ ಕಾರ್ಬನ್- ಆಕ್ಸಿಜನ್ (C–O) ಬಂಧ (ಆಸ್ಪಿರಿನ್) ಸೀಳಿಕೆ ಒಳಗೊಂಡಿರುವ ಕ್ರಿಯೆಗಳು

1. ಹೈಡ್ರೋಜನ್ ಹ್ಯಾಲೈಡ್‌ಗಳೊಂದಿಗೆ ಕ್ರಿಯೆ: ಆಲ್ಕೋಹಾಲ್‌ಗಳು ಹೈಡ್ರೋಜನ್ ಹ್ಯಾಲೈಡ್‌ಗಳ ಜೊತೆ ವರ್ತಿಸಿದಾಗ ಅಲ್ಕೈಲ್‌ಹ್ಯಾಲೈಡ್‌ಗಳು ಉತ್ಪತ್ತಿಯಾಗುತ್ತವೆ.


$$ROH + HX \rightarrow R\text{–}X + H2O$$

ಮೂರು ವರ್ಗಗಳ ಆಲ್ಕೋಹಾಲ್‌ಗಳ ಕ್ರಿಯಾ ಶೀಲತೆಯ ವ್ಯತ್ಯಾಸವನ್ನು ಅವುಗಳ HC1 ಯೊಂದಿಗಿನ ಕ್ರಿಯೆಯಿಂದ ಒಂದರಿಂದ ಇನೊಂದನ್ನು ಗುರುತಿಸಬಹುದು (ಲುಕಾಸ್ ಪರೀಕ್ಷೆ) ಆಲ್ಕೋಹಾಲ್‌ಗಳು ಲೂಕಾಸ್ ಕಾರಕದಲ್ಲಿ ಕರುಗುತ್ತವೆ (ಪ್ರಬಲ HCl ಮತ್ತು ZnCl2) ಆದರೆ ಅವುಗಳ ಹ್ಯಾಲೈಡ್‌ಗಳು ಮಿಶ್ರಿತವಾಗುವುದಿಲ್ಲ ಮತ್ತು ದ್ರಾವಣದಲ್ಲಿ ರಾಡಿ ಉಂಟು ಮಾಡುತ್ತವೆ.

ತೃತೀಯಕ ಆಲ್ಕೋಹಾಲ್‌ಗಳ ಸಂದರ್ಭದಲ್ಲಿ ಹ್ಯಾಲೈಡ್‌ಗಳು ಸುಲಭವಾಗಿ ಉತ್ಪತ್ತಿಯಾಗಿ, ರಾಡಿ ತಕ್ಷಣವೇ ಉಂಟಾಗುತ್ತದೆ. ಪ್ರಾಥಮಿಕ ಆಲ್ಕೋಹಾಲ್‌ಗಳು ಕೊಠಡಿಯ ಉಷ್ಣತೆಯಲ್ಲಿ ರಾಡಿಯನ್ನು ಉಂಟುಮಾಡುವುದಿಲ್ಲ.

2. ಫಾಸ್ಪರಸ್ ಟ್ರೈ ಹ್ಯಾಲೈಡ್‌ನೊಂದಿಗೆ ಕ್ರಿಯೆ: ಆಲ್ಕೋಹಾಲ್‌ಗಳನ್ನು ಫಾಸ್ಪರಸ್ ಟ್ರೈಬ್ರೋಮೈಡ್‌ನ ಕ್ರಿಯೆಯ ಮೂಲಕ ಆಲ್ಕೈಲ್ ಬ್ರೋಮೈಡ್‌ಗಳಾಗಿ ಪರಿವರ್ತಿಸಬಹುದು.


3. ನಿರ್ಜಲೀಕರಣ (Dehydration): ಆಲ್ಕೋಹಾಲ್‌ಗಳನ್ನು ಪ್ರೋಟಿಕ್ ಆಮ್ಲಗಳೊಂದಿಗೆ H2SO4 ಅಥವಾ ವೇಗವರ್ಧಕಗಳಾದ ಅಥವಾ ಶುಷ್ಕ ಸತುವಿನ ಕ್ಲೋರೈಡ್ ಅಥವಾ ಅಲ್ಯುಮಿನಾಗಳೊಂದಿಗೆ ವರ್ತಿಸಿದಾಗ ನಿರ್ಜಲೀಕರಣಗೊಂಡು (ನೀರಿನ ಅಣುವಿನ ತೆಗೆಯುವಿಕೆ) ಆಲ್ಕೀನ್‌ಗಳನ್ನು ಉಂಟುಮಾಡುತ್ತವೆ.




ಈಥೆನೊಲ್ ಅನ್ನು ಪ್ರಬಲ ಗಂಧಕಾಮ್ಲದೊಂದಿಗೆ 443Kನಲ್ಲಿ ಕಾಯಿಸಿದಾಗ ನಿರ್ಜಲೀಕರಣಕ್ಕೆ ಒಳಗಾಗುತ್ತದೆ.

$$C_2H_5OH \xrightarrow[443\ K]{H_2SO_4} CH_2 = CH_2 + H_2O$$

ದ್ವಿತೀಯಕ ಮತ್ತು ತೃತೀಯಕ ಆಲ್ಕೋಹಾಲ್‌ಗಳು ಮಂದ ಪರಿಸ್ಥಿತಿಗಳಲ್ಲಿ ನಿರ್ಜಲೀಕರಣಗೊಳ್ಳುತ್ತವೆ. ಉದಾಹರಣೆಗೆ,





ಸುಭಾಷಿತ

ದೇವರನ್ನು ನೋಡಬೇಕಾದುದು ಪ್ರೀತಿಯ ರೂಪದಲ್ಲಿಯೇ ವಿನಾ ಮಂದಿರ, ಮಸೀದಿಯ ರೂಪದಲ್ಲಿ ಅಲ್ಲ.

–ಸಂತ ಕಬೀರ

ಸಾವಯವ ಸಿರಿ: ಸಂದೇಹ ಮೂಡಿಸಿರುವ ತರಾತುರಿ

'ಸಾವಯವ ಸಿರಿ' ಯೋಜನೆಯ ಅಡಿ ₹ 500 ಕೋಟಿ ಅನುದಾನದ ಬಳಕೆಗಾಗಿ ಮೂರು ವರ್ಗಗಳ ಫಲಾನುಭವಿಗಳನ್ನು ಏಕಕಾಲದಲ್ಲಿ ಆಯ್ಕೆ ಮಾಡಲು ಹೊರಟಿರುವ ರಾಜ್ಯ ಕೃಷಿ ಇಲಾಖೆಯ ಕ್ರಮ ಹಲವು ಸಂದೇಹಗಳಿಗೆ ಕಾರಣವಾಗಿದೆ. ಅದೂ ಆರ್ಥಿಕ ವರ್ಷದ ಕೊನೆಯ ಘಟ್ಟದಲ್ಲಿ ನಡೆದಿರುವ ತರಾತುರಿಯನ್ನು ನೋಡಿದರೆ ಸ್ವಜನಪಕ್ಷಪಾತದ ಅನುಮಾನ ಮೂಡುತ್ತದೆ. ಯೋಜನೆಯನ್ನು ಹಾಲಿ ಆರ್ಥಿಕ ವರ್ಷದ ಆರಂಭದಲ್ಲಿಯೇ ಘೋಷಿಸಿದ್ದರೂ ಇದುವರೆಗೆ ಯಾವ ಕ್ರಮವನ್ನೂ ಕೈಗೊಳ್ಳದೆ ಕುಂಭಕರ್ಣ ನಿದ್ರೆಯಲ್ಲಿದ್ದ ಕೃಷಿ ಇಲಾಖೆಯು ಈಗ ಏಕಾಏಕಿ ಮೈಕೊಡವಿ ಎದ್ದಿರುವುದು ಏಕೆ ಎಂಬ ಪ್ರಶ್ನೆ ಮೂಡುವುದು ಸಹಜ. ಅದಕ್ಕಿಂತ ಹೆಚ್ಚಾಗಿ, ಆರ್ಥಿಕ ವರ್ಷ ಕೊನೆಗೊಳ್ಳಲು ಬಾಕಿ ಉಳಿದಿರುವ ಕೇವಲ ದಿನಗಳಲ್ಲಿ ಎಲ್ಲ ಪ್ರಕ್ರಿಯೆಗಳನ್ನೂ ಪೂರ್ಣಗೊಳಿಸಿ ಕಾರ್ಯಾದೇಶ ನೀಡಲು ತೋರುತ್ತಿರುವ ಆತುರ ಸಾವಯವ ಕೃಷಿಕರ ಹುಬ್ಬು ಮೇಲೇರುವಂತೆ ಮಾಡಿದೆ. 'ಸಾವಯವ ಸಿರಿ' ಅನುದಾನಕ್ಕಾಗಿ ಅರ್ಜಿ ಸಲ್ಲಿಸಲು ನಿಗದಿ ಮಾಡಿರುವ 'ಅರ್ಹತೆ'ಯ ಮಾನದಂಡಗಳು ಕೂಡ ಯೋಜನೆಯ ಕುರಿತ ಸಂದೇಹಗಳು ಮತ್ತಷ್ಟು ಗಟ್ಟಿಗೊಳ್ಳುವಂತೆ ಮಾಡಿವೆ. ಅರ್ಜಿ ಸಲ್ಲಿಸುವ ಸ್ವಯಂಸೇವಾ ಸಂಸ್ಥೆ ಕನಿಷ್ಠ ಹತ್ತು ಹೆಕ್ಟೇರ್ ವ್ಯವಸಾಯ ಯೋಗ್ಯ ಜಮೀನನ್ನು ಹೊಂದಿರಬೇಕು ಮತ್ತು ಆ ಸಂಸ್ಥೆ ಗೋಶಾಲೆಯನ್ನೂ ನಿರ್ವಹಿಸುತ್ತಿರಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ. 'ಆಡಳಿತ ಪಕ್ಷದ ಕಾರ್ಯಕರ್ತರು ಹಾಗೂ ಸಂಘ ಪರಿವಾರಕ್ಕೆ ಸೇರಿದವರು ನಡೆಸುವಂತಹ ಸ್ವಯಂಸೇವಾ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡಲೆಂದೇ ಈ ಷರತ್ತನ್ನು ಹಾಕಲಾಗಿದೆ' ಎಂಬ ಆರೋಪ ಇದೆ. ಯೋಜನೆಯ ಅನುಷ್ಠಾನದ ಹಂತದಲ್ಲಿ ಆಗುತ್ತಿರುವ ಲೋಪಗಳನ್ನು ಕಂಡಾಗ, ವಿಧಿಸಿರುವ ಷರತ್ತನ್ನು ಅವಲೋಕಿಸಿದಾಗ ಆ ಆರೋಪದಲ್ಲಿ ಹುರುಳಿಲ್ಲದಿಲ್ಲ ಎಂದು ಅನಿಸುತ್ತದೆ. ಸಾವಯವ ಕೃಷಿಯಲ್ಲಿ ದಶಕಗಳ ಕಾಲ ದುಡಿದು ಯೋಜನೆಯ ಪ್ರಯೋಜನ ಪಡೆಯಲು ಅರ್ಹವಾಗಿದ್ದೂ 'ಅರ್ಹತೆ'ಯ ಮಾನದಂಡದ ಕಾರಣ ಎಷ್ಟೋ ಸ್ವಯಂಸೇವಾ ಸಂಸ್ಥೆಗಳಿಗೆ ಅರ್ಜಿಯನ್ನೇ ಸಲ್ಲಿಸಲು ಸಾಧ್ಯವಾಗಿಲ್ಲ.



ಸ್ವಜನಪಕ್ಷಪಾತದ ಕೆಸರು ಈ ಯೋಜನೆಗೆ ಮೆತ್ತಿಕೊಳ್ಳದಂತೆ ಎಚ್ಚರ ವಹಿಸಬೇಕು

ರೈತರಿಗೆ ಸಾವಯವ ಕೃಷಿಯ ತರಬೇತಿ ನೀಡುವುದರ ಜತೆಗೆ, ಅವರಿಗೆ ಹಸಿರೆಲೆ ಗೊಬ್ಬರ ಮತ್ತು ಬೀಜ ವಿತರಣೆ ಮಾಡಲು, ಸಾವಯವ ಗೊಬ್ಬರದ ಉತ್ಪಾದನೆ ಹಾಗೂ ಪೋಷಕಾಂಶ ನಿರ್ವಹಣೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ನೆರವು ನೀಡುವುದಕ್ಕಾಗಿ ಈ ಯೋಜನೆಯನ್ನು ಆರಂಭಿಸಲಾಗಿದೆ. ಆದರೆ, ಯೋಜನೆಯ ಮೂಲ ಉದ್ದೇಶವನ್ನೇ ಮರೆತುಬಿಡುವಂತೆ ಕೃಷಿ ಇಲಾಖೆಯು ವರ್ತಿಸುತ್ತಿದೆ. ಬಜೆಟ್‌ನಲ್ಲಿ ಎತ್ತಿಟ್ಟ ಹಣ ಆರ್ಥಿಕ ವರ್ಷದ ಕೊನೆಯಲ್ಲಿ ಹೇಗಾದರೂ ಖರ್ಚಾದರೆ ಸಾಕು ಎಂಬ ಪ್ರವೃತ್ತಿ ಅಕ್ಷಮ್ಯ. ಅದು ಸಾರ್ವಜನಿಕರ ತೆರಿಗೆ ರೂಪದಲ್ಲಿ ನೀಡಿದ ಹಣ. ಪೈಸೆ, ಪೈಸೆಯೂ ಸದ್ಬಳಕೆ ಆಗಬೇಕು. ಹಾಗೆ ನೋಡಿದರೆ ನಮ್ಮ ಸಾವಯವ ಕೃಷಿ ನೀತಿಯೇ ಗೊಂದಲದಿಂದ ಕೂಡಿದೆ. ಸರ್ಕಾರದ ನೀತಿಯಲ್ಲಿ ಪದೇ ಪದೇ ಬದಲಾವಣೆ ಆಗುತ್ತಿರುವುದು ಹಾಗೂ ಯೋಜನೆಗಳ ಸ್ವರೂಪದಲ್ಲೂ ಬದಲಾವಣೆ ಆಗುತ್ತಿರುವುದು ಇದಕ್ಕೆ ಸಾಕ್ಷಿ. ಜಿಲ್ಲಾಮಟ್ಟ, ತಾಲ್ಲೂಕುಮಟ್ಟ ಹಾಗೂ ಹೋಬಳಿಮಟ್ಟ– ಹೀಗೆ ಮೂರು ಹಂತಗಳಲ್ಲಿ ಸಾವಯವ ಕೃಷಿಯ ಪ್ರಮಾಣವನ್ನು ಹೆಚ್ಚಿಸಲು ಯೋಜನೆಗಳನ್ನು ರೂಪಿಸುತ್ತಾ ಬರಲಾಗುತ್ತಿದೆ. ಇದರಿಂದಾಗಿ ಸಾವಯವ ಕೃಷಿ ಕುರಿತು ರೈತರಲ್ಲಿ ಒಂದಿಷ್ಟು ಆಸಕ್ತಿ ಮೂಡಿದ್ದು ನಿಜ. ಆದರೆ, ಇದನ್ನು ಸುಸ್ಥಿರಗೊಳಿಸುವಂತಹ ಯಾವ ಪ್ರಯತ್ನಗಳೂ ನಡೆಯಲಿಲ್ಲ. 15 'ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘ'ಗಳ ಒಕ್ಕೂಟಗಳನ್ನೇನೋ ಅಸ್ತಿತ್ವಕ್ಕೆ ತರಲಾಯಿತು. ಆದರೆ, ಅವುಗಳಿಗೆ ಬಲ ತುಂಬುವ ಕೆಲಸ ನಡೆಯಲಿಲ್ಲ. ಸಾವಯವ ಕೃಷಿ ಉತ್ಪನ್ನದ ಪ್ರಮಾಣಪತ್ರ ಕೊಡಿಸುವ ಕೆಲಸ ಕೂಡ ಸರಿಯಾಗಿ ಆಗಲಿಲ್ಲ. ಸಿರಿಧಾನ್ಯಗಳ ಸಂಸ್ಕರಣೆಗೆ ಲಕ್ಷಾಂತರ ರೂಪಾಯಿ ವ್ಯಯಿಸಿ ಸಲಕರಣೆಗಳನ್ನು ಕೊಡಿಸಲಾಯಿತಾದರೂ ಅವುಗಳ ನಿರ್ವಹಣೆಗೆ ಅಗತ್ಯ ವ್ಯವಸ್ಥೆ ಮಾಡಲಿಲ್ಲ. ಮಾರುಕಟ್ಟೆ ಸಮಸ್ಯೆಯನ್ನು ಬಗೆಹರಿಸಲಿಲ್ಲ.

ಕಳೆದ ಒಂದೂವರೆ ದಶಕದಲ್ಲಿ ಒಂದೇ ಯೋಜನೆಯ ಹೆಸರು 'ಸಾವಯವ ಗ್ರಾಮ', 'ಸಾವಯವ ಭಾಗ್ಯ', 'ಸಾವಯವ ಸಿರಿ' ಎಂದು ಹೆಸರು ಬದಲಾಗುತ್ತಾ ಹೋಯಿತೇ ವಿನಾ ಸಾವಯವ ಕೃಷಿಕರ ಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗಲಿಲ್ಲ. ಇದೀಗ 'ಸಾವಯವ ಸಿರಿ' ಹೆಸರಿನಲ್ಲಿ ಸಾವಯವ ಕೃಷಿಯ ನೆರವಿಗಾಗಿ ಎತ್ತಿಟ್ಟ ಹಣವನ್ನು ಬೇಕಾಬಿಟ್ಟಿ ಬಳಸುವ ಆತುರ. ಇಂತಹ ತರಾತುರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಡೆಯೊಡ್ಡಬೇಕು. ಸ್ವಜನಪಕ್ಷಪಾತದ ಕೆಸರು ಈ ಯೋಜನೆಗೆ ಮೆತ್ತಿಕೊಳ್ಳ- ದಂತೆ ಎಚ್ಚರ ವಹಿಸಬೇಕು. ಸರ್ಕಾರದ ಮಾತನ್ನು ನಂಬಿ, ಸಾವಯವ ಕೃಷಿಗೆ ಬದಲಾಗಿರುವ ಕೃಷಿಕರಿಗೆ ಯೋಜನೆಯ ಸಂಪೂರ್ಣ ಲಾಭ ದಕ್ಕುವಂತೆಯೂ ನೋಡಿಕೊಳ್ಳಬೇಕು.

ಔದಾರ್ಯ, ಹೃದಯವೈಶಾಲ್ಯದ ಧರ್ಮಕ್ಕೆ ಉತ್ಪಾತ ಮತ್ತು ವಿಷವೆನ್ನುವ ಅರ್ಥಗಳೂ ಇವೆ

ಧರ್ಮ: ಅಂತಃಕರಣ ಮತ್ತು ಅಂತಃಕಲಹ



ಪಡಸಾಲೆ

ರಘುನಾಥ ಚ.ಹ.

ಜಾತ್ರೆಗಳಲ್ಲಿನ ವ್ಯಾಪಾರ ವಹಿವಾಟಿನಿಂದ ಮುಸ್ಲಿಮರನ್ನು ದೂರವಿಡುವ ಹಾಗೂ ಹಿಜಾಬ್ ನೆಪದಲ್ಲಿ ಶಾಲಾ ಮಕ್ಕಳಲ್ಲಿ ಬಿರುಕು ಮೂಡಿಸುವ ಪ್ರಯತ್ನಗಳು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ, ಸ್ವಾತಂತ್ರ್ಯ ಚಳವಳಿ ದಿನಗಳಲ್ಲಿ ಗಾಂಧೀಜಿ ಹೊರಡಿಸಿದ್ದ ಕರಪತ್ರವೊಂದನ್ನು ನೆನಪಿಸಿಕೊಳ್ಳಬೇಕು. ಆ ಕರಪತ್ರದ ಸಾರಾಂಶ:

'ಹಿಂದೂ ಮತ್ತು ಮುಸ್ಲಿಮರಾದ ನಾವು ಒಂದೇ ತಾಯಿಯ ಮಕ್ಕಳೆನ್ನುವಂತೆ ದೇವರ ಸಾಕ್ಷಿಯಾಗಿ ನಡೆದುಕೊಳ್ಳುತ್ತೇವೆ. ಒಬ್ಬರ ಕಷ್ಟಗಳನ್ನು ಮತ್ತೊಬ್ಬರದೆಂದು ತಿಳಿದು ಪರಸ್ಪರ ನೆರವಾಗುತ್ತೇವೆ. ನಾವು ಪರಸ್ಪರರ ಧರ್ಮ ಮತ್ತು ಧಾರ್ಮಿಕ ಭಾವನೆಗಳನ್ನು ಗೌರವಿಸುತ್ತೇವೆ. ಧರ್ಮದ ಹೆಸರಿನಲ್ಲಿ ಎಂದಿಗೂ ಹಿಂಸಾಚಾರದಲ್ಲಿ ತೊಡಗುವುದಿಲ್ಲ.'

ಇಡೀ ಸಮಾಜ ಕಣ್ಣಿಗೆ ಕಾಣುವಂತೆ ಎರಡು ಹೋಳುಗಳಾಗಿ ಒಡೆದಿರುವ ಸನ್ನಿವೇಶದಲ್ಲಿ ಗಾಂಧೀಜಿ ಹೇಳಿದಂತೆ ಯಾರೊಬ್ಬರೂ 'ನಾವೆಲ್ಲ ಒಂದೇ ತಾಯಿಯ ಮಕ್ಕಳು' ಎಂದು ಹೇಳದಿರುವುದಕ್ಕೆ ಆಶ್ಚರ್ಯ ಪಡುವುದೋ ವಿಷಾದಿಸುವುದೋ ತಿಳಿಯದು. ಹಾಗೆ ಹೇಳಬಹುದಾಗಿದ್ದ ಬರಹಗಾರರಲ್ಲಿ ಹಲವರು ವಿಚಿತ್ರ ಸಂಭ್ರಮದಲ್ಲಿ ಕಳೆದುಹೋಗಿದ್ದಾರೆ, ಉಳಿದವರು ವಿಷಣ್ಣತೆಯಲ್ಲಿ ಹುದುಗಿಹೋಗಿದ್ದಾರೆ. ಧಾರ್ಮಿಕ ಸಾಮರಸ್ಯದ ಬಗ್ಗೆ ಅರಿವು ಮೂಡಿಸಬೇಕಾದ ಕರ್ತವ್ಯವನ್ನು ನಾಡಿನ ಮಠಾಧೀಶರು ಬಿಟ್ಟುಕೊಟ್ಟು ಬಹಳ ಕಾಲವಾಗಿದೆ. ಉಳಿದವರು ರಾಜಕಾರಣಿಗಳು. ಬರಹಗಾರರು, ಕಲಾವಿದರು, ಮಠಾಧೀಶರು ತಮ್ಮ ಬದ್ಧತೆಯಿಂದ ವಿಮುಖರಾದರೂ ರಾಜಕಾರಣಿಗಳು ಮಾತ್ರ ಸಾಮರಸ್ಯದ ಮಾರ್ಗಕ್ಕೆ ಬೆನ್ನುಹಾಕುವಂತಿಲ್ಲ. ಎಲ್ಲ ವರ್ಗದವರನ್ನೂ ಸಮಾನವಾಗಿ ಕಾಣಬೇಕೆನ್ನುವ ಸಂವಿಧಾನದ ಅಂಕುಶ ಅವರಿಗಿದೆ. ದುರದೃಷ್ಟವಶಾತ್, ಸಮಾಜದ ಸ್ವಾಸ್ಥ್ಯ ಕಾಪಾಡಬೇಕಾದ ರಾಜಕಾರಣಿಗಳೇ ಹುಳಿ ಹಿಂಡುವ ಕೆಲಸ ಮಾಡುತ್ತಿರುವುದು.

ಹಿಂದೂ ಧರ್ಮದ ರಕ್ಷಣೆ, ಜಾಗೃತಿಯ ಕುರಿತು ಹೆಮ್ಮೆಯಿಂದ ಮಾತನಾಡುವುದು ಇಂದಿನ ರಾಜಕಾರಣದ ಫ್ಯಾಷನ್ ಆಗಿಹೋಗಿದೆ. ಮಠಾಧೀಶರು ಮಾಡಬೇಕಾದ ಧರ್ಮ ಸಂರಕ್ಷಣೆಯ ಕೆಲಸವನ್ನು ರಾಜಕಾರಣಿಗಳೂ ರಾಜಕಾರಣಿಗಳು ಮಾಡಬೇಕಾದ ಆಡಳಿತದ ಸೂತ್ರಗಳನ್ನು ಮಠಾಧೀಶರೂ ವಹಿಸಿಕೊಂಡಂತಿರುವ ವಿಚಿತ್ರ ಸನ್ನಿವೇಶ ಇಂದಿನದು.

ರೋಮ್ ತತ್ವಜ್ಞಾನಿ ಲೂಸಿಯಸ್ ಅನೆಯುಸ್, 'ಧರ್ಮವೆನ್ನುವುದು ಸಾಮಾನ್ಯರ ಪಾಲಿಗೆ ಸತ್ಯ. ಬುದ್ಧಿವಂತರಿಗದು ಮಿಥ್ಯೆ. ಆಡಳಿತಗಾರರಿಗೆ ಉಪಯುಕ್ತವಾದುದು' ಎಂದಿದ್ದಾರೆ. ಧರ್ಮ ಹಾಲು ಕರೆಯುವ ಹಸುವಾಗಿರುವುದು ಲೂಸಿಯಸ್ ಮಾತಿಗೆ ಸಮರ್ಥನೆಯಂತಿದೆ. ಬದುಕಲು ಬಲ್ಲ ಬುದ್ಧಿವಂತರು ಕೂಡ ಆಡಳಿತಗಾರರ ಜೊತೆ ಸೇರಿಕೊಂಡು ಜನಸಾಮಾನ್ಯರ ದಿಕ್ಕುತಪ್ಪಿಸುತ್ತಿದ್ದಾರೆ.

ಧರ್ಮನಿರಪೇಕ್ಷತೆ ಹಾಗೂ ಜಾತ್ಯತೀತ ರೀತಿಯ ಪದಗಳಿಗೆ ಕಿವುಡಾಗಿರುವ ಹಾಗೂ ಮಾತಿಗೊಮ್ಮೆ ದೇಶದ್ರೋಹ– ಧರ್ಮದ್ರೋಹದ ಕತ್ತಿ ಝಳಪಿಸುವ ರಾಜಕಾರಣಿಗಳೊಂದಿಗೆ ಸಂವಾದ ನಡೆಸುವುದು ಭಗವಂತನಿಗೂ ಅಸಾಧ್ಯ. ಅವರ ಕಿವುಡುತನಕ್ಕೆ ಕಾಲವೇ ಮದ್ದರೆಯಬೇಕು. ಜಾತ್ಯತೀತ ಭಾರತದ ಬಗ್ಗೆ ಮಾತನಾಡುವ ರಾಜಕಾರಣಿಗಳಾದರೂ ರಚನಾತ್ಮಕವಾದ ಏನನ್ನಾದರೂ ಮಾಡುತ್ತಿದ್ದಾರೆಯೇ ಎಂದು ನೋಡಿದರೆ, ಪರಿಸ್ಥಿತಿ ಭಿನ್ನವಾಗಿಯೇನೂ ಇಲ್ಲ. ಅಲ್ಪಸಂಖ್ಯಾತರ ಹಿತಾಸಕ್ತಿಯ ಬಗ್ಗೆ ಮಾತನಾಡುವ ರಾಜಕಾರಣಿಗಳಿಗೆ ಬಡ ಮುಸ್ಲಿಂ ವ್ಯಾಪಾರಿಗಳ ಬಗ್ಗೆ ನಿಜವಾದ ಸಹಾನುಭೂತಿ ಇದ್ದಲ್ಲಿ, ಶಿವಮೊಗ್ಗದ ಮಾರಿಗುಡಿ ಜಾತ್ರೆಯಲ್ಲಿ ಮುಸ್ಲಿಮರ ಪರವಾಗಿ ಸತ್ಯಾಗ್ರಹ ಮಾಡಬೇಕಾಗಿತ್ತು. ಅನ್ಯಾಯದ ವಿರುದ್ಧ ಉಪವಾಸ ಕೂರಬೇಕಾಗಿತ್ತು.

ಗಾಂಧಿಯ ಬಗ್ಗೆ ಈಗಲೂ ಮಾತನಾಡುವ ಜನ ಗಾಂಧಿಯಿಂದ ಏನನ್ನೂ ಕಲಿತಿಲ್ಲ. ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷವಿದು. ಭಾರತದ ಸ್ವಾತಂತ್ರ್ಯ ಸಾಧನೆಯ ಹಿಂದಿರುವ ಹಿಂದೂ ಮುಸ್ಲಿಂ ಸಾಮರಸ್ಯದ ಕಥನಗಳನ್ನು ದೇಶದ ಯುವಜನತೆಗೆ ಪರಿಚಯಿಸುವ ಕೆಲಸ ಮಾಡಬೇಕಿತ್ತು. ಆದರೆ, ಆಗುತ್ತಿರುವುದು ಒಡಕಿನ ಕಥೆಗಳ ಪ್ರಚಾರ. 'ಕ್ರಿಯೆಗೆ ತಕ್ಕ ಪ್ರತಿಕ್ರಿಯೆ' ಎನ್ನುವ ಪರಿಕಲ್ಪನೆಯೊಂದನ್ನು ಕರ್ನಾಟಕದ ಮುಖ್ಯಮಂತ್ರಿ ದೇಶಕ್ಕೆ ಪರಿಚಯಿಸಿದ್ದಾರಷ್ಟೇ. ಆ ಮಾತನ್ನು– ಕ್ರಿಯೆ ಆಡಳಿತ ಪಕ್ಷದ ಕೆಲಸ, ಪ್ರತಿಕ್ರಿಯೆ ಪ್ರತಿಪಕ್ಷಗಳ ಕೆಲಸ ಎಂದು ಕಾಂಗ್ರೆಸ್ ನಾಯಕರು ಭಾವಿಸಿದಂತಿದೆ.

ಗಾಂಧೀಜಿಯ ಸತ್ಯಾಗ್ರಹ ಪರಿಕಲ್ಪನೆ ಜನಪ್ರಿಯವಾಗಿದ್ದ ದಿನಗಳಲ್ಲಿ, ಶ್ರೀರಾಮನವಮಿ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದವರು ಕೂಡ ಕೆಲವೆಡೆಗಳಲ್ಲಿ ಹಬ್ಬ ಆಚರಿಸುತ್ತಿದ್ದುದನ್ನು ಹಾಗೂ ಆ ಸಂದರ್ಭಗಳಲ್ಲಿ ಮೊಳಗುತ್ತಿದ್ದ ಘೋಷಣೆಗಳಲ್ಲಿ 'ಹಿಂದೂ ಮುಸಲ್ಮಾನ್ ಕೀ ಜೈ' ಸೇರಿರುತ್ತಿದ್ದುದನ್ನು ಗಾಂಧಿ ಇತಿಹಾಸಕಾರ ರಾಮಚಂದ್ರ ಗುಹಾ ದಾಖಲಿಸಿದ್ದಾರೆ. ಈಗಿನ ಸಂದರ್ಭ ತದ್ವಿರುದ್ಧ: ಹಿಂದೂಗಳಿಗೆ ಜೈ ಎಂದರವನು ದೇಶಭಕ್ತ, ಮುಸಲ್ಮಾನರಿಗೂ ಜೈ ಎಂದವನು ದೇಶದ್ರೋಹಿ. ಭಾರತದಲ್ಲಿರುವ ಮುಸಲ್ಮಾನರು ಕೂಡ ಭಾರತೀಯರೇ, ಅವರಿಗೆ ಈ ದೇಶಕ್ಕೆ ಸಂಬಂಧಿಸಿದಂತೆ ಹಿಂದೂಗಳಷ್ಟೇ ಹಕ್ಕುಬಾಧ್ಯತೆಗಳಿವೆ ಎನ್ನುವುದನ್ನು ಒಪ್ಪದಿರುವಷ್ಟರ ಮಟ್ಟಿಗೆ ನಮ್ಮಲ್ಲಿ ಅನೇಕರ 'ಧರ್ಮಪ್ರಜ್ಞೆ' ಜಡವಾಗಿದೆ.



ಧರ್ಮದ ಬಗ್ಗೆ ಮಾತನಾಡುವ ರಾಜಕಾರಣಿಗಳಿಗೆ ಧರ್ಮದ ಅರ್ಥಸಾಧ್ಯತೆಗಳೇ ತಿಳಿದಂತಿಲ್ಲ. ಅವರ ಪಾಲಿಗೆ ಧರ್ಮವೆಂದರೆ ಹಿಂದೂ ಧರ್ಮ ಮಾತ್ರ. ಆದರೆ, ನಮ್ಮ ಪೂರ್ವಸೂರಿಗಳು ಧರ್ಮಕ್ಕೆ ಹಚ್ಚಿರುವ ಅರ್ಥಗಳು ಒಂದೆರಡಲ್ಲ. ದಾನ, ಔದಾರ್ಯ, ಹೃದಯವೈಶಾಲ್ಯ, ದಾನಶೀಲತೆ, ನ್ಯಾಯ, ನಿಷ್ಠೆ, ಶ್ರದ್ಧೆ, ದರ್ಶನ, ದಯೆ, ಕರುಣೆಯಂಥ ಹಲವು ಗುಣ ಹಾಗೂ ಮೌಲ್ಯಗಳನ್ನು 'ಧರ್ಮ' ಧ್ವನಿಸುತ್ತದೆ. ಈ ಧರ್ಮಕ್ಕೆ ಉತ್ಪಾತ ಮತ್ತು ವಿಷ ಎನ್ನುವ ಅರ್ಥಗಳೂ ಇವೆ. ಸದ್ಯಕ್ಕೆ ರಾಜಕಾರಣಿಗಳು ಪ್ರತಿನಿಧಿಸುತ್ತಿರುವುದು ಕೊನೆಯ ಎರಡು ಸಂಗತಿಗಳನ್ನಷ್ಟೇ. ತಮಗೂ ಒಂದು ಧರ್ಮವಿದೆ ಎನ್ನುವುದೇ ರಾಜಕಾರಣಿಗಳಿಗೆ ತಿಳಿದಂತಿಲ್ಲ. ಅದು ಹಿಂದೂ, ಮುಸ್ಲಿಂ ಅಥವಾ ಕ್ರೈಸ್ತ ಧರ್ಮವಲ್ಲ. ಪ್ರಜೆಗಳನ್ನೆಲ್ಲ ಅಂತಃಕರಣದಿಂದ ನೋಡುವ 'ರಾಜಕಾರಣ ಧರ್ಮ'ವದು.

ಆಪತ್ತಿನಲ್ಲಿ ಇರುವವರ ನೆರವಿಗೆ ಒದಗುವುದೇ ಧರ್ಮ; ದಯೆ ಧರ್ಮದ ಮೂಲ ಸೆಲೆ ಎನ್ನುತ್ತದೆ ಕನ್ನಡ ಜನಪದ. 'ಕೊಲ್ಲದಿರ್ಪುದೆ ಧರ್ಮ. ಅಧರ್ಮದಿಂದ ಬಂದುದನೊಲ್ಲದಿರ್ಪುದೆ ನೇಮ' ಎನ್ನುವುದು ವಚನಕಾರ ಸೊಡ್ಡಳ ಬಾಚರಸನ ಉದ್ಗಾರ. ದಯೆಯೇ ಧರ್ಮದ ಮೂಲವೆಂದ ಬಸವಣ್ಣನವರು, ದಯವಿಲ್ಲದ ಧರ್ಮ ಯಾವುದೆಂದು ಪ್ರಶ್ನಿಸಿದರು. ಬಸವಣ್ಣನವರ ವಾರಸುದಾರರೆಂದು ಬೀಗುವವರು, ತಮ್ಮ ಧರ್ಮಾಚರಣೆಯಲ್ಲಿ ದಯೆಯ ಲವಲೇಶವಾದರೂ ಇದೆಯೇ ಎನ್ನುವುದನ್ನು ವಿಶ್ಲೇಷಿಸಿಕೊಳ್ಳಬೇಕು. ಧರ್ಮಕ್ಕೆ ಬದ್ಧನಾದವನು ಇನ್ನೊಬ್ಬರತ್ತ ಬೆರಳು ತೋರುವುದಿಲ್ಲ. ಬಹಿರಂಗದ ಹುಳುಕು ಅಂತರಂಗದ ರಾಡಿಗೆ ಸಮರ್ಥನೆಯಾಗಬಾರದು. ಬಸವಣ್ಣನ ಮಾತೇ ದಲೈಲಾಮಾ ಅವರದೂ. ದಯೆಯೆನ್ನುವ ನಮ್ಮದು ಸರಳವಾದ ಧರ್ಮ ಎನ್ನುವ ವ್ಯಾಖ್ಯಾನ ಅವರದು.

'ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಕಲಿಸುವ ಧರ್ಮವನ್ನು ಇಷ್ಟಪಡುತ್ತೇನೆ' ಎಂದಿದ್ದರು ಅಂಬೇಡ್ಕರ್. ಈ ಮೂರು ಗುಣಗಳಲ್ಲಿ ಒಂದಾದರೂ ಪ್ರಸ್ತುತ ಚಲಾವಣೆಯಲ್ಲಿರುವ 'ಧರ್ಮ'ದಲ್ಲಿದೆಯೇ? ಮತ್ತೊಂದು ಧರ್ಮದೊಂದಿಗಿನ ಅನುಸಂಧಾನದ ಮಾತಿರಲಿ– ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ತನ್ನೊಳಗೇ ಸಾಧಿಸುವುದು ಹಿಂದೂ ಧರ್ಮಕ್ಕೆ ಸಾಧ್ಯವಾಗಿಲ್ಲ. ಹಿಂದೂ ಮಾತ್ರವಲ್ಲ, ಪೂರ್ಣ ಪ್ರಮಾಣದಲ್ಲಿ ಮಾನವೀಯವಾಗುವುದು ಯಾವ ಧರ್ಮಕ್ಕೂ ಸಾಧ್ಯವಾಗಿಲ್ಲ. ಹಾಗಾಗಿ, ತಂತಮ್ಮ ಧರ್ಮಗಳಲ್ಲಿನ ರಾಡಿಯನ್ನು ತಿಳಿಗೊಳಿಸುವುದು ಆಯಾ ಧರ್ಮೀಯರ ಮೊದಲ ಕರ್ತವ್ಯವಾಗಬೇಕು. ಇನ್ನೊಂದು ಧರ್ಮವನ್ನು ನಾವು ಅಸಹನೆಯಿಂದ ಕಾಣುವುದಾದರೆ, ಒಂದೋ ನಾವು ನಂಬಿದ ಧರ್ಮದೊಳಗೇ ಏನೋ ಐಬಿರಬೇಕು ಇಲ್ಲವೇ ಆ ಧರ್ಮದ ಕುರಿತ ನಮ್ಮ ಗ್ರಹಿಕೆಯಲ್ಲೇ ಲೋಪವಿರಬೇಕು.

ದುರ್ಬಲರು, ಮಹಿಳೆಯರು, ಮಕ್ಕಳು ಮತ್ತು ಅಲ್ಪಸಂಖ್ಯಾತರ ಬಗ್ಗೆ ಸಂವಿಧಾನ ವಿಶೇಷ ಕಾಳಜಿಯನ್ನು ತೋರುತ್ತದೆ. ಗಾಂಧೀಜಿ, ಅಂಬೇಡ್ಕರ್, ದಲೈಲಾಮಾ ಪ್ರತಿಪಾದಿಸುವ ಧರ್ಮದ ಕಾಳಜಿಯೂ ಇದೇ. ಸಮಸ್ಯೆ ಇರುವುದು ಧರ್ಮದಲ್ಲಲ್ಲ; ಅದರ ಆಚರಣೆ ಮತ್ತು ವ್ಯಾಖ್ಯಾನದಲ್ಲಿ. ಧರ್ಮದ ಅಂತರಂಗದಲ್ಲಿ ಅಂತಃಕರಣಕ್ಕೆ ಅವಕಾಶ ಇರಬೇಕೇ ವಿನಾ ಕಾಲಕೂಟಕ್ಕಲ್ಲ.

ಇಂದಿನ ತುರ್ತು, ಧರ್ಮದ ರಕ್ಷಣೆಯಲ್ಲ; ಮನುಷ್ಯರನ್ನು, ಮಾನವೀಯತೆಯನ್ನು ಉಳಿಸಿಕೊಳ್ಳುವುದು.

ಚುರುಮುರಿ



ಯುಗಾದಿ ವರ್ಷಭವಿಷ್ಯ!

• ಲಿಂಗರಾಜು ಡಿ.ಎಸ್.

ಶುಭಕೃತನಾಮ ಸಂವತ್ಸರದ ಯುದ್ಧದಲ್ಲಿ ಮಹಾಸ್ತ್ರಗಳ ಭಯ. ಜಗತ್ತಿನ ಆರ್ಥಿಕ ಸ್ಥಿತಿ ಏರುಪೇರು. ತೈಲೇಂದ್ರರು ಶ್ರೀಮಂತರಾಗುವರು. ಶನಿಯ ವಕ್ರೀಕಾಲದಿಂದ ನೆರೆ ಹೊರೆಯಾಗುವ ಸಾಧ್ಯತೆ!

ದೇಶದ ರಾಜನಾದ ನಮೋ ಕಾಲಪುರುಷನು ಯಶಸ್ವಿ ಮತಯಾತ್ರೆಗಳಿಂದ ನಗುಮೊಗನಾಗಿರುತ್ತಾನೆ. ಆದರೆ ಆಗಾಗ ಆತನ ಕನಸಿನಲ್ಲಿ ಪೊರಕೆ ಕಾಣಿಸಿಕೊಳ್ಳುವುದು ಶುಭಕರವಲ್ಲ! ದೇಶದಲ್ಲಿ ವಾರ್ಮೋಡ ಭೀತಿಯಿಂದ ಪೆಟ್ರೋಲ್- ಡೀಸೆಲ್, ಅಡುಗೆ ಎಣ್ಣೆ, ಗ್ಯಾಸ್ ಬೆಲೆ ಗಗನಕ್ಕೆ. ಇದರಿಂದ ದೇಶದ ರಾಜನ ವಿರುದ್ಧ ಜನತೆ ಸಿಟ್ಟಿಗೇಳುವುದು. ಪರಿಹಾರಕ್ಕಾಗಿ ಜನಾರಾಧನೆ ಮಾಡುವುದು ಶ್ರೇಯಸ್ಕರ. ಜನರ ನಡುವೆ ಧರ್ಮದ ಕಿಚ್ಚು ಹಚ್ಚುವ ದುಷ್ಟ ಗ್ರಹಗಳ ಕಾಟ ಹೆಚ್ಚುವುದು. ದಾನಿ-ಬಾನಿಗಳು ಜಗತ್ತಿನ ಶ್ರೀಮಂತರಾಗುವ ಸುಯೋಗವಿದೆ.

ರಾಜ್ಯ ರಾಜಕೀಯದಲ್ಲಿ ಅಧಿಕಾರಾಸಕ್ತ-ರಿಂದ ರಾಜಕೀಯ ತಿಕ್ಕಾಟ, ಸ್ವಪಕ್ಷ ದೇವತೆಗಳು ಕಂಟಕರಾಗಲಿದ್ದಾರೆ. ಜಾತಿ ಪ್ರೀತಿ, ಚುನಾವಣಾ ತಾಲೀಮು, ಪಾದಯಾತ್ರೆಗಳಿಂದ ಪಕ್ಷಗಳಿಗೆ ಅಧಿಕಾರ ಕೈವಶವಾಗದು. ಕೋವಿಡ್ ನಾಲ್ಕನೇ ಅಲೆಯ ಸುದ್ದಿಯಿಂದ ನಕಲಿ ಬಿಲ್ಲುಗಾರರಿಗೆ ಶುಕ್ರದೆಸೆ ನಿರೀಕ್ಷೆ. ಔಷಧ ಕ್ಷೇತ್ರ ಏಳಿಗೆ ಕಾಣಲಿದೆ.

ಪಾಲಿಕೆಗಳ ಜಡತ್ವದಿಂದ ರಸ್ತೆಗುಂಡಿಗಳು ಹೆಚ್ಚಿ ಗುಪ್ತವಾದ ಗೌರವಕ್ಕೆ ಪರೀಕ್ಷಾ ಕಾಲ. ಜನರಿಗೆ ಸತತ ಮರಣಯೋಗ, ಆಕ್ರೋಶದ ಕಿಡಿ! ಕಾರ್ಯಾಂಗ ಪರ್ಸಂಟೇಜ್ ಹಿಡಿತದಲ್ಲಿರುವುದರಿಂದ ಭ್ರಷ್ಟಾಚಾರದ ಹೆಚ್ಚಳ. ವರ್ಗಾವಣೆಯು ದಂಧೆಯಾಗಿ ಪರಿವರ್ತನೆಯಾಗುವುದು. ಉಪದ್ರವಕಾರಿ ಅಧಿಕಾರಿಗಳು ಮತ್ತು ದಲ್ಲಾಳಿಗಳು ಎಸಿಬಿ, ಲೋಕಾಯುಕ್ತ ದೇವತೆಗಳ ಕೋಪಕ್ಕೆ ಪಾತ್ರರಾಗಲಿದ್ದಾರೆ.

ಜನಸಾಮಾನ್ಯರ ಗೋಚಾರದಲ್ಲಿ ಬೇವಿನ ಕಹಿಯೇ ಪ್ರಧಾನವಾಗಿರಲಿದೆ. ಬೆಲೆ ಏರಿಕೆಯಿಂದ ನಿರಂತರ ಬೇಗುದಿ. ಶ್ರೀಸಾಮಾನ್ಯನ ಆದಾಯ 5, ವೆಚ್ಚ 9. ಡಿಜಿಟಲ್ ಕಳ್ಳರ ಹಾವಳಿಯಿಂದ ಧನನಾಶ! ಚಿನ್ನ-ಬೆಳ್ಳಿ-ಗಳು ಕನಸಿನಲ್ಲೂ ಕಾಣವು. ಬಸ್ಸು- ಲಾರಿಗಳು ಶನಿ ಪ್ರಭಾವದ ಕಾರಣವಾಗಿ ಜನರ ಮೇಲೆ ನುಗ್ಗುವುವು! ನಿರ್ಮಾಣ ಕಾಮಗಾರಿ ಮಧ್ಯಮ ವರ್ಗಕ್ಕೆ ದುಬಾರಿಯಾಗಲಿದೆ. ಆರ್‌ಸಿಬಿ ತಾರಾಬಲ ಹೆಚ್ಚಲು ದೈವ ಪ್ರಾರ್ಥನೆ ಸೂಕ್ತ!

ದಿನದ ಟ್ವೀಟ್

ಅಚ್ಚರಿಯ ವಿದ್ಯಮಾನ



ಇಂದು ನಾನು ಪಾಲ್ಗೊಂಡಿದ್ದ ಮದುವೆ ಸಮಾರಂಭದಲ್ಲಿ ವಿಸ್ಮಯಕರ ವಿದ್ಯಮಾನವೊಂದಕ್ಕೆ ಸಾಕ್ಷಿಯಾದೆ. ವರನ ಪಾದ ಮುಟ್ಟುವಂತೆ ಪುರೋಹಿತರು ವಧುವಿಗೆ ಹೇಳಿದಾಗ, ಆಕೆ ಅದನ್ನು ಖಂಡತುಂಡವಾಗಿ ನಿರಾಕರಿಸಿದಳು. ಆತನಿಗಿಂತ ತಾನು ಯಾವುದರಲ್ಲಾದರೂ ಕಡಿಮೆ ಅಂತ ತನಗೆ ಅನ್ನಿಸಿಲ್ಲ ಎಂದು ಅವಳು ಹೇಳಿದಳು. ಆಗ ಸಭಾಂಗಣವು ಚಪ್ಪಾಳೆಯ ಸುರಿಮಳೆಗರೆಯಿತಲ್ಲದೆ ಅಲ್ಲಿದ್ದ ಎಲ್ಲಾ ಮಹಿಳೆಯರು ಆಕೆಯನ್ನು ಪ್ರೋತ್ಸಾಹಿಸಿದರು. ಎಂತಹ ಮೈನವಿರೇಳಿಸುವ ಕ್ಷಣ.

ಶ್ರೀ, ಐ.ಟಿ. ಉದ್ಯೋಗಿ

ಕಿಡಿನುಡಿ



ಶಿವಮೊಗ್ಗದಲ್ಲಿ ಕೊಲೆಯಾದ ಒಬ್ಬ ಯುವಕನ ಕುಟುಂಬಕ್ಕೆ ₹25 ಲಕ್ಷ ಪರಿಹಾರ ನೀಡಲಾಗಿದೆ. ಆದರೆ, ಬೆಳ್ತಂಗಡಿಯಲ್ಲಿ ಕೊಲೆಯಾದ ದಲಿತ ಯುವಕನ ಕುಟುಂಬಕ್ಕೆ ₹2 ಲಕ್ಷ ಮಾತ್ರ ನೀಡಲಾಗಿದೆ. ದಲಿತರು ಹಿಂದೂಗಳಲ್ಲವೇ? ಈ ತಾರತಮ್ಯ ಏಕೆ?

ಕೆ.ಅನ್ನದಾನಿ, ಜೆಡಿಎಸ್ ಶಾಸಕ

25 ವರ್ಷಗಳ ಹಿಂದೆ

ಶನಿವಾರ, 29-3-1997

• ರಾಜ್ಯದಲ್ಲಿ ಸಾಂಸ್ಕೃತಿಕ ಉತ್ಸವಕ್ಕೆ ಕ್ರಮ– ಪಟೇಲ್

ಬೆಳಗಾವಿ, ಮಾ. 28– ರಾಜ್ಯದ ಸಾಂಸ್ಕೃತಿಕ ಗರಿಮೆ, ಹಿರಿಮೆಗಳನ್ನು ವೈಭವದಿಂದ ಪ್ರದರ್ಶಿಸುವ ಉದ್ದೇಶದಿಂದ ಕಿತ್ತೂರು ಉತ್ಸವದ ಮಾದರಿಯಲ್ಲಿ ರಾಜ್ಯದ ಬೇರೆ ಕಡೆಯೂ ಉತ್ಸವಗಳನ್ನು ಸರ್ಕಾರ ನಡೆಸಲಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಕಿತ್ತೂರಿನಲ್ಲಿ ಪ್ರಕಟಿಸಿದರು.

ಇದೇ ಮೊದಲ ಬಾರಿಗೆ ಏರ್ಪಡಿಸಲಾಗಿರುವ ಕಿತ್ತೂರು ಉತ್ಸವ ಉದ್ಘಾಟಿಸಿ 6.5 ಲಕ್ಷ ರೂ. ವೆಚ್ಚದಲ್ಲಿ ತಯಾರಿಸಿರುವ ರಾಣಿ ಚನ್ನಮ್ಮನ ಪ್ರತಿಮೆಯನ್ನು ಅನಾವರಣಗೊಳಿಸಿ ಮಾತನಾಡಿದ ಅವರು, ಜನರು ತಮ್ಮ ಪರಂಪರೆ ಮತ್ತು ಇತಿಹಾಸವನ್ನು ಮರೆಯದಿರಲು ಇಂಥ ಉತ್ಸವಗಳು ಅಗತ್ಯ ಎಂದು ಅಭಿಪ್ರಾಯಪಟ್ಟರು.

• ಭಾರತ– ಪಾಕಿಸ್ತಾನ ಮಾತುಕತೆ ಆರಂಭ

ನವದೆಹಲಿ, ಮಾ. 28 (ಪಿಟಿಐ)– ಭಾರತ ಹಾಗೂ ಪಾಕಿಸ್ತಾನದ ಮಧ್ಯೆ ಪ್ರಮುಖ ವಿಷಯಗಳ ಮೇಲಿನ ವ್ಯಾಪಕ ಮಾತುಕತೆ ಇಂದು ಸೌಹಾರ್ದಯುತ ವಾತಾವರಣದಲ್ಲಿ ಆರಂಭವಾಗಿದ್ದು, ಕಾಶ್ಮೀರ ಸಮಸ್ಯೆ ಕುರಿತು ತುರ್ತಾಗಿ ಚರ್ಚಿಸಬೇಕೆಂದು ಇಸ್ಲಾಮಾಬಾದ್ ಪಟ್ಟು ಹಿಡಿದಿದೆ.

ಮೂರು ವರ್ಷಗಳ ನಂತರ ಎರಡೂ ದೇಶಗಳ ವಿದೇಶಾಂಗ ಕಾರ್ಯದರ್ಶಿಗಳ ನಡುವೆ ನಡೆಯುತ್ತಿರುವ ಈ ಔಪಚಾರಿಕ ಮಾತುಕತೆ ಸಂದರ್ಭದಲ್ಲಿ ದ್ವಿಪಕ್ಷೀಯ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಸಾಧ್ಯತೆಯಿದೆ. ಹೈದರಾಬಾದ್ ಭವನದಲ್ಲಿ ಇಂದು ನಡೆದ ಚರ್ಚೆಯ ನೇತೃತ್ವವನ್ನು ಭಾರತದ ವಿದೇಶಾಂಗ ಕಾರ್ಯದರ್ಶಿ ಸಲ್ಮಾನ್ ಹೈದರ್ ವಹಿಸಿದ್ದರು.

50 ವರ್ಷಗಳ ಹಿಂದೆ

ಬುಧವಾರ, 29-3-1972

• ವಿವರ ಪರಿಶೀಲನೆ ಬಳಿಕ ಹೊಸ ತೆರಿಗೆ ಕುರಿತು ನಿರ್ಧಾರ

ಬೆಂಗಳೂರು, ಮಾ. 28– ಜೂನ್‌ನಲ್ಲಿ ಮಂಡಿಸಲಿರುವ ಆಯವ್ಯಯದಲ್ಲಿ ಸರ್ಕಾರ ಪ್ರತಿಯೊಂದು ವಿಚಾರವನ್ನೂ ವಿವರವಾಗಿ ಪರಿಶೀಲಿಸಿ ಹೊಸ ತೆರಿಗೆ ವಿಚಾರದಲ್ಲಿ ನಿರ್ಧಾರ ಕೈಗೊಳ್ಳುವುದೇ ಹೊರತು ಬೇಜವಾಬ್ದಾರಿಯಿಂದ ತೆರಿಗೆ ಹೊರೆ ಹೆಚ್ಚಿಸದು ಎಂದು ಹಣಕಾಸು ಸಚಿವ ಎಂ.ವೈ. ಘೋರ್ಪಡೆ ವಿಧಾನಸಭೆಗೆ ಭರವಸೆ ನೀಡಿದರು.

• ಬಳಸದ ವಿದ್ಯುತ್ತಿಗೆ ಹಣ ಪಾವತಿ: ಭದ್ರಾವತಿ ಕಾರ್ಖಾನೆ ಎಡವಟ್ಟು

ಬೆಂಗಳೂರು, ಮಾ. 28– ಪ್ರತೀ ವರ್ಷ ಆಡಿಟ್ ಆಕ್ಷೇಪಗಳಿಗಾಗಿ 'ಪ್ರಸಿದ್ಧಿ' ಪಡೆಯುವ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಈ ಬಾರಿಯೂ ಹಿಂದೆ ಬಿದ್ದಿಲ್ಲ, ಅದರ ಬದಲು ಇನ್ನೂ ಕೆಲವು ಪೆದ್ದು ವ್ಯವಹಾರಗಳಿಂದ 'ಕೀರ್ತಿ' ಹೆಚ್ಚಿಸಿಕೊಂಡಿದೆ.

1969–70ರ ಅವಧಿಗೆ ಸಂಬಂಧಿಸಿದಂತೆ ಇಂದು ವಿಧಾನಸಭೆಯಲ್ಲಿ ಮಂಡಿಸಲಾದ ಆಡಿಟ್ ವರದಿಯು ಹಲವು ಲಕ್ಷ ರೂಪಾಯಿಗಳ ಮೊತ್ತಕ್ಕೆ ಬರುವ ಆಯವ್ಯಯ 'ಅಕ್ರಮ ವ್ಯವಹಾರ'ಗಳನ್ನು ಪಟ್ಟಿ ಮಾಡಿ ಉಲ್ಲೇಖಿಸಿದೆ. ಪ್ರತೀ ತಿಂಗಳು ಎಷ್ಟು ವಿದ್ಯುತ್ ಖರ್ಚಾಗಿದೆಯೋ, ಅಷ್ಟಕ್ಕೆ ಮಾತ್ರ ಹಣ ಕೊಡುವ ಕ್ರಮದ ಬದಲು ಯಾವುದೋ ಒಂದು ಅತ್ಯಧಿಕ ವಿದ್ಯುತ್ ಉಪಯೋಗದ ತಿಂಗಳನ್ನು ಮಾನದಂಡವಾಗಿಟ್ಟುಕೊಂಡು, ಅದರ ಪ್ರಕಾರ ವಿದ್ಯುತ್ ದರ ನೀಡುತ್ತಾ ಬಂದಿರುವುದರಿಂದಾಗಿ, ಉಪಯೋಗಿಸದೇ ಹೋದ ವಿದ್ಯುತ್ತಿಗೂ ಕಂಪನಿ ಹಣ ಪಾವತಿಸಿದೆ.

ಸಂಗತ

ರಂಗತೇರಿನ ಮೂಲಕ ರಾಜ್ಯಾಂಗದರಿವು

ನಮ್ಮ ಸಂವಿಧಾನಾತ್ಮಕ ಹಕ್ಕುಗಳನ್ನು ರಂಗ ಪ್ರಯೋಗದ ಮೂಲಕ ಅರ್ಥಮಾಡಿಸುವ ಮಾದರಿ ಯೋಜನೆಯೊಂದನ್ನು ಶಿವಮೊಗ್ಗ ರಂಗಾಯಣ ಅನುಷ್ಠಾನಗೊಳಿಸುತ್ತಿದೆ

• ಡಾ. ಮುರಳೀಧರ ಕಿರಣಕೆರೆ

ಸಾಂಸ್ಕೃತಿಕ ಸಂಸ್ಥೆಯಾದ ಮೈಸೂರು ರಂಗಾಯಣ ವಿಭಿನ್ನ ಕಾರಣಗಳಿಂದ ಸುದ್ದಿಯಾಗಿರುವ ಈ ಹೊತ್ತಿನಲ್ಲಿ, ಶಿವಮೊಗ್ಗ ರಂಗಾಯಣವು ಮಾದರಿ ಎನ್ನಬಹುದಾದ ಯೋಜನೆಯೊಂದನ್ನು ಹೆಚ್ಚು ಸದ್ದಿಲ್ಲದೆ ಅನುಷ್ಠಾನಗೊಳಿಸುತ್ತಿದೆ. ಭಾರತೀಯ ಸಂವಿಧಾನದ ಮೂಲ ಆಶಯಗಳು, ತತ್ವಗಳು, ಸ್ಫೂರ್ತಿದಾಯಕ ಅಂಶಗಳನ್ನು ರಂಗಪ್ರಯೋಗದ ಮೂಲಕ ಜನಸಾಮಾನ್ಯರಿಗೆ ತಲುಪಿಸುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಿದು. ಸರ್ವರಿಗೂ ಸಂವಿಧಾನ ಎಂಬ ಯೋಜನೆಯಡಿ ನಮ್ಮ ರಾಜ್ಯಾಂಗದ ಮುಖ್ಯ ತಿರುಳನ್ನು 'ವೀ ದ ಪೀಪಲ್ ಆಫ್ ಇಂಡಿಯಾ' ನಾಟಕ ರೂಪದಲ್ಲಿ ಮನವರಿಕೆ ಮಾಡಿಸುವ ವಿಶಿಷ್ಟ ಉಪಕ್ರಮ ಅಪರೂಪದ್ದೇ ಸರಿ.

ಹೌದು, ನಮ್ಮ ಸಂವಿಧಾನವನ್ನು ಪೂರ್ಣವಾಗಿ ಅರ್ಥಮಾಡಿಕೊಂಡವರ ಸಂಖ್ಯೆ ತುಂಬಾ ಸಣ್ಣದು. ಇದು ಶುಷ್ಕ, ಕ್ಲಿಷ್ಟ ಪಾರಿಭಾಷಿಕ ಪದಗಳ, ಸಾಮಾನ್ಯ ತಿಳಿವಳಿಕೆಗೆ ನಿಲುಕದ ಕಬ್ಬಿಣದ ಕಡಲೆ ಎಂಬ ಭಾವನೆ ಬಹುತೇಕರದ್ದು. ಜೊತೆಗೆ ಇದನ್ನು ಅರಿತು ಆಗಬೇಕಾದ್ದೇನು ಎಂಬ ಉದಾಸೀನವೂ ಸೇರಿದೆ. ಹಾಗಾಗಿ ಈ ವಿಷಯದಲ್ಲಿ ಅರಿವಿಗಿಂತ ಅಜ್ಞಾನದ್ದೇ ದೊಡ್ಡ ಪಾಲು.

ವೀ ದ ಪೀಪಲ್ ಆಫ್ ಇಂಡಿಯಾ ಎಂಬ ಹೆಸರಲ್ಲೇ ಒಂಥರಾ ರೋಮಾಂಚನವಿದೆ! ಭಾರತೀಯ ಸಂವಿಧಾನದ ಪ್ರಸ್ತಾವನೆಯಲ್ಲಿನ ಮೊದಲ ಪದಗಳಿವು. ಭಾರತದ ಜನರಾದ ನಾವು... ಎಂದು ಪ್ರಾರಂಭವಾಗುವ ನಮ್ಮ ಸಂವಿಧಾನಕ್ಕೆ ವಿಶ್ವದಲ್ಲೇ ಅತ್ಯಂತ ಉದ್ದನೆಯ ಲಿಖಿತ ಸಂವಿಧಾನವೆಂಬ ಹೆಗ್ಗಳಿಕೆ. ಅಮೆರಿಕದ್ದೂ ಬರಹ ರೂಪದಲ್ಲಿದ್ದರೂ ನಮಗೆ ಹೋಲಿಸಿದಲ್ಲಿ ಗಾತ್ರದಲ್ಲಿ ಚಿಕ್ಕದು. ಇಷ್ಟೊಂದು ಸಮಗ್ರ, ಪರಿಪೂರ್ಣ ರಾಜ್ಯಾಂಗವನ್ನು ಬೇರೆ ಯಾವ ದೇಶವೂ ಹೊಂದಿಲ್ಲ ಎಂಬುದು ಖಂಡಿತಾ ಹೆಮ್ಮೆಯ ವಿಷಯ.

ಪ್ರಪಂಚದ ಹಲವು ರಾಷ್ಟ್ರಗಳ ಆಡಳಿತ ವ್ಯವಸ್ಥೆಯ ಮುಖ್ಯಾಂಶಗಳನ್ನು ಸೇರಿಸಿಕೊಂಡು ರಚನೆಯಾಗಿರುವ ನಮ್ಮ ಸಂವಿಧಾನ ಶ್ರೇಷ್ಠವೆನಿಸಲು ಕಾರಣವೇ ಇದು. ಕಾಲಕಾಲಕ್ಕೆ ಅಗತ್ಯ ತಿದ್ದುಪಡಿಗಳನ್ನು ಸ್ವೀಕರಿಸುತ್ತಲೇ ತನ್ನ ಬಿಗಿತನ, ಕಟ್ಟುನಿಟ್ಟನ್ನು ಕಾಪಾಡಿಕೊಂಡಿದೆ. ತಿದ್ದುಪಡಿ ತರಲು ಅತ್ಯಂತ ಕಠಿಣ ನಿಯಮಗಳನ್ನು ಪಾಲಿಸಬೇಕಿರುವುದರಿಂದಲೇ ಪಾವಿತ್ರ್ಯ ಮುಕ್ಕಾಗದೇ ಉಳಿದಿರುವುದು.

ರಂಗ ಮಾಧ್ಯಮದ ಮೂಲಕ ನಮ್ಮ ಸಂವಿಧಾನದ ಪ್ರಧಾನ ಆಶಯಗಳನ್ನು ಬಿಂಬಿಸುವ ವಿಶಿಷ್ಟ ಪ್ರಸ್ತಾವವನ್ನು ಶಿವಮೊಗ್ಗ ರಂಗಾಯಣ ಕಳೆದ ವರ್ಷ ಸರ್ಕಾರದ ಮುಂದಿಟ್ಟಿತ್ತು. ಸುದೀರ್ಘ ಮನವರಿಕೆಯ ಮೇಲಷ್ಟೇ ಇಂತಹದ್ದೊಂದು ಯೋಜನೆಗೆ ಒಪ್ಪಿ ಅನುದಾನ ನೀಡಿದ್ದು, ಅದೂ ಹಲವು ಷರತ್ತುಗಳಿಗೆ ಒಳಪಡಿಸಿ. ಪ್ರಕಟಣೆ ಹೊರಡಿಸಿ ರಾಜ್ಯದ ವಿವಿಧೆಡೆಯ ಕಲಾವಿದರ ಅರ್ಜಿಗಳನ್ನು ಪರಿಶೀಲಿಸಿ, ರಂಗಾರ್ಹತೆಯನ್ನು ಪರೀಕ್ಷೆಗೊಳಪಡಿಸಿದ ನಂತರವೇ ಪ್ರತಿಭೆಗಳನ್ನು ಆಯ್ದದ್ದು. ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ಚಿತ್ರದುರ್ಗ, ಮೈಸೂರು, ಚಿಕ್ಕಬಳ್ಳಾಪುರಗಳಲ್ಲದೆ ದೂರದ ಗದಗ, ವಿಜಯನಗರ, ಬಾಗಲಕೋಟೆ, ರಾಯಚೂರು, ಬೀದರ್, ಕಲಬುರಗಿ ಜಿಲ್ಲೆಗಳ ಎಲ್ಲಾ ಇಪ್ಪತ್ತಕ್ಕೂ ಅಧಿಕ ಕಲಾವಿದರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು ಎಂಬುದು ಮತ್ತೊಂದು ವಿಶೇಷ.

ಮಾತೃಸ್ಥಾನದಲ್ಲಿದ್ದು ನಮ್ಮನ್ನು ಕಾಯುವ ಈ ಪವಿತ್ರ ಗ್ರಂಥದ ಪ್ರಧಾನ ಆಶಯಗಳನ್ನು ಬಿಂಬಿಸುವ ರಂಗಕೃತಿ ಸಿದ್ಧವಾಗುತ್ತಿದ್ದಂತೆ ಪ್ರಯೋಗಕ್ಕೆ ಇಳಿಸುವ ಸವಾಲು. ವಿಶ್ವಮಾನವ ಪ್ರಜ್ಞೆ ಬಿತ್ತಿದ ಕುವೆಂಪು ಕುಪ್ಪಳಿಯಲಿ ಒಂದು ತಿಂಗಳು ಕಠಿಣ ತಾಲೀಮು ನಡೆಯಿತು. ರಾಜ್ಯದ ವಿವಿಧೆಡೆಯ ಕಲಾವಿದರ ಮಾತು, ಅಭಿನಯ, ಅಭಿವ್ಯಕ್ತಿಯನ್ನು ನಿರ್ದಿಷ್ಟ ಚೌಕಟ್ಟಿಗೆ ಹೊಂದಿಸಿ, ಅವರೊಳಗಿನ ಪ್ರತಿಭೆಯನ್ನು ಸಹಜವಾಗಿ ಹೊರತರುವಲ್ಲಿ ಈ ತಾಣದ ಸ್ಫೂರ್ತಿಯ ಕೊಡುಗೆಯೂ ಸೇರಿತ್ತು.



ಹಾಡುತ್ತಾ, ಬೇಡುತ್ತಾ ಊರೂರು ಸುತ್ತುವ ಅಲೆಮಾರಿಗಳ ಗುಂಪಿಗೆ ದಿಢೀರೆಂದು ಉದ್ಭವವಾಗುವ 'ಸಂವಿಧಾನವೆಂದರೇನು' ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಹಾದಿಯಲ್ಲಿ ರೂಪುಗೊಂಡ ಈ ದೃಶ್ಯಕಾವ್ಯದ ಮೊದಲ ಪ್ರದರ್ಶನ ನಡೆದಿದ್ದು ಜ. 26ರ ಗಣರಾಜ್ಯೋತ್ಸವದಂದು, ಶಿವಮೊಗ್ಗದಲ್ಲಿ. ನಾಡಿನ ಹಲವೆಡೆಯಲ್ಲಿ ಈಗಾಗಲೇ 35 ರಂಗಪ್ರಸ್ತುತಿಗಳನ್ನು ಮುಗಿಸಿದ ತಂಡದ ಸುತ್ತಾಟ ಮುಂದುವರಿದಿದೆ.

ಚೇತೋಹಾರಿ ಅಭಿನಯ, ಉತ್ತಮ ರಂಗಸಜ್ಜಿಕೆ, ರಂಗಪರಿಕರಗಳ ಸಮರ್ಥ ಬಳಕೆ, ಸಂವಿಧಾನದ ಮೂಲ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಸೋದರತ್ವಗಳ ಮಹತ್ವವನ್ನು ಬಿಂಬಿಸುವ ಬಗೆ, ಸಂವಿಧಾನ ರಚನಾ ಸಭೆಯ ಚರ್ಚೆ, ನಡಾವಳಿಗಳನ್ನು ಪ್ರೇಕ್ಷಕರ ಕಣ್ಣೆದುರಿಗೆ ಕಟ್ಟಿಕೊಡುವ ರೀತಿ, ಮಹಿಳೆಯ ಮೇಲಿನ ಶೋಷಣೆ, ಅತ್ಯಾಚಾರ, ಅನಾಚಾರಗಳ ಅಂಕಿ ಅಂಶಗಳನ್ನು ಸಭಿಕರ ಮಧ್ಯೆಯೇ ಬಿಚ್ಚಿಡುತ್ತಾ ಬೆಚ್ಚಿಬೀಳಿಸುವ ಪರಿ ನಿಜಕ್ಕೂ ಪರಿಣಾಮಕಾರಿ. ಕಲಾವಿದರೆಲ್ಲಾ ದಮನಿತ, ಶೋಷಿತ ವರ್ಗದಿಂದಲೇ ಬಂದವರಾದ್ದರಿಂದ ಅವರ ಧ್ವನಿಯಲ್ಲಿನ ಆಕ್ರೋಶಕ್ಕೆ ಸಹಜತೆಯ ಸ್ಪರ್ಶವಿದೆ. ನಾಟಕ ಎಲ್ಲಿಯೂ ಶುಷ್ಕವಾಗದಂತೆ ಎಚ್ಚರ ವಹಿಸುತ್ತಾ ಕಲಾತ್ಮಕತೆಯನ್ನು ಉಳಿಸಿಕೊಂಡು ಸಂವಿಧಾನದ ಸ್ಫೂರ್ತಿಯನ್ನು ಅರ್ಥಪೂರ್ಣವಾಗಿ ಸಂವಹನ ಮಾಡುವ ಈ ಪ್ರಕ್ರಿಯೆ ಸವಾಲಿನದ್ದಾದರೂ ಯಶಸ್ವಿಯಾಗಿದೆ.

ನಮ್ಮ ಸಂವಿಧಾನಾತ್ಮಕ ಹಕ್ಕುಗಳು, ಮೂಲ ತತ್ವಗಳಂತಹ ಪ್ರಮುಖ ಅಂಶಗಳನ್ನು ರಂಗ ಪ್ರಯೋಗದ ಮೂಲಕ ಅರ್ಥಮಾಡಿಸುವ, ಮನವರಿಕೆ ಮಾಡಿಕೊಡುವ ಈ ನಡೆ ಪ್ರಶಂಸಾರ್ಹ. ಸರ್ವರಲ್ಲೂ ಸಂವಿಧಾನದ ಬಗ್ಗೆ ತಿಳಿವಳಿಕೆ ಮೂಡಿ, ಒಪ್ಪಿ ನಡೆಯುವ ಮನಃಸ್ಥಿತಿಯಿಂದಷ್ಟೇ ನಮ್ಮ ಪ್ರಸ್ತುತ ಸಾಮಾಜಿಕ ವ್ಯಾಧಿಗಳಿಗೆ ಮದ್ದು, ಮುಕ್ತಿ ಸಾಧ್ಯ.

ವಾಚಕರ ವಾಣಿ

ಬ್ಯಾಂಕ್ ಅವ್ಯವಹಾರ: ಗ್ರಾಹಕರಲ್ಲಿ ಮೂಡದ ವಿಶ್ವಾಸ

ಗುರು ರಾಘವೇಂದ್ರ ಸಹಕಾರ ಬ್ಯಾಂಕಿನಲ್ಲಿ ಇದುವರೆಗೆ ₹ 2,317 ಕೋಟಿ ದುರ್ಬಳಕೆಯಾಗಿದ್ದು, 2018-19ನೇ ಸಾಲಿನ ಲೆಕ್ಕ ಪರಿಶೋಧನೆ ಬಾಕಿ ಉಳಿದಿದೆಯೆಂದು, ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಸಹಕಾರ ಸಚಿವರು ಉತ್ತರಿಸಿದ್ದಾರೆ. 2014-15ನೇ ಸಾಲಿನಲ್ಲಿ ಪ್ರಾರಂಭವಾಗುವ ಹಣದ ದುರ್ಬಳಕೆ 2017-18ನೇ ಸಾಲಿನವರೆಗೂ ಅವ್ಯಾಹತವಾಗಿ ಮುಂದುವರಿದರೂ, ಅದು ಸಂಬಂಧಿಸಿದ ಇಲಾಖೆಗಳ ಗಮನಕ್ಕೇ ಬಂದಿಲ್ಲವೆಂದರೆ ಚೋದ್ಯವೆನಿಸುತ್ತದೆ.

2014-15ನೇ ಸಾಲಿನಲ್ಲಿ ಹಣ ದುರ್ಬಳಕೆಯಾದಾಗಲೇ ಸಹಕಾರ ಇಲಾಖೆಯ ನಿಬಂಧಕರು ಮತ್ತು ಸಹಕಾರ ಇಲಾಖೆಯ ಆಡಿಟ್ ನಿರ್ದೇಶಕರು ನಿದ್ರೆಯಿಂದ ಎದ್ದು ತಮ್ಮ ಕರ್ತವ್ಯ ನಿರ್ವಹಿಸಿದ್ದರೆ 2017-18ರವರೆಗೂ ಆ ಬ್ಯಾಂಕಿನಲ್ಲಿ ನಿರಾತಂಕವಾಗಿ ನಡೆದಿರುವ ಹಣದ ದುರ್ಬಳಕೆಯನ್ನು ಖಂಡಿತ ತಪ್ಪಿಸಬಹುದಿತ್ತು. ಗುರು ರಾಘವೇಂದ್ರ ಸಹಕಾರ ಬ್ಯಾಂಕಿನಂತೆಯೇ, ಋಷಿ-ಮುನಿಗಳ ಹೆಸರಿನಲ್ಲಿಯೇ ಸ್ಥಾಪಿತವಾಗಿರುವ ಇನ್ನೂ ಒಂದೆರಡು ಸಹಕಾರ ಬ್ಯಾಂಕ್‌ಗಳೂ ಸಂಬಂಧಿಸಿದ ಇಲಾಖೆಗಳ 'ಸಹಕಾರ' ಇಲ್ಲದೆ ಗ್ರಾಹಕರಿಗೆ ಇಷ್ಟು ಲೀಲಾಜಾಲವಾಗಿ ಉಂಡೆನಾಮ ತೀಡಲು ಸಾಧ್ಯವಾಗುತ್ತಿರಲಿಲ್ಲವೆಂದು ಇದರಿಂದ ವೇದ್ಯವಾಗುತ್ತದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಬೋರ್ಡ್ ಪರೀಕ್ಷೆ: ಬಗೆಹರಿಯದ ಗೊಂದಲ

ಕರ್ನಾಟಕ ಪಿ.ಯು. ಮಂಡಳಿ ಘೋಷಿಸಿದ ಅವಸರದ ಅಂತಿಮ ವೇಳಾಪಟ್ಟಿಯಂತೆ ದ್ವಿತೀಯ ಪಿ.ಯು ವಿಜ್ಞಾನ ವಿಭಾಗದ ಪರೀಕ್ಷೆಗಳು ಏಪ್ರಿಲ್ 16ರಂದು ಪ್ರಾರಂಭವಾಗಬೇಕಿತ್ತು. ಜೆಇಇ ಪರೀಕ್ಷೆಯ ದಿನಾಂಕವನ್ನು ಎನ್‌ಟಿಎ ಘೋಷಿಸಿದಾಗ, ಆ ಪರೀಕ್ಷೆಗಳ ಆರಂಭವೂ ಏಪ್ರಿಲ್ 16ಕ್ಕೇ ನಿಗದಿಯಾಗಿತ್ತು. ಅದನ್ನು ಮನಗಂಡ ಪಿ.ಯು. ಮಂಡಳಿ ಎರಡೇ ದಿನದಲ್ಲಿ ಪರಿಷ್ಕೃತ ವೇಳಾಪಟ್ಟಿ ಹೊರಡಿಸಿ, ತನ್ನ ಪರೀಕ್ಷೆಗಳನ್ನು ಏಪ್ರಿಲ್ 23ರಿಂದ ಪ್ರಾರಂಭಿಸುವುದಾಗಿ ಹೇಳಿತು. ಈಗ ಎನ್‌ಟಿಎ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಿ, ತನ್ನ ಪರೀಕ್ಷೆಗಳು ಏಪ್ರಿಲ್ 21ರಿಂದ ಪ್ರಾರಂಭವಾಗಲಿವೆ ಎಂದಿದೆ! ಪಿಯು ಮಂಡಳಿಯ ವಿಜ್ಞಾನ ವಿಭಾಗದ ಪಿಸಿಎಂ ಪರೀಕ್ಷೆಗಳು ಏಪ್ರಿಲ್ 23, 26 ಹಾಗೂ ಮೇ 10ರಂದು ನಡೆಯಲಿದ್ದು ಉಳಿದ ವಿಷಯಗಳ ಪರೀಕ್ಷೆಗಳೂ ಅವುಗಳ ನಡುವೆಯೇ ನಡೆಯುತ್ತವೆ. ಅಂದರೆ ಒಂದೋ ಎರಡೋ ಪಿಯು ಬೋರ್ಡ್ ಪರೀಕ್ಷೆ ಬರೆದು ನಡುವೆ ಜೆಇಇ ಬರೆಯಬೇಕು ಅಥವಾ ಜೆಇಇ ಬರೆದು ಬೋರ್ಡ್ ಪರೀಕ್ಷೆ ಬರೆಯಬೇಕು. ಹೇಗೆ ಆಯ್ಕೆ ಮಾಡಿಕೊಂಡರೂ ಒಂದೆರಡು ದಿನ ಮಾತ್ರ ಒಂದು ಪರೀಕ್ಷೆಗೆ ಸಿಗುವುದು.

ಎರಡನೆಯ ಹಂತದ ಜೆಇಇ ಪರೀಕ್ಷೆಗಳು, ಪಿಯು ಪರೀಕ್ಷೆಗಳು ಮುಗಿದ ಒಂದು ವಾರಕ್ಕೆ, ಅಂದರೆ ಮೇ 24ರಂದು ಪ್ರಾರಂಭವಾಗಲಿವೆ. ಜೊತೆಗೆ, ಕಳೆದ ಜೆಇಇ ಪರೀಕ್ಷೆಗಳು ನಾಲ್ಕು ಅವಧಿಯಲ್ಲಿ ನಡೆದಿದ್ದವು. ಆದರೆ ಈ ಬಾರಿ ಕೇವಲ ಎರಡೇ ಅವಧಿಯಲ್ಲಿ ನಡೆಯುತ್ತಿವೆ. ಒಟ್ಟಾರೆ, ಕರ್ನಾಟಕದ ವಿದ್ಯಾರ್ಥಿಗಳಿಗೆ ಜೆಇಇ ಪರೀಕ್ಷೆಗೆ ಸಿದ್ಧರಾಗಲು ಅಗತ್ಯ ಸಮಯವೇ ಇಲ್ಲವಾಗಿದೆ. ಈ ಬಾರಿಯೂ ನಾಲ್ಕು ಅವಧಿಯಲ್ಲಿ ಜೆಇಇ ಪರೀಕ್ಷೆಗಳನ್ನು ನಡೆಸಬಹುದಾಗಿತ್ತು ಅಥವಾ ಬೋರ್ಡ್ ಹಾಗೂ ಜೆಇಇ ಪರೀಕ್ಷೆಗಳ ನಡುವೆ ಅಂತರ ಇರುವಂತೆ ವೇಳಾಪಟ್ಟಿ ರೂಪಿಸಬಹುದಿತ್ತು. ಬೋರ್ಡ್ ಪರೀಕ್ಷೆಗಳೂ ಮುಖ್ಯವಾದ್ದರಿಂದ ಯಾವುದಕ್ಕೆ ಹೆಚ್ಚು ಪ್ರಾಮುಖ್ಯ ಕೊಡಬೇಕು ಎಂಬ ಗೊಂದಲ ವಿದ್ಯಾರ್ಥಿಗಳದ್ದು. ಪರಿಹಾರ ಸೂಚಿಸಬಹುದಾಗಿದ್ದ ಪಿ.ಯು. ಬೋರ್ಡ್ ಮತ್ತು ಎನ್‌ಟಿಎ ಮಾತ್ರ ತಮ್ಮ ಜಾಣಕುರುಡು ಮುಂದುವರಿಸಿರುವುದು ದುರಂತವೇ ಸರಿ!

ಡಾ. ಬಿ.ಆರ್.ಸತ್ಯನಾರಾಯಣ, ಬೆಂಗಳೂರು

ಭಗವದ್ಗೀತೆ: ಲೇಖಕರ ಚಿಂತನೆ ಹೇರುವುದು ಸಲ್ಲ

ಶಾಲಾ ಶಿಕ್ಷಣದಲ್ಲಿ ಭಗವದ್ಗೀತೆ ಕುರಿತಾದ ಚರ್ಚೆಯಲ್ಲಿ (ಪ್ರ.ವಾ., ಮಾರ್ಚ್ 26) ಡಾ. ಸಿ.ಎನ್.ರಾಮಚಂದ್ರನ್ ಅವರು ಗೀತೆಯನ್ನು ಪಠ್ಯವನ್ನಾಗಿ ಅಳವಡಿಸುವ ವಿಚಾರದಲ್ಲಿ ಅನೇಕ ಮಿತಿಗಳು ಹಾಗೂ ಅಪಾಯಕಾರಿ ಸಾಧ್ಯತೆಗಳಿವೆ ಎಂದು ವಾದಿಸುತ್ತಾರೆ. ಆದರೆ, ನೀತಿ ಶಿಕ್ಷಣವನ್ನು ಭಗವದ್ಗೀತೆಯ ಮೂಲಕ ಕಲಿಸಲೇಬೇಕು ಎಂದಾದರೆ ಗಾಂಧೀಜಿಯವರ 'Discourses on the Gita' ಕೃತಿಯಿಂದ ಆಯ್ದ ಭಾಗಗಳನ್ನು ಸೂಚಿಸುತ್ತಾರೆ. ಆಧುನಿಕ ಜೀವನದ ಸಮಸ್ಯೆಗಳನ್ನು ಎದುರಿಸಲು ಭಗವದ್ಗೀತೆಯ ಉಪದೇಶಗಳು ಹೇಗೆ ಸಹಕಾರಿ ಎಂಬ ಬಗ್ಗೆ ನಾರಾಯಣ ಶೇವಿರೆ ಅವರು ವಿವರಿಸಿರುವ (ಪ್ರ.ವಾ, ಚರ್ಚೆ, ಮಾರ್ಚ್ 26) ಹಲವಾರು ವಿಚಾರಗಳು ರಾಮಚಂದ್ರನ್ ಅವರಿಗೆ ತಿಳಿಯದವೇನಲ್ಲ. ಆದರೆ ಅವುಗಳಲ್ಲಿ ಒಂದನ್ನೂ ಪ್ರಸ್ತಾಪಿಸದೆ ಏಕಮುಖ ವಾದವನ್ನು ಮಂಡಿಸಿದ್ದು ಸರಿಯಲ್ಲ. 'ಆಧುನಿಕ ಓದುಗರಿಗೆ ಭಗವದ್ಗೀತೆ: ಇತಿಹಾಸ, ಭಾಷ್ಯಗಳು ಮತ್ತು ತತ್ವಜ್ಞಾನ' ಪುಸ್ತಕದಲ್ಲಿ ಡಾ. ಎಂ.ವಿ.ನಾಡಕರ್ಣಿ ಅವರು ಭಗವದ್ಗೀತೆಯನ್ನು ಆಧುನಿಕ ಮೌಲ್ಯಗಳಾದ ಸಮತೆ, ಮಾನವ ಘನತೆ, ಪರಧರ್ಮ ಸಹಿಷ್ಣುತೆ ಇವುಗಳ ದೃಷ್ಟಿಯಿಂದ ಅರ್ಥಪೂರ್ಣವಾಗಿ ವಿವರಿಸಿ, ಗೀತೆಯ ಉಪದೇಶಗಳ ಬಗ್ಗೆ ನಮ್ಮಲ್ಲಿ ಮೂಡುವ ಹಲವಾರು ಸಂಶಯಗಳನ್ನು ನಿವಾರಿಸುತ್ತಾರೆ. ಪು.ಸೂ. ಲಕ್ಷ್ಮೀನಾರಾಯಣ ರಾವ್ (ವಾ.ವಾ., ಮಾರ್ಚ್ 28) ಅವರು ಕುರಾನ್ ಮತ್ತು ಬೈಬಲ್‌ಗಳಲ್ಲಿ ತಿಳಿಸಿರುವ 'ಎಲ್ಲರನ್ನೂ ಒಳಗೊಳ್ಳುವ' ನೀತಿಪಾಠಗಳ ಬಗ್ಗೆ ಪ್ರಸ್ತಾಪಿಸುತ್ತಾರೆ. ಆದರೆ ಈ ಗ್ರಂಥಗಳ ಮಿತಿಗಳು ಹಾಗೂ ಅಪಾಯಕಾರಿ ಸಾಧ್ಯತೆಗಳ ಬಗ್ಗೆ ಇಬ್ಬರೂ (ಸಿ.ಎನ್.ರಾಮಚಂದ್ರನ್ ಸೇರಿಸಿ) ಚಕಾರವೆತ್ತದೇ ಇರುವುದು, 'ಚರ್ಚಾಪಟುಗಳ ವಾದಮಂಡನೆ'ಯನ್ನು ಸ್ಮರಣೆಗೆ ತರುತ್ತದೆ.

ಈ ಎಲ್ಲ ಕಾರಣಗಳಿಂದ, ಭಗವದ್ಗೀತೆಯಿಂದ ನೇರವಾಗಿ ಆಯ್ದ ಭಾಗಗಳನ್ನು ಶಾಲಾ ಶಿಕ್ಷಣದಲ್ಲಿ ಅಳವಡಿಸುವುದರಿಂದ ವಿಶ್ವಮಾನ್ಯತೆ ಗಳಿಸಿರುವ ಈ ಗ್ರಂಥದ ಬಗ್ಗೆ ಮಕ್ಕಳ ಗಮನ ಸೆಳೆಯಲು ಮತ್ತು ಅವರು ಮುಂದಿನ ದಿನಗಳಲ್ಲಿ ಸ್ವಯಂಪ್ರೇರಿತರಾಗಿ ಗೀತೆಯ ಬಗ್ಗೆ ವಸ್ತುನಿಷ್ಠ ಅಧ್ಯಯನ ನಡೆಸಲು ಸಹಕಾರಿಯಾಗುತ್ತದೆ. ಗೀತೆಯ ಸಾಲುಗಳು, ಕನ್ನಡದಲ್ಲಿ ಅವುಗಳ ಅರ್ಥ ಮತ್ತು ಭಾವಾರ್ಥಗಳನ್ನು ವಿವರಿಸದೆ, ಭಗವದ್ಗೀತೆಯ ಬಗ್ಗೆ ಗಾಂಧೀಜಿಯ ಅಥವಾ ನಾವು ಇಷ್ಟಪಡುವ ಕೆಲವು ಲೇಖಕರ, ಸತ್ಯಾನ್ವೇಷಕರ ಚಿಂತನೆಗಳನ್ನು ಹೇರುವುದು ಅಸಮರ್ಥನೀಯ.

ಇನ್ನು, ಧರ್ಮಸಮ್ಮತ ಎಂದರೆ ಏನು? ಧರ್ಮ ರಕ್ಷಣೆಗೆ ಹಿಂಸಾ ಮಾರ್ಗವೋ ಅಹಿಂಸಾ ಮಾರ್ಗವೋ? ಮಾನವ ಉನ್ನತ ದೆಶೆಯತ್ತ ಸಾಗಲು ಕರ್ಮ ಮಾರ್ಗವೋ ಜ್ಞಾನ ಮಾರ್ಗವೋ? ಈ ಪ್ರಶ್ನೆಗಳು ಗೀತೆಯನ್ನು ಓದಿದಾಗ ಅರ್ಜುನನನ್ನು ಮೊದಲ್ಗೊಂಡು ಎಲ್ಲರಿಗೂ ಬರುವುದು ಸಹಜ. ಈ ಕಾರಣಕ್ಕಾಗಿ ಭಯವೇಕೆ? ಗಮನಿಸಬೇಕಾದ ಅಂಶವೆಂದರೆ. ಈ ರೀತಿಯ ಪ್ರಶ್ನೆಗಳು ಮತ್ತು ಗೊಂದಲಗಳು ಮಕ್ಕಳೇ ಏಕೆ ಎಲ್ಲರ ಸತ್ಯಾನ್ವೇಷಣೆಯ ಪ್ರೇರಕಗಳಲ್ಲವೇ?

ಡಾ. ಎಂ.ರವೀಂದ್ರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣೆಗಳಲ್ಲಿ ಬಿಜೆಪಿಗೆ ಫೇಸ್‌ಬುಕ್ ನೆರವು

‘ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿಗೆ ಪ್ರಚಾರ ನಡೆಸಲು, ಫೇಸ್‌ಬುಕ್ ತನ್ನ ವೇದಿಕೆಯಲ್ಲಿ ನೆರವಾಗಿದೆ. 2019ರಿಂದ 2020ರ ನಡುವೆ 22 ತಿಂಗಳ ಅವಧಿಯಲ್ಲಿ ಒಟ್ಟು 10 ಚುನಾವಣೆಗಳು ನಡೆದಿವೆ. ಈ ಎಲ್ಲಾ ಚುನಾವಣೆಗಳಲ್ಲಿ ‘ನ್ಯೂಜ್’ (**NEWJ**) ಎಂಬ ಸುದ್ದಿತಾಣವು, ಸುದ್ದಿಯಂತೆ ವೇಷಧರಿಸಿದ ಬಿಜೆಪಿ ಪರವಾದ ಜಾಹೀರಾತುಗಳನ್ನು ಪ್ರಕಟಿಸಿದೆ. ಈ ಜಾಹೀರಾತುಗಳನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಲು ನ್ಯೂಜ್, ಫೇಸ್‌ಬುಕ್‌ಗೆ ಶುಲ್ಕ ಪಾವತಿಸಿದೆ. ಬಿಜೆಪಿ ಪರವಾಗಿ ಸುದ್ದಿರೂಪದ ಜಾಹೀರಾತು ಪ್ರಕಟಿಸಿದ ನ್ಯೂಜ್ ಸಂಸ್ಥೆಯು, ಮುಕೇಶ್ ಅಂಬಾನಿ ಒಡೆತನದ ಜಿಯೊ ಪ್ಲಾಟ್‌ಫಾರ್ಮ್ಸ್ ಲಿಮಿಟೆಡ್‌ನ ಒಂದು ಅಂಗಸಂಸ್ಥೆ. ಈ ಜಾಹೀರಾತುಗಳನ್ನು ಪ್ರಕಟಿಸಲು ಜಿಯೊ ಕಂಪನಿಯೇ ಹಣ ನೀಡಿದೆ. ಫೇಸ್‌ಬುಕ್‌ನ ರಾಜಕೀಯ ಜಾಹೀರಾತು ನಿಯಮಗಳೂ ಬಿಜೆಪಿಗೆ ಪೂರಕವಾಗಿ ಮತ್ತು ಕಾಂಗ್ರೆಸ್‌ಗೆ ಮಾರಕವಾಗಿ ಕೆಲಸ ಮಾಡಿವೆ. ಚುನಾವಣಾ ಆಯೋಗದ ನಿಯಮಗಳಲ್ಲಿ ಇರುವ ನ್ಯೂನತೆಗಳೂ ಬಿಜೆಪಿಗೆ ಪೂರಕವಾಗಿ ಕೆಲಸ ಮಾಡಿವೆ’ ಎನ್ನುತ್ತದೆ ರಿಪೋರ್ಟರ್ಸ್ ಕಲೆಕ್ಟಿವ್‌ನ ತನಿಖಾ ವರದಿ

• ಕುಮಾರ ಸಂಭವ ಶ್ರೀವಾಸ್ತವ/ ನಯನತಾರಾ ರಂಗನಾಥನ್

ಭಾಗ –1



ಮಾಲೇಗಾಂವ್ ಸ್ಫೋಟ ಪ್ರಕರಣದಲ್ಲಿ, ಬಾಂಬ್ ಇಡಲು ತಮ್ಮ ದ್ವಿಚಕ್ರ-ವಾಹನ ಒದಗಿಸಿದ್ದ ಆರೋಪ ಎದುರಿಸುತ್ತಿರುವ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ಅವರನ್ನು ಬಿಜೆಪಿ 2019ರ ಲೋಕಸಭಾ ಚುನಾವಣೆಯಲ್ಲಿ ಕಣಕ್ಕೆ ಇಳಿಸಿತ್ತು. ‘ಭಯೋತ್ಪಾದನೆ ಪ್ರಕರಣದಲ್ಲಿ ಪ್ರಜ್ಞಾ ಸಿಂಗ್ ಠಾಕೂರ್ ಅವರನ್ನು ನ್ಯಾಯಾಲಯ ಖುಲಾಸೆ ಮಾಡಿದೆ’ ಎಂಬ ವಿವರ ಇದ್ದ ಸುದ್ದಿರೂಪದ ಜಾಹೀರಾತನ್ನು ‘ನ್ಯೂಜ್’ ತನ್ನ ಫೇಸ್‌ಬುಕ್ ಪುಟದಲ್ಲಿ ಪ್ರಕಟಿಸಿತ್ತು. ಈ ಜಾಹೀರಾತನ್ನು ಒಂದೇ ದಿನದಲ್ಲಿ 3 ಲಕ್ಷಕ್ಕೂ ಹೆಚ್ಚು ಜನರು ವೀಕ್ಷಿಸಿದ್ದರು. ಆದರೆ ಈ ಪ್ರಕರಣದಲ್ಲಿ ಪ್ರಜ್ಞಾಸಿಂಗ್ ಠಾಕೂರ್ ಅವರು ಚಿಕಿತ್ಸೆಗಾಗಿ ಜಾಮೀನು ಪಡೆದು ಹೊರಗಿದ್ದಾರೆ. ಜಾಹೀರಾತನ್ನು ತಪ್ಪು ಮಾಹಿತಿಯೊಂದಿಗೆ ಪ್ರಕಟಿಸಲಾಗಿತ್ತು.

2019ರ ಲೋಕಸಭಾ ಚುನಾವಣೆಯಲ್ಲಿ ಮತದಾನ ಆರಂಭವಾಗಲು ಇನ್ನು 10 ದಿನಗಳಷ್ಟೇ ಬಾಕಿ ಇರುವಾಗ, ರಾಹುಲ್ ಗಾಂಧಿ ಅವರು, ಉಗ್ರ ಮಸೂದ್ ಅಜರ್‌ನನ್ನು ಬಿಜೆಪಿಯೇ ಅಧಿಕಾರದಲ್ಲಿದ್ದಾಗ ಬಿಡುಗಡೆ ಮಾಡಿತ್ತು. ಭಯೋತ್ಪಾದಕರ ವಿರುದ್ಧ ಬಿಜೆಪಿ ಮೃದು ಧೋರಣೆ ತೋರಿತ್ತು ಎಂದು ಆರೋಪಿಸಿದ್ದರು. ಅಜರ್‌ನನ್ನು ಸಂಬೋಧಿಸುವಾಗ ರಾಹುಲ್, ‘ಅಜರ್‌ಜೀ’ ಎಂದಿದ್ದರು. ನ್ಯೂಜ್, ಈ ಸುದ್ದಿಯನ್ನೂ ಸಹ ತಮ್ಮ ಫೇಸ್‌ಬುಕ್ ಪುಟದಲ್ಲಿ ಪ್ರಕಟಿಸಿತ್ತು. ‘ಉಗ್ರನನ್ನು ರಾಹುಲ್, ಅಜರ್‌ಜೀ ಎಂದು ಕರೆದಾಗ’ ಎಂಬ ತಲೆಬರಹದ ಈ ಸುದ್ದಿಯನ್ನು ನಾಲ್ಕು ದಿನಗಳಲ್ಲಿ 6.5 ಲಕ್ಷಕ್ಕೂ ಹೆಚ್ಚು ಜನರು ವೀಕ್ಷಿಸಿದ್ದರು.

2019ರ ಚುನಾವಣೆಯ ಸಂದರ್ಭದಲ್ಲಿ ‘ನ್ಯೂಜ್’ ಸುದ್ದಿತಾಣವು, ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ ಹಲವು ಸುದ್ದಿಗಳಲ್ಲಿ ಈ ಎರಡೂ ಸುದ್ದಿಗಳು ಸೇರಿದ್ದವು. 2019ರಿಂದ 2020ರವರೆಗೆ ‘ನ್ಯೂಜ್’ ಇಂತಹ 700ಕ್ಕೂ ಹೆಚ್ಚು ಸುದ್ದಿಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಎಲ್ಲವೂ ಬಿಜೆಪಿ ಪರವಾಗಿ ಮತ್ತು ಕಾಂಗ್ರೆಸ್ ವಿರುದ್ಧವಾಗಿ ಇದ್ದವು. ಆದರೆ ವಾಸ್ತವದಲ್ಲಿ ಇವು ಸುದ್ದಿಗಳಾಗಿರಲಿಲ್ಲ. ಈ ಎರಡೂ ಸುದ್ದಿಗಳನ್ನು ಜಾಹೀರಾತು ಎಂದು ಪರಿಗಣಿಸಿ, ಅವುಗಳನ್ನು ಪ್ರಕಟಿಸಲು ‘ನ್ಯೂಜ್’ ಸಂಸ್ಥೆಯು ಫೇಸ್‌ಬುಕ್‌ಗೆ ಶುಲ್ಕ ಪಾವತಿಸಿತ್ತು. ಫೇಸ್‌ಬುಕ್‌ನ ಆ್ಯಡ್ ಲೈಬ್ರರಿಯ ದತ್ತಾಂಶಗಳಲ್ಲಿ ಈ ಮಾಹಿತಿ ಇದೆ. ಬಿಜೆಪಿಗೂ, ನ್ಯೂಜ್‌ಗೂ ಯಾವುದೇ ನೇರ ಸಂಬಂಧವಿಲ್ಲ. ನ್ಯೂಜ್ ಎಂಬುದು ನ್ಯೂ ಎಮರ್ಜಿಂಗ್ ವರ್ಲ್ಡ್ ಆಫ್ ಜರ್ನಲಿಸಂ ಲಿಮಿಟೆಡ್‌ನ (New Emerging World of Journalism Limited) ಸಂಕ್ಷಿಪ್ತ ರೂಪವಷ್ಟೆ. ನ್ಯೂಜ್ ಕಂಪನಿಯು, ಮುಕೇಶ್ ಅಂಬಾನಿ ಒಡೆತನದ ಜಿಯೊ ಪ್ಲಾಟ್‌ಫಾರ್ಮ್ಸ್ ಲಿಮಿಟೆಡ್‌ನ ಒಂದು ಅಂಗಸಂಸ್ಥೆ.

ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ಪರವಾಗಿ ಸುದ್ದಿ ರೂಪದ ಜಾಹೀರಾತುಗಳು ಪ್ರಕಟವಾಗದಂತೆ ನೋಡಿಕೊಳ್ಳುವುದು ಫೇಸ್‌ಬುಕ್‌ನ ನಿಯಮಗಳಲ್ಲಿ ಇದೆ. ಆದರೆ ಬಿಜೆಪಿ ಪರವಾಗಿ ಪ್ರಕಟವಾಗುವ ಸುದ್ದಿ ರೂಪದ ಜಾಹೀರಾತುಗಳ ವಿಚಾರದಲ್ಲಿ ಫೇಸ್‌ಬುಕ್ ಕಣ್ಮುಚ್ಚಿದೆ. ಬೇರೆ ಪಕ್ಷಗಳ ಪರವಾಗಿ ಪ್ರಕಟವಾದ ಇಂತಹ ಸುದ್ದಿ ರೂಪದ ಜಾಹೀರಾತುಗಳ ವಿರುದ್ಧ ಮಾತ್ರ ಫೇಸ್‌ಬುಕ್ ಕ್ರಮ ತೆಗೆದುಕೊಂಡಿದೆ.

ಚುನಾವಣೆ ಸಂದರ್ಭಗಳಲ್ಲಿ ಅಭ್ಯರ್ಥಿಗಳು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಕಟಿಸುವ ಜಾಹೀರಾತಿಗೆ ಮಾಡುವ ವೆಚ್ಚದ ಲೆಕ್ಕವನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ನೀಡುವ ಜಾಹೀರಾತಿನ ವೆಚ್ಚವನ್ನೂ ಆಯೋಗ ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಅಭ್ಯರ್ಥಿ ಅಥವಾ ಯಾವುದೇ ಪಕ್ಷದ ಪರವಾಗಿ ಮೂರನೇ ವ್ಯಕ್ತಿ ಅಥವಾ ಸಂಸ್ಥೆ ನೀಡುವ ಜಾಹೀರಾತಿನ ವೆಚ್ಚವನ್ನು ಆಯೋಗ ಚುನಾವಣಾ ವೆಚ್ಚ ಎಂದು ಪರಿಗಣಿಸುವುದಿಲ್ಲ. ಅದರ ವಿರುದ್ಧ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಬಿಜೆಪಿ ಮತ್ತು ಆ ಪಕ್ಷದ ಅಭ್ಯರ್ಥಿಗಳ ಜತೆಗೆ ಯಾವುದೇ ನೇರ ಸಂಬಂಧವಿಲ್ಲದ ‘ನ್ಯೂಜ್’ ಸಂಸ್ಥೆ ನೀಡಿದ ಜಾಹೀರಾತುಗಳ ವಿರುದ್ಧ ಫೇಸ್‌ಬುಕ್ ಆಗಲೀ, ಚುನಾವಣಾ ಆಯೋಗವಾಗಲೀ ಕ್ರಮ ತೆಗೆದುಕೊಂಡಿಲ್ಲ.

2019 ಫೆಬ್ರುವರಿಯಿಂದ 2020ರ ನವೆಂಬರ್ ಅಂತ್ಯದವರೆಗೆ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಹೀಗೆ ಪ್ರಕಟವಾದ 5.36 ಲಕ್ಷ ಜಾಹೀರಾತುಗಳನ್ನು ಪರಿಶೀಲಿಸಿದ್ದೇವೆ. ಈ ಅವಧಿಯಲ್ಲಿ ಲೋಕಸಭಾ ಚುನಾವಣೆ ಮತ್ತು ಒಂಬತ್ತು ರಾಜ್ಯಗಳ ವಿಧಾನಸಭಾ ಚುನಾವಣೆಯೂ ಸೇರಿ ಒಟ್ಟು 10 ಚುನಾವಣೆಗಳು ನಡೆದಿವೆ. ಆದರೆ ಫೇಸ್‌ಬುಕ್‌ನ ಜಾಹೀರಾತು ವ್ಯವಸ್ಥೆಯು, ಬಿಜೆಪಿ ಪರವಾಗಿ ಮತ್ತು ವಿರೋಧ ಪಕ್ಷಗಳ ವಿರುದ್ಧವಾಗಿ ಕೆಲಸ ಮಾಡುವ ಮೂಲಕ ಮುಕ್ತವಲ್ಲದ ಮತ್ತು ನ್ಯಾಯಸಮ್ಮತವಲ್ಲದ ರೀತಿಯಲ್ಲಿ ಚುನಾವಣೆ ನಡೆಯಲು ಕಾರಣವಾಗಿದೆ.

ದೇಶದ ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಜನರಿಗೆ ಸಾಮಾಜಿಕ ಜಾಲತಾಣಗಳ ಮೂಲಕ ಸುದ್ದಿ ಒದಗಿಸುವ ಸ್ಟಾರ್ಟ್‌ಅಪ್ ಎಂದು ‘ನ್ಯೂಜ್’ ಸಂಸ್ಥೆ ತನ್ನನ್ನು ಪರಿಚಯಿಸಿಕೊಳ್ಳುತ್ತದೆ. ಆದರೆ ಚುನಾವಣೆ ಸಂದರ್ಭದಲ್ಲಿ ಜಾಹೀರಾತುಗಳಿಗೆ ಸುದ್ದಿಯ ವೇಷ ತೊಡಿಸಿ, ಅದು ಪ್ರಕಟಿಸುತ್ತದೆ. 2019ರ ಲೋಕಸಭಾ ಚುನಾವಣೆ ಮುಗಿಯುವುದಕ್ಕೂ ಮೊದಲ ಮೂರು ತಿಂಗಳಲ್ಲಿ ನ್ಯೂಜ್, ಇಂತಹ 176 ಜಾಹೀರಾತುಗಳನ್ನು ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಪ್ರಕಟಿಸಿದೆ. ಇವುಗಳಲ್ಲಿ ಬಹುತೇಕ ಜಾಹೀರಾತುಗಳು ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳುವಂತಹದ್ದಾಗಿವೆ ಹಾಗೂ ಮುಸ್ಲಿಮರ ಮೇಲಿನ ದ್ವೇಷವನ್ನು ಪ್ರಚೋದಿಸುವ ಮತ್ತು ವಿರೋಧ ಪಕ್ಷಗಳನ್ನು ಹಳಿಯುವ ವಿವರಗಳನ್ನು ಹೊಂದಿವೆ.

ಸಾಮಾನ್ಯ ಬಳಕೆದಾರರು ಮಾಡುವ ಪೋಸ್ಟ್‌ಗಳು, ಅವರ ಗೆಳೆಯರ ಟೈಂಲೈನ್‌ನಲ್ಲಿ ಮಾತ್ರ ಗೋಚರವಾಗುತ್ತವೆ. ಆದರೆ ಜಾಹೀರಾತು ಎಂದು ಪರಿಗಣಿಸಲಾದ ಪೋಸ್ಟ್‌ಗಳನ್ನು, ಫೇಸ್‌ಬುಕ್ ಹೆಚ್ಚಿನ ಸಂಖ್ಯೆಯ ಬಳಕೆದಾರರ ಟೈಂಲೈನ್‌ನಲ್ಲಿ ಬಿತ್ತರವಾಗುವಂತೆ ಮಾಡುತ್ತದೆ. ಅದು ನಿರ್ದಿಷ್ಟ ಪ್ರದೇಶದಲ್ಲಿ, ನಿರ್ದಿಷ್ಟ ವರ್ಗದ, ನಿರ್ದಿಷ್ಟ ವಯಸ್ಸಿನ ಜನರನ್ನು ತಲುಪುವಂತೆ ಫೇಸ್‌ಬುಕ್ ನೋಡಿಕೊಳ್ಳುತ್ತದೆ. ಬಳಕೆದಾರರ ಈ ಎಲ್ಲಾ ದತ್ತಾಂಶಗಳನ್ನು ಫೇಸ್‌ಬುಕ್ ಹೊಂದಿರುತ್ತದೆ. ಇವುಗಳ ಆಧಾರದಲ್ಲಿ ಜಾಹೀರಾತುದಾರರು ತಮ್ಮ ಜಾಹೀರಾತುಗಳ ಗುರಿ ಯಾರಾಗಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳಬಹುದು. 2019ರ ಲೋಕಸಭಾ ಚುನಾವಣೆಯಲ್ಲಿ ನ್ಯೂಜ್ ಇಂತಹದ್ದೇ ಜಾಹೀರಾತುಗಳನ್ನು ನೀಡಿದೆ. ಚುನಾವಣೆ ನಂತರವೂ ಬಿಜೆಪಿ ಪರವಾದ ಸುದ್ದಿ ರೂಪದ ಜಾಹೀರಾತುಗಳನ್ನು ನ್ಯೂಜ್ ಹಲವು ಬಾರಿ ಪ್ರಕಟಿಸಿದೆ.

ಆಧಾರ: ರಿಪೋರ್ಟರ್ಸ್ ಕಲೆಕ್ಟಿವ್ ವರದಿ. ಈ ವರದಿಯ ಇಂಗ್ಲಿಷ್ ಆವೃತ್ತಿ ಆಲ್‌ಜಜೀರಾ ಸುದ್ದಿತಾಣದಲ್ಲಿ ಪ್ರಕಟವಾಗಿದೆ

ನ್ಯೂಜ್‌ನಲ್ಲಿ ರಿಲಯನ್ಸ್ ಹೂಡಿಕೆ


‘ನ್ಯೂಜ್’, ಮುಕೇಶ್ ಅಂಬಾನಿ ಒಡೆತನದ ಜಿಯೋದ ಅಂಗಸಂಸ್ಥೆ. ನ್ಯೂಜ್ ಸಂಸ್ಥಾಪಕ ಶಲಭ್ ಉಪಾಧ್ಯಾಯ ಅವರಿಗೆ ರಿಲಯನ್ಸ್ ಹಾಗೂ ಬಿಜೆಪಿ ಜೊತೆ ಕೌಟುಂಬಿಕ ಸಂಬಂಧವಿದೆ. ಶಲಭ್ ಅವರ ತಂದೆ ಉಮೇಶ್ ಉಪಾಧ್ಯಾಯ ಅವರು ರಿಲಯನ್ಸ್ ಇಂಡಸ್ಟ್ರೀಸ್‌ನ ಮಾಧ್ಯಮ ಮುಖ್ಯಸ್ಥ ಹಾಗೂ ನಿರ್ದೇಶಕ. ರಿಲಯನ್ಸ್ ಒಡೆತನದ ನೆಟ್‌ವರ್ಕ್ 18 ಸಮೂಹ ಸುದ್ದಿಸಂಸ್ಥೆಯ ಮುಖ್ಯಸ್ಥರಾಗಿಯೂ ಅವರು ಈ ಹಿಂದೆ ಕೆಲಸ ಮಾಡಿದ್ದರು. ಇವರ ಚಿಕ್ಕಪ್ಪ ಸತೀಶ್ ಉಪಾಧ್ಯಾಯ ಅವರು ದೆಹಲಿ ಬಿಜೆಪಿ ಘಟಕದ ಮಾಜಿ ಮುಖ್ಯಸ್ಥರು.

ಆದರೆ ಬಿಜೆಪಿ ಹಾಗೂ ನ್ಯೂಜ್ ಮಧ್ಯೆ ನಂಟು ಇದೆ ಎಂದು ತಿಳಿಸುವ ಯಾವುದೇ ಆಧಾರಗಳು ಲಭ್ಯವಿಲ್ಲ. ರಿಪೋರ್ಟರ್ಸ್ ಕಲೆಕ್ಟಿವ್ ಸಂಗ್ರಹಿಸಿದ ಆದಾಯದ ದಾಖಲೆಗಳಲ್ಲಿ, ರಾಜಕೀಯ ಜಾಹೀರಾತು ಪ್ರಕಟಣೆ ಉದ್ದೇಶದಿಂದ ನ್ಯೂಜ್‌ಗೆ ಬಿಜೆಪಿ ಹಣ ಸಂದಾಯ ಮಾಡಿರುವ ಮಾಹಿತಿ ಲಭ್ಯವಿಲ್ಲ. ಆದರೆ ರಿಲಯನ್ಸ್ ಸಂಸ್ಥೆ ಹೂಡಿಕೆ ಮಾಹಿತಿಯು ಸಂಸ್ಥೆಯ ಬ್ಯಾಲೆನ್ಸ್‌ಶೀಟ್‌ನಲ್ಲಿ ನಮೂದಾಗಿದೆ.

ಶಲಭ್ ಹಾಗೂ ಅವರ ಸಹೋದರಿ ದೀಕ್ಷಾ ಅವರು 2018ರ ಜನವರಿಯಲ್ಲಿ ₹1 ಲಕ್ಷ ಮೂಲ ಬಂಡವಾಳದೊಂದಿಗೆ ನ್ಯೂಜ್ ಆರಂಭಿಸಿದ್ದರು. ಅದೇ ವರ್ಷದ ನವೆಂಬರ್‌ನಲ್ಲಿ ರಿಲಯನ್ಸ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಹೋಲ್ಡಿಂಗ್ಸ್ ಲಿಮಿಟೆಡ್ (ಆರ್‌ಐಎಲ್‌ಎಚ್‌ಎಲ್) ಶೇ 75ರಷ್ಟು ಷೇರುಗಳನ್ನು ಖರೀದಿಸಿ ನ್ಯೂಜ್ ಅನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ನಂತರ ಅದು ಕಂಪನಿಗೆ ₹8.4 ಕೋಟಿ ಹಣಯನ್ನು ಕನ್ವರ್ಟಿಬಲ್ ಡಿಬೆಂಚರ್‌ಗಳ ಮೂಲಕ ನೀಡಿತು. 2019ರ ಮಾರ್ಚ್‌ನಲ್ಲಿ ₹33.7 ಲಕ್ಷ ಆದಾಯ ಹಾಗೂ ₹2.20 ಕೋಟಿ ನಷ್ಟವನ್ನು ಪ್ರಕಟಿಸಿತು.

ಮರುವರ್ಷ ಮತ್ತೆ ₹12.5 ಕೋಟಿ ಹಣವನ್ನು ಡಿಬೆಂಚರ್‌ಗಳ ಮೂಲಕ ರಿಲಯನ್ಸ್ ನೀಡಿತು. 2020ರ ಮಾರ್ಚ್‌ನಲ್ಲಿ ಯಾವುದೇ ಆದಾಯವನ್ನು ನ್ಯೂಜ್ ಪ್ರಕಟಿಸಲಿಲ್ಲ. ಆದರೆ ಜಾಹೀರಾತು ಪ್ರಚಾರಕ್ಕಾಗಿ ₹2.73 ಕೋಟಿ ವೆಚ್ಚ ಮಾಡಲಾಗಿದೆ ಎಂದು ತಿಳಿಸಿತ್ತು. ಈ ವೇಳೆ ಆರ್‌ಐಎಲ್‌ಎಚ್‌ಎಲ್ ಹೊಂದಿದ್ದ ಪಾಲನ್ನು ರಿಲಯನ್ಸ್ ಜಿಯೋ ಪ್ಲಾಟ್‌ಫಾರ್ಮ್ ಪಡೆದುಕೊಂಡಿತು. ನ್ಯೂಜ್‌ನಲ್ಲಿ ಪ್ರಕಟವಾಗುವ ‘ಕಂಟೆಂಟ್’ ಮೇಲೆ ರಿಲಯನ್ಸ್‌ನ ನಿಯಂತ್ರಣ ಇರಲಿದೆ ಎಂದು ನ್ಯೂಜ್ ತನ್ನ ವೇದಿಕೆಯಲ್ಲಿ ಬರೆದುಕೊಂಡಿತ್ತು. 2021ರ ಮಾರ್ಚ್‌ನಲ್ಲಿ ಜಿಯೊ ಕಂಪನಿಯು ಶೇ 0.0001ರಷ್ಟು ಬಡ್ಡಿದರದಲ್ಲಿ ನ್ಯೂಜ್‌ಗೆ ₹8.49 ಕೋಟಿ ಸಾಲ ನೀಡಿತು.

ಕಾಂಗ್ರೆಸ್ ವಿರುದ್ಧ ಮಾತ್ರ ಕಠಿಣ ಕ್ರಮ



ಸುದ್ದಿ ರೂಪದಲ್ಲಿರುವ ಜಾಹೀರಾತುಗಳನ್ನು ಪ್ರಕಟಿಸುವುದಿಲ್ಲ ಎಂದು ಫೇಸ್‌ಬುಕ್ ನಿಯಮಗಳು ಹೇಳುತ್ತವೆ. ತನ್ನ ಪ್ಲಾಟ್‌ಫಾರಂಗಳಲ್ಲಿ ಪ್ರಕಟವಾಗುವ ರಾಜಕೀಯ ಜಾಹೀರಾತುಗಳನ್ನು ‘ರಾಜಕೀಯ ಜಾಹೀರಾತು’ ಎಂದೇ ಟ್ಯಾಗ್ ಮಾಡುತ್ತದೆ. ಸುದ್ದಿ ರೂಪದ ಜಾಹೀರಾತು ಪೋಸ್ಟ್‌ಗಳನ್ನು ತೆಗೆದುಹಾಕುತ್ತದೆ. ಆದರೆ, ಈ ಕ್ರಮವನ್ನು ಫೇಸ್‌ಬುಕ್ ಎಲ್ಲರ ವಿರುದ್ಧವೂ ತೆಗೆದುಕೊಂಡಿಲ್ಲ. 2019ರಿಂದ 2020ರವರೆಗೆ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸುವ 600ಕ್ಕೂ ಹೆಚ್ಚು ಪೋಸ್ಟ್, ಪುಟ ಮತ್ತು ಖಾತೆಗಳನ್ನು ಫೇಸ್‌ಬುಕ್ ತೆಗದು ಹಾಕಿದೆ. ಆದರೆ ಫೇಸ್‌ಬುಕ್ ತೆಗೆದುಹಾಕಿದ, ಬಿಜೆಪಿ ಮತ್ತು ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ ಪೋಸ್ಟ್, ಪುಟ ಮತ್ತು ಖಾತೆಗಳ ಸಂಖ್ಯೆ 20ನ್ನೂ ಮುಟ್ಟುವುದಿಲ್ಲ.

ಕಾನೂನಿನಲ್ಲಿದೆ ದೋಷ!

ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಯು ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ನೀಡುವ ಜಾಹೀರಾತಿನ ಖರ್ಚನ್ನು ಆ ಅಭ್ಯರ್ಥಿಯ ಚುನಾವಣಾ ವೆಚ್ಚಕ್ಕೆ ಸೇರಿಸಲಾಗುತ್ತದೆ. ಅಭ್ಯರ್ಥಿ ಪರವಾಗಿ ನೀಡಲಾಗುವ ಜಾಹೀರಾತು ಅಥವಾ ಸುದ್ದಿ ರೂಪದ ಜಾಹೀರಾತುಗಳಿಗೆ ಅಭ್ಯರ್ಥಿಯಲ್ಲದೇ ಬೇರೆಯವರು ಹಣ ನೀಡಿದರೆ, ಅದು ಕಾನೂನಿನ ಪ್ರಕಾರ ಅಪರಾಧ. ಚುನಾವಣಾ ಪ್ರಚಾರಕ್ಕೆ ಅನಧಿಕೃತ ಮೂಲಗಳಿಂದ ಹಣ ಹರಿದುಬರುವುದನ್ನು ನಿಗ್ರಹಿಸಲು ಈ ಕಾನೂನು ತರಲಾಗಿದೆ.

ಲೋಪದ ಅರಿವಿದ್ದರೂ, ಭಾರತೀಯ ಚುನಾವಣಾ ಆಯೋಗವು ಕಾನೂನಿನ ಈ ನಿರ್ಬಂಧವನ್ನು ‘ಫೇಸ್‌ಬುಕ್’ನಂತಹ ಡಿಜಿಟಲ್ ವೇದಿಕೆಗಳಿಗೆ ವಿಸ್ತರಿಸಿಲ್ಲ ಎಂಬುದು ಮಾಹಿತಿ ಹಕ್ಕು ಕಾಯ್ದೆಯಡಿ ತಿಳಿದುಬಂದಿದೆ. ಸಾಮಾಜಿಕ ಜಾಲತಾಣಗಳಲ್ಲಿ, ಅಭ್ಯರ್ಥಿಗೆ ಸಂಬಂಧವಿಲ್ಲದ ಮೂರನೇ ವ್ಯಕ್ತಿ ಅಥವಾ ಸಂಸ್ಥೆ ನೀಡುವ ಜಾಹೀರಾತನ್ನು ಈ ಕಾನೂನಿನ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಇದು ಅಕ್ರಮಕ್ಕೆ ದಾರಿ ಮಾಡಿಕೊಟ್ಟಿದೆ. ಹೊರಗಿನ ವ್ಯಕ್ತಿ ಅಥವಾ ಸಂಸ್ಥೆಯು ಅಭ್ಯರ್ಥಿ ಪರವಾಗಿ ಪ್ರಕಟಿಸುವ ಕಂಟೆಂಟ್‌ಗಳನ್ನು ನಿಭಾಯಿಸುವುದು ಹೇಗೆ ಎಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು 2013ರಲ್ಲಿ ಚುನಾವಣಾ ಆಯೋಗ ತಿಳಿಸಿತ್ತು.

ಫೇಸ್‌ಬುಕ್‌ನ ಮಾತೃಸಂಸ್ಥೆ ‘ಮೆಟಾ’ ಸಹ ಈ ನಿಯಮವನ್ನು ಜಾರಿಗೊಳಿಸಿಲ್ಲ. ಹೀಗಾಗಿ, ಚುನಾವಣೆಯಲ್ಲಿ ಬಿಜೆಪಿ ಹಾಗೂ ಅದರ ಅಭ್ಯರ್ಥಿಗಳ ಪರವಾಗಿ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂನಲ್ಲಿ ಪ್ರಚಾರ ಮಾಡಲು ನ್ಯೂಜ್‌ನ ಹಾದಿ ಸುಲಭವಾಯಿತು.

‘ಲೋಕಸಭಾ ಚುನಾವಣೆಯಲ್ಲಿ ಸಾಮಾಜಿಕ ಜಾಲತಾಣಗಳ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸದಂತೆ ಭಾರತೀಯ ಚುನಾವಣಾ ಆಯೋಗದ ಜೊತೆ ಲಾಬಿ ನಡೆಸುವಂತೆ ‘ಇಂಟರ್ನೆಟ್ ಅಂಡ್ ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾಗೆ (ಐಎಂಎಐ) ಫೇಸ್‌ಬುಕ್ ಮನವೊಲಿಕೆ ಮಾಡಲೆತ್ನಿಸಿತ್ತು’ ಎಂಬ ಅಂಶವು, ಫೇಸ್‌ಬುಕ್‌ನ ಮಾಜಿ ಉದ್ಯೋಗಿ ಮತ್ತು ಭ್ರಷ್ಟಾಚಾರ ಬಯಲಿಗೆಳೆಯುವ ಕಾರ್ಯಕರ್ತೆ (ವಿಸಲ್‌ಬ್ಲೋವರ್) ಫ್ರಾನ್ಸಿಸ್ ಹೌಗೆನ್ ಅವರ ಸೋರಿಕೆಯಾದ ದಾಖಲೆಗಳಲ್ಲಿ ಉಲ್ಲೇಖವಿತ್ತು.

2019ರಲ್ಲಿ ಐಎಂಎಐ ಸಂಸ್ಥೆಯು ‘ವಾಲಂಟರಿ ಕೋಡ್ ಆಫ್ ಎಥಿಕ್ಸ್’ ಅನ್ನು ಪ್ರಸ್ತಾಪಿಸಿತ್ತು. ಆದರೆ ಸುದ್ದಿರೂಪದ ಜಾಹೀರಾತುಗಳನ್ನು ನಿಯಂತ್ರಿಸುವ ಯಾವ ಶಿಫಾರಸುಗಳೂ ಇದರಲ್ಲಿ ಇರಲಿಲ್ಲ. ಈ ಲೋಪಗಳನ್ನು ಲೋಕಸಭಾ ಹಾಗೂ ವಿವಿಧ ವಿಧಾನಸಭಾ ಚುನಾವಣೆಗಳಲ್ಲಿ ಚೆನ್ನಾಗಿ ಬಳಸಿಕೊಳ್ಳಲಾಯಿತು.

ಮೆಟಾ, ನ್ಯೂಜ್ ಪ್ರತಿಕ್ರಿಯೆ

ನ್ಯೂಜ್‌ನ ರಾಜಕೀಯ ಜಾಹೀರಾತು ಕುರಿತಂತೆ ಪ್ರತಿಕ್ರಿಯಿಸಿರುವ ಮೆಟಾ, ‘ಯಾವುದೇ ಪಕ್ಷ ಅಥವಾ ವ್ಯಕ್ತಿಗಳ ಸ್ಥಾನಮಾನಗಳನ್ನು ಪರಿಗಣಿಸದೇ, ಏಕರೂಪವಾಗಿ ನಾವು ನಮ್ಮ ನೀತಿಗಳನ್ನು ಜಾರಿಗೊಳಿಸುತ್ತೇವೆ’ ಎಂದು ಸ್ಪಷ್ಟಪಡಿಸಿದೆ. ಜಾಗತಿಕವಾಗಿ ಜಾರಿಯಲ್ಲಿರುವ ‘ಸಂಘಟಿತ ಅನಧಿಕೃತ ನಡವಳಿಕೆ’ ವಿರುದ್ಧದ ನಮ್ಮ ಕ್ರಮಗಳು 2019ರ ಏಪ್ರಿಲ್ ಬಳಿಕವೂ ಮುಂದುವರಿದಿವೆ ಎಂದು ತಿಳಿಸಿದೆ. ಚುನಾವಣಾ ಆಯೋಗದೊಂದಿಗೆ ಲಾಬಿ ಮಾಡಲಾಗಿದೆ ಎಂಬ ಬಗ್ಗೆ ಮೆಟಾ ಪ್ರತಿಕ್ರಿಯಿಸಿಲ್ಲ. ರಿಪೋರ್ಟರ್ಸ್ ಕಲೆಕ್ಟವ್ ಎತ್ತಿದ ಪ್ರಶ್ನೆಗಳಿಗೆ ಚುನಾವಣಾ ಆಯೋಗ ಪ್ರತಿಕ್ರಿಯಿಸಿಲ್ಲ. ಹಾಗೆಯೇ ನ್ಯೂಜ್ ಜಾಹೀರಾತಿನ ಬಗ್ಗೆ ಜಿಯೊ ಹಾಗೂ ಆರ್‌ಐಎಲ್‌ಎಚ್‌ಎಲ್ ಸಹ ಪ್ರತಿಕ್ರಿಯೆ ನೀಡಿಲ್ಲ.

ನ್ಯೂಜ್ ಕಾರ್ಯನಿರ್ವಾಹಕ ಮುಖ್ಯಸ್ಥ ಶಲಭ್ ಉಪಾಧ್ಯಾಯ, ‘ಪಾರದರ್ಶಕ ಹಾಗೂ ಸ್ವತಂತ್ರ ಪತ್ರಿಕೋದ್ಯಮಕ್ಕೆ ನ್ಯೂಜ್ ಬದ್ಧವಾಗಿದೆ ಎಂದಿದ್ದಾರೆ. ಜಾಹೀರಾತಿಗೆ ಸಂಬಂಧಿಸಿದಂತೆ ಮೆಟಾದ ಮಾರ್ಗಸೂಚಿಗಳು ಜಾಹೀರಾತು ನಿಯಮಗಳನ್ನು ತಪ್ಪದೆ ಪಾಲಿಸಲಾಗುತ್ತಿದೆ’ ಎಂದು ಪ್ರತಿಕ್ರಿಯಿಸಿದ್ದಾರೆ.

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 80

ಬ್ರಹ್ಮನನ್ನು ಪ್ರಾರ್ಥಿಸಿದ ನಾರದ

ವಿಷ್ಣುವಿನ ಸಲಹೆಯಂತೆ ನಾರದಮುನಿ ಶಿವಲಿಂಗದರ್ಶನವನ್ನ ಮಾಡುತ್ತಾ ಶಿವನ ತೀರ್ಥಕ್ಷೇತ್ರ ಸುತ್ತಿದ ವಿಷಯ ಶ್ರೀ ಶಿವಮಹಾ ಪುರಾಣದ ರುದ್ರ ಸಂಹಿತೆಯ ಐದನೇ ಅಧ್ಯಾಯದಲ್ಲಿ ಬರುತ್ತೆ. ನಾರದ ಮುನಿ ಭೂಪರ್ಯಟನೆ ಮಾಡಿ, ನಾನಾವಿಧವಾಗಿರುವ, ಭಕ್ತಿ ಮುಕ್ತಿ ಪ್ರದಾಯಕಗಳಾದ ಶಿವನ ಮೂರ್ತಿಗಳನ್ನು ಸಂದರ್ಶಿಸುವ ಸಂದರ್ಭದಲ್ಲಿ, ಶ್ರೀಮತಿ ಸ್ವಯಂವರದಲ್ಲಿ ನಾರದನಿಂದ ಶಾಪಕ್ಕೊಳಗಾದ ಶಿವಗಣಗಳಿಬ್ಬರೂ, ಆತನ ಕಾಲಿಗೆ ನಮಸ್ಕರಿಸಿ, ತಮ್ಮನ್ನು ಶಾಪದಿಂದ ಬಿಡುಗಡೆ ಮಾಡಬೇಕೆಂದು ಕೋರುತ್ತಾರೆ.

ಆಗ ಶಿವಗಣಗಳಿಬ್ಬರನ್ನು ಸಮಾಧಾನಿಸಿದ ನಾರದ, ‘ನಿಮ್ಮ ತಪ್ಪುಗಳೇನೂ ಇಲ್ಲ. ಶಿವನ ಮಾಯಾ ಇಚ್ಛೆಯಂತೆ ನನಗೆ ಬುದ್ಧಿ ನಷ್ಟವಾಗಿತ್ತು. ಸಂಪೂರ್ಣವಾಗಿ ಮೋಹಪಾಶಕ್ಕೆ ಸಿಕ್ಕಿ ದುಷ್ಟಬುದ್ಧಿಯವನಾಗಿ ನಿಮ್ಮೀರ್ವರನ್ನೂ ಶಪಿಸಿಬಿಟ್ಟೆ. ನಾನು ಏನು ನುಡಿದೆನೋ ಆರೀತಿ ಆಗಿಯೇ ಆಗುತ್ತದೆ. ಇದರಲ್ಲಿ ಯಾವ ಸಂಶಯವಿಲ್ಲ. ಆದರೂ ಚಿಂತೆಯಿಲ್ಲ. ನಿಮಗೆ ಶಾಪದಿಂದ ಬಿಡುಗಡೆ ಹೊಂದುವ ಬಗೆಯನ್ನು ಹೇಳುವೆನು. ನನ್ನೀ ತಪ್ಪನ್ನು ಆಗ ಮನ್ನಿಸಿರಿ ಎಂದ ನಾರದ ಮುಂದೆ, ಶಿವಗಣಗಳಿಬ್ಬರೂ ರಾವಣ-ಕುಂಭಕರ್ಣರಾಗಿ ಜನಿಸಿ, ಮುನಿಶ್ರೇಷ್ಠನೊಬ್ಬನ ತೇಜಸ್ಸಿನಿಂದ ರಾಕ್ಷಸತ್ವವನ್ನು ಪಡೆದು, ನೀವೀರ್ವರೂ ವಿಭವದಿಂದ ಕೂಡಿದವರೂ ಬಲಿಷ್ಠರೂ ಪ್ರತಾಪಶಾಲಿಗಳೂ ಆಗುವಿರಿ. ಎಲ್ಲ ಬ್ರಹ್ಮಾಂಡಗಳಿಗೂ ಅಧಿಪತಿಗಳಾಗಿ, ಶಿವಭಕ್ತರಾಗಿ, ಜಿತೇಂದ್ರಿಯರಾಗಿಯೂ ಇರುವಿರಿ. ಶಿವನ ಬೇರೊಂದು ರೂಪವನ್ನು ಧರಿಸಿದವನಿಂದಲೇ ಹತವಾದ ನಂತರ ನಿಮ್ಮ ಪೂರ್ವಜನ್ಮಕ್ಕೆ ಮತ್ತೆ ತೆರಳುವಿರಿ’ ಎಂದು ನಾರದ ಭರವಸೆ ನೀಡುತ್ತಾನೆ.

ನಂತರ ನಾರದಮುನಿಯು ಎಲ್ಲ ಕ್ಷೇತ್ರಗಳಿಗಿಂತಲೂ ಮಿಗಿಲಾದ, ಶಿವನಿಗೆ ಇಷ್ಟವಾದ ಕಾಶಿಗೆ ಹೋಗಿ ವಿಶ್ವೇಶ್ವರನನ್ನು ಪೂಜಿಸಿ, ಒಳ್ಳೆಯ ಬುದ್ಧಿ ಪಡೆಯುತ್ತಾನೆ. ನಂತರ ಸವಿವರವಾಗಿ ಶಿವತತ್ತ್ವವನ್ನು ತಿಳಿಯಬೇಕೆಂದು ಬ್ರಹ್ಮಲೋಕಕ್ಕೆ ಹೋಗಿ ‘ಓ ಬ್ರಹ್ಮದೇವ, ನೀನು ಪರಬ್ರಹ್ಮಸ್ವರೂಪವನ್ನು ತಿಳಿದವನು. ಜಗದೊಡೆಯನು ನೀನು. ನಿನ್ನ ಅನುಗ್ರಹದಿಂದ ಶ್ರೇಷ್ಠವಾದ ವಿಷ್ಣುವಿನ ಮಾಹಾತ್ಮ್ಯವೆಲ್ಲವನ್ನೂ ನಾನು ತಿಳಿದುಕೊಂಡುದಲ್ಲದೆ, ಭಕ್ತಿಮಾರ್ಗವನ್ನೂ ಜ್ಞಾನಮಾರ್ಗವನ್ನೂ ಕಷ್ಟಸಾಧ್ಯವಾದ ತಪಃಕ್ರಮವನ್ನೂ ದಾನಮಾಡುವ ಬಗೆಯನ್ನೂ ತೀರ್ಥಯಾತ್ರಾಕ್ರಮವನ್ನೂ ಕೇಳಿ ತಿಳಿದುಕೊಂಡಿದ್ದೇನೆ. ಆದರೆ ಶಿವತತ್ತ್ವವನ್ನು ನಾನು ತಿಳಿದಿಲ್ಲ. ಆದುದರಿಂದ ಶಿವನನ್ನು ಪೂಜಿಸುವ ಬಗೆಯನ್ನೂ ಮತ್ತು ಅವನ ನಾನಾವಿಧವಾದ ಚರಿತ್ರವನ್ನೂ ನನಗೆ ತಿಳಿಸು’ ಎಂದು ಕೋರುತ್ತಾನೆ.

‘ಎಲೈ ತಂದೆಯೇ, ನಿರ್ಗುಣನಾದ ಆ ಶಿವನು, ಸಗುಣನಾದ ಬಗೆ ಹೇಗೆ? ಶಿವನ ಮಾಯೆಯಿಂದ ಮೋಹಿತನಾದ ನಾನು ಶಿವತತ್ತ್ವವನ್ನು ತಿಳಿಯಲಾರೆ. ಆ ಶಂಭುವು ಈ ಸೃಷ್ಟಿಯಾಗುವ ಮೊದಲು ಯಾವ ಸ್ವರೂಪದಲ್ಲಿದ್ದ? ಸೃಷ್ಟಿಯಾದ ನಂತರ ಯಾವ ರೀತಿ ವಿಹರಿಸುತ್ತಿರುವನು. ಸೃಷ್ಟಿಯ ಅನಂತರದಲ್ಲಿಯೂ ಎಂತಿರುವನು? ಲೋಕಕ್ಕೆಲ್ಲಾ ಮಂಗಳವನ್ನುಂಟುಮಾಡುವ ಆ ಶಂಕರನು ಪ್ರಸನ್ನನಾಗುವ ಬಗೆಯಾದರೂ ಹೇಗೆ? ಸಂತುಷ್ಟನಾದ ಆ ಮಹೇಶ್ವರ ತನ್ನ ಭಕ್ತರಿಗೂ ಇತರರಿಗೂ ಯಾವ ಫಲವನ್ನು ನೀಡುತ್ತಾನೆ? ತ್ರಿಮೂರ್ತಿಗಳು ಶಿವನ ಅಂಶದಿಂದ ಹುಟ್ಟಿದವರು. ಅವರಲ್ಲಿ ಪೂರ್ಣಾಂಶದಿಂದ ಹುಟ್ಟಿದ ಆ ಮಹೇಶ್ವರನು ಪರಮಾತ್ಮನಾದ ಎರಡನೆಯ ಶಿವನೇ ಆಗಿರುವನು. ಆ ಶಿವನು ಜಗತ್ತಿಗೆ ಹೇಗೆ ಆವಿರ್ಭವಿಸಿದನೆಂಬುದನ್ನ ವಿವರವಾಗಿ ತಿಳಿಸು.’

‘ಹಾಗೆಯೇ, ಪಾರ್ವತಿ ಜನ್ಮ ತಾಳಿದ್ದು, ಮತ್ತು ಪಾರ್ವತಿ-ಪರಮೇಶ್ವರರ ವಿವಾಹ ಹೇಗೆ ನಡೆಯಿತು ಎಂಬುದನ್ನೂ ತಿಳಿಸು. ಅವರೀರ್ವರ ದಾಂಪತ್ ಜೀವನವನ್ನೂ ಲೀಲಾವಿಲಾಸಗಳನ್ನೂ ನೀನು ಹೇಳಬೇಕು. ಆ ಶಿವನ ಉತ್ಪತ್ತಿಯನ್ನೂ, ಮಂಗಳಸ್ವರೂಪಳಾದ ಪಾರ್ವತಿಯನ್ನು ಮದುವೆಯಾಗಿದ್ದನ್ನೂ, ಕುಮಾರಸ್ವಾಮಿಯ ಜನನವನ್ನೂ ನನಗೆ ವಿಸ್ತಾರವಾಗಿ ತಿಳಿಸು. ನಾನು ಈ ವಿಷಯವನ್ನು ಹಿಂದೆಯೇ ಅನೇಕರಿಂದ ಕೇಳಿ ತಿಳಿದಿದ್ದರೂ, ನನಗೆ ತೃಪ್ತಿಯಿಲ್ಲವಾಗಿದೆ. ಆದುದರಿಂದ ನಿನ್ನ ಮೊರೆಹೊಕ್ಕಿದ್ದೇನೆ. ನನ್ನ ಮೇಲೆ ದಯೆಯನ್ನಿಟ್ಟು ಹೇಳು’ ಎಂದು ನಾರದ ಬ್ರಹ್ಮನಲ್ಲಿ ಪ್ರಾರ್ಥಿಸಿದ. ಇದಕ್ಕೆ ಬ್ರಹ್ಮನು ನಾರದನಿಗೆ ಉತ್ತರ ಹೇಳಲು ಪ್ರಾರಂಭಿಸಿದ ಎಂಬಲ್ಲಿಗೆ ಶ್ರೀ ಶಿವಮಹಾಪುರಾಣದಲ್ಲಿ, ಎರಡನೆಯದಾದ ರುದ್ರಸಂಹಿತೆಯ, ಮೊದಲನೆ ಖಂಡವಾದ ಸೃಷ್ಟಿಖಂಡದಲ್ಲಿ ನಾರದ ಪ್ರಶ್ನವರ್ಣನ ಎಂಬ ಐದನೆ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮಾರ್ಚ್ 29, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಮೀನ ಮಾಸದ 15 ನೇ ದಿನ
ತಿಥಿ: (ಫಾಲ್ಗುಣ ಕೃಷ್ಣ) ದ್ವಾದಶಿ ಗಂ. 14-39 **ನಕ್ಷತ್ರ:** ಧನಿಷ್ಠಾ ಗಂ. 11-28 **ಯೋಗ:** ಸಾಧ್ಯ ಗಂ. 15-13, **ಕರಣ:** ತೈತಿಲ ಗಂ. 14-39. **ರಾಹುಕಾಲ :** ಮಧ್ಯಾಹ್ನ 03:00 – 04:30 **ಸೂರ್ಯೋದಯ :** 06-32 **ಸೂರ್ಯಾಸ್ತ:** 06-39 **ಮುಸ್ಲಿಂ ದಿನಾಂಕ :** 25 ಶಬನ್ ದಿನ **ವಿಶೇಷ:** ಪಕ್ಷ ಪ್ರದೋಷ **ಅದೃಷ್ಟ ಸಂಖ್ಯೆ:** 3, 8

ಮೇಷ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಸಮಸ್ಯೆ ಬಗೆಹರಿಸಲು ಬೇಕಾದ ಜಾಣತನ ನಿಮ್ಮಲ್ಲಿರುವುದು. ಜೊತೆಗೆ ಸ್ನೇಹಿತರ ಸಹಾಯ ಸಿಗಲಿದೆ.

ವೃಷಭ: ಧರ್ಮ-ಕರ್ಮದಂತಹ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು. ಮೇಧಾವಿಗಳೊಂದಿಗಿನ ಸಂಪರ್ಕದಿಂದಾಗಿ ಅರಿವು ಹೆಚ್ಚಾಗಲಿದೆ. ಯಂತ್ರೋಪಕರಣಗಳ ಸರಿಪಡಿಸುವಿಕೆ ಅಥವಾ ಬಿಡಿ ಭಾಗಗಳ ಮಾರಾಟದಿಂದ ಲಾಭ.

ಮಿಥುನ: ಹಣಕಾಸಿನ ಜವಾಬ್ದಾರಿಯನ್ನು ಹೊಂದಿದ ಕೆಲಸ ಮಾಡುವವರಿಗೆ ಹಣಕಾಸಿನಲ್ಲಿ ನಿಮ್ಮಿಂದ ವ್ಯತ್ಯಾಸಗಳಾಗುವ ಸಾಧ್ಯತೆ. ಬಹುದಿನಗಳ ಬಳಿಕ ದೂರ ಸಂಚಾರ ಸಂಭವ. ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು.

ಕರ್ಕಾಟಕ: ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಬೇಕಾದ ಪ್ರಯತ್ನ ಮಾಡಿ. ಸಂಪಾದನೆಯಲ್ಲಿ ಕಡಿಮೆಯಿದ್ದರೂ ಆರ್ಥಿಕವಾಗಿ ಚಿಂತೆ ಇರದು. ಕೋರ್ಟು ವ್ಯವಹಾರ ಬಗೆಹರಿಯಲು ಗಣಪತಿಯ ಆರಾಧನೆ ಮಾಡಿ.

ಸಿಂಹ: ಸ್ವತ್ತು ಮಾರಾಟ ವಿಚಾರದಲ್ಲಿ ಸೋದರರ ಅಭಿಪ್ರಾಯವನ್ನು ಪಡೆದು ಮುಂದುವರಿಯುವುದು ಉತ್ತಮ. ಹೆಚ್ಚಿನ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳುವ ಯೋಗವಿದೆ. ಆರೋಗ್ಯದಲ್ಲಿ ಉತ್ತಮ ಸುಧಾರಣೆ.

ಕನ್ಯಾ: ನಿಮ್ಮ ಮಿತ್ರರೊಬ್ಬರು ಎಲ್ಲ ವಿಧದಲ್ಲಿಯೂ ನಿಮಗೆ ಸಹಾಯವಾಗಲಿದ್ದಾರೆ. ಷೇರು ಮಾರಾಟದಿಂದ ಅಧಿಕ ಲಾಭ. ಮನೆಯಲ್ಲಿದ್ದ ಬಿಗು ವಾತಾವರಣ ದಿನದ ಆರಂಭದಲ್ಲೇ ತಿಳಿಯಾಗಿ ಮನಸ್ಸಿಗೆ ಸಮಾಧಾನ ಉಂಟಾಗುವುದು.

ತುಲಾ: ಮುಂದಿನ ಗುರಿ ಸಾಧನೆಗೆ ಇಂದು ಅತಿ ಮುಖ್ಯವಾದ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಬಿರುಸಿನ ಚಟುವಟಿಕೆಗಳಿಂದ ಬಿಡುವು ಮಾಡಿಕೊಂಡು ಮನೆಯವರೊಡನೆ ಕಾಲ ಕಳೆಯುವಂತಾಗಲಿದೆ.

ವೃಶ್ಚಿಕ: ಸರ್ಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಮಗಳ ಮದುವೆ ವಿಷಯವನ್ನು ಮನೆಯವರ ಜೊತೆ ಪ್ರಸ್ತಾಪಿಸಿ. ಸ್ವಯಂ ಪ್ರೇರಿತರಾಗಿ ಸಣ್ಣ-ಪುಟ್ಟ ಅನಾರೋಗ್ಯಗಳಿಗೆ ಔಷಧಿಯನ್ನು ಸ್ವೀಕರಿಸಬೇಡಿ.

ಧನು: ಇಂದಿನ ಎಲ್ಲಾ ಬೆಳವಣಿಗೆಯಲ್ಲಿ ನೀವು ನಾಯಕತ್ವ ವಹಿಸುವುದರಿಂದ ಕೆಟ್ಟ ಜನಗಳ ದೃಷ್ಟಿದೋಷಕ್ಕೆ ಗುರಿಯಾಗಲಿದ್ದೀರಿ. ವಿದ್ಯಾರ್ಥಿಗಳ ಮನೋಕಾಮನೆ ಇಂದು ಪೂರ್ಣಗೊಳ್ಳಲಿದೆ. ವಾಹನ ಖರೀದಿ ಯೋಗ.

ಮಕರ: ಹಿಂದೆ ರೂಪಿಸಿದ್ದ ಯೋಜನೆಗಳು ಯಶಸ್ಸು ಕಾಣುವುದನ್ನು ಕಂಡು ಸಂತಸ. ನ್ಯಾಯವಾದಿಗಳಿಗೆ ಉತ್ತಮ ದಿನ, ಜಯ ಸಾಧಿಸುವ ಬಗ್ಗೆ ಉತ್ತಮವಾದ ಅಂಶ ಸಿಗಲಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಫಲ.

ಕುಂಭ: ಹಳೆಯ ದುರ್ಘಟನೆಗಳನ್ನು ಮರೆತು ಭವಿಷ್ಯದತ್ತ ಗಮನ ಹರಿಸಿ. ಕೆಟ್ಟ ಯೋಚನೆ ಮಾಡುವುದರಿಂದ ಅನಾರೋಗ್ಯವಾಗುವುದು. ಆರ್ಥಿಕವಾಗಿ ಹೆಚ್ಚಾಗಿ ಚೇತರಿಕೆ ಕಂಡುಬರದಿದ್ದರೂ ಜೀವನಕ್ಕೆ ಕೊರತೆ ಇರಲಾರದು.

ಮೀನ: ಆಹಾರದ ವಿಚಾರದಲ್ಲಿ ದಾಕ್ಷಿಣ್ಯ ಪ್ರವೃತ್ತರಾಗಿ ಸಿಕ್ಕಿಕೊಳ್ಳಬೇಡಿ. ಮಕ್ಕಳನ್ನು ಸಂಗಡಿಗರು ವಂಚನೆಯ ಕಡೆಗೆ ಕರೆದೊಯ್ಯದಂತೆ ಗಮನಹರಿಸಿ. ಒಡಹುಟ್ಟಿದವರ ಸಮಸ್ಯೆಗೆ ನಿಮ್ಮಿಂದಾಗುವ ಉಪಕಾರ ಮಾಡಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಲಾಭ-ನಷ್ಟದ ವ್ಯವಹಾರ

ಬಿಡುವಿಲ್ಲದ ಜೀವಿತಾಪಣದ ಸರಕೆಣಿಸೆ |
ಕಡೆಯೆಂದು? ಮುಗಿಯದಿಹ ಲಾಭನಷ್ಟಗಳ ||
ಕಡತದೊಳ್ ಅದೆಂದಿನಾ ಲೆಕ್ಕವೇ ತೀರ್ಮಾನ? |
ಬಿಡು ಲಾಭದಾತುರವ – ಮಂಕುತಿಮ್ಮ || 594 ||

ಪದ-ಅರ್ಥ: ಜೀವಿತಾಪಣ = ಜೀವಿತ + ಆಪಣ(ಅಂಗಡಿ), ಸರಕೆಣಿಸೆ = ಸರಕು(ವಸ್ತುಗಳು, ಮಾಲು) + ಎಣಿಕೆ, ಕಡೆಯೆಂದು = ಕಡೆ (ಕೊನೆ) + ಎಂದು, ಕಡತ = ಲಾಭ-ನಷ್ಟಗಳ ದಾಖಲೆ, ಲಾಭದಾತುರ = ಲಾಭದ + ಆತುರ.

ವಾಚ್ಯಾರ್ಥ: ಬಿಡುವಿಲ್ಲದಿರುವ ಜೀವಿತದ ಅಂಗಡಿಯ ವಸ್ತುಗಳನ್ನು ಎಣಿಸುವುದಕ್ಕೆ ಕೊನೆಯಿದೆಯೆ? ಎಂದಿಗೂ ಮುಗಿಯಲಾರದ ಲಾಭ-ನಷ್ಟಗಳ ದಾಖಲೆಯಲ್ಲಿ ಅದು ಎಂದಿನ ಲೆಕ್ಕ ತೀರ್ಮಾನವಾದೀತು? ಲಾಭದ ಆತುರವನ್ನು ಬಿಡು.

ವಿವರಣೆ: ನಮ್ಮ ಬದುಕು ಒಂದು ಅಂಗಡಿಯಂತೆ. ಅಂಗಡಿಯೆಂದ ಮೇಲೆ ಅಲ್ಲಿ ವ್ಯಾಪಾರ ಇರಲೇಬೇಕು. ವ್ಯಾಪಾರ ಮಾಡುವುದೇ ಲಾಭಕಲ್ಲವೆ? ಆದರೆ ಕೆಲವೊಮ್ಮೆ ನಷ್ಟವೂ ಆಗಬಹುದು. ಅಂಗಡಿಯಲ್ಲಿ ನೂರಾರು ಸಾಮಾನುಗಳಿದ್ದರೆ, ನಮ್ಮ ಬದುಕಿನ ಅಂಗಡಿಯಲ್ಲಿ ಸಾವಿರಾರು ವಸ್ತುಗಳಿವೆ. ವ್ಯಾಪಾರದ ಅಂಗಡಿಯಲ್ಲಿ ಆಗಾಗ ಇರುವ ಸರಕುಗಳನ್ನು ಎಣಿಸಿ, ಪಟ್ಟಿ ಮಾಡಿ, ಯಾವುದಿಲ್ಲವೋ ಅದನ್ನು ತರಿಸಿ, ಹೆಚ್ಚಾಗಿದ್ದುದನ್ನು ಹೇಗಾದರೂ ಮಾರಿಬಿಡುವ, ಕಡಿಮೆ ಹಣಕ್ಕಾದರೂ ಸಾಗಿಸಿಬಿಡುವ, ಯೋಜನೆಗಳಿರುವುದಿಲ್ಲವೆ? ಹಾಗೆಯೇ ನಮ್ಮ ಬದುಕಿನ ಅಂಗಡಿಯಲ್ಲಿ ಸಾಕಷ್ಟು ಸರಕುಗಳಿವೆ. ಅವು ನಮಗಿರುವ ಶಿಕ್ಷಣವಾಗಬಹುದು, ಹಣವಾಗಬಹುದು, ಬುದ್ಧಿಯಾಗಬಹುದು, ಸಂಪರ್ಕಗಳು, ಪರಿವಾರದ ಸಹಕಾರ, ದೊರೆತ ಅವಕಾಶಗಳು, ಆತ್ಮೀಯ ಸಂಬಂಧಗಳು, ಇವು ಯಾವುದೇ ಆಗಿರಬಹುದು. ಇವೆಲ್ಲ ನಮ್ಮ ಅಂಗಡಿಯ ಸರಕು. ಫಜೀತಿಯೆಂದರೆ ಈ ಅಂಗಡಿಯ ಸರಕನ್ನು ಎಣಿಸುವುದು ಸಾಧ್ಯವಿಲ್ಲ. ಯಾಕೆಂದರೆ ಈ ಸರಕುಗಳಲ್ಲಿ ಪ್ರತಿಕ್ಷಣವೂ ಕೆಲವೊಂದು ಹೆಚ್ಚಾಗುತ್ತ, ಕೆಲವು ಕಡಿಮೆಯಾಗುತ್ತಲೇ ಇರುತ್ತವೆ. ಯಾವುದೋ ಸಂಬಂಧ ಕುದುರುತ್ತಿರುವಾಗ ಮತ್ತೊಂದು ಕೊಂಡಿ ಬಿಚ್ಚಿಕೊಳ್ಳುತ್ತದೆ. ಹೊಸ ಅವಕಾಶ ದೊರೆಯಿತೆಂದು ಸಂಭ್ರಮಪಡುವಾಗ ಕೈಯಲ್ಲಿ ಭದ್ರವಾಗಿದೆ ಎಂದುಕೊಂಡ ಅವಕಾಶ ಜಾರಿ ಹೋಗಿರುತ್ತದೆ. ಹೀಗಾಗಿ ನಮ್ಮಲ್ಲಿ ಇರುವ ಸರಕನ್ನು ಖಚಿತವಾಗಿ ಎಣಿಸುವುದು ಸಾಧ್ಯವಿಲ್ಲ. ಈ ವ್ಯಾಪಾರದ ಲಾಭ-ನಷ್ಟಗಳನ್ನು ಪಟ್ಟಿಮಾಡಿಡುವುದು ಸಾಧ್ಯವಿಲ್ಲ. ಯಾಕೆಂದರೆ ಇದು ಒಂದು ಕ್ಷಣವೂ ನಿಲ್ಲದ ವ್ಯಾಪಾರ.

ರೈತನ ಹಳ್ಳಿ ಇದ್ದದ್ದೇ ಕಾಡಿನ ಪಕ್ಕ. ಒಂದು ದಿನ ದೊಡ್ಡ ಬಿಳಿ ಕುದುರೆಯೊಂದು ಕಾಡಿನಿಂದ ಬಂದು ಇವನ ಮನೆಯ ಮುಂದೆ ನಿಂತಿತು. ಆತ ಕಟ್ಟಿಹಾಕಿದ. ಊರ ಜನರೆಲ್ಲ ರೈತನಿಗೆ ಲಾಭವಾಯಿತು ಎಂದರು. ಆತ ಸುಮ್ಮನೆ ನಕ್ಕ. ಎರಡು ತಿಂಗಳು ಮೇಲೆ ಆ ಕುದುರೆ ಮತ್ತೆ ಕಾಡಿಗೆ ಓಡಿ ಹೋಯಿತು. ಜನ ಅವನಿಗೆ ನಷ್ಟವಾಯಿತೆಂದರು. ಒಂದು ತಿಂಗಳು ಕಳೆದ ಮೇಲೆ ಅವನ ಬಿಳೀ ಕುದುರೆ ಮತ್ತೆ ಆರು ಬಿಳೀ ಕುದುರೆಗಳನ್ನು ಜೊತೆಗೆ ಕರೆತಂದಿತು. ಈಗ ರೈತನಿಗೆ ಭಾರೀ ಲಾಭವಾಯಿತು ಎಂದರು. ರೈತನ ಮಗ ಕುದುರೆ ಸವಾರಿ ಮಾಡುತ್ತಿದ್ದವನು ಬಿದ್ದು ಕಾಲು ಮುರಿದುಕೊಂಡ. ಪಾಪ! ರೈತನಿಗೆ ನಷ್ಟವಾಯಿತು ಎಂದರು ಜನ. ಈ ಪ್ರದೇಶದ ರಾಜ್ಯದ ಮೇಲೆ ವೈರಿ ದಾಳಿಯಾಯಿತು. ಸಶಕ್ತ ತರುಣರನ್ನೆಲ್ಲ ಸೇನೆಗೆ ಕರೆದೊಯ್ದರು. ರೈತನ ಮಗನ ಕಾಲು ಮುರಿದಿದ್ದರಿಂದ ಅವನು ಮನೆಯಲ್ಲೇ ಉಳಿದ. ಊರಜನ ರೈತನಿಗೆ ಲಾಭವಾಯಿತು ಎಂದರು. ರೈತ ಕೇಳಿದ, ‘ಯಾವುದು ಲಾಭ, ಯಾವುದು ನಷ್ಟ ಹೇಳುವುದು ಹೇಗೆ?’.


ಕಗ್ಗ ಹೇಳುತ್ತದೆ, ಈ ಲಾಭ ನಷ್ಟಗಳ ಲೆಕ್ಕವನ್ನು ಬಿಡು. ಇದು ಮುಗಿಯದ ವ್ಯವಹಾರ. ಲೆಕ್ಕಪಟ್ಟಿಯನ್ನು ನೋಡಲು ಹೋಗಬೇಡ. ಲಾಭದ ಆತುರವೂ ಬೇಡ. ಲಾಭದಲ್ಲಿ ನಷ್ಟವೂ ಇದ್ದೀತು, ನಷ್ಟದಲ್ಲಿ ಲಾಭವೂ ಇದ್ದೀತು. ಬಂದದ್ದನ್ನು ಸಂತೋಷದಿಂದ ಸ್ವೀಕರಿಸಿ ಬದುಕು.

ಪದಬಂಧ 4912

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇವರಿಗೆ ಮಾಡಿಸುವ ಮಂಗಳಸ್ನಾನ (4)
3.ಭಾರವನ್ನು ಹೊಂದಿರುವ ತಳಹದಿ (4)
5.ದಿನದೊಳಗೇ ಮಂತ್ರಿ ಬಂದಿಹನಲ್ಲಾ! (3)
7.ವನದ ಕೊನೆಗೆ ಮಾಡಿದ ಹೋಮ (3)
9.ಮರದಲ್ಲಿರುವ ಕೇಕಿ ಕಾಣುತ್ತಿದೆಯೇ? (3)
10.ಮಣ ಭಾರ ಹೊತ್ತಿರುವ ನಲ್ಲನಿವನು! (3)
11.ಕಟ ಕಟ ಶಬ್ದ ಮಾಡುತ್ತಿರುವ ಬಂಡಿ (3)
15.ಮರೀಚಿಕೆ ಇಲ್ಲಿದೆ (4)
16.ಕೊನೆಗೆ ವಿಕ್ರಯಿಸಿದಾಗ ಅಸಂಬದ್ಧತೆ ಕಂಡೀತೇ? (4)

ಮೇಲಿಂದ ಕೆಳಕ್ಕೆ
1.ಆದಿಯಿಲ್ಲದದು ಇದು (3)
2.ಸೂತಪುತ್ರನ ಕಿವಿ! (2)
3.ಸಹಕಾರದ ವಿರುದ್ಧ ಪದ (5)
4.ನಿರ್ಯಾತವನ್ನು ಹೀಗೆನ್ನಿ (2)
6.ಸಂಗೀತ ಕೃತಿಗಳನ್ನು ರಚಿಸುವವನು (5)
8.ಒಳ್ಳೇತನದ ಸೋಗಿನಲ್ಲಿ ವಂಚನೆ ಮಾಡುವವನು (5)
9.ಸಾಯುವ ಸಮಯವಿದು (5)
12.ಗಂಡುಕುರಿ ಇಲ್ಲಿದೆ (3)
13.ತಿರುಗಿದರೆ ಸಾವು ಕಾಣುತ್ತಿದೆಯಲ್ಲಾ? (2)
14.ಸೈರಣೆಯಿಲ್ಲಿ ತಿರುವು ಮುರುವಾಗಿದೆ (2)



4911ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಯಾಸ 3.ಪಾರ್ಥಿವ 6.ದಳ್ಳಾಳಿ 7.ಸಾಹಿತ್ಯ 8.ಶಬರ 9.ಮಾತು 10.ಮಸೂರ 12.ಪಾತಿ 13.ಅಧರ 14.ಇಂಚರ 15.ಮಂದಿರ 17.ಸಲಗ 18.ಸಪ್ತಾಹ

ಮೇಲಿಂದ ಕೆಳಕ್ಕೆ: 1.ಆಕಾಶಗಾಮಿ 2.ಸದರ 3.ಪಾಳಿ 4.ವಸಾಹತು 5.ಸತ್ಯ 9.ಮಾರ 10.ಮತಿ 11.ಸಮರಸಿಂಹ 12.ಪಾದರಸ 13.ಅರಸ 14.ಇಂಬು 15.ಮಂಗ

ಸುಡೊಕು 5298

					7		1	
8		7	6		4	2		9
	2		3				5	
2	4			1		9		
						6	7	
7	5			9		3	4	
	8							3
			4		8	5		
9		4			2		6	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5297 ಸುಡೊಕು


7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ 10 ಗ್ರಾಂಗೆ ₹ 351ರಷ್ಟು ಇಳಿಕೆ ಆಗಿ ₹ 51,452ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹ 561ರಷ್ಟು ಕಡಿಮೆ ಆಗಿ ₹ 68,182ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,153
ಇಂದಿನ ಅಂತ್ಯ	17,222
▲	69
ದಿನದ ಗರಿಷ್ಠ	17,235

ವಿನಿಮಯ ದರ

$ ಡಾಲರ್	76.16
£ ಪೌಂಡ್	100.33
€ ಯೂರೊ	83.58
¥ ಯೆನ್ (100ಕ್ಕೆ)	62

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹425

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1590 (1580)
ಸೋಯಾ (ರಿಫೈಂಡ್)	₹1487 (1495)
ಸೂರ್ಯಕಾಂತಿ (ರಿಫೈಂಡ್)	₹1750 (1750)
ಪಾಮೋಲಿನ್	₹1460 (1468)

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ
₹18000-20000
2ನೇ ದರ್ಜೆ
₹10000-16000

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಬೆಂಗಳೂರು	₹20000-21000
ಕೆ.ಆರ್. ಪೇಟೆ	₹9200-9200
ಪುತ್ತೂರು	₹4000-10500
ತುರುವೇಕೆರೆ	₹16200-16400

ಐಪಿಒ: ಕರಡು ದಾಖಲೆ ಪತ್ರ ಸಲ್ಲಿಸಿದ ಜೋಯಾಲುಕ್ಕಾಸ್



ನವದೆಹಲಿ (ಪಿಟಿಐ): ಚಿನ್ನಾಭರಣ ಕಂಪನಿ ಜೋಯಾಲುಕ್ಕಾಸ್ ಇಂಡಿಯಾ ಲಿಮಿಟೆಡ್, ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ₹ 2,300 ಕೋಟಿ ಬಂಡವಾಳ ಸಂಗ್ರಹಿಸಲು ಉದ್ದೇಶಿಸಿದ್ದು, ಅದಕ್ಕಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿದೆ.

ಐಪಿಒದಲ್ಲಿ ಹೊಸ ಷೇರುಗಳ ವಿತರಣೆ ಇರಲಿದೆ. ಆದರೆ ಆಫರ್ ಫಾರ್ ಸೇಲ್ (ಒಎಫ್ಎಸ್) ಇರುವುದಿಲ್ಲ ಎನ್ನುವ ಮಾಹಿತಿಯು ಕರಡು ದಾಖಲೆ ಪತ್ರದಲ್ಲಿ ಇದೆ.

ಐಪಿಒ ಮೂಲಕ ಸಂಗ್ರಹ ಆಗಲಿರುವ ಮೊತ್ತದಲ್ಲಿ ₹ 1,400 ಕೋಟಿಯನ್ನು ಸಾಲ ಮರುಪಾವತಿಗೆ ಹಾಗೂ ₹ 463.90 ಕೋಟಿಯನ್ನು ಎಂಟು ಮಳಿಗೆಗಳನ್ನು ತೆರೆಯಲು ಬಳಸಲಾಗುವುದು. ಉಳಿದ ಮೊತ್ತವನ್ನು ಇತರ ಕಾರ್ಪೊರೇಟ್ ಉದ್ದೇಶಗಳಿಗೆ ಬಳಕೆ ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ.

ಕಂಪನಿಯು ಎರಡು ವರ್ಷಗಳಲ್ಲಿ ಕರ್ನಾಟಕ, ಒಡಿಶಾ, ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಒಟ್ಟಾರೆ ಎಂಟು ಮಳಿಗೆಗಳನ್ನು ತೆರೆಯುವ ಯೋಜನೆ ಹೊಂದಿದೆ.

ಕ್ರಿಪ್ಟೊ ವಿನಿಮಯ ಕಂಪನಿಗಳಿಂದ ₹ 95.86 ಕೋಟಿ ವಸೂಲಿ



ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸದೆ ಇದ್ದ ಕಾರಣಕ್ಕೆ ಕ್ರಿಪ್ಟೊ ಕರೆನ್ಸಿ ವಿನಿಮಯ ಸೇವೆ ಒದಗಿಸುವ 11 ಕಂಪನಿಗಳಿಂದ ಒಟ್ಟು ₹ 95.86 ಕೋಟಿ ವಸೂಲು ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ದಂಡ ಮತ್ತು ಅದಕ್ಕೆ ವಿಧಿಸಿದ ಬಡ್ಡಿಯ ಮೊತ್ತ ಇದರಲ್ಲಿ ಸೇರಿದೆ. ಜನ್ಮಾಯ್ ಲ್ಯಾಬ್ಸ್, ಕಾಯಿನ್ ಡಿಸಿಎಕ್ಸ್, ಕಾಯಿನ್‌ಸ್ವಿಚ್ ಕುಬೇರ್, ಬೈಕಾಯಿನ್, ಯುನೊಕಾಯಿನ್, ಫ್ಲಿಟ್‌ಪೆ ವಿನಿಮಯ ಕೇಂದ್ರಗಳು ಕೂಡ ಜಿಎಸ್‌ಟಿ ಪಾವತಿಸದೆ ಇದ್ದ ಪ್ರಕರಣಗಳಲ್ಲಿ ಭಾಗಿಯಾಗಿದ್ದವು.

ಜೆಬ್ ಐಟಿ ಸರ್ವಿಸಸ್, ಸೆಕ್ಯುರ್ ಬಿಟ್‌ಕಾಯಿನ್ ಟ್ರೇಡರ್ಸ್, ಗಿಯೊಟಸ್ ಟೆಕ್ನಾಲಜೀಸ್, ಅವ್ಲೆನ್‌ಕ್ಯಾನ್ ಇನ್ನೊವೇಷನ್ಸ್ ಇಂಡಿಯಾ (ಜೆಬ್‌ಪೆ) ಮತ್ತು ಡಿಸಿಡಿಯಂ ಇಂಟರ್ನೆಟ್ ಲ್ಯಾಬ್ಸ್ ಕೂಡ ಜಿಎಸ್‌ಟಿ ಪಾವತಿಸಿರಲಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಕ್ರಿಪ್ಟೊ ಕರೆನ್ಸಿ ವಿನಿಮಯ ಕಂಪನಿಗಳು ಜಿಎಸ್‌ಟಿ ವಂಚನೆ ಎಸಗಿದ 11 ಪ್ರಕರಣಗಳು ಪತ್ತೆಯಾಗಿವೆ ಎಂದು ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ.

ಪೆಟ್ರೋಲಿಯಂ ಖಾತೆ ರಾಜ್ಯ ಸಚಿವ ರಾಮೇಶ್ವರ ತೇಲಿ

ರೂಪಾಯಿ ಪಾವತಿ ಇಲ್ಲ



ಮುಖ್ಯಾಂಶಗಳು

- ಐಒಸಿ, ಎಚ್‌ಪಿಸಿಎಲ್‌ನಿಂದ ರಿಯಾಯಿತಿ ದರದಲ್ಲಿ ಖರೀದಿ
- ಪಶ್ಚಿಮದ ದೇಶಗಳಿಂದ ರಷ್ಯಾ ಮೇಲೆ ನಿರ್ಬಂಧ
- ತೈಲ ವಹಿವಾಟಿಗೆ ಇಲ್ಲ ಅಡೆತಡೆ

ನವದೆಹಲಿ (ಪಿಟಿಐ): ಸರ್ಕಾರಿ ಕಂಪನಿಗಳು ರಷ್ಯಾದಿಂದ ಖರೀದಿಸಿರುವ ಕಚ್ಚಾ ತೈಲಕ್ಕೆ ಪ್ರತಿಯಾಗಿ ರೂಪಾಯಿಯಲ್ಲಿ ಪಾವತಿ ಮಾಡುವ ಆಲೋಚನೆ ಇಲ್ಲ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಸೋಮವಾರ ತಿಳಿಸಿದೆ.

ಭಾರತವು ತನ್ನ ಅಗತ್ಯದ ಕಚ್ಚಾ ತೈಲದ ಪೈಕಿ ಶೇಕಡ 1ರಷ್ಟನ್ನು ರಷ್ಯಾದಿಂದ ಖರೀದಿಸುತ್ತಿದೆ. ಆದರೆ, ಪಾಶ್ಚಿಮಾತ್ಯ ದೇಶಗಳು ಈಗ ರಷ್ಯಾದ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಿರುವ ಕಾರಣದಿಂದಾಗಿ, ಅಲ್ಲಿಂದ ಖರೀದಿಸುವ ಕಚ್ಚಾ ತೈಲ ಮತ್ತು ಅನಿಲಕ್ಕೆ ರೂಪಾಯಿಯಲ್ಲಿ ಹಣ ಪಾವತಿ ಮಾಡಬಹುದು ಎಂಬ ಸಲಹೆಗಳು ಬಂದಿದ್ದವು.

'ಈಗಿನ ಸಂದರ್ಭದಲ್ಲಿ, ಸರ್ಕಾರಿ ಕಂಪನಿಗಳು ರಷ್ಯಾದಿಂದ ಅಥವಾ ಬೇರೆ ಯಾವುದೇ ದೇಶದಿಂದ ಖರೀದಿಸುವ ಕಚ್ಚಾ ತೈಲಕ್ಕೆ ರೂಪಾಯಿಗಳಲ್ಲಿ ಪಾವತಿ ಮಾಡುವ ಪ್ರಸ್ತಾವವು ಪರಿಗಣನೆಯಲ್ಲಿ ಇಲ್ಲ' ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ರಾಮೇಶ್ವರ ತೇಲಿ ಅವರು ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ರಿಯಾಯಿತಿ ಬೆಲೆಗೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸಿವೆ. ರಷ್ಯಾದಿಂದ ಖರೀದಿಸಿದ ತೈಲಕ್ಕೆ ಡಾಲರ್‌ಗಳಲ್ಲಿ ಹಣ ಪಾವತಿ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ರಷ್ಯಾ ಜೊತೆಗಿನ ತೈಲ ಮತ್ತು ಇಂಧನ ವಹಿವಾಟು ನಿರ್ಬಂಧ ಆಗಿಲ್ಲ. ಅಂದರೆ, ಇಂಧನ ಹಾಗೂ ಕಚ್ಚಾ ತೈಲವನ್ನು ಯಾವುದೇ ಕಂಪನಿ ಅಥವಾ ದೇಶ ರಷ್ಯಾದಿಂದ ಮುಕ್ತವಾಗಿ ಖರೀದಿಸಬಹುದು. ಅದಕ್ಕೆ ಹಣ ಪಾವತಿಗೆ ಅಂತರರಾಷ್ಟ್ರೀಯ ಪಾವತಿ ವ್ಯವಸ್ಥೆಗಳನ್ನು ಬಳಸಿಕೊಳ್ಳಬಹುದು ಎಂದು ಹೇಳಿವೆ.

5 ಸಾವಿರಕ್ಕೂ ಹೆಚ್ಚಿನ ಕಂಪನಿಗಳಿಗೆ ನೀಡಿದ್ದ ಸಾಲ ಎನ್‌ಪಿಎ!



ಮುಖ್ಯಾಂಶಗಳು

- ₹ 5 ಕೋಟಿಗಿಂತ ಹೆಚ್ಚಿನ ಮೊತ್ತದ ಸಾಲ
- ದಿವಾಳಿ ಕಾರಣಕ್ಕೆ 5,213 ಆತ್ಮಹತ್ಯೆ ಪ್ರಕರಣ ವರದಿ

ನವದೆಹಲಿ (ಪಿಟಿಐ): ₹ 5 ಕೋಟಿ ಅಥವಾ ಅದಕ್ಕಿಂತ ಹೆಚ್ಚು ಸಾಲ ಹೊಂದಿರುವ 5,231 ಕಂಪನಿಗಳ ಖಾತೆಗಳನ್ನು 'ಅನುತ್ಪಾದಕ ಸಾಲ' (ಎನ್‌ಪಿಎ) ಎಂದು ವರ್ಗೀಕರಿಸಲಾಗಿದೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಸೋಮವಾರ ತಿಳಿಸಿದೆ. ಇದು 2021ರ ಡಿಸೆಂಬರ್ 31ರವರೆಗಿನ ಮಾಹಿತಿ.

ವಾಣಿಜ್ಯ ಬ್ಯಾಂಕ್‌ಗಳು ಹಾಗೂ ಅಖಿಲ ಭಾರತ ಹಣಕಾಸು ಸಂಸ್ಥೆಗಳು ₹ 5 ಕೋಟಿಗಿಂತ ಹೆಚ್ಚು ಮೊತ್ತ ಸಾಲ ಪಡೆದಿರುವವರ ಕೆಲವು ಹಣಕಾಸಿನ ವಿವರಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸುತ್ತವೆ. 2014ರ ಜೂನ್ ತ್ರೈಮಾಸಿಕದ ನಂತರದಲ್ಲಿ ಈ ಪದ್ಧತಿ ಶುರುವಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಅವರು ಲಿಖಿತ ಉತ್ತರದಲ್ಲಿ ಲೋಕಸಭೆಗೆ ತಿಳಿಸಿದ್ದಾರೆ.

ಬ್ಯಾಂಕ್‌ಗಳಿಂದ ಅಗತ್ಯ ಪ್ರಮಾಣದಲ್ಲಿ ಸಾಲ ಸಿಗದೆ ಇದ್ದುದಕ್ಕೆ, ಬಡ್ಡಿ ದರ ಹೆಚ್ಚಾಗಿದ್ದಕ್ಕೆ, ಅನಧಿಕೃತ ಸಾಲ ಆ್ಯಪ್‌ಗಳಿಗೆ ಸಂಬಂಧಿಸಿದಂತೆ ಜನ ಆತ್ಮಹತ್ಯೆ ಮಾಡಿಕೊಂಡ ವಿವರಗಳು ಇವೆಯೇ ಎಂಬ ಪ್ರಶ್ನೆಗೆ ಸಚಿವರು, 'ದಿವಾಳಿ ಅಥವಾ ಸಾಲ ಹೆಚ್ಚಾದ ಕಾರಣದಿಂದಾಗಿ 2020ರಲ್ಲಿ ಒಟ್ಟು 5,213 ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ' ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ನೀಡಿದ ಮಾಹಿತಿ ಆಧರಿಸಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪೆಟ್ರೋಲ್, ಡೀಸೆಲ್ ದರ ಏಳು ದಿನಗಳಲ್ಲಿ ಆರು ಬಾರಿ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸೋಮವಾರ ಪೆಟ್ರೋಲ್ ದರವನ್ನು ಲೀಟರಿಗೆ 30 ಪೈಸೆ ಮತ್ತು ಡೀಸೆಲ್ ದರವನ್ನು 35 ಪೈಸೆಯಷ್ಟು ಹೆಚ್ಚಿಸಿವೆ. ಏಳು ದಿನಗಳಲ್ಲಿ ಆರನೇ ಬಾರಿಗೆ ಬೆಲೆ ಹೆಚ್ಚಳ ಮಾಡಲಾಗಿದ್ದು, ಪೆಟ್ರೋಲ್ ದರ ಲೀಟರಿಗೆ ₹ 4ರಷ್ಟು ಮತ್ತು ಡೀಸೆಲ್ ದರ ₹ 4.10ರಷ್ಟು ಏರಿಕೆ ಆದಂತಾಗಿದೆ.

ತೈಲ ಮಾರಾಟ ಕಂಪನಿಗಳ ದರ ಅಧಿಸೂಚನೆಯ ಪ್ರಕಾರ ದೆಹಲಿಯಲ್ಲಿ, ಪೆಟ್ರೋಲ್ ದರ ₹ 99.41ಕ್ಕೆ ಮತ್ತು ಡೀಸೆಲ್ ದರ ₹ 90.77ಕ್ಕೆ ಏರಿಕೆ ಆಗಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಮಾರಾಟ ದರದಲ್ಲಿ ಏರಿಳಿತ ಆಗುತ್ತದೆ. ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 104.63ಕ್ಕೆ, ಡೀಸೆಲ್ ದರ ₹ 88.89ಕ್ಕೆ ತಲುಪಿದೆ. ನವೆಂಬರ್ 4 ರಿಂದ ಮಾರ್ಚ್ 21ರವರೆಗಿನ ಅವಧಿಯಲ್ಲಿ ಕಚ್ಚಾತೈಲ ದರವು ಬ್ಯಾರಲ್‌ಗೆ 82 ಡಾಲರ್‌ಗಳಿಂದ 120 ಡಾಲರ್‌ಗಳಿಗೆ ಏರಿಕೆ ಆಗಿದೆ. ಆದರೆ, ಈ ಅವಧಿಯಲ್ಲಿ ಕಂಪನಿಗಳು ಇಂಧನ ದರದಲ್ಲಿ ಯಾವುದೇ ಬದಲಾವಣೆ ಮಾಡಿರಲಿಲ್ಲ.



ಭಾರತದಲ್ಲಿ ವಹಿವಾಟು ನಿಲ್ಲಿಸಿದ ಆನ್‌ಲೈನ್ ವೇದಿಕೆ ಶಾಪೀ

ನವದೆಹಲಿ (ಪಿಟಿಐ): ಆನ್‌ಲೈನ್ ವೇದಿಕೆ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡುವ ಶಾಪೀ ಕಂಪನಿಯು ಭಾರತದಲ್ಲಿನ ವಹಿವಾಟುಗಳನ್ನು ಸ್ಥಗಿತಗೊಳಿಸುತ್ತಿರುವುದಾಗಿ ಸೋಮವಾರ ಪ್ರಕಟಿಸಿದೆ.

ಸಿಂಗಪುರ ಮೂಲದ ಸೀ ಲಿಮಿಟೆಡ್ ಮಾಲೀಕತ್ವದ ಈ ಕಂಪನಿಯು ಫೆಬ್ರುವರಿಯಲ್ಲಿ ಫ್ರಾನ್ಸ್‌ನಲ್ಲಿನ ತನ್ನ ವಹಿವಾಟು ಸ್ಥಗಿತಗೊಳಿಸಿತ್ತು. 'ಜಾಗತಿಕ ಮಾರುಕಟ್ಟೆಯಲ್ಲಿನ ಅನಿಶ್ಚಿತತೆಯ ಕಾರಣದಿಂದಾಗಿ ನಾವು ಭಾರತದಲ್ಲಿನ ವಹಿವಾಟು ಸ್ಥಗಿತಗೊಳಿಸಲು ತೀರ್ಮಾನಿಸಿದ್ದೇವೆ' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಸೀ ಲಿಮಿಟೆಡ್ ಕಂಪನಿಯನ್ನು ಚೀನಾ ಮೂಲದ ಟೆನ್ಸೆಂಟ್ ನಿಯಂತ್ರಿಸುತ್ತಿದೆ ಎಂದು ಸರ್ಕಾರೇತರ ಸಂಘಟನೆ ಪ್ರಹಾರ್ ಆರೋಪಿಸಿತ್ತು.

ವರ್ತಕರ ಸಂಘಟನೆಯಾದ ಸಿಎಐಟಿ, ಶಾಪೀ ವ್ಯವಹಾರ ನಿಲ್ಲಿಸಬೇಕು ಎಂದು ಆಗ್ರಹಿಸಿತ್ತು. ಟೆನ್ಸೆಂಟ್ ಕಂಪನಿಯು ಸೀ ಹೋಲ್ಡಿಂಗ್ಸ್‌ನಲ್ಲಿ ಶೇ 25ರಷ್ಟು ಷೇರು ಹೊಂದಿದೆ. ಅದು ಭಾರತದಲ್ಲಿ ಮಾಡಿರುವ ಹೂಡಿಕೆಯು ಎಫ್‌ಡಿಐ ನಿಯಮಗಳಿಗೆ ವಿರುದ್ಧ ಎಂದು ಆರೋಪಿಸಿತ್ತು.

ಮುಂಬೈ ಧಾರಣೆ

ಶೇಂಗಾ

28-3-2022

ಜಾವಾ 70/80(ಹೊಸ)	10600-10650
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10550-10600
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1590)
ಒಂದು ವಾರದ ಡೆಲಿವರಿ	1595 (1585)
ಸೋಯಾ ಕಚ್ಚಾ	1455 (1450)
ಪಾಮ್ ವಾರದ ಡೆಲಿವರಿ	1458 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1700 (1700)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,500 (51,850)
ಬೆಳ್ಳಿ ಕೆ.ಜಿ 67,600 (68,400)

ಆವರಣದಲ್ಲಿ ಶನಿವಾರದ ಧಾರಣೆ

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್ ಮತ್ತು ಭಾರ್ತಿ ಏರ್‌ಟೆಲ್ ಕಂಪನಿಗಳ ಷೇರುಗಳ ಗಳಿಕೆಯಿಂದಾಗಿ ದೇಶದ ಷೇರುಪೇಟೆಗಳು ಶೇ 0.40ರಷ್ಟು ಏರಿಕೆಯೊಂದಿಗೆ ಸೋಮವಾರದ ವಹಿವಾಟು ಅಂತ್ಯಗೊಳಿಸಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 231 ಅಂಶಗಳಷ್ಟು ಹೆಚ್ಚಾಗಿ 57,593 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 69 ಅಂಶಗಳಷ್ಟು ಹೆಚ್ಚಾಗಿ 17,222 ಅಂಶಗಳಿಗೆ ತಲುಪಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಕಾರ್ಕಳ	
ಹೊಸತು	40000-45000
ಹಳತು	46000-53000
ಸಿದ್ದಾಪುರ	
ಬಿಳಿಗೋಟು	22899-31289
ಚಾಲಿ	42099-46619
ಕೋಕ	20389-32699
ಹೊಸಚಾಲಿ	36099-40399
ಕೆಂಪುಗೋಟು	28699-30509
ರಾಶಿ	43899-47489
ತಟ್ಟಿಬೆಟ್ಟೆ	36469-44189
ಶಿರಸಿ	
ಬೆಟ್ಟೆ	18018-44999
ಬಿಳಿಗೋಟು	20696-33099
ಚಾಲಿ	24119-40808
ರಾಶಿ	42699-47739
ಯಲ್ಲಾಪುರ	
ಬಿಳಿಗೋಟು	26899-32818
ಚಾಲಿ	36719-41009
ಕೋಕ	18699-29699
ಕೆಂಪುಗೋಟು	30899-38899
ರಾಶಿ	47819-53889
ತಟ್ಟಿಬೆಟ್ಟೆ	38410-46319
ಶಿವಮೊಗ್ಗ	
ಬೆಟ್ಟೆ	49240-49240
ಬಿಳಿಗೋಟು	17000-32909
ರಾಶಿ	45189-46500
ಸರಕು	59000-75599
ಎನ್.ಆರ್.ಪುರ ರಬ್ಬರ್	
ಆರ್‌ಎಸ್‌ಎಸ್4	170.50
ಆರ್‌ಎಸ್‌ಎಸ್5	165
ಗುಡ್ ಲಾಟ್	161
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	250-650
ದ್ವಿತಳಿ	335-856

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15600	15500	15550	221.85 ಸೆಂಟ್ಸ್
ಎಸಿ	8120	7900	8200	
ಆರ್‌ಪಿ	8800	8800	9050	ಲಂಡನ್
ಆರ್‌ಸಿ	4170	3955	4025	2136 ಡಾಲರ್ಸ್

ಬಿಜೆಪಿ ಜಯದ ಸಂಭ್ರಮದಲ್ಲಿ ಭಾಗಿ: ಹಲ್ಲೆಗೊಳಗಾದ ವ್ಯಕ್ತಿ ಸಾವು

ಗೋರಖ್‌ಪುರ(ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಬಳಿಕ ಬಿಜೆಪಿಯ ಗೆಲುವಿನ ಸಂಭ್ರಮದಲ್ಲಿ ಭಾಗಿಯಾಗಿದಕ್ಕಾಗಿ ಸ್ಥಳೀಯರಿಂದ ಮಾರಣಾಂತಿಕ ಹಲ್ಲೆಗೆ ಒಳಗಾಗಿದ್ದ ಮುಸ್ಲಿಂ ವ್ಯಕ್ತಿ ಬಾಬರ್ ಅಲಿ(25) ಭಾನುವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾರ್ಚ್ 20ರಂದು ಉತ್ತರ ಪ್ರದೇಶದ ಖುಷಿನಗರದಲ್ಲಿ ಹಲ್ಲೆ ನಡೆದಿತ್ತು. ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತಪಟ್ಟಿದ್ದು, ಪಾರ್ಥಿವ ಶರೀರವನ್ನು ಗ್ರಾಮಕ್ಕೆ ಕರೆತರಲಾಯಿತು. ಈ ವೇಳೆ ಈ ಕೃತ್ಯದಲ್ಲಿ ಭಾಗಿಯಾದವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು ಕುಟುಂಬಸ್ಥರು, ಶವಸಂಸ್ಕಾರಕ್ಕೆ ನಿರಾಕರಿಸಿದರು.

ಕೊನೆಗೆ ಸ್ಥಳಕ್ಕೆ ಭೇಟಿ ನೀಡಿದ ಸ್ಥಳೀಯ ಶಾಸಕರು, ಕುಟುಂಬಸ್ಥರನ್ನು ಸಮಾಧಾನಪಡಿಸಿ, ಶವಸಂಸ್ಕಾರ ನೆರವೇರಿಸುವಂತೆ ಮನವೊಲಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣ ಸಂಬಂಧ ತನಿಖೆ ನಡೆಸಿದ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಇತರರನ್ನು ಬಂಧಿಸಲು ಕಾರ್ಯಾಚರಣೆ ಕೈಗೊಂಡಿದ್ದಾರೆ.

ಆಗಿದ್ದೇನು?: ಈಚೆಗೆ ಮುಕ್ತಾಯವಾದ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ವೇಳೆ ಅಲಿ ಅವರು ಬಿಜೆಪಿ ಪರ ಪ್ರಚಾರ ನಡೆಸಿದ್ದರು. ಅಲ್ಲದೆ ಫಲಿತಾಂಶದ ದಿನ ಅಲಿ ಅವರು ಪಟಾಕಿ ಸಿಡಿಸಿ ಸಂಭ್ರಮಿಸಿದ್ದಲ್ಲದೆ, ಸಿಹಿ ಹಂಚಿದ್ದರು. ಇದರಿಂದ ಆಕ್ರೋಶಗೊಂಡಿದ್ದ ಅಲಿ ಸುತ್ತಮುತ್ತಲಿನ ಮನೆಯವರು, ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದರು. ಮಾರ್ಚ್ 20ರಂದು ಸಂತ್ರಸ್ತನನ್ನು ಸುತ್ತುವರಿದ ದುಷ್ಕರ್ಮಿಗಳು ಬಡಿಗೆಗಳಿಂದ ಹಲ್ಲೆ ನಡೆಸಿದ್ದರು. ತಪ್ಪಿಸಿಕೊಳ್ಳಲು ಮನೆ ಮೇಲೆ ಹತ್ತಿದ್ದಾಗ, ಅಲ್ಲಿಗೂ ತೆರಳಿದ್ದ ದುಷ್ಕರ್ಮಿಗಳು ಅವರನ್ನು ಮನೆಯ ಮೇಲಿನಿಂದ ನೂಕಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ವಿಶ್ವಸಂಸ್ಥೆಯಿಂದ ತೃತೀಯ ಲಿಂಗಿಗಳ ಮಕ್ಕಳ ಹಕ್ಕುಗಳ ಅಭಿಯಾನ

ನವದೆಹಲಿ (ಪಿಟಿಐ): ಮಾರ್ಚ್ 31 ರಂದು ನಡೆಯುವ ತೃತೀಯ ಲಿಂಗಿಗಳ ಅಂತರರಾಷ್ಟ್ರೀಯ ದಿನದ ಅಂಗವಾಗಿ ವಿಶ್ವಸಂಸ್ಥೆಯು ಎಚ್‌ಐವಿ ಏಡ್ಸ್ ಕುರಿತ ಕಾರ್ಯಕ್ರಮದ ಅಡಿಯಲ್ಲಿ ತೃತೀಯ ಲಿಂಗಿಗಳ ಮಕ್ಕಳ ಹಕ್ಕುಗಳ ಅಭಿಯಾನವನ್ನು ಮೊದಲ ಬಾರಿಗೆ ಪ್ರಾರಂಭಿಸಿದೆ.

ಸೋಮವಾರ ಬಿಡುಗಡೆಯಾದ 'ಅನ್‌ಬಾಕ್ಸ್ ಮಿ' ಎಂಬ ಎರಡು ನಿಮಿಷ 10 ಸೆಕೆಂಡ್‌ಗಳ ಚಲನಚಿತ್ರದೊಂದಿಗೆ ಅಭಿಯಾನ ಆರಂಭಿಸಿದೆ.

ವಿಶ್ವದಾದ್ಯಂತ ಮಾರ್ಚ್ 31 ರಂದು ತೃತೀಯ ಲಿಂಗಿಗಳ ದಿನವನ್ನು ಆಚರಿಸುವ ಮೂಲಕ ಈ ಸಮುದಾಯ ಎದುರಿಸುತ್ತಿರುವ ತಾರತಮ್ಯದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಮಕ್ಕಳ ಬಗೆಗಿನ ಗೋಪ್ಯತೆಯ ವಿಷಯಗಳ ಮಾಹಿತಿಯನ್ನು, ಅವರ ಕನಸುಗಳು ಮತ್ತು ಅವರು ಇಷ್ಟಪಡುವ ವಿಷಯಗಳ ಮಾಹಿತಿಯನ್ನು ಅಭಿಯಾನದಲ್ಲಿಒದಗಿಸಲಾಗುತ್ತದೆ.

ಭಾರತದಲ್ಲಿ ಶೇ 31ರಷ್ಟು ತೃತೀಯ ಲಿಂಗಿಗಳು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದರಲ್ಲಿ ಶೇ 50ರಷ್ಟು ಮಂದಿ ತಮ್ಮ 20ನೇ ಹುಟ್ಟುಹಬ್ಬದ ಮೊದಲೇ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ ಎಂದು ಇಂಡಿಯನ್ ಜರ್ನಲ್ ಫಾರ್ ಸೈಕಲಾಜಿಕಲ್ ಮೆಡಿಸಿನ್ ನಡೆಸಿದ ಅಧ್ಯಯನದ ವರದಿ ಹೇಳಿದೆ.

ಈ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯು ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಸಂದೇಶವನ್ನು ನೀಡಲು ಮತ್ತು ಜಾಗೃತಿ ಮೂಡಿಸಲು ಭಾರತದಲ್ಲಿ ಶಾಲೆಗಳಲ್ಲಿ ಅಭಿಯಾನ ನಡೆಸಲು ಮುಂದಾಗಿದೆ.

ಫೀಚರ್ ಫೋನ್ ಯುಪಿಐ: 21 ಸಾವಿರ ವಹಿವಾಟು

ನವದೆಹಲಿ (ಪಿಟಿಐ): ಫೀಚರ್ ಫೋನ್‌ಗಳ ಮೂಲಕ ಡಿಜಿಟಲ್ ಪಾವತಿ ಸೇವೆ ಪಡೆಯಲು 37 ಸಾವಿರಕ್ಕೂ ಹೆಚ್ಚು ಜನ ಮುಂದಾಗಿದ್ದಾರೆ ಎಂದು ಕೇಂದ್ರ ಸರ್ಕಾರವು ಸೋಮವಾರ ಸಂಸತ್ತಿಗೆ ತಿಳಿಸಿದೆ.

ಫೀಚರ್ ಫೋನ್ ಮೂಲಕ ಡಿಜಿಟಲ್ ಸೇವೆ ಒದಗಿಸುವುದಕ್ಕೆ ಮಾರ್ಚ್ 8ರಂದು ಚಾಲನೆ ನೀಡಲಾಗಿದ್ದು, ಒಟ್ಟು 21,833 ವಹಿವಾಟುಗಳು ಯಶಸ್ವಿಯಾಗಿ ನಡೆದಿವೆ. ಯುಪಿಐ123ಪೇ ಸೇವೆಯನ್ನು ಫೀಚರ್ ಫೋನ್ ಮೂಲಕ ಇಂಟರ್ನೆಟ್ ಇಲ್ಲದೆಯೂ ಬಳಸಿಕೊಳ್ಳಬಹುದು.

ಕಲ್ಯಾಣ್ ಜುವೆಲರ್ಸ್ ಕಂಪನಿ ಅಧ್ಯಕ್ಷರಾಗಿ ವಿನೋದ್ ರಾಯ್

ನವದೆಹಲಿ (ಪಿಟಿಐ): ಕಲ್ಯಾಣ್ ಜುವೆಲರ್ಸ್ ಇಂಡಿಯಾ ಕಂಪನಿಯು ಮಾಜಿ ಮಹಾಲೇಖಪಾಲ (ಸಿಎಜಿ) ವಿನೋದ್ ರಾಯ್ ಅವರನ್ನು ಅಧ್ಯಕ್ಷ ಮತ್ತು ಸ್ವತಂತ್ರ ಕಾರ್ಯನಿರ್ವಾಹಕೇತರ ನಿರ್ದೇಶಕರನ್ನಾಗಿ ನೇಮಿಸಿದೆ.

ಈ ನೇಮಕಕ್ಕೆ ಷೇರುದಾರರು ಮತ್ತು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಒಪ್ಪಿಗೆ ದೊರೆಯಬೇಕಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಟಿ.ಎಸ್. ಕಲ್ಯಾಣರಾಮನ್ ಅವರು ವ್ಯವಸ್ಥಾಪಕ ನಿರ್ದೇಶಕರಾಗಿ ಕಂಪನಿಯ ಆಡಳಿತ ಮಂಡಳಿಯಲ್ಲಿ ಮುಂದುವರಿಯಲಿದ್ದಾರೆ ಎಂದು ಹೇಳಿದೆ.



ಲಖನೌ ತಂಡದ ದೀಪಕ್ ಹೂಡಾ–ಆಯುಷ್ ಬಡೋನಿ ಜೊತೆಯಾಟ ವ್ಯರ್ಥ; ತೆವಾಟಿಯಾ ಸ್ಫೋಟಕ ಬ್ಯಾಟಿಂಗ್

ಗುಜರಾತ್ ಟೈಟನ್ಸ್‌ಗೆ 'ಮೊದಲ' ಗೆಲುವು

ಮುಂಬೈ (ಪಿಟಿಐ): ಸೋಲಿನ ಆತಂಕದಿಂದ ಗುಜರಾತ್ ಟೈಟನ್ಸ್ ತಂಡವನ್ನು ಕಾಪಾಡಿದ ರಾಹುಲ್ ತೆವಾಟಿಯಾ ಮತ್ತು ಡೇವಿಡ್ ಮಿಲ್ಲರ್ ಅವರು ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ಸಂಭ್ರಮದ ಹೊಳೆ ಹರಿಸಿದರು.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಹೊಸ ತಂಡಗಳ ನಡುವಿನ ಹಣಾಹಣಿಯಲ್ಲಿ ಗುಜರಾತ್ ಐದು ವಿಕೆಟ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮಣಿಸಿತು. 159 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ ಆರಂಭದಲ್ಲಿ 15 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ವೇಳೆ ಆರಂಭಿಕ ಬ್ಯಾಟರ್ ಮ್ಯಾಥ್ಯೂ ವೇಡ್ ಮತ್ತು ನಾಯಕ ಹಾರ್ದಿಕ್ ಪಾಂಡ್ಯ 57 ರನ್‌ಗಳ ಜೊತೆಯಾಟವಾಡಿ ಇನಿಂಗ್ಸ್ ಮುನ್ನಡೆಸಿದರು.

ಆರು ರನ್‌ಗಳ ಅಂತರದಲ್ಲಿ ವೇಡ್ ಮತ್ತು ಹಾರ್ದಿಕ್ ವಿಕೆಟ್ ಕಳೆದುಕೊಂಡರು. ನಂತರ 60 ರನ್‌ಗಳ ಜೊತೆಯಾಟವಾಡಿದ ಮಿಲ್ಲರ್ ಮತ್ತು ರಾಹುಲ್ ತಂಡವನ್ನು ಜಯದತ್ತ ಸಾಗಿಸಿದರು. ಅಂತಿಮ ಓವರ್‌ಗಳಲ್ಲಿ ಕರ್ನಾಟಕದ ಅಭಿನವ್ ಮನೋಹರ್ ಅವರು ರಾಹುಲ್‌ಗೆ ಉತ್ತಮ ಜೊತೆ ನೀಡಿದರು.

ದೀಪಕ್–ಆಯುಷ್ ಜೊತೆಯಾಟದ ರಂಗು: ದೆಹಲಿಯ ಚಿಗುರು ಮೀಸೆಯ ಹುಡುಗ ಆಯುಷ್ ಬಡೋನಿ, ಅನುಭವಿ ಆಟಗಾರ ದೀಪಕ್ ಹೂಡಾ ಜೊತೆಗೂಡಿ ಅಬ್ಬರಿಸಿ ಲಖನೌ ಸೂಪರ್ ಜೈಂಟ್ಸ್ ಸವಾಲಿನ ಮೊತ್ತ ಪೇರಿಸಲು ನೆರವಾದರು. ಅವರಿಬ್ಬರ ಮೋಹಕ ಆಟದ ನೆರವಿನಿಂದ ಲಖನೌ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 158 ರನ್ ಗಳಿಸಿತು. ಆರಂಭದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ತಂಡಕ್ಕೆ ದೀಪಕ್ ಹೂಡಾ (55; 41 ಎ, 6 ಬೌಂ, 2 ಸಿ) ಮತ್ತು ಆಯುಷ್ ಬಡೋನಿ (54; 41 ಎ, 4 ಬೌಂ, 3 ಸಿ) ಚೇತರಿಕೆ ತುಂಬಿದರು. ಟಾಸ್ ಗೆದ್ದ ಗುಜರಾತ್ ಟೈಟನ್ಸ್ ನಾಯಕ ಹಾರ್ದಿಕ್ ಪಾಂಡ್ಯ 'ಜೀವದ ಗೆಳೆಯ' ಕೆ.ಎಲ್.ರಾಹುಲ್ ನಾಯಕತ್ವದ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು. ಮೊಹಮ್ಮದ್ ಶಮಿ ಹಾಕಿದ ಮೊದಲ ಓವರ್‌ನ ಮೊದಲ ಎಸೆತದಲ್ಲೇ ರಾಹುಲ್ ವಿಕೆಟ್ ಒಪ್ಪಿಸಿದರು. ಅವರ ಬ್ಯಾಟಿನ ಹೊರ ಅಂಚನ್ನು ಸವರಿದ ಚೆಂಡು ವಿಕೆಟ್ ಕೀಪರ್ ಮ್ಯಾಥ್ಯೂ ವೇಡ್ ಕೈಸೇರಿತು.

ತಂಡದ ಮೊತ್ತ 13 ಆಗುವಷ್ಟರಲ್ಲಿ ಮತ್ತೊಬ್ಬ ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಕೂಡ ವಾಪಸಾದರು. ಎವಿನ್ ಲೂಯಿಸ್ ಮತ್ತು ಮನೀಷ್ ಪಾಂಡೆ ವಾಪಸಾದಾಗ ತಂಡದ ಮೊತ್ತ ಕೇವಲ 29 ಆಗಿತ್ತು. ಈ ಸಂದರ್ಭದಲ್ಲಿ ದೀಪಕ್ ಹೂಡ ಮತ್ತು ಆಯುಷ್ ಬಡೋನಿ ಆಟ ರಂಗೇರಿತು. ಬೌಲರ್‌ಗಳನ್ನು ದಂಡಿಸಿದ ಇವರಿಬ್ಬರ ಬ್ಯಾಟಿನಿಂದ ಬೌಂಡರಿ–ಸಿಕ್ಸರ್‌ಗಳು ಚಿಮ್ಮಿದಾಗ ಪ್ರೇಕ್ಷಕರು ನಲಿದರು. ಇಬ್ಬರೂ ಐದನೇ ವಿಕೆಟ್‌ಗೆ 86 ರನ್ ಸೇರಿಸಿದರು. ರಶೀದ್ ಖಾನ್ ಎಸೆತವನ್ನು ಸ್ವೀಪ್ ಮಾಡಲು ಯತ್ನಿಸಿ ಹೂಡಾ ವಿಕೆಟ್ ಕಳೆದುಕೊಂಡರು. ಹಾರ್ದಿಕ್ ಸಹೋದರ ಕೃಣಾಲ್ ಪಾಂಡ್ಯ ಅವರು ಬಡೋನಿ ಜೊತೆ 40 ರನ್‌ಗಳ ಜೊತೆಯಾಟವಾಡಿದರು.



ಲಖನೌ ಸೂಪರ್ ಜೈಂಟ್ಸ್ ನಾಯಕ ಕೆ.ಎಲ್‌.ರಾಹುಲ್ ಅವರ ವಿಕೆಟ್‌ಗಾಗಿ ಮನವಿ ಸಲ್ಲಿಸಿದ ಗುಜರಾತ್ ಟೈಟನ್ಸ್‌ನ ಮೊಹಮ್ಮದ್ ಶಮಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ 6ಕ್ಕೆ 158 (20 ಓವರ್)

ರಾಹುಲ್ ಸಿ ವೇಡ್ ಬಿ ಶಮಿ 0 (1 ಎ), ಕ್ವಿಂಟನ್ ಬಿ ಶಮಿ 7 (9 ಎ, 4x1), ಲೂಯಿಸ್ ಸಿ ಶುಭಮನ್ ಬಿ ಆ್ಯರನ್ 10 (9 ಎ, 4x2), ಮನೀಷ್ ಬಿ ಶಮಿ 6 (5 ಎ, 4x1), ದೀಪಕ್ ಎಲ್‌ಬಿಡಬ್ಲ್ಯು ಬಿ ರಶೀದ್ ಖಾನ್ 55 (41 ಎ, 4x6, 6x2), ಆಯುಷ್ ಸಿ ಹಾರ್ದಿಕ್ ಬಿ ಆ್ಯರನ್ 54 (41 ಎ, 4x4, 6x3), ಕೃಣಾಲ್ ಔಟಾಗದೆ 21 (13 ಎ, 4x3), ದುಷ್ಮಂತ ಚಮೀರ ಔಟಾಗದೆ 1 (1 ಎ)

ಇತರೆ (ವೈಡ್ 4) 4

ವಿಕೆಟ್ ಪತನ: 1-0 (ಕೆ.ಎಲ್.ರಾಹುಲ್, 0.1), 2-13 (ಕ್ವಿಂಟನ್ ಡಿ ಕಾಕ್, 2.3), 3-20 (ಎವಿನ್ ಲೂಯಿಸ್, 3.3), 4-29 (ಮನೀಷ್ ಪಾಂಡೆ, 4.3), 5-116 (ದೀಪಕ್ ಹೂಡಾ, 15.5), 6-156 (ಆಯುಷ್ ಬಡೋನಿ, 19.4)

ಬೌಲಿಂಗ್: ಮೊಹಮ್ಮದ್ ಶಮಿ 4–0–25–3, ವರುಣ್ ಆ್ಯರನ್ 4–0–45–2, ಲಾಕಿ ಫರ್ಗ್ಯುಸನ್ 4–0–24–0, ಹಾರ್ದಿಕ್ ಪಾಂಡ್ಯ 4–0–37–0, ರಶೀದ್ ಖಾನ್ 4–0–27–1

ಗುಜರಾತ್ ಟೈಟನ್ಸ್ 5ಕ್ಕೆ 161 (19.4 ಓವರ್)

ಶುಭಮನ್ ಸಿ ದೀಪಕ್ ಬಿ ಚಮೀರ 0 (3 ಎ), ವೇಡ್ ಬಿ ದೀಪಕ್ 30 (29ಎ, 4X4), ವಿಜಯ್ ಬಿ ಚಮೀರ 4 (6 ಎ), ಹಾರ್ದಿಕ್ ಸಿ ಮನೀಷ್ ಬಿ ಕೃಣಾಲ್ 33 (28ಎ, 4X5, 6X1), ಮಿಲ್ಲರ್ ಸಿ ರಾಹುಲ್ ಬಿ ಆವೇಶ್ ಖಾನ್ 30 (21ಎ, 4X1, 6X2), ತೆವಾಟಿಯಾ ಔಟಾಗದೆ 40 (24ಎ, 4X5, 6X2), ಅಭಿನವ್ ಔಟಾಗದೆ 15 (7ಎ, 4X3)

ಇತರೆ (ಲೆಗ್ ಬೈ 6, ವೈಡ್ 3) 9


ವಿಕೆಟ್ ಪತನ: 11-4 (ಶುಭಮನ್ ಗಿಲ್, 0.3), 2-15 (ವಿಜಯ್ ಶಂಕರ್, 2.1), 3-72 (ಹಾರ್ದಿಕ್ ಪಾಂಡ್ಯ, 10.1), 4-78 (ಮ್ಯಾಥ್ಯು ವೇಡ್, 11.5), 5–138 (ಡೇವಿಡ್ ಮಿಲ್ಲರ್, 17.3)

ಬೌಲಿಂಗ್: ದುಷ್ಮಂತ ಚಮೀರ 3–0–22–2, ಆವೇಶ್ ಖಾನ್ 3.4–0–33–1, ಮೊಹಸಿನ್ ಖಾನ್ 2–0–18–0, ರವಿ ಬಿಷ್ಣೋಯಿ 4–0–34–0, ಕೃಣಾಲ್ ಪಾಂಡ್ಯ 4–0–17–1, ದೀಪಕ್ ಹೂಡಾ 3–0–31–1

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 5 ವಿಕೆಟ್‌ಗಳ ಜಯ



ರಾಹುಲ್ ತೆವಾಟಿಯಾ



ಮದುವೆ ಸಂಭ್ರಮದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ವಿನಿ –ಇನ್‌ಸ್ಟಾಗ್ರಾಮ್ ಚಿತ್ರ

ಗ್ಲೆನ್ ಮ್ಯಾಕ್ಸ್‌ವೆಲ್-ವಿನಿ ಮದುವೆ ವಿಡಿಯೊ ವೈರಲ್

ಚೆನ್ನೈ: ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ತಮಿಳುನಾಡು ಮೂಲದ ವಿನಿ ರಾಮನ್ ಮದುವೆಯ ವಿಡಿಯೊ ವೈರಲ್ ಆಗಿದೆ. ತಮಿಳು ಸಂಪ್ರದಾಯದ ಪ್ರಕಾರ ಭಾನುವಾರ ವಿವಾಹ ಸಮಾರಂಭ ನಡೆದಿತ್ತು. ಅದರ ವಿಡಿಯೊವನ್ನು ಮ್ಯಾಕ್ಸ್‌ವೆಲ್ ಹಂಚಿಕೊಂಡಿದ್ದರು.

ವಧು-ವರರು ಪರಸ್ಪರ ಹೂವಿನ ಹಾರ ಬದಲಾಯಿಸುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇಬ್ಬರೂ ಹಾರ ಹಿಡಿದುಕೊಂಡು ನೃತ್ಯ ಮಾಡುತ್ತ ಹತ್ತಿರ ಬರುತ್ತಿದ್ದಂತೆ ಸುತ್ತ ಸೇರಿದವರು ಚಪ್ಪಾಳೆ ತಟ್ಟಿ ನಗೆಸೂಸಿ ಸಂಭ್ರಮಿಸುವ ದೃಶ್ಯ ಹೆಚ್ಚು ಗಮನ ಸೆಳೆದಿದೆ.

ಗೆಳತಿಯ ಜೊತೆ ಎರಡು ವರ್ಷಗಳ ಹಿಂದೆ ಮ್ಯಾಕ್ಸ್‌ವೆಲ್ ನಿಶ್ಚಿತಾರ್ಥ ನಡೆದಿತ್ತು. ಇದೇ 18ರಂದು ಆಸ್ಟ್ರೇಲಿಯಾ ಸಂಪ್ರದಾಯದಂತೆ ಮದುವೆಯಾಗಿತ್ತು.

ಉಭಯ ಕುಟುಂಬಗಳ ಸಂಪ್ರದಾಯವನ್ನು ಗೌರವಿಸುವುದಕ್ಕಾಗಿ ಆಸ್ಟ್ರೇಲಿಯಾ ಹಾಗೂ ಭಾರತದ ಶೈಲಿಯಲ್ಲಿ ವಿವಾಹ ಸಮಾರಂಭ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಮ್ಯಾಕ್ಸ್‌ವೆಲ್ ಪ್ರತಿನಿಧಿಸುತ್ತಿದ್ದಾರೆ.

ಐಪಿಎಲ್‌ಗೆ ಮಿಚೆಲ್ ಅಲಭ್ಯ?

ಲಾಹೋರ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸದಸ್ಯ, ಆಸ್ಟ್ರೇಲಿಯಾದ ಮಿಚೆಲ್ ಮಾರ್ಷ್ ಗಾಯಗೊಂಡಿದ್ದಾರೆ. ಹೀಗಾಗಿ ಅವರು ಈ ಬಾರಿ ಐಪಿಎಲ್‌ನಲ್ಲಿ ಆಡುವುದು ಸಂದೇಹ.

ಆಲ್‌ರೌಂಡರ್ ಮಿಚೆಲ್ ಮಾರ್ಷ್ ಪಾಕಿಸ್ತಾನ ಎದುರಿನ ಆಸ್ಟ್ರೇಲಿಯಾದ ಏಕದಿನ ಸರಣಿಗೆ ಅಭ್ಯಾಸ ಮಾಡುವ ಸಂದರ್ಭದಲ್ಲಿ ಭಾನುವಾರ ಗಾಯಗೊಂಡಿದ್ದರು. ಮಂಗಳವಾರ ಆರಂಭವಾಗಲಿರುವ ಸರಣಿಯಲ್ಲಿ ಆಡುವ ಬಗ್ಗೆ ಇನ್ನೂ ನಿರ್ಧಾರವಾಗಲಿಲ್ಲ.

ಹರಾಜಿನಲ್ಲಿ ₹ 6.5 ಕೋಟಿ ಮೊತ್ತ ನೀಡಿ ಮಾರ್ಷ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ತನ್ನತ್ತ ಸೆಳೆದುಕೊಂಡಿತ್ತು. ಏಕದಿನ ಸರಣಿಯ ನಂತರ ಏಪ್ರಿಲ್ ಆರರಂದು ಅವರು ತಂಡವನ್ನು ಸೇರಬೇಕಾಗಿತ್ತು.



ಜಯದ ಸಂಭ್ರಮದಲ್ಲಿ ಡೆನಿಸ್ ಶಪವಲೊವ್ ಮತ್ತು ರೋಹನ್ ಬೋಪಣ್ಣ – ಟ್ವಿಟರ್ ಚಿತ್ರ

ಮಿಯಾಮಿ ಓಪನ್ ಟೆನಿಸ್ ಟೂರ್ನಿ

ಎಂಟರಘಟ್ಟಕ್ಕೆ ಬೋಪಣ್ಣ ಜೋಡಿ

ಮಿಯಾಮಿ (ಪಿಟಿಐ/ ರಾಯಿಟರ್ಸ್): ಭಾರತದ ರೋಹನ್ ಬೋಪಣ್ಣ ಮತ್ತು ಕೆನಡಾದ ಡೆನಿಸ್ ಶಪವಲೊವ್ ಜೋಡಿಯು ಅಗ್ರಶ್ರೇಯಾಂಕದ ಕ್ರೊವೇಷ್ಯಾ ಆಟಗಾರರಿಗೆ ಆಘಾತ ನೀಡಿ ಮಿಯಾಮಿ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ.

ಭಾನುವಾರ ರಾತ್ರಿ ನಡೆದ ಪುರುಷರ ಡಬಲ್ಸ್ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಶ್ರೇಯಾಂಕರಹಿತ ಆಟಗಾರರಾದ ಬೋಪಣ್ಣ–ಶಪೊವಲೊವ್ ಅವರಿಗೆ 6-3, 7-6(3)ರಿಂದ ನಿಕೊಲಾ ಮೆಕ್ಟಿಕ್ ಮತ್ತು ಮೇಟ್ ಪಾವಿಚ್ ಅವರಿಗೆ ಸೋಲುಣಿಸಿದರು.

ಮೊದಲ ಸುತ್ತಿನ ಹೋರಾಟದ ಪಂದ್ಯದಲ್ಲಿ ಭಾರತ–ಕೆನಡಾ ಜೋಡಿ 6-7(5), 6-2, 10-3ರಿಂದ ಎಲ್ ಸೆಲ್ವಡೊರ್‌ನ ಮಾರ್ಸೆಲೊವಾ ಅವ್ರೆವಾಲೊ ಮತ್ತು ನೆದರ್ಲೆಂಡ್ಸ್‌ನ ಜೀನ್ ಜೂಲಿಯನ್ ರೋಜರ್ ಎದುರು ಗೆದ್ದಿದ್ದರು.

ಎಂಟರಘಟ್ಟದ ಪಂದ್ಯದಲ್ಲಿ ಬೋಪಣ್ಣ ಮತ್ತು ಶಪೊವಲೊವ್ ಅವರಿಗೆ ಆರನೇ ಶ್ರೇಯಾಂಕದ, ನೆದರ್ಲೆಂಡ್ಸ್‌ನ ವೇಸ್ಲಿ ಕೂಲ್‌ಹೊಫ್ ಮತ್ತು ಗ್ರೇಟ್ ಬ್ರಿಟನ್‌ನ ನೀಲ್ ಸ್ಕುಪ್ಸ್ಕಿ ಸವಾಲು ಎದುರಾಗಿದೆ. ಎರಡನೇ ಸುತ್ತಿನ ಸೆಣಸಾಟದಲ್ಲಿ ವೇಸ್ಲಿ– ನೀಲ್ 6-3, 7-6(8)ರಿಂದ ಇಟಲಿಯ ಪೆಡ್ರೊ ಮಾರ್ಟಿನೆಜ್ ಮತ್ತು ಲೊರೆಂಜೊ ಸೊನೆಗೊ ಅವರನ್ನು ಮಣಿಸಿದರು.

'ತೀವ್ರ ಒತ್ತಡ';ಹಿಂದೆ ಸರಿದ ಅಜರೆಂಕಾ: 'ಕಳೆದ ಕೆಲವು ವಾರಗಳಿಂದ ತಾನು ತೀವ್ರ ಒತ್ತಡದಲ್ಲಿದ್ದು, ಮಿಯಾಮಿ ಓಪನ್ ಟೂರ್ನಿಯಿಂದ ಹಿಂದೆ ಸರಿಯುತ್ತಿರುವುದಾಗಿ ಬೆಲಾರೂಸ್ ಆಟಗಾರ್ತಿ ವಿಕ್ಟೋರಿಯಾ ಅಜರೆಂಕಾ ಹೇಳಿದ್ದಾರೆ.

ಇದರಿಂದಾಗಿ ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಅವರ ವಿರುದ್ಧ ಕಣಕ್ಕಿಳಿದಿದ್ದ ಜೆಕ್ ಗಣರಾಜ್ಯದ ಆಟಗಾರ್ತಿ ಲಿಂಡಾ ಫ್ರುವಿರ್ತೊವಾ ಅವರಿಗೆ ವಾಕ್‌ಓವರ್ ಸಿಕ್ಕಿತು.

32 ವರ್ಷದ ಅಜರೆಂಕಾ ಹಿಂದೆ ಸರಿದ ವೇಳೆ ಜೆಕ್ ಆಟಗಾರ್ತಿ ಪಂದ್ಯದಲ್ಲಿ 6–2, 3–0ರಿಂದ ಮುಂದಿದ್ದರು.

ಮಾಜಿ ಚಾಂಪಿಯನ್ನರ ಮುಖಾಮುಖಿ

ರಾಜಸ್ತಾನ್ ರಾಯಲ್ಸ್– ಸನ್‌ರೈಸರ್ಸ್ ಹೈದರಾಬಾದ್‌ಗೆ ಶುಭಾರಂಭದ ಕನಸು; ಪುಣೆಯಲ್ಲಿ ಪಂದ್ಯ

ಪುಣೆ (ಪಿಟಿಐ): ಬಲಿಷ್ಠ ಆಟಗಾರರನ್ನು ಹೊಂದಿರುವ ರಾಜಸ್ಥಾನ್ ರಾಯಲ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ 15ನೇ ಆವೃತ್ತಿಯ ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಸೆಣಸಲಿದೆ.

ಮಹಾರಾಷ್ಟ್ರ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಂಗಣ ಈ ಬಾರಿಯ ಟೂರ್ನಿಯ ಮೊದಲ ಪಂದ್ಯಕ್ಕೆ ಮಂಗಳವಾರ ಆತಿಥ್ಯ ನೀಡಲಿದ್ದು ಮಾಜಿ ಚಾಂಪಿಯನ್ನರ್ ಮುಖಾಮುಖಿ ಕುತೂಹಲ ಕೆರಳಿಸಿದೆ.

ನಾಯಕ ಸಂಜು ಸ್ಯಾಮ್ಸನ್ ಅವರ ಮೇಲೆ ರಾಜಸ್ಥಾನ್ ರಾಯಲ್ಸ್‌ನ ಬ್ಯಾಟಿಂಗ್ ವಿಭಾಗ ಭರವಸೆ ಇರಿಸಿಕೊಂಡಿದೆ. ಆದರೆ ಅನಿಶ್ಚಿತತೆಯು ಅವರ ಬ್ಯಾಟಿಂಗ್‌ನ ದೌರ್ಬಲ್ಯವಾಗಿದ್ದು ಅದರಿಂದ ಹೊರಬರಲು ಪ್ರಯತ್ನಿಸಬೇಕಾಗಿದೆ. ಬ್ಯಾಟಿಂಗ್‌ನಲ್ಲಿ ಮಿಂಚಿದರೆ ವರ್ಷಾಂತ್ಯದಲ್ಲಿ ನಡೆಯಲಿರುವ ಟ್ವೆಂಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲೂ ಸ್ಥಾನ ಭದ್ರಪಡಿಸಿಕೊಳ್ಳಲು ಅವರಿಗೆ ಅವಕಾಶವಿದೆ.

2008ರ ಮೊದಲ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದ ರಾಜಸ್ಥಾನ್ ರಾಯಲ್ಸ್‌ಗೆ ಮತ್ತೆ ಚಾಂಪಿಯನ್ ಪಟ್ಟ ದೊರಕಿಸಿಕೊಡುವ ಅವರ ಕನಸು ನನಸಾಗಬೇಕಾದರೆ ಗೆಲುವಿನ ಆರಂಭ ಸಿಗಬೇಕಾಗಿದೆ. ದೇವದತ್ತ ಪಡಿಕ್ಕಲ್ ಮತ್ತು ಜೋಸ್ ಬಟ್ಲರ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಶಿಮ್ರಾನ್ ಹೆಟ್ಮೆಯರ್, ರಸಿ ವ್ಯಾನ್ ಡೆರ್ ಡುಸೆನ್, ಜಿಮ್ಮಿ ನೀಶಮ್, ರಯಾನ್ ಪರಾಗ್ ಮುಂತಾದವರ ಬಲ ತಂಡಕ್ಕಿದೆ.

ಬೌಲಿಂಗ್‌ನಲ್ಲಿ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಮತ್ತು ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಭರವಸೆ ತುಂಬಿದ್ದಾರೆ.

ಅನುಭವಿ ನಾಯಕ ಕೇನ್ ವಿಲಿಯಮ್ಸನ್ ಅವರು ಸನ್‌ರೈಸರ್ಸ್‌ನ ಬ್ಯಾಟಿಂಗ್ ವಿಭಾಗದ ಚುಕ್ಕಾಣಿಯನ್ನೂ ಹಿಡಿದಿದ್ದಾರೆ. ಗ್ಲೆನ್ ಫಿಲಿಪ್ಸ್, ನಿಕೋಲಸ್ ಪೂರನ್, ಪ್ರಿಯಂ ಗರ್ಗ್ ಮತ್ತು ರಾಹುಲ್ ತ್ರಿಪಾಠಿ ಅವರಿಂದಲೂ ಉತ್ತಮ ಸಾಮರ್ಥ್ಯದ ನಿರೀಕ್ಷೆ ಇದೆ. ಆರ್.ಸಮರ್ಥ್ ಯಾವ ಕ್ರಮಾಂಕದಲ್ಲಿ ಬ್ಯಾಟಿಂಗ್ ಆರಂಭಿಸುತ್ತಾರೆ ಎಂಬುದು ಕೂಡ ಕುತೂಹಲ ಕೆರಳಿಸಿದೆ.

ಬೌಲಿಂಗ್ ವಿಭಾಗದಲ್ಲಿ ಭುವನೇಶ್ವರ್ ಕುಮಾರ್ ಅವರಿಗೆ ವೇಗದ ಬೌಲರ್ ಉಮ್ರನ್ ಮಲಿಕ್, ಎಡಗೈ ವೇಗಿ ಟಿ.ನಟರಾಜನ್, ಸ್ಪಿನ್ನರ್‌ಗಳಾದ ವಾಷಿಂಗ್ಟನ್ ಸುಂದರ್, ಶ್ರೇಯಸ್ ಗೋಪಾಲ್ ಮತ್ತು ಜೆ.ಸುಚಿತ್ ಅವರ ಬೆಂಬಲವಿದೆ.



ಸಂಜು ಸ್ಯಾಮ್ಸನ್ –ಪಿಟಿಐ ಚಿತ್ರ



ಕೇನ್ ವಿಲಿಯಮ್ಸನ್

ಮುಖಾಮುಖಿ ಪಂದ್ಯಗಳು	ಹೈದರಾಬಾದ್ ಜಯ	ರಾಜಸ್ಥಾನ್ ಜಯ
15	8	7

ಐಪಿಎಲ್‌ನಲ್ಲಿ ನಾಯಕರ ಬಲಾಬಲ

ಆಟಗಾರ	ತಂಡ	ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ	ಸಿಕ್ಸರ್	ಬೌಂಡರಿ
ಕೇನ್ ವಿಲಿಯಮ್ಸನ್	ಹೈದರಾಬಾದ್	63	1885	89*	-	17	56	166
ಸಂಜು ಸ್ಯಾಮ್ಸನ್	ರಾಜಸ್ಥಾನ್	121	3068	119	3	15	132	236

ಆರಂಭ	ರಾತ್ರಿ 7.30	ನೇರ ಪ್ರಸಾರ	ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆಳ್ವಾಸ್‌ಗೆ ರಂಗಸ್ವಾಮಿ ಸ್ಮಾರಕ ಬಾಲ್ ಬ್ಯಾಡ್ಮಿಂಟನ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ತಂಡ ರಂಗಸ್ವಾಮಿ ಸ್ಮರಣಾರ್ಥ ರಾಜ್ಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಹಾಸನಾಂಬ ಬಾಲ್ ಬ್ಯಾಡ್ಮಿಂಟನ್ ಕ್ಲಬ್ ಸಹಯೋಗದಲ್ಲಿ ಹಾಸನದಲ್ಲಿ ಆಯೋಜಿಸಿದ್ದ ಹೊನಲು ಬೆಳಕಿನ ಚಾಂಪಿಯನ್‌ಷಿಪ್‌ನ ಫೈನಲ್ಸ್‌ನಲ್ಲಿ ಆಳ್ವಾಸ್ ತಂಡ ಆತಿಥೇಯ ಹಾಸನಾಂಬ ಕ್ಲಬ್ ತಂಡವನ್ನು 35-22, 35-29ರಲ್ಲಿ ಮಣಿಸಿತು.

ಸೆಮಿಫೈನಲ್‌ನಲ್ಲಿ ಬೆಂಗಳೂರಿನ ವಿಜಯನಗರ ತಂಡವನ್ನು ಆಳ್ವಾಸ್ 35-22, 35-18 ಸೆಟ್‌ಗಳಿಂದ ಸೋಲಿಸಿತ್ತು. ಮತ್ತೊಂದು ಸೆಮಿಫೈನಲ್‌ನಲ್ಲಿ ಹಾಸನಾಂಬ ಕ್ಲಬ್ ಬೆಂಗಳೂರಿನ ಸಹ್ಯಾದ್ರಿ ಸ್ಪೋರ್ಟ್ಸ್ ಕ್ಲಬ್ ತಂಡವನ್ನು 35-25, 32-35, 35-32ರಲ್ಲಿ ಸೋಲಿಸಿತ್ತು. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಆಳ್ವಾಸ್ ತಂಡ ತುಮಕೂರಿನ ಗಾಂಧಿನಗರ ಕ್ಲಬ್ ತಂಡವನ್ನು 35-19, 35-24ರಲ್ಲಿ ಮಣಿಸಿತ್ತು. ವಿಜಯನಗರ ಬಾಲ್ ಬ್ಯಾಡ್ಮಿಂಟನ್ ಕ್ಲಬ್ ಮೂರನೆ ಸ್ಥಾನ ಮತ್ತು ಸಹ್ಯಾದ್ರಿ ಬಾಲ್ ಬ್ಯಾಡ್ಮಿಂಟನ್ ಕ್ಲಬ್ ನಾಲ್ಕನೇ ಸ್ಥಾನ ಗಳಿಸಿತು.



ಚಾಂಪಿಯನ್ ಆದ ಆಳ್ವಾಸ್ ಸಂಸ್ಥೆಯ ತಂಡ. ನಿಂತವರು (ಎಡದಿಂದ): ಯಧ್ವಂತ್, ಶ್ರೀನಿವಾಸ್, ಆಕಾಂಕ್ಷ್, ಪ್ರಶಾಂತ್; ಕುಳಿತವರು: ಮುತ್ತಮಿಳರಸು, ಚೇತನ್, ಮಹದೇವಸ್ವಾಮಿ, ಸಂಜಯ್

ಆರ್ಚರಿ: ಏಷ್ಯನ್ ಗೇಮ್ಸ್‌ಗೆ ಆಯ್ಕೆಯಾಗದ ದೀಪಿಕಾ

ಸೋನಿಪತ್ (ಪಿಟಿಐ): ವಿಶ್ವಕಪ್‌ನಲ್ಲಿ ಹಲವು ಬಾರಿ ಚಿನ್ನದ ಪದಕ ಗೆದ್ದಿರುವ ದೀಪಿಕಾ ಕುಮಾರಿ ಅವರು ಏಷ್ಯನ್ ಗೇಮ್ಸ್ ಆರ್ಚರಿ ಸ್ಪರ್ಧೆಗೆ ಭಾರತ ತಂಡದಲ್ಲಿ ಸ್ಥಾನ ಗಳಿಸುವಲ್ಲಿ ವಿಫಲರಾಗಿದ್ದಾರೆ.

ಇಲ್ಲಿಯ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಕೇಂದ್ರದಲ್ಲಿ ನಡೆದ ಫೈನಲ್ ಲೆಗ್‌ನ ಮೂರು ರೌಂಡ್ ರಾಬಿನ್ ಪಂದ್ಯಗಳ ಪೈಕಿ ಎರಡರಲ್ಲಿ ಅವರು ಸೋಲನುಭವಿಸಿದರು.

ಅಗ್ರ ಎಂಟು ಸ್ಥಾನಗಳನ್ನು ನಿರ್ಧರಿಸಲು ಶನಿವಾರ ನಡೆದ ಎರಡು ಹಂತದ ಎಲಿಮಿನೇಷನ್‌ನಲ್ಲಿ ದೀಪಿಕಾ ಐದನೇ ಸ್ಥಾನ ಗಳಿಸಿದ್ದರು. ಇದರಿಂದಾಗಿ ಅವರು ರೌಂಡ್ ರಾಬಿನ್ ಪಂದ್ಯಗಳಲ್ಲಿ ಆಡಬೇಕಾಯಿತು.

ಚೀನಾದ ಹ್ಯಾಂಗ್‌ಜೌನಲ್ಲಿ ಸೆಪ್ಟೆಂಬರ್ 10ರಿಂದ 25ರವರೆಗೆ ಏಷ್ಯನ್ ಗೇಮ್ಸ್ ನಿಗದಿಯಾಗಿದೆ.

ನವದೆಹಲಿಯಲ್ಲಿ 2010ರಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಬಳಿಕ ಬಹುವಿಭಾಗಗಳ ಟೂರ್ನಿಯಿಂದ ಮೊದಲ ಬಾರಿಗೆ ದೀಪಿಕಾ ಹೊರಗುಳಿಯುತ್ತಿದ್ದಾರೆ. ಆ ಕೂಟದಲ್ಲಿ ಅವರು ಚಿನ್ನದ ಪದಕ ಗೆದ್ದುಕೊಂಡಿದ್ದರು.

27 ವರ್ಷದ ದೀಪಿಕಾ 2010, 2014 ಮತ್ತು 2018ರಲ್ಲಿ ಏಷ್ಯನ್ ಗೇಮ್ಸ್‌ಗಳಲ್ಲಿ ಭಾಗವಹಿಸಿದ್ದರು. 12 ವರ್ಷಗಳ ಹಿಂದೆ ಗುವಾಂಗ್‌ಜೌನಲ್ಲಿ ನಡೆದ ಕೂಟದಲ್ಲಿ ತಂಡ ವಿಭಾಗದಲ್ಲಿ ಅವರು ಕಂಚು ಗೆದ್ದಿದ್ದರು.

ವಿಶ್ವಕಪ್ ಟೂರ್ನಿಗಳಲ್ಲಿ ದೀಪಿಕಾ ಒಟ್ಟು 11 ಚಿನ್ನ, 12 ಬೆಳ್ಳಿ ಮತ್ತು ಏಳು ಕಂಚಿನ ಪದಕಗಳನ್ನು ಜಯಿಸಿದ್ದಾರೆ.

ಏಷ್ಯನ್ ಗೇಮ್ಸ್‌ಗೆ ಭಾರತ ತಂಡ ಇಂತಿದೆ: ಪುರುಷರ ರಿಕರ್ವ್: ತರುಣದೀಪ್ ರಾಯ್, ಜಯಂತ್ ತಾಲೂಕ್ದಾರ್, ನೀರಜ್ ಚೌಹಾನ್, ಸಚಿನ್ ಗುಪ್ತಾ.

ಮಹಿಳೆಯರ ರಿಕರ್ವ್: ರಿಧಿ ಫೋರ್, ಕೋಮಲಿಕಾ ಭಾರಿ, ಅಂಕಿತಾ ಭಕತ್ ಮತ್ತು ಸಿಮ್ರನ್‌ಜೀತ್ ಕೌರ್.



ದೀಪಿಕಾ ಕುಮಾರಿ– ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: ಈಜಿಪ್ಟ್, ಜೋರ್ಡಾನ್ ವಿರುದ್ಧ ಕಣಕ್ಕೆ ಭಾರತ ತಂಡ

ನವದೆಹಲಿ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡವು ಏಪ್ರಿಲ್‌ನಲ್ಲಿ ಈಜಿಪ್ಟ್ ಮತ್ತು ಜೋರ್ಡಾನ್ ವಿರುದ್ಧದ ಸ್ನೇಹಪರ ಪಂದ್ಯಗಳಲ್ಲಿ ಕಣಕ್ಕಿಳಿಯಲಿದೆ. ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಸೋಮವಾರ ಈ ವಿಷಯ ತಿಳಿಸಿದೆ.

ಏಪ್ರಿಲ್ 5ರಂದು ಜೋರ್ಡಾನ್ ಮತ್ತು 8ರಂದು ಈಜಿಪ್ಟ್ ವಿರುದ್ಧ ಭಾರತ ಆಡಲಿದೆ. 30 ಸದಸ್ಯರ ತಂಡದ ತರಬೇತಿ ಶಿಬಿರವು ಸೋಮವಾರ ಗೋವಾದಲ್ಲಿ ಆರಂಭವಾಗಿದೆ.

ನೆಟ್‌ಬಾಲ್: ಫೈನಲ್‌ಗೆ ಕರ್ನಾಟಕ ಬಾಲಕಿಯರು

ಬೆಂಗಳೂರು: ರೋಚಕ ಜಯ ಸಾಧಿಸಿದ ಕರ್ನಾಟಕ ಬಾಲಕಿಯರು ಹರಿಯಾಣದ ಭಿವಾನಿಯಲ್ಲಿ ನಡೆಯುತ್ತಿರುವ ಜೂನಿಯರ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದ್ದಾರೆ.

ಸೋಮವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ 25–24ರಿಂದ ತೆಲಂಗಾಣ ತಂಡವನ್ನು ಸೋಲಿಸಿತು. ಎಂಟರಘಟ್ಟದಲ್ಲಿ ರಾಜ್ಯದ ಬಾಲಕಿಯರು 37–25ರಿಂದ ಕೇರಳ ತಂಡವನ್ನು ಮಣಿಸಿದ್ದರು.

ಕರ್ನಾಟಕ ಬಾಲಕರ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ 32–38ರಿಂದ ಕೇರಳ ತಂಡಕ್ಕೆ ಸೋತಿತು.

ಬಿಬಿಸಿ ವರ್ಷದ ಮಹಿಳಾ ಕ್ರೀಡಾಪಟು ಮೀರಾಬಾಯಿ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರು ಬಿಬಿಸಿ ನೀಡುವ 'ಭಾರತದ ವರ್ಷದ ಮಹಿಳಾ ಕ್ರೀಡಾಪಟು' ಪ್ರಶಸ್ತಿಗೆ ಸೋಮವಾರ ಭಾಜನರಾಗಿದ್ದಾರೆ.ಕಳೆದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಜಯಿಸುವ ಮೂಲಕ ಈ ಸಾಧನೆ ಮಾಡಿದ ಭಾರತದ ಮೊದಲ ವೇಟ್‌ಲಿಫ್ಟರ್ ಎಂಬ ಶ್ರೇಯವನ್ನು ಮೀರಾಬಾಯಿ ಪಡೆದಿದ್ದರು.

ಭಾರತ ಮಹಿಳಾ ತಂಡದ ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ 'ಬಿಬಿಸಿ ಉದಯೋನ್ಮುಖ ಆಟಗಾರ್ತಿ' ಗೌರವ ಪಡೆದಿದ್ದಾರೆ.



ಮೀರಾಬಾಯಿ

ಪಾಕಿಸ್ತಾನ–ವೆಸ್ಟ್ ಇಂಡೀಸ್ ಏಕದಿನ ಸರಣಿ ಜೂನ್‌ನಲ್ಲಿ

ಲಾಹೋರ್ (ಪಿಟಿಐ): ಮುಂದೂಡಲಾದ ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿ ಜೂನ್‌ನಲ್ಲಿ ನಡೆಯಲಿದೆ. ಕಳೆದ ವರ್ಷ ನಡೆಯಬೇಕಾಗಿದ್ದ ಟೂರ್ನಿಯನ್ನು ವೆಸ್ಟ್ ಇಂಡೀಸ್ ತಂಡದಲ್ಲಿ ಕೋವಿಡ್ ಕಾಣಿಸಿಕೊಂಡ ಕಾರಣ ಮುಂದೂಡಲಾಗಿತ್ತು.

ಐಸಿಸಿ ವಿಶ್ವಕಪ್ ಸೂಪರ್ ಲೀಗ್ ಅಂಗವಾಗಿ ನಡೆಯಲಿರುವ ಸರಣಿಯ ಪಂದ್ಯಗಳು ಜೂನ್ 8ರಿಂದ 12ರ ವರೆಗೆ ನಡೆಯಲಿವೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಸೋಮವಾರ ತಿಳಿಸಿದೆ. 2023ರಲ್ಲಿ ಮೂರು ಪಂದ್ಯಗಳ ಟ್ವೆಂಟಿ20 ಸರಣಿಯಲ್ಲಿ ಆಡುವುದಕ್ಕೂ ವೆಸ್ಟ್ ಇಂಡೀಸ್ ಒಪ್ಪಿಕೊಂಡಿದೆ ಎಂದು ಪಿಸಿಬಿ ತಿಳಿಸಿದೆ. ಕಳೆದ ವರ್ಷಾಂತ್ಯದಲ್ಲಿ ವಿಂಡೀಸ್ ತಂಡ ಪಾಕಿಸ್ತಾನ ಪ್ರವಾಸ ಕೈಗೊಂಡಿತ್ತು. ಆದರೆ 3 ಟ್ವೆಂಟಿ ಪಂದ್ಯಗಳ ಸರಣಿ ಮುಕ್ತಾಯಗೊಂಡ ನಂತರ ತಂಡದ ಐವರಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಏಕದಿನ ಸರಣಿಯ ಮೊದಲ ಪಂದ್ಯ ಜೂನ್ 8ರಂದು, 2ನೇ ಪಂದ್ಯ 10ರಂದು ಮತ್ತು ಕೊನೆಯ ಪಂದ್ಯ 12ರಂದು ನಡೆಯಲಿದೆ.

ಸೌದಿ ಅರೇಬಿಯಾ ಗ್ರ್ಯಾನ್ ಪ್ರಿ: 10ನೇ ಸ್ಥಾನಕ್ಕೆ ಕುಸಿದ ಲೂಯಿಸ್ ಹ್ಯಾಮಿಲ್ಟನ್

ಲೆಕ್ಲರ್ಕ್ ಸವಾಲು ಮೀರಿದ ಮ್ಯಾಕ್ಸ್

ಜೆಡ್ಡಾ (ಎಪಿ): ಬಾಲ್ಯದಲ್ಲಿ ಕಾರ್ಟಿಂಗ್ ರೇಸ್ ಮಾಡುತ್ತಿದ್ದಾಗಿನಿಂದ ಪೈಪೋಟಿ ನಡೆಸುತ್ತ ಬೆಳೆದಿರುವ ಮ್ಯಾಕ್ಸ್ ವರ್ಸ್ಟಾಪನ್ ಮತ್ತು ಚಾರ್ಲ್ಸ್ ಲೆಕ್ಲರ್ಕ್ ನಡುವಿನ ಜಿದ್ದಾಜಿದ್ದಿ ಈಗ ಎಫ್–1 ರೇಸ್‌ನಲ್ಲಿ ಮುನ್ನೆಲೆಗೆ ಬಂದಿದೆ. ಈ ವರ್ಷದ ಮೊದಲ ರೇಸ್‌ನಲ್ಲಿ ಗೆದ್ದು ಸಂಭ್ರಮಿಸಿದ್ದ ಲೆಕ್ಲರ್ಕ್ ಅವರಿಗೆ ಸೌದಿ ಅರೆಬಿಯಾ ಗ್ರ್ಯಾನ್ ಪ್ರಿಯಲ್ಲಿ ವರ್ಸ್ಟಾಪನ್ ತಿರುಗೇಟು ನೀಡಿದ್ದಾರೆ.

ಭಾನುವಾರ ರಾತ್ರಿ ಹೊನಲು ಬೆಳಕಿನಲ್ಲಿ ನಡೆದ ಸೌದಿ ಅರೆಬಿಯಾ ಗ್ರ್ಯಾನ್ ಪ್ರಿಯಲ್ಲಿ ಏಳು ಬಾರಿಯ ಎಫ್–1 ಚಾಂಪಿಯನ್ ಅಮೆರಿಕದ ಲೂಯಿಸ್ ಹ್ಯಾಮಿಲ್ಟನ್ ಅವರನ್ನು ಹಿಂದಿಕ್ಕಿದ ವರ್ಸ್ಟಾಪನ್ ಮತ್ತು ಲೆಕ್ಲರ್ಕ್ ನಡುವೆ ಭಾರಿ ಪೈಪೋಟಿ ಕಂಡುಬಂದಿತ್ತು. ಲೂಯಿಸ್ 10ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.


ಭಾನುವಾರ ರಾತ್ರಿಯ ಸ್ಪರ್ಧೆಯಲ್ಲಿ ಅಂತಿಮ ಮೂರು ಲ್ಯಾಪ್‌ಗಳು ಉಳಿದಿರುವಾಗ ವರ್ಸ್ಟಾಪನ್ ಅತಿವೇಗವಾಗಿ ಮುನ್ನುಗ್ಗಿದರು. ಹೀಗಾಗಿ ಪ್ರಶಸ್ತಿ ಗೆಲ್ಲುವಲ್ಲಿ ಯಶಸ್ವಿಯಾದರು. ಈ ಮೂಲಕ ವೃತ್ತಿಜೀವನದ 21ನೇ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಹೂತಿ ಬಂಡುಕೋರರು ಯೆಮನ್‌ನ ತೈಲ ಕೋಠಿ ಮೇಲೆ ಆಕ್ರಮಣ ನಡೆಸಿದ ಹಿನ್ನೆಲೆಯಲ್ಲಿ ಸೌದಿ ಅರೆಬಿಯಾ ರೇಸ್‌ನ ಕೊನೆಯ ಹಂತದ ಸ್ಪರ್ಧೆಯನ್ನು ಎರಡು ದಿನಗಳಲ್ಲಿ ಆಯೋಜಿಸಲಾಗಿತ್ತು. ಎಫ್–1ನಲ್ಲಿ ಈ ವರೆಗೆ ದಾಖಲೆಯ 103 ಪ್ರಶಸ್ತಿ ಗೆದ್ದ ಹ್ಯಾಮಿಲ್ಟನ್ ಮೇಲೆ ಎಲ್ಲರ ಕಣ್ಣಿತ್ತು. ಕಳೆದ ಭಾನುವಾರ ನಡೆದ ಬಹರೇನ್ ಓಪನ್‌ನಲ್ಲಿ ಪ್ರಶಸ್ತಿ ಗೆದ್ದಿದ್ದ ಲೆಕ್ಲರ್ಕ್ ಸತತ ಎರಡನೇ ಪ್ರಶಸ್ತಿ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿದಿದ್ದರು. ಆದರೆ ಅವರ ಆಸೆಗೆ ವರ್ಸ್ಟಾಪನ್ ತಣ್ಣೀರು ಸುರಿದರು.

50 ಲ್ಯಾಪ್‌ಗಳ ಸ್ಪರ್ಧೆಯ 42ನೇ ಲ್ಯಾಪ್ ವರೆಗೆ ವರ್ಸ್ಟಾಪನ್ ಹಿನ್ನಡೆಯಲ್ಲಿದ್ದರು. ನಂತರ ಮುನ್ನುಗ್ಗಿದರು. ಆದರೆ ಮುಂದಿನ ಲ್ಯಾಪ್‌ನ ಮೊದಲನೇ ತಿರುವಿನಲ್ಲಿ ಲೆಕ್ಲರ್ಕ್ ಚಾಣಾಕ್ಷ ನಡೆಯ ಮೂಲಕ ವರ್ಸ್ಟಾಪನ್‌ಗೆ ಆತಂಕ ಮೂಡಿಸಿದರು. 44ನೇ ಲ್ಯಾಪ್‌ನಲ್ಲಿ ಅಪಾಯಕಾರಿ ಓವರ್‌ಟೇಕ್ ಮಾಡಿದ ವರ್ಸ್ಟಾಪನ್ 47ನೇ ಲ್ಯಾಪ್‌ನಲ್ಲಿ ಸುಲಭ 'ಪಾಸ್' ಮೂಲಕ ಭರವಸೆ ಮೂಡಿಸಿದರು. ನಂತರ ಚಾಂಪಿಯನ್‌ಷಿಪ್‌ನತ್ತ ದಾಪುಗಾಲಿಟ್ಟರು.



ಚಾರ್ಲ್ಸ್ ಲೆಕ್ಲರ್ಕ್



ಪ್ರಶಸ್ತಿಯೊಂದಿಗೆ ಮ್ಯಾಕ್ಸ್ ವರ್ಸ್ಟಾಪನ್ –ಎಎಫ್‌ಪಿ ಚಿತ್ರ

> ಪ್ರತಿ ಸ್ಪರ್ಧೆಯೂ ವಿಭಿನ್ನ ಮತ್ತು ಸವಾಲಿನದು. ಇಲ್ಲಿ ಅತಿ ಚುರುಕಿನ ಮತ್ತು ಗುಣಮಟ್ಟದ ರೇಸ್ ಕಂಡುಬಂದಿತ್ತು. ಹೀಗಾಗಿ ಸ್ಪರ್ಧೆಯ ಉದ್ದಕ್ಕೂ ಖುಷಿ ಅನುಭವಿಸಿದೆ.
> **ಮ್ಯಾಕ್ಸ್ ವರ್ಸ್ಟಾಪನ್**
> ನೆದರ್ಲೆಂಡ್ಸ್ ಚಾಲಕ

ಸೌದಿ ಅರೆಬಿಯಾ ಗ್ರ್ಯಾನ್ ಪ್ರಿ ವಿಜೇತರ ಪಟ್ಟಿ

ಸ್ಥಾನ	ಚಾಲಕ	ವಾಹನ	ಲ್ಯಾಪ್ಸ್	ಅವಧಿ	ಪಾಯಿಂಟ್ಸ್
1	ಮ್ಯಾಕ್ಸ್ ವರ್ಸ್ಟಾಪನ್	ತಂಡ	50	1:24:19.293	25
2	ಚಾರ್ಲ್ಸ್ ಲೆಕ್ಲರ್ಕ್	ಫೆರಾರಿ	50	+0.549	19
3	ಕಾರ್ಲೋಸ್ ಸೇನ್ಸ್	ಪೆರಾರಿ	50	+8.097	15
4	ಸರ್ಜಿಯೊ ಪೆರೆಜ್	ರೆಡ್‌ಬುಲ್	50	+10.800	12
5	ಜಾರ್ಜ್ ರಸೆಲ್	ಮರ್ಸಿಡಿಸ್	50	+32.732	10
6	ಎಸ್ತೆಬನ್ ಒಕಾನ್	ಆಲ್ಪೈನ್ ರೆನಾಲ್ಟ್	50	+56.017	8
7	ಲ್ಯಾಂಡೊ ನೊರಿಸ್	ಮರ್ಸಿಡಿಸ್	50	+56.124	6
8	ಪಿಯೆರಿ ಗಾಸ್ಲಿ	ಆಲ್ಫಾತೌರಿ	50	+62.946	4
9	ಕೆವಿನ್ ಮ್ಯಾಗ್ನಸನ್	ಹಾಸ್ ಫೆರಾರಿ	50	+64.308	2
10	ಲೂವಿಸ್ ಹ್ಯಾಮಿಲ್ಟನ್	ಮರ್ಸಿಡಿಸ್	50	+73.948	1

ಎಫ್2 ರೇಸ್‌ನಲ್ಲಿ ಮಿಂಚಿದ ಜೆಹಾನ್ ದಾರುವಾಲಾ

ಜೆಡ್ಡಾ (ಪಿಟಿಐ): ಭಾರತದ ಜೆಹಾನ್ ದಾರುವಾಲಾ ಫಾರ್ಮುಲಾ–2 ರೇಸ್‌ನಲ್ಲಿ ಈ ವರ್ಷ ಎರಡನೇ ಬಾರಿ ಉತ್ತಮ ಸಾಮರ್ಥ್ಯ ತೋರಿದ್ದಾರೆ. ಸೌದಿ ಅರೆಬಿಯಾ ಗ್ರ್ಯಾನ್‌ಪ್ರಿಯ ಜೊತೆಯಲ್ಲೇ ನಡೆದ ಎಫ್–2 ಸ್ಪರ್ಧೆಯಲ್ಲಿ ಅವರು ಮೂರನೇ ಸ್ಥಾನ ಗಳಿಸಿದರು.

ಜೆಡ್ಡಾ ಕಾರ್ನಿಚ್ ಸರ್ಕೀಟ್‌ನಲ್ಲಿ ಭಾನುವಾರ ನಡೆದ ರೇಸ್‌ನಲ್ಲಿ 23 ವರ್ಷದ ಮುಂಬೈ ಚಾಲಕ ಜೆಹಾನ್ ಅರ್ಹತಾ ಸುತ್ತಿನಲ್ಲಿ ವಾಹನದಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡ ಕಾರಣ ನಿರಾಸೆಗೆ ಒಳಗಾಗಿದ್ದರು. ಆದರೆ ಅಂತಿಮ ಸುತ್ತಿನಲ್ಲಿ ಅಮೋಘ ಚಾಲನಾ ಸಾಮರ್ಥ್ಯ ತೋರಿ ಮಿಂಚಿದರು. ಈ ಮೂಲಕ ವೃತ್ತಿಜೀವನದಲ್ಲಿ ಒಂಬತ್ತನೇ ಬಾರಿ 'ಪೋಡಿಯಂ' ಏರಿದರು.

ಆರಂಭದಲ್ಲಿ ಎರಡು ಕಾರುಗಳನ್ನು ಹಿಂದಿಕ್ಕಿ ಸಾಗಿದ ಜೆಹಾನ್ ಮೊದಲನೇ ತಿರುವಿನಲ್ಲಿ ಮೂರು ಕಾರುಗಳನ್ನು ಬದಿಗೊತ್ತಿ ತಮ್ಮ ಕಾರನ್ನು 'ಪಾಸ್' ಮಾಡಿದರು. ರೆಡ್ ಬುಲ್‌ನ ಅಯುಮು ಇವಾಸ್ ಅವರನ್ನು ಹಿಂದಿಕ್ಕುವ ಮೂಲಕ ಗಮನಾರ್ಹ ಸಾಧನೆ ಮಾಡಿದರು.

ಏಪ್ರಿಲ್ 22ರಿಂದ 24ರ ವರೆಗೆ ನಡೆಯಲಿರುವ ಇಮೋಲದಲ್ಲಿ ನಡೆಯಲಿರುವ ರೇಸ್‌ನಲ್ಲಿ ಜೆಹಾನ್ ಪಾಲ್ಗೊಳ್ಳಲಿದ್ದಾರೆ.

ಫುಟ್‌ಬಾಲ್: ವಿವೇಕ್ ಐದು ಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿ. ವಿವೇಕ್ ಗಳಿಸಿದ ಐದು ಗೋಲುಗಳು ಯಂಗ್ ಡೈನಮೋಸ್ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟವು. ಅವರ ಆಟದ ಬಲದಿಂದ ತಂಡವು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ (ಬಿಡಿಎಫ್‌ಎ) ಸಿ ಡಿವಿಷನ್ ಲೀಗ್ ಪಂದ್ಯದಲ್ಲಿ 9–0ರಿಂದ ವಿವೇಕಾನಂದ ಎಫ್‌ಸಿಯನ್ನು ಮಣಿಸಿತು.

ಸೋಮವಾರ ನಡೆದ ಡಿ ಗುಂಪಿನ ಈ ಹಣಾಹಣಿಯಲ್ಲಿ ವಿಜೇತ ತಂಡದ ಪರ ವಿವೇಕ್ 18, 20, 35, 40 ಮತ್ತು 47ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಪಿ. ರಾಜಾ (11ನೇ ನಿಮಿಷ), ಸಂಜಯ್ ವಿ. (34ನೇ ನಿ.) ಮತ್ತು ಕಾರ್ತಿಕ್ ರಾಮ್ (48ನೇ ನಿ.) ತಲಾ ಒಂದು ಗೋಲು ಹೊಡೆದರು. ಮತ್ತೊಂದು ಗೋಲು 'ಉಡುಗೊರೆ' ರೂಪದಲ್ಲಿ ಮೊಹಮ್ಮದ್ ರಫಿ (24ನೇ ನಿ.) ಅವರಿಂದ ಬಂದಿತು.

ಇನ್ನೊಂದು ಪಂದ್ಯದಲ್ಲಿ ಯಂಗ್ ಜೆಮ್ಸ್ ಎಫ್‌ಸಿ 6–0ಯಿಂದ ಬಸವನಗುಡಿ ತಂಡವನ್ನು ಸೋಲಿಸಿತು.

ಐ ಗುಂಪಿನ ಹಣಾಹಣಿಯಲ್ಲಿ ಅಗರಂ ಎಫ್‌ಸಿ 1–1ರಿಂದ ಸರ್ವಜ್ಞನಗರ ಎಫ್‌ಸಿಯೊಂದಿಗೆ ಡ್ರಾ ಸಾಧಿಸಿದರೆ, ಮತ್ತೊಂದು ಪಂದ್ಯದಲ್ಲಿ ಕ್ವೀನ್ಸ್ ಸ್ಟಾರ್ ಎಫ್‌ಸಿ 5–0ಯಿಂದ ಒರಿಯಂಟಲ್ ಎಫ್‌ಸಿ ತಂಡವನ್ನು ಸೋಲಿಸಿತು. ಕ್ವೀನ್ಸ್ ಸ್ಟಾರ್ ಪರ ಮಣಿಕಂಠ ಎಸ್. ಹ್ಯಾಟ್ರಿಕ್ ಸಾಧಿಸಿದರು.ಜೆ ಗುಂಪಿನ ಪಂದ್ಯದಲ್ಲಿ 515 ಆರ್ಮಿ ಬೇಸ್ ವರ್ಕ್‌ಶಾಪ್ ಎಫ್‌ಸಿ 1–1ರಿಂದ ಸಿ2 ಎಫ್‌ಸಿಯೊಂದಿಗೆ ಸಮಬಲ ಸಾಧಿಸಿತು.

ಫುಟ್‌ಬಾಲ್ ವಿಶ್ವಕಪ್‌ಗೆ ಕೆನಡಾ


ಜಮೈಕಾ ವಿರುದ್ಧ ಗೋಲು ಗಳಿಸಿದ ಕೆನಡಾದ ಕೈಲ್ ಲಾರಿನ್ (ಎಡ) ಸಹ ಆಟಗಾರ ರಿಚಿ ಲಾರಿಯಾ ಜೊತೆ ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

ಟೊರಾಂಟೊ (ಎಪಿ): ಕೈಲ್ ಲಾರಿನ್, ಟಾಜೊನ್ ಬುಕನನ್ ಮತ್ತು ಜೂನಿಯರ್ ಹೊಯಿಲೆಟ್ ಗಳಿಸಿದ ಗೋಲುಗಳ ನೆರವಿನಿಂದ ಕೆನಡಾ ತಂಡವು 36 ವರ್ಷಗಳ ಬಳಿಕ ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಗಳಿಸಿತು.

ಸೋಮವಾರ ನಡೆದ ಅರ್ಹತಾ ಸುತ್ತಿನ ಅಂತಿಮ ಪಂದ್ಯದಲ್ಲಿ ಕೆನಡಾ 4–0ಯಿಂದ ಜಮೈಕಾ ತಂಡಕ್ಕೆ ಸೋಲುಣಿಸಿತು.

ವಿಜೇತ ತಂಡದ ಪರ 13ನೇ ನಿಮಿಷದಲ್ಲಿ ಕೈಲ್ ಲಾರಿನ್ ಮೊದಲ ಗೋಲು ಗಳಿಸಿಕೊಟ್ಟರು. ಬುಕನನ್ (44ನೇ ನಿಮಿಷ), ಹೊಯಿಲೆಟ್ (82ನೇ ನಿಮಿಷ) ಕಾಲ್ಚಳಕ ತೋರಿದರು. ಎದುರಾಳಿ ತಂಡದ ಆ್ಯಡ್ರಿಯನ್ ಮಾರಿಯಪ್ಪ 88ನೇ ನಿಮಿಷ ದಲ್ಲಿ ಕೆನಡಾಗೆ 'ಉಡುಗೊರೆ' ಗೋಲು ನೀಡಿದರು. 1986ರಲ್ಲಿ ಕೆನಡಾ ತಂಡವು ಮೊದಲ ಬಾರಿಗೆ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಳಿಸಿತ್ತು.